
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಮೇ 01, 2013 ಪುಟ 20 ರೂ. 14/-



ಮುಳುಗಿದ ಮಧುರ ಧ್ವನಿ




ಸಿಎಂ ಗಾದಿಗೆ ಅನಂತ ಜಾಲ



ವಂಚಕ ಅಳಿಯನನ್ನು ಕೊಂದವರು ಯಾರು?

ಶಿವಮೊಗ್ಗ: ಬಿಜೆಪಿ ಧೂಳೀಪಟ



.ನಗರ: ಪಕ್ಷಾಂತರಿಗಳು-ಬೇತಾಳಗಳು-ಬಂಡಾಯಗಾರರು

ಚುನಾವಣೆ ಜೋಷ್

ಉ.ಕ.:ಕಾಂಗ್ರೆಸ್‌ಗೆ ಕಂಟಕ ಬಿಜೆಪಿಗೆ ಭಯ



ಮಂಡ್ಯ: ಪುಟ್ಟಣ್ಣಯ್ಯ ಗೆಲ್ಲಬೇಕು...ಆದರೆ

ಪುರ: ದೊರೆಗಳ ನಾಡಿನಲ್ಲಿ ಳಿಯಕರ ದರ್ಬಾರು






ಗದಗ: ಶುದ್ಧ ನೀರು ಕೊಳಚೆ ನೀರು

ರವಾಡ ಕೇಂದ್ರ: ಟ್ಟರ್‌ಗೆ ಶೆಟ್ಟರೇ ಮುಳುವು





ಹೊನ್ನಾಳಿ: ಮದ್ಯದ ಹೊಳೆ



ದಾವಣಗೆರೆ ಕೈ ಹಿಡಿಯುವರೇ ಲಿಂಗಾಯತರು



ಪುಟ್ಟಣ್ಣಯ್ಯನವರೇ ಗೆಲ್ಲಬೇಕು... ಆದರೆ?

ಅಂಚಿನಿಂದ

ಡಾ.ವಾಸು ಎಚ್.ವಿ.



ವಿಧಾನಸಭಾ ಚುನಾವಣೆಯ ಈ ಸಂದರ್ಭದಲ್ಲಿ ನೂರು ರೀತಿಯ ಪ್ರಹಸನಗಳು ರಾಜ್ಯದೆಲ್ಲೆಡೆ ನಡೆಯುತ್ತಿವೆ. ಐದು ವರ್ಷ ರಾಜ್ಯವಾಳಿದ ಬಿಜೆಪಿ ಪಕ್ಷಕ್ಕೆ ಹಲವು ಕ್ಷೇತ್ರಗಳಲ್ಲಿ ಅಭ್ಯರ್ಥಿ ಸಿಗುವುದೇ ಕಷ್ಟವಾಗಿದೆ. ಮಳವಳ್ಳಿಯಲ್ಲಿ ಅದರ ಘೋಷಿತ ಅಧಿಕೃತ ಅಭ್ಯರ್ಥಿಯೇ ಪಕ್ಷ ಬದಲಾಯಿಸಿ ಬಿಟ್ಟಿದ್ದಾರೆ. ಹಲವು ಮಾನದಂಡಗಳನ್ನು ಮುಂದಿಟ್ಟುಕೊಂಡು ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತೇವೆಂದು ಹೇಳುತ್ತಾ ಬಂದ ಕಾಂಗ್ರೆಸ್ ಪಕ್ಷವು ಹಣ, ಜಾತಿ, ಬ್ಲ್ಯಾಕ್‌ಮೇಲ್ ಎಲ್ಲಕ್ಕೂ ಈಡಾಗುತ್ತಿದೆ. ಜೆಡಿಎಸ್ ಎಂಬ ದೇವೇಗೌಡರ ಕುಟುಂಬದ ಖಾಸಗಿ ಅಂಗಡಿಯು ಮಾರಾಟ, ಮರು ಮಾರಾಟಗಳನ್ನೂ ಸೇರಿದಂತೆ ಎಲ್ಲವನ್ನೂ ಮಾಡುತ್ತಾ, ಸಕಲ ಅವಕಾಶವಾದಿಗಳ ಪ್ರತೀಕದಂತೆ ವರ್ತಿಸುತ್ತಿದೆ. ಇದ್ದುದರಲ್ಲಿ ಘನತೆಯಿಂದ ವರ್ತಿಸುತ್ತಿರುವಂತೆ ಕಾಣುತ್ತಿರುವ (ಇದು ವಾಸ್ತವಕ್ಕಿಂತ ಹೆಚ್ಚಿನವರ ಬಯಕೆ) ಸಿದ್ದರಾಮಯ್ಯನವರನ್ನೂ ಸೇರಿಸಿದಂತೆ ಯಾರ ಮೇಲೂ ವಿಶ್ವಾಸವಿಡುವ ಪರಿಸ್ಥಿತಿ ಕಾಣುತ್ತಿಲ್ಲ.

ಬಿಜೆಪಿ ಸೋಲಬೇಕು ಎಂಬುದರಾಚೆಗೆ ಇನ್ನು ಯಾರು ಅಧಿಕಾರಕ್ಕೆ ಬಂದರೂ, ಕರ್ನಾಟಕದ ಜನಸಾಮಾನ್ಯರ ಬದುಕಿನಲ್ಲಿ ದೊಡ್ಡ ಬದಲಾವಣೆಗಳೇನೂ ಬರುವುದಿಲ್ಲ. ಹಾಗಾಗಿ ಅದರ ಸುತ್ತ ಹೆಚ್ಚಿನ ಚರ್ಚೆಯಿಂದೇನೂ ಪ್ರಯೋಜನವಿಲ್ಲ.

ಹಾಗಿರುವ ಸಂದರ್ಭದಲ್ಲೇ ಮಂಡ್ಯ ಜಿಲ್ಲೆಯ ಮೇಲುಕೋಟೆ ಮತ್ತು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರಗಳಲ್ಲಿ ರೈತಸಂಘದ ಅಭ್ಯರ್ಥಿಗಳಾಗಿ ಕೆ.ಎಸ್. ಪುಟ್ಟಣ್ಣಯ್ಯ ಮತ್ತು ಕೆ.ಎಸ್.ನಂಜುಂಡೇಗೌಡರು ಸ್ಪರ್ಧಿಸುತ್ತಿದ್ದಾರೆ. ಹತ್ತು ಹಲವು ಕಾರಣಗಳಿಂದ ಈ ಇಬ್ಬರ ಸ್ಪರ್ಧೆ ಚರ್ಚೆಗೆ ಕೈಗೆತ್ತಿಕೊಳ್ಳಲು ಅರ್ಹವಾಗಿದೆ. ಪುಟ್ಟಣ್ಣಯ್ಯನವರು ಕಳೆದ 5-10 ವರ್ಷಗಳಿಂದ ಮಾಡಿಕೊಂಡು ಬಂದಿರುವ ಹಲವು ರಾಜಿಗಳ ನಡುವೆಯೂ ನಮ್ಮ ಗೌರವಕ್ಕೆ ಪಾತ್ರರಾಗಲು ಕಾರಣಗಳಿವೆ.

ಪುಟ್ಟಣ್ಣಯ್ಯನವರು ಸ್ಪರ್ಧಿಸಿದ್ದ ಕಳೆದ ಚುನಾವಣೆ ಮುಗಿದು, ಫಲಿತಾಂಶ ಇನ್ನೂ ಪ್ರಕಟವಾಗಿರಲಿಲ್ಲ. ಆಗಲೇ ರೈತಸಂಘವು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ರೈತರ ಸಮಸ್ಯೆಯನ್ನು ಮುಂದಿಟ್ಟುಕೊಂಡು ಪ್ರತಿಭಟನೆಯೊಂದನ್ನು ನಡೆಸಿತ್ತು. ಆ ನಿರ್ದಿಷ್ಟ ಸಮಸ್ಯೆಗಿಂತ ಮುಖ್ಯವಾಗಿ, ನಮ್ಮದು ಕೇವಲ ಚುನಾವಣೆಯ ಪಕ್ಷ ಅಲ್ಲ; ಹೋರಾಟದ ಸಂಘಟನೆ ಎಂಬ ಸಂದೇಶ ನೀಡುವಂತಿತ್ತು ಆ ಪ್ರತಿಭಟನೆ. ಆದಾದ ಕೆಲವೇ ದಿನಗಳಲ್ಲಿ ಫಲಿತಾಂಶ ಪ್ರಕಟವಾಗಿ ಪುಟ್ಟಣ್ಣಯ್ಯ ಸೋತಿದ್ದರು. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಪರೋಕ್ಷ ಬೆಂಬಲದ ಹೊರತಾಗಿಯೂ ಈ ಸೋಲು ಸಂಭವಿಸಿತ್ತು. ಆಗ ಶ್ರೀರಂಗಪಟ್ಟಣದ ಕೃಷ್ಣಮೂರ್ತಿ ಬಂಗಲೆಯಲ್ಲಿ ನಡೆದ ರೈತಸಂಘದ ಸಭೆಯಲ್ಲಿ ಹಲವು ಕಾರ್ಯಕರ್ತರು "ಪುಟ್ಟಣ್ಣಯ್ಯನವರು ಬಿಜೆಪಿ ಅಥವಾ ಕಾಂಗ್ರೆಸ್‌ನಿಂದಲೇ ಸ್ಪರ್ಧಿಸಬೇಕು, ಇಲ್ಲವಾದರೆ ಗೆಲ್ಲುವುದು ಸಾಧ್ಯವಿಲ್ಲ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಆದರೆ ಅದಕ್ಕೆ ವ್ಯತಿರಿಕ್ತವಾಗಿ, ರೈತಸಂಘ (ಸರ್ವೋದಯ ಕರ್ನಾಟಕ)ದಿಂದಲೇ ಸ್ಪರ್ಧಿಸಿರುವ ಪುಟ್ಟಣ್ಣಯ್ಯ ಈ ಬಾರಿ ಗೆಲ್ಲಬಹುದು ಎನ್ನುವ ಭರವಸೆಯನ್ನು ಹೊಂದಿದ್ದಾರೆ. ಅದಕ್ಕೆ ಕಾರಣ ಈ ಐದು ವರ್ಷಗಳಲ್ಲಿ ಅವರು ಚುನಾವಣೆಗೆ ಮಾಡಿಕೊಂಡ ತಯಾರಿ. ಈ ರಾಜ್ಯದಲ್ಲಿ ಯಾವುದೇ ಪಕ್ಷದ, ಯಾವುದೇ ಅಭ್ಯರ್ಥಿ ಚುನಾವಣಾ ಪ್ರಚಾರ ಆರಂಭಿಸುವುದಕ್ಕಿಂತಲೂ ಮೊದಲೇ - ಬಹುಶಃ ಜಿಲ್ಲಾಧಿಕಾರಿ ಕಚೇರಿ ಮುಂದೆ ನಡೆಸಿದ ಪ್ರತಿಭಟನೆ ಮತ್ತು ಶ್ರೀರಂಗಪಟ್ಟಣದ ಸಭೆಯಿಂದಲೇ - ತಯಾರಿ ಆರಂಭಿಸಿದ್ದರು. ಪ್ರಗತಿಪರ ಸಂಘಟನೆಗಳ ಸಭೆಗಳಲ್ಲಿ ಸಾಮಾನ್ಯವಾಗಿ ಒಂದು ಮಾತು ಸದಾ ಕೇಳಿಬರುತ್ತದೆ. ಪ್ರಜಾಪ್ರಭುತ್ವ ಸರಿಯಾಗಿ ಜಾರಿಗೆ ಬರಬೇಕೆಂದರೆ 'ಒಳ್ಳೆಯವರು' ಚುನಾವಣೆಗಳಲ್ಲಿ ಸ್ಪರ್ಧಿಸಬೇಕು; ಆ ಒಳ್ಳೆಯವರು ಕೇವಲ ಚುನಾವಣೆ ಬಂದಾಗ ಮಾತ್ರವಲ್ಲ, ಇನ್ನೂ ಐದು ವರ್ಷ ಇರುವಾಗಲೇ ಶುರು ಮಾಡಬೇಕು. ಇದನ್ನು ಪುಟ್ಟಣ್ಣಯ್ಯ ಹಾಗೂ ರೈತಸಂಘ ಚಾಚೂತಪ್ಪದೇ ಪಾಲಿಸಿದ್ದಾರೆ.

ಅದೆಲ್ಲದರ ಪರಿಣಾಮವಾಗಿ, ಮಂಡ್ಯ ಜಿಲ್ಲೆಯ ಜೆಡಿಎಸ್ ಹುರಿಯಾಳುಗಳಲ್ಲಿ ಪ್ರಬಲ, ಚಾಣಾಕ್ಷ ಹಾಗೂ ಡೈನಾಮಿಕ್ ಎಂದೆಲ್ಲಾ ಹೆಸರು ಪಡೆದುಕೊಂಡಿರುವ ಪುಟ್ಟರಾಜು ಸುಸ್ತಾಗಿ ಹೋಗಿದ್ದಾರೆ. ಪುಟ್ಟರಾಜುವಿಗೆದುರಾಗಿ ಇಡುತ್ತಿರುವ ನೈತಿಕ ಪ್ರಶ್ನೆಗಳ ಮುಖಾಂತರ ಮಾತ್ರವಲ್ಲದೇ, ಜನರನ್ನು ಸೇರಿಸುವುದರಲ್ಲಿ, ಅಬ್ಬರದಿಂದ ಮುನ್ನುಗ್ಗುವುದರಲ್ಲಿ, ಕ್ಷೇತ್ರಾದ್ಯಂತ ಪ್ರಬಲ ನೆಟ್‌ವರ್ಕ್‌ಅನ್ನು ಸ್ಥಾಪಿಸಿಕೊಂಡಿರುವುದರಲ್ಲಿ ಅವರು ಮಿಕ್ಕ 'ಮುಖ್ಯವಾಹಿನಿ' ರಾಜಕಾರಣಿಗಳನ್ನೇ ಮೀರಿಸಿದ್ದಾರೆ.

ಹಿಂದಿನ ಪಾಂಡವಪುರ ಕ್ಷೇತ್ರಕ್ಕೆ ಸೇರಿರದೇ ಇದ್ದ ದುದ್ದ ಹೋಬಳಿಯಲ್ಲಿ ಪಕ್ಷ ಕಟ್ಟಿದ್ದು ಅದಕ್ಕೊಂದು ನಿದರ್ಶನ. ಕಾಲಾನುಕಾಲದಿಂದ ಇತರ ರಾಜಕೀಯ ಪಕ್ಷಗಳದ್ದೇ ಮೇಲುಗೈ ಆಗಿದ್ದ ಮತ್ತು ಕಳೆದ ಚುನಾವಣೆಯಲ್ಲೂ ಪುಟ್ಟಣ್ಣಯ್ಯನವರಿಗೆ ಕಡಿಮೆ ಮತಗಳನ್ನು ತಂದುಕೊಟ್ಟಿದ್ದ ಹೋಬಳಿ ಇದು. ಈ ಹೋಬಳಿಯ ಕೆಲವು ಹಳ್ಳಿಗಳಲ್ಲಿ ರೈತಸಂಘವು ತನ್ನ ಉಚ್ಛ್ರಾಯ ಕಾಲದಲ್ಲೂ ಘಟಕಗಳನ್ನು ಹೊಂದಿರಲಿಲ್ಲ. ಅಂತಹ ದುದ್ದ ಹೋಬಳಿಯ ಪ್ರತೀ ಹಳ್ಳಿಯಲ್ಲೂ ಈಗ ರೈತಸಂಘದ ಪಕ್ಷದ ಕಾರ್ಯಕರ್ತರಿದ್ದಾರೆ.

ಕಳೆದ 2-3 ವರ್ಷಗಳಲ್ಲಿ ರೈತಸಂಘದ ವತಿಯಿಂದ ಪುಟ್ಟರಾಜುವನ್ನು ಮೀರಿಸುವಂತೆ ಬೈಕ್ ರ್‍ಯಾಲಿ ಮತ್ತು ಬಹಿರಂಗ ಸಭೆಗಳನ್ನು ನಡೆಸಲಾಗಿದೆ; ಪುಟ್ಟರಾಜು ಫ್ಯಾಮಿಲಿಯ ಗೂಂಡಾಗಿರಿ ವಿರುದ್ಧ ಚಿನಕುರಳಿ ಹಾಗೂ ಇನ್ನಿತರೆಡೆ ಪ್ರತಿಭಟನೆಗಳನ್ನು ನಡೆದಿವೆ. ಬೇರೆ ಯಾವ ಜಿಲ್ಲೆಗಳಲ್ಲಿ ರೈತರ ಸಮಸ್ಯೆಗಳ ನಿವಾರಣೆಗೆ ಪ್ರತಿಭಟನೆ ನಡೆಯುತ್ತದೋ ಇಲ್ಲವೋ, ಮಂಡ್ಯ ಜಿಲ್ಲೆಯಲ್ಲಂತೂ ಸಕ್ರಿಯವಾಗಿ ಪ್ರತಿಭಟನೆಗಳು ನಡೆದವು (ಎಷ್ಟು ಪರಿಣಾಮಕಾರಿಯಾಗಿತ್ತು ಎಂಬ ಮಾತು ಬೇರೆ). ಚುನಾವಣಾ ಉದ್ದೇಶದಿಂದಲೇ ಸೇರುವ ಜನರೆದುರು ಪುಟ್ಟಣ್ಣಯ್ಯನವರು ಪ್ರಜಾಪ್ರಭುತ್ವ, ಭ್ರಷ್ಟಾಚಾರ, ರೈತರ ಸಮಸ್ಯೆಗಳ ಕುರಿತಾಗಿ ಮಾತನಾಡಿದ್ದಾರೆ. ಇದು ಯಾವ ರೀತಿಯಿಂದಲಾದರೂ ಸರಿ, ಒಂದಷ್ಟು ಸಕಾರಾತ್ಮಕ ಪರಿಣಾಮ ಬೀರಿರುತ್ತದೆ. 15 ವರ್ಷಗಳಿಂದ ಹೆಚ್ಚುಕಡಿಮೆ ನಿಂತುಹೋಗಿದ್ದ, ಹೊಸ ಯುವಕರು ಹಸಿರು ಶಾಲು ಹಾಕುವ ವಿದ್ಯಮಾನವು ಈಗ ಈ ಎರಡು ಕ್ಷೇತ್ರಗಳ ಚುನಾವಣೆಯ ರಭಸದ ಕಾರಣದಿಂದ ಮತ್ತೆ ಶುರುವಾಗಿದೆ.



ಜಾತಿಯನ್ನು ಬೇರೆ ರೀತಿಯಲ್ಲಿ ಬಳಸಿಕೊಂಡಿರಬಹುದಾದರೂ, ಪುಟ್ಟಣ್ಣಯ್ಯನವರ ವ್ಯಕ್ತಿತ್ವದಲ್ಲಿ ಜಾತಿವಾದದ ಸೋಂಕು ಇಲ್ಲ. ರಾಜ್ಯದ ಬೇರೆ ಭಾಗಗಳ ಗಣ್ಯರನ್ನು ಕರೆತಂದು ಹತ್ತಾರು ಕಾರ್ಯಕ್ರಮಗಳನ್ನು ಏರ್ಪಡಿಸಿದ್ದಾರೆ; ಭಾಷಣ ಮಾಡಿಸಿದ್ದಾರೆ. ಇವೆಲ್ಲಾ ಮಾಡುತ್ತಾ, ಈ ಕಾಲದಲ್ಲೂ ಚುನಾವಣಾ ಅಖಾಡದಲ್ಲಿ 'ಮುಖ್ಯವಾಹಿನಿ' ರಾಜಕೀಯ ಪಕ್ಷದಿಂದ ಹೊರತಾದ ಸಂಘಟನೆಯೊಂದು ಗೆಲ್ಲುವ ಸಾಧ್ಯತೆಯ ಹತ್ತಿರಕ್ಕೆ ಬರುವ ಮಟ್ಟಕ್ಕೆ ಮೇಲುಕೋಟೆ ಕ್ಷೇತ್ರದಲ್ಲಿ ರೈತಸಂಘ ಬಂದಿದೆ.

ಆದರೆ, ಇದಕ್ಕಾಗಿ ಪುಟ್ಟಣ್ಣಯ್ಯನವರು ಹಲವು ರಾಜಿಗಳನ್ನು ಮಾಡಿಕೊಂಡಿರುವುದೂ ನಿಜ. ಬಹಳ ಎದ್ದು ಕಾಣುವ ರಾಜಿ, ಲಿಂಗಾಯತರ ಓಟು ಪಡೆಯಲು ಮತ್ತು ಅಧಿಕಾರದಲ್ಲಿದ್ದಾಗ ತಮ್ಮ ಜೊತೆ ಚೆನ್ನಾಗಿದ್ದದ್ದರಿಂದಲೂ ಯಡಿಯೂರಪ್ಪನವರ ಜೊತೆ ಮಾಡಿಕೊಂಡಿರುವ ಒಪ್ಪಂದ. ಈ ರಾಜ್ಯ ಕಂಡ ಅತ್ಯಂತ ಕೆಟ್ಟ ಆಡಳಿತವನ್ನು ನೀಡಿದ, ರೈತರಿಗೆ ಮೋಸ ಮಾಡಿದ ಯಡ್ಡಿಯನ್ನು 'ರೈತನಾಯಕ'ನೆಂದು ಹೇಳಲು ಸಾಧ್ಯವಾಗಿರುವುದು ಮೇಲೆ ಕಾಣಿಸಿದ ಕಾರಣಕ್ಕೇ. ಇದು ಹಿಂದೆಯೇ ಶುರುವಾಯಿತು. ಯಡ್ಡಿಯ ಕೃಷಿ ಬಜೆಟ್, ಮೋಸದ ಬಜೆಟ್ ಆಗಿದ್ದರೂ ಅದನ್ನು ಪುಟ್ಟಣ್ಣಯ್ಯ ಹೊಗಳಿದರು. ಜೆ.ಪಂ ಚುನಾವಣೆ ವೇಳೆ ಬಿಜೆಪಿ ಸರ್ಕಾರಕ್ಕೆ ತಾನು ಫಸ್ಟ್‌ಕ್ಲಾಸ್ ಅಂಕಗಳನ್ನು ನೀಡುತ್ತೇನೆಂದು ಪತ್ರಿಕಾಗೋಷ್ಠಿ ಮಾಡಿದರು. ಮೊನ್ನೆ ಕೆಜೆಪಿ ಸಭೆಯಲ್ಲಿ ಯಡಿಯೂರಪ್ಪನವರ ಭಾವಚಿತ್ರವಿದ್ದ ಕೆಜೆಪಿ ಶಾಲನ್ನು ಯಾವ ಮುಜುಗರವಿಲ್ಲದೇ ಹೊದ್ದುಕೊಂಡರು ಮತ್ತು ಅದನ್ನು ನಂತರ ಸಮರ್ಥಿಸಿಕೊಂಡರು.

ಕೆಲವು ಬಹಿರಂಗ ಸಭೆಗಳ ಪ್ರಚಾರಕ್ಕೆ ಬೇರೆ ಪಕ್ಷಗಳವರನ್ನು ಮೀರಿಸುವ ಮಟ್ಟಕ್ಕೆ ಫ್ಲೆಕ್ಸ್ ಹಾಕಿಸಲಾಯಿತು. ಕಿರೀಟ ತೊಡಿಸಲಾಯಿತು. ಬೇರೆ ಬೇರೆ ಹಳ್ಳಿಗಳಲ್ಲಿನ ನೂರೆಂಟು ಬಗೆಯ ಕಾರ್ಯಕ್ರಮಗಳಿಗೆ ರಾಜಕಾರಣಿಗಳ ರೀತಿಯಲ್ಲೇ ಜೇಬಿನಿಂದ ಹಣ ತೆಗೆದು ನೀಡುವ ಅಭ್ಯಾಸ ಶುರು ಮಾಡಿಕೊಂಡರು. ಜೆಡಿಎಸ್ ಮತ್ತು ಪುಟ್ಟರಾಜು ಹೊರತುಪಡಿಸಿ ಉಳಿದ ಪಕ್ಷಗಳು ಮತ್ತು ರಾಜಕಾರಣಿಗಳ ಬಗ್ಗೆ ರೈತಸಂಘ ಮೃದುಧೋರಣೆ ತಾಳಿದ್ದೂ ಎದ್ದು ಕಾಣುತ್ತಿತ್ತು. ಸಾಫ್ಟ್ ಅಂದರೆ 'ಪ್ರಧಾನ ಶತ್ರುವಿನ ವಿರುದ್ಧ ರಣಕಹಳೆ ಊದಿ' ಉಳಿದವರನ್ನು ಟಾರ್ಗೆಟ್ ಮಾಡದೇ ಇರುವುದು ಮಾತ್ರವಲ್ಲ, ಅವರೊಡನೆ ವೇದಿಕೆ ಹಂಚಿಕೊಳ್ಳುವುದು, ಪ್ರಚಾರವನ್ನು ಜಂಟಿಯಾಗಿ ಮಾಡುವುದು, ಯಡ್ಡಿಯ ಪಾದಯಾತ್ರೆಗೆ ಪ್ರತ್ಯಕ್ಷ ಪಾಲ್ಗೊಳ್ಳುವಿಕೆಯೊಂದಿಗೆ ಬೆಂಬಲ ಸೂಚಿಸುವ ಮಟ್ಟಕ್ಕೆ ಇವೆಲ್ಲ ಇಳಿಯಿತು.

ಅಗತ್ಯವಿದ್ದ ಕಾಲದಲ್ಲಿ ಕಾವೇರಿ ನೀರನ್ನು ರೈತರ ಹೊಲಗಳಿಗೆ ಬಿಡಿಸಿದ್ದು ಬಿಟ್ಟರೆ, ಈ ಅವಧಿಯಲ್ಲಿ ರೈತರನ್ನು ಜಾಗೃತಗೊಳಿಸುವ ಮತ್ತು ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ದೊಡ್ಡ ಪರಿಣಾಮಕಾರಿ ಹೋರಾಟವು ರೈತಸಂಘದಿಂದ ನಡೆದಿಲ್ಲ. ಕಬ್ಬಿನ ಬೆಲೆ ಹೆಚ್ಚಾಗಿದ್ದರಲ್ಲಿ ಮಾರುಕಟ್ಟೆ ಡೈನಾಮಿಕ್ಸ್‌ನ ಪಾತ್ರ ಹೆಚ್ಚಾಗಿತ್ತೇ ಹೊರತು ರೈತಸಂಘದ ಬಿಗಿಪಟ್ಟು ಅಷ್ಟೇನೂ ಕೆಲಸ ಮಾಡಿಸಲಿಲ್ಲ. ವಾಸ್ತವದಲ್ಲಿ ಅಂತಹ ಬಿಗಿಪಟ್ಟನ್ನೇ ಹಾಕಲಿಲ್ಲ. ರೈತಸಂಘದ ರಾಜ್ಯಾಧ್ಯಕ್ಷರೂ (ನಂತರ 'ರಾಜ್ಯ ವರಿಷ್ಠರೂ') ಆಗಿದ್ದ ಪುಟ್ಟಣ್ಣಯ್ಯ ತಮ್ಮ ಕಾರ್ಯಕ್ಷೇತ್ರವನ್ನು ಪಾಂಡವಪುರಕ್ಕೆ ಸೀಮಿತಗೊಳಿಸಿಕೊಂಡರು.

ಇವ್ಯಾವುವೂ ಅರ್ಥವೇ ಆಗದಷ್ಟು ಪುಟ್ಟಣ್ಣಯ್ಯ ಅಮಾಯಕರಲ್ಲ; ದುಷ್ಟರಂತೂ ಮೊದಲೇ ಅಲ್ಲ. ಆ ಕುರಿತ ಪಾಪಪ್ರಜ್ಞೆ ಅವರನ್ನು ಅಲ್ಲಲ್ಲಿ ಕಾಡುತ್ತದೆ. ಈ ಎಲ್ಲಾ ರಾಜಿಗಳ ಹೊರತಾಗಿ ಮಿಕ್ಕ ಹಲವು ವಿಚಾರಗಳಲ್ಲಿ ಅವರು ಸಕಾರಾತ್ಮಕ ವ್ಯಕ್ತಿತ್ವವುಳ್ಳವರೇ. ಮಾನವೀಯ ಪ್ರಜ್ಞೆ, ದಲಿತರು, ಕೃಷಿ ಕಾರ್ಮಿಕರ ಬಗೆಗಿನ ಧೋರಣೆ, ವೈಚಾರಿಕ ಸಂಗತಿಗಳನ್ನು ಜನರಿಗೆ ಮುಟ್ಟಿಸುವಲ್ಲಿ ಕರಗತವಾಗಿರುವ ಸರಳ ವಾಚಾಳಿತನ ಇವೆಲ್ಲದರಲ್ಲಿ ರೈತ ಚಳವಳಿಯ ಇನ್ನೂ ಹಲ ನಾಯಕರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ. ಪ್ರತಿನಿತ್ಯ ಜನರೊಂದಿಗೆ ಒಡನಾಡುತ್ತಾ ಇವೆಲ್ಲವನ್ನೂ ಕಾಪಾಡಿಕೊಂಡು ಬರುವುದರಲ್ಲಿ ಸಂಘಟನೆಗಳ ಕಾರ್ಯಕರ್ತರಿಗೆ ಅವರು ಮಾದರಿ. ಇಷ್ಟೆಲ್ಲ ಇದ್ದೂ, ಪಾಂಡವಪುರದಲ್ಲಿ ಎಂಎಲ್‌ಎ ಆಗಬೇಕೆನ್ನುವ ಕಾರಣಕ್ಕೆ ಅಷ್ಟೆಲ್ಲಾ ರಾಜಿ ಅಗತ್ಯವಿತ್ತೇ ಎಂಬ ಪ್ರಶ್ನೆ ಕಾಡದೇ ಇರುವುದಿಲ್ಲ.

ಬಿಜೆಪಿ-ಕೆಜೆಪಿ ಮತ್ತು ಕಾಂಗ್ರೆಸ್ ಬಗ್ಗೆ ರೈತಸಂಘವು ಇಂತಹ ಒಂದು ಧೋರಣೆಯನ್ನು ತಾಳಬಹುದಿತ್ತೇ? ಇದು ಈ ರಾಜ್ಯದಲ್ಲಿ ಯಾವ ಮೌಲ್ಯಪ್ರಜ್ಞೆಯನ್ನು ನಿರ್ಮಿಸುತ್ತದೆ? ಇನ್ನೊಂದು ರೀತಿಯಲ್ಲಿ ಇದು ಜಾತಿರಾಜಕಾರಣವೂ ಹೌದಲ್ಲವೇ? ಇಂತಹ ಜಾತಿ ಸಮೀಕರಣಗಳು ನಡೆದರೆ ಒಳ್ಳೆಯದೇ ಎಂಬ ಭಾವನೆ ಈಗಾಗಲೇ ನೆಲೆಯೂರಿದೆ.

ಈ ನಾಲ್ಕೈದು ವರ್ಷಗಳಲ್ಲಿ ಬೇರೆ ಪಕ್ಷಗಳಿಂದ ಕಾರ್ಯಕರ್ತರು ರೈತಸಂಘಕ್ಕೆ ಬಂದಂತೆಯೇ, ... ಬೇರೆ ಕಡೆಗೂ ಹೋದರು; ಚುನಾವಣೆಯಲ್ಲಿ ಸ... ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಇವರೆ... ಹೊರಹೋಗುತ್ತಾರೆ. ಹೋಗುವಾಗ ರೈತಸಂಘದ... ಕಾರ್ಯಕರ್ತರನ್ನೂ ಕರೆದುಕೊಂಡೇ ಹೋಗು... ಯಡಿಯೂರಪ್ಪನ ವಿಚಾರದಲ್ಲಿ ಹಾಕಿಕೊಟ್ಟ ಮ... ಕಾರ್ಯಕರ್ತರನ್ನು ದಿಕ್ಕುತಪ್ಪಿಸುತ್ತದೆ.

ರಾಜ್ಯಾದ್ಯಂತ ಪ್ರಬಲ ರೈತ ಚಳವಳಿ ಕಟ್ಟುವ ಸಾಧ್ಯತೆ... ಪಕ್ಕಕ್ಕಿಟ್ಟು, ಪಾಂಡವಪುರದ ಶಾಸಕರಾಗು... ಪ್ರಧಾನವಾಗಿಬಿಟ್ಟಿದ್ದು ಚಳವಳಿಗಾದ ನಷ್ಟ ... ಭಾವಿಸುವವರೂ ಕಡಿಮೆ ಇದ್ದಾರೆ. ಇದರ ಮುಂದ... ಇನ್ನೂ ಕೆಟ್ಟ ಪರಿಣಾಮ ಉಂಟುಮಾಡಲಿದೆ. ಚುನಾ... ರಾಜಕಾರಣದ ಎಷ್ಟೆಲ್ಲಾ ಕಷ್ಟಗಳ ನಡುವೆಯೂ ಒ... ನೈತಿಕತೆಯನ್ನು ಪುಟ್ಟಣ್ಣಯ್ಯ ಉಳಿಸಿಕೊಂಡಿದ್ದಾರೆ. ... ನಾಳೆ ಇವರು ಶಾಸಕರಾದರೆ ಅಥವಾ ಗೆಲುವಿನ ಸಮ... ಬಂದರೆ ಅದು ಚುನಾವಣಾ ಕೂಪಕ್ಕೆ ಇನ್ನೆಷ್ಟು ಜ... ತಳ್ಳಬಹುದು, ಅವರಲ್ಲಿ ಪುಟ್ಟಣ್ಣಯ್ಯನವರಷ್ಟ... ನೈತಿಕತೆಯನ್ನು ಮತ್ತು ಜನಪರ ಕಾಳಜಿ... ಉಳಿಸಿಕೊಳ್ಳಬಲ್ಲಷ್ಟು ಅಂತಃಸತ್ವ ಎಷ್ಟು ಜನರಿಗಿರು... ಬೀದಿ ಚಳವಳಿಯ ಮುಂಚೂಣಿ ಕಾರ್ಯಕರ್ತ... ಬಹುದಾದ ಸಾವಿರಾರು ಜನರು ವಿವಿಧ ರಾಜ... ಪಕ್ಷಗಳ ದಾಸರಾಗಲು ಇದರಿಂದ ಪ್ರೇರಣೆ ... ಬರುವುದಿಲ್ಲವೇ?

ಇವೆಲ್ಲದರ ಆಚೆಗೂ ಒಬ್ಬರಲ್ಲ, 10 ... ಎಂಎಲ್‌ಎಗಳು ಗೆದ್ದು ಬಂದರೂ, ಈ ನಾಡಿನ ಆ... ನೀತಿಯನ್ನು ಬದಲಿಸಲು ಸಾಧ್ಯವೇ? ಎಲ್ಲರೂ ಭರವಸೆ... ನೋಡುತ್ತಿರುವ ಸಿದ್ಧರಾಮಯ್ಯನವರ ಆರ್ಥಿಕ ನೀತಿ... ಜಾಗತೀಕರಣದ ನೀತಿಗೆ ಪೂರಕವಾಗಿ... ಇರುವಂಥದ್ದಲ್ಲವೇ? ಒಬ್ಬರಲ್ಲಾ, 10 ಜನರಲ್ಲಾ, ನೂ... ಎಂಎಲ್‌ಎಗಳು ಗೆದ್ದು ಬಂದು ಅಧಿಕಾರವನ್ನೇ ... ಎಡಪಕ್ಷಗಳು ಪ.ಬಂಗಾಳ ಮತ್ತು ಕೇರಳಗಳಲ್ಲಿ ... ಮೂಲಭೂತ ಬದಲಾವಣೆಯನ್ನು ತರಲು ಸಾಧ್ಯವಾ... ಅಂತಿಮವಾಗಿ ಕಾಂಗ್ರೆಸ್, ಬಿಜೆಪಿಗಳು ಜಾರಿಗೆ ... ಬಂಡವಾಳಶಾಹಿ ಪರ 'ಅಭಿವೃದ್ಧಿ ಮಾದರಿ'ಯನ್ನೇ ಅ... ತಂದರಲ್ಲವೇ? ಸಿಂಗೂರು, ನಂದಿಗ್ರಾಮಗಳಲ್ಲಿ ... ಅತ್ಯಾಚಾರ, ಗೋಲೀಬಾರ್ ಎಲ್ಲವನ್ನೂ ಮಾಡಿ ... ಹಾಗೂ ಸಲೀಂ ಕಂಪೆನಿಗಳನ್ನು ತಂದು ಕೂರಿಸಲು ಪ್ರ... ಪಟ್ಟಿರಲ್ಲವೇ?

ಆ ಕಾರಣಗಳಿಗಲ್ಲದೇ ಹಾಲಿ ಇರುವ ಸಂಸದಿ... ಪ್ರಜಾತಂತ್ರದ ಹಾಗೂ ಚುನಾವಣೆಯ ರೀತಿ-ನೀತಿ... ಸ್ವತಃ ಭ್ರಷ್ಟರಾಗದ ಯಾರನ್ನೂ ಗೆಲ್ಲಲು ಬಿಡುವುದಿಲ್ಲ. ... ಕೇವಲ ಭ್ರಷ್ಟತೆಯ ಪ್ರಶ್ನೆ ಮಾತ್ರವೂ ಅಲ್ಲ, ವಿಸ್ತೃತ ಸಾಮ... ನೆಲೆಯನ್ನು ಹೊಂದಿರುವ ಬಂಡವಾಳಶಾಹಿ ... ಪಾಳೇಗಾರಿ ಶಕ್ತಿಗಳ ಹಿತಾಸಕ್ತಿಯನ್ನು ಕಾಪಾಡದೇ ... ಯಾರನ್ನೂ ಅದು ಅಧಿಕಾರಕ್ಕೆ ಬರಲು ಬಿಡುವು... ಒಂದು ವೇಳೆ ಬಂದರೆ ಉಳಿಯಲು ಬಿಡುವುದಿಲ್ಲ... ಸಾಮಾಜಿಕ ನೆಲೆಯನ್ನು ನಾವು ಒಡೆಯದೇ, ಅಧಿಕ... ಸೂತ್ರದಲ್ಲಿ ಬದಲಾವಣೆ ಇರದು..

ಈ ಎಲ್ಲಾ ಪ್ರಶ್ನೆಗಳನ್ನು ಈಗ ಕೇಳಬಾರದು ಎ... ಗೆಳೆಯರಿದ್ದಾರೆ. ಈ ಎಲ್ಲಾ ಪ್ರಶ್ನೆಗಳಿಂದ ಪುಟ್ಟಣ್ಣಯ್ಯನ... ಒಂದಷ್ಟು ಓಟುಗಳು ತಪ್ಪಿ ಬಿಡಬಹುದು ಎನ್ನು... ಅವರ ಆತಂಕ. ಈ ಎಲ್ಲಾ ಪ್ರಶ್ನೆಗಳು ಸರಿ ಇ... ಅವು ಪುಟ್ಟರಾಜುವಿಗೆ ಸಹಾಯ ಮಾಡುವಂತಾಗಬಾ... ಎಂಬುದು ಅವರ ಕಾಳಜಿ. ವಾಸ್ತವದಲ್ಲಿ ಪುಟ್ಟರಾಜುವಿ... ಪುಟ್ಟಣ್ಣಯ್ಯವರಿಗೂ ಹೋಲಿಕೆಯೇ ಇಲ್ಲ. ಪುಟ್ಟಣ್ಣಯ್ಯ... ಬಗ್ಗೆ ನೈತಿಕ ಪ್ರಶ್ನೆಗಳನ್ನೆತ್ತಬೇಕಾದ್ದು ಉಳಿದ ಪ್ರಗ... ಚಳವಳಿಗಳೇ ಹೊರತು, ಪುಟ್ಟರಾಜುವ... ಪುಟ್ಟಣ್ಣಯ್ಯನವರಲ್ಲಿ ಇರಬಹುದಾದ ದುರ್ಗುಣಗ... ಪಟ್ಟಿ ಮಾಡಿದರೆ, ಅವನ್ನು ಸಾವಿರ ಪಟ್ಟು ಗುಡ್ಡೆ ಮಾಡಿ... ಒಬ್ಬ ಪುಟ್ಟರಾಜು ಆಗಬಹುದು. ಗಲೀಜು ಚುನಾ... ರಾಜಕಾರಣದ ಪಟ್ಟುಗಳನ್ನು ಕರಗತ ಮಾಡಿಕೊಂಡಿ... ಆತನಿಗೆ ಯಾವ ನೈತಿಕತೆಯೂ ಇಲ್ಲ.

ಆದರೆ ಈ ಎಲ್ಲಾ ಪ್ರಶ್ನೆಗಳನ್ನು ಈ ಚುನಾವಣೆ... ಸಂದರ್ಭದಲ್ಲೇ ಪುಟ್ಟಣ್ಣಯ್ಯನವರನ್ನು ಕೇಳಬೇಕಾಗಿರುವ... ಅನಿವಾರ್ಯವಂತೂ ಹೌದು. ಚುನಾವಣೆ ಮುಗಿದ ಮೇ... ಹೇಳುವ, ಕೇಳುವ ಸ್ಥಿತಿಯಲ್ಲಿ ಯಾರೂ ಇರುವುದಿ...

ಇಷ್ಟೆಲ್ಲದರಾಚೆಗೂ ಪುಟ್ಟಣ್ಣಯ್ಯನವರು ಗೆಲ್ಲಬೇ... ಜನಚಳವಳಿಗಳು ಕೂಗು ಹಾಕಿದಾಗ ಅದಕ್ಕೆ ನೆ... ನೀಡಲು ವಿಧಾನಸಭೆಯೊಳಗೆ ಅವರಿರುವುದಾದರೆ ಯ... ಬೇಡ? ಎಷ್ಟರಮಟ್ಟಿಗಿನ ನೆರವು ಸಾಧ್ಯವಾಗುತ್ತದೆಂಬ 'ಬ... ಪ್ರಶ್ನೆ ಇರಬಹುದು. ಆದರೆ ಪುಟ್ಟರಾಜು ಮತ್ತು ಜೆಡಿ... ಗೆಲ್ಲಬಾರದು ಅಲ್ಲವೇ?

ಬೆಂಗಳೂರು ಬಾಂಬ್ ಬ್ಲಾಸ್ಟ್ ಮತ್ತು ಉಗ್ರರು



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ


ನಿನ್ನೆ ಬುಧವಾರ ಬೆಂಗಳೂರಿನಲ್ಲಿ ಬಾಂಬ್ ಸ್ಫೋಟಗೊಂಡು ಹಲವಾರು ಜನರಿಗೆ ಗಾಯಗಳಾಗಿವೆ. ದೃಷ್ಟವಶಾತ್ ಈ ಪ್ರಕರಣದಲ್ಲಿ ಯಾರೂ ಪ್ರಾಣವನ್ನು ಕಳೆದುಕೊಂಡಿಲ್ಲ ಎಂಬುದೇ ನೆಮ್ಮದಿಯ ಸಂಗತಿ. ಮಲ್ಲೇಶ್ವರದಲ್ಲಿರುವ ಬಿಜೆಪಿ ಕಚೇರಿ ಎದುರು ಈ ಬಾಂಬ್ ಸ್ಫೋಟಗೊಂಡಿದ್ದೇ ತಡ, ಎಂದಿನಂತೆ ಟಿವಿ ಸುದ್ದಿ ಮಾಧ್ಯಮಗಳು overdrive ಗೆ ಹೋದವು. ಯಾವ ಮಟ್ಟಿಗೆ ಎಂದರೆ ಆರಂಭದಲ್ಲಿ ಇಬ್ಬರು ಪ್ರಾಣ ಕಳೆದುಕೊಂಡಿದ್ದಾರೆ ಎಂದೆಲ್ಲ ತಪ್ಪು ವರದಿ ಮಾಡಿದವಲ್ಲದೆ ಮತ್ತೊಂದು ಸ್ಥಳದಲ್ಲೂ ಇನ್ನೊಂದು ಬಾಂಬ್ ಸ್ಫೋಟಗೊಂಡಿದೆ ಎಂದು ಬಿತ್ತರಿಸಿದವು. ಎಂದಿನಂತೆ ಪೊಲೀಸರು ಮತ್ತು ಹಲವು ಮಾಧ್ಯಮಗಳು ಈ ಸ್ಫೋಟದ ಹಿಂದೆ ಇಂಡಿಯನ್ ಮುಜಾಹಿದ್ದೀನ್ ಅಥವಾ ಲಷ್ಕರ್ ಎ ತಯಿಬಾ ಕೈವಾಡ ಇದೆ ಎಂದೆಲ್ಲ ಶಂಕಿಸುತ್ತಿದ್ದಾರೆ.

ನಿನ್ನೆ ಸಂಭವಿಸಿದ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂಕ್ತವಾದ ತನಿಖೆ ಆಗಬೇಕಿದೆ. ಅದರ ಹಿಂದಿರುವವರನ್ನು ಹಿಡಿದು ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಬೇಕಿದೆ. ಮತ್ತೆ ಯಾರೂ ಇಂತಹ ಕೃತ್ಯಗಳನ್ನು ಎಸಗದಂತೆ ಅವರೆಲ್ಲರಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕಿದೆ. ಇದರ ಬಗ್ಗೆ ಎರಡು ಮಾತಿಲ್ಲ.

ಆದರೆ ಇಲ್ಲೊಂದು ಸಣ್ಣ **flash back** ಅಗತ್ಯ ಎನಿಸುತ್ತಿದೆ. ಯಾಕೆಂದರೆ ರಾಜ್ಯ ವಿಧಾನಸಭೆಗೆ ಚುನಾವಣೆಗಳು ಎದುರಾಗಿರುವ ಕಾಲ ಇದೆ.

ಐದು ವರ್ಷಗಳ ಹಿಂದೆ ಇಂತಹದ್ದೇ ಚುನಾವಣೆ ಸಂದರ್ಭದಲ್ಲಿ ಹುಬ್ಬಳ್ಳಿಯ ನ್ಯಾಯಾಲಯದಲ್ಲಿ ಬಾಂಬ್ ಸ್ಫೋಟಗೊಂಡಿದ್ದು ನೆನಪಿದೆಯೇ? ಆಗ ಅದನ್ನೇ ಬಿಜೆಪಿ ದೊಡ್ಡ ವಿಷಯವನ್ನಾಗಿಸಿತ್ತು. ಆಗ ಪ್ರಧಾನಿ ಆಕಾಂಕ್ಷಿಯಾಗಿದ್ದ ಎಲ್.ಕೆ.ಅಧ್ವಾನಿ ಹುಬ್ಬಳ್ಳಿ ಬಾಂಬ್ ಪ್ರಕರಣವನ್ನೇ ನೆಪವಾಗಿಸಿಕೊಂಡು ಯುಪಿಎ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದರು, ಕಾಂಗ್ರೆಸ್ ಭಯೋತ್ಪಾದಕರ ವಿರುದ್ಧ ಮೃದು ನಿಲುವು ತಾಳಿರುವುದರಿಂದ ಇಂತಹ ಕೃತ್ಯಗಳು ಹೆಚ್ಚಾಗುತ್ತಿವೆ ಎಂದು ಆರೋಪಿಸಿದ್ದರು. ಅಧ್ವಾನಿಯ ಬಿಜೆಪಿ ಪಕ್ಷ ಕೂಡ ಇದನ್ನು ಚುನಾವಣೆಯಲ್ಲಿ ತನ್ನ 'ದೇಶಪ್ರೇಮ'ವನ್ನು, 'ದೇಶನಿಷ್ಠೆ'ಯನ್ನು ಪ್ರಚಾರ ಮಾಡಲು ಬಳಸಿಕೊಂಡಿತ್ತು.

ಪೊಲೀಸರು ಕೂಡ ಹುಬ್ಬಳ್ಳಿ ಬಾಂಬ್ ಸ್ಫೋಟದ ಹಿಂದೆ ಎಲ್‌ಟಿಇ ಮತ್ತು ಸಿಮಿ ಸಂಘಟನೆಗಳ ಕೈವಾಡವಿದೆ ಎಂದು ಆರೋಪಿಸಿ ಹಲವಾರು ಅಮಾಯಕ ಮುಸಲ್ಮಾನ ಯುವಕರನ್ನು ಬಂಧಿಸಿದ್ದರು. ಆಗ ಬಂಧನಕ್ಕೊಳಗಾದ ಒಬ್ಬ ಯುವಕ ಬಡವನಾದರೂ ಪ್ರತಿಭಾವಂತ. ಆತ ಸಿಇಟಿ ಪಾಸು ಮಾಡಿ ವೈದ್ಯಕೀಯ ಕಾಲೇಜಿನಲ್ಲಿ ಓದುತ್ತಿದ್ದ. ಆತನ ಬಂಧನವಾದಾಗ ಪರೀಕ್ಷೆಗಳು ಎದುರಾದವು. ಆತ




ರಾಜನಾಥ್ ಸಿಂಗ್ ಜೊತೆ ಪ್ರಜ್ಞಾ

ಪೊಲೀಸ್ ವಿಚಾರಣೆಯನ್ನು ಎದುರಿಸುತ್ತಿದ್ದರಿಂದ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕೆಂದು ಕೋರಿದ. ಪೊಲೀಸರು ಅದಕ್ಕೆ ಒಪ್ಪಿದ್ದರು ಸಹ. ಆದರೆ ಆತ ಪರೀಕ್ಷೆಯನ್ನು ತೆಗೆದುಕೊಳ್ಳಕೂಡದೆಂದು ಸಂಘ ಪರಿವಾರದ ಅಂಗವಾದ ಎಬಿವಿಪಿ ಸದಸ್ಯರು ದೊಂಬಿ ನಡೆಸಿದ್ದರಿಂದ ಆತ ಪರೀಕ್ಷೆಯನ್ನು ಬರೆಯಲಾಗಲಿಲ್ಲ.

ಅದೆಲ್ಲ ಬಿಡಿ, ಆ ಪ್ರಕರಣದ ನಂತರ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂತು. ಅತ್ತ ಜೈಲಿನಲ್ಲಿ ಅಮಾಯಕರು ಕೊಳೆಯುತ್ತಿರುವಾಗ ಇತ್ತ ಬಿಜೆಪಿ ತನ್ನ ಅಧಿಕಾರವನ್ನು ಭದ್ರಪಡಿಸಿಕೊಳ್ಳಲು ಹೇಸಿಗೆ ಹುಟ್ಟಿಸುವ ರಾಜಕೀಯದಲ್ಲಿ ತೊಡಗಿತು. ಬಾಂಬ್ ಸ್ಫೋಟವನ್ನು ತನಿಖೆ ಮಾಡಿದ ಪೊಲೀಸರು ಏಳು ತಿಂಗಳ ನಂತರ ಸ್ಫೋಟಕ ಸತ್ಯವೊಂದನ್ನು ಹೊರಹಾಕಿದರು. ಅದೇನೆಂದರೆ, ಹುಬ್ಬಳ್ಳಿ ನ್ಯಾಯಾಲಯದಲ್ಲಿ ಸಂಭವಿಸಿದ ಬಾಂಬ್ ಸ್ಫೋಟಕ್ಕೂ ಯಾವುದೇ ಮುಸಲ್ಮಾನ ಸಂಘಟನೆಗೂ ಸಂಬಂಧವಿಲ್ಲ, ಬದಲಾಗಿ ಇದರ ಹಿಂದಿದ್ದದ್ದು ನಾಗರಾಜ್ ಜಂಬಗಿ ಎಂಬ ಕೊಲೆಗಾರ ಮತ್ತು ಡಕಾಯಿತ ಹಾಗು ಆತನ ಗ್ಯಾಂಗಿನ ಸದಸ್ಯರು ಎಂಬುದು.

ಆಗ ಆ ತನಿಖೆಯ ಮಾಹಿತಿಗಳನ್ನು ಬಹಿರಂಗಪಡಿಸಿದವರು ಈಗ ಬೆಂಗಳೂರಿನ ಪೊಲೀಸ್ ಕಮೀಷನರ್ ಆಗಿರುವ ಮತ್ತು ಆಗ ಉತ್ತರ ಕರ್ನಾಟಕದ ಐಜಿಪಿ ಆಗಿದ್ದ ರಾಘವೇಂದ್ರ ಔರಾದಕರ್ ಅವರು. ಆಗ ಔರಾದಕರ್ ಅವರು ನಾಗರಾಜ್ ಜಂಬಗಿ ಮತ್ತು ಹಿಂದೂತ್ವವಾದಿ ಸಂಘಟನೆಗಳ ನಡುವಿನ ನಂಟಿನ ಬಗ್ಗೆ ಹೇಳದಿದ್ದರೂ ಮಾಧ್ಯಮಗಳು ಅದನ್ನು ಬಹಿರಂಗಪಡಿಸಿದ್ದವು.



ಪ್ರಮೋದ್ ಮುತಾಲಿಕ್ ಎಂಬ ಹಿಂದೂತ್ವವಾದಿ ಸ್ಥಾಪಿಸಿದ್ದ ಶ್ರೀರಾಮ ಸೇನೆಯ ಸದಸ್ಯನಾಗಿದ್ದ ಜಂಬಗಿ ಹಲವಾರು ಹಿಂದೂತ್ವ ಸಭೆಗಳಲ್ಲಿ ಭಾಗವಹಿಸಿದ್ದ. ಮುತಾಲಿಕ್ ತನಗೆ ಜಂಬಗಿ ಯಾರೆಂದು ಗೊತ್ತೇ ಇಲ್ಲ ಎಂದು ಸುಳ್ಳು ಬೊಗಳುತ್ತಿದ್ದಾಗಲೇ ಆತ ಜಂಬಗಿಯೊಂದಿಗೆ ಇದ್ದ ಫೋಟೋ ಕೂಡ ಆಗ ಹೊರಬಿದ್ದಿತ್ತು.

ಆಗ ಹುಬ್ಬಳ್ಳಿ ಬಾಂಬ್ ಸ್ಫೋಟದ ಹಿಂದೆ ಇದ್ದದ್ದು ಹಿಂದೂತ್ವವಾದಿ ಭಯೋತ್ಪಾದಕರು ಎಂಬುದು ಸ್ಪಷ್ಟವಾಗಿತ್ತು. ಅಷ್ಟೇ ಅಲ್ಲ, ಆಗ ಜಂಬಗಿಯಿಂದ ಬಾಂಬ್‌ಗಳನ್ನು, ಗನ್‌ಪೌಡರ್, ಶಸ್ತ್ರಾಸ್ತ್ರಗಳನ್ನು ಮತ್ತು ಲಕ್ಷಾಂತರ ರೂಪಾಯಿಗಳನ್ನು ಔರಾದಕರ್ ಅವರ ತಂಡ ವಶಪಡಿಸಿಕೊಂಡಿತ್ತಲ್ಲದೆ, ಜಂಬಗಿ ಸ್ಫೋಟಕಗಳನ್ನು ಮಹಾರಾಷ್ಟ್ರದ ಹನುಮಂತ ಸೈನಿಸಕಲಿ ಎಂಬಾತನಿಂದ ಪಡೆದಿದ್ದನೆಂದೂ, ಹುಬ್ಬಳ್ಳಿ ನ್ಯಾಯಾಲಯದಲ್ಲಿ ಬಳಸಿದ್ದ ಸ್ಫೋಟಕವು 2007ರಲ್ಲಿ ಹದಿನೈದು ಜನರ ಪ್ರಾಣವನ್ನು ತೆಗೆದುಕೊಂಡಿದ್ದ ಹೈದರಾಬಾದ್ ಮೆಕ್ಕಾ ಮಸೀದಿಯಲ್ಲಿ ಬಳಸಿದ್ದ ಸ್ಫೋಟಕವನ್ನು ಹೋಲುತ್ತದೆ ಎಂದೂ ಔರಾದಕರ್ ಹೇಳಿದ್ದನು. ಅದೇ ಹೊತ್ತಿನಲ್ಲಿ ಹೇಮಂತ್ ಕರ್ಕರೆ ಅವರ ನೇತೃತ್ವದಲ್ಲಿ ಮಹಾರಾಷ್ಟ್ರದ ಎಟಿಎಸ್ ತಂಡ ನಡೆಸಿದ ತನಿಖೆಯಲ್ಲಿ ಹೈದರಾಬಾದ್ ಮೆಕ್ಕಾ ಮಸೀದಿ



ಆರೆಸ್ಸೆಸ್ ಸದಸ್ಯ ದಿಲೀಪನ ಸ್ಫೋಟಗೊಂಡಿರುವ ಬೈಕು

ಸ್ಫೋಟಕ್ಕೂ, ಮಾಲೆಗಾಂವ್‌ನಲ್ಲಿ ಸಂಭವಿಸಿದ ಬಾಂಬ್ ಸ್ಫೋಟಕ್ಕೂ ನಂಟಿರುವುದು ಬಹಿರಂಗಗೊಂಡಿತ್ತು. ಇದೆಲ್ಲದರ ಬಗ್ಗೆ ಸಂಘ ಪರಿವಾರದ ಸ್ವಾಮಿ ಅಸೀಮಾನಂದ ಎಂಬಾತ ನ್ಯಾಯಾಲಯದ ಮುಂದೆ ಒಪ್ಪಿಕೊಂಡಿದ್ದಾನೆ.

ಅದರ ಅರ್ಥ ಹುಬ್ಬಳ್ಳಿಯಲ್ಲಿ ನಡೆದದ್ದು ಪ್ರಮೋದ್ ಮುತಾಲಿಕನಿಂದ ಪ್ರಭಾವಿತರಾಗಿ ಯಾವುದೋ ಒಂದು ತಂಡ ಮಾಡಿದ ಕೃತ್ಯವಲ್ಲ, ಬದಲಾಗಿ ಈ ಹಿಂದೂತ್ವ ಭಯೋತ್ಪಾದಕರ ದುಷ್ಟ ಜಾಲ ದೇಶದಾದ್ಯಂತ ವ್ಯಾಪಿಸಿದೆ ಎಂಬುದು.

ದುರದೃಷ್ಟವಶಾತ್, ಹಿಂದೂತ್ವ ಭಯೋತ್ಪಾದಕರ ಈ ಜಾಲ ನ್ಯಾಯಾಲಯದ ಮುಂದೆ ಸಾಬೀತಾಗುವ ಮುನ್ನವೇ ಹುಬ್ಬಳ್ಳಿ ಬಾಂಬ್ ಸ್ಫೋಟದಲ್ಲಿ ಪ್ರಮುಖ ಆರೋಪಿ ಆಗಿದ್ದ ನಾಗರಾಜ್ ಜಂಬಗಿ ಜೈಲಿನಲ್ಲೇ ನಿಗೂಢವಾಗಿ ತನ್ನ ಪ್ರಾಣವನ್ನೇ ಕಳೆದುಕೊಂಡ. ಆತ ಸತ್ತಿದ್ದು ಹೇಗೆ, ಆತ ದಾಳಿಗೆ ಗುರಿಯಾಗಿದ್ದರೆ ಅದರ ಹಿಂದಿದ್ದವರು ಯಾರು, ಯಾಕೆ ಆತನನ್ನು ಕೊಲ್ಲಲಾಯಿತು ಎಂದೆಲ್ಲಾ ವಿಚಾರಣೆ ನಡೆಯಲಿಲ್ಲ, ಯಾಕೆಂದರೆ ಆಗ ರಾಜ್ಯದಲ್ಲಿ ಅಧಿಕಾರದಲ್ಲಿದ್ದದ್ದು ಹಿಂದೂತ್ವವಾದಿಗಳ ಬಿಜೆಪಿ ಪಕ್ಷ! ಅವರಿಗೆ ಇದ್ಯಾವುದೂ ಹೊರಗೆ ಬರುವುದು ಬೇಡವಾಗಿತ್ತು!!

ಇವತ್ತಿಗೆ ಹತ್ತು ದಿನಗಳ ಹಿಂದೆ ನೆರೆಯ ಕೇರಳ ರಾಜ್ಯದಲ್ಲಿ ಒಂದು ವಿಚಿತ್ರ ಪ್ರಕರಣ ನಡೆಯಿತು. ಏಪ್ರಿಲ್ 8ರ ಮುಂಜಾನೆ ಕನ್ನೂರಿನಲ್ಲಿ 27 ರ ಹರೆಯದ ದಿಲೀಪ್ ಕುಮಾರ್ ಎಂಬ ಆರೆಸ್ಸೆಸ್ ಸದಸ್ಯ ಓಡಿಸುತ್ತಿದ್ದ ಮೋಟಾರ್ ಬೈಕ್ ಸ್ಫೋಟಗೊಂಡು ಆತ ಸ್ಥಳದಲ್ಲೇ ಮೃತಪಟ್ಟ. ಆ ಸ್ಫೋಟ ಎಷ್ಟು ಪ್ರಬಲವಾಗಿತ್ತೆಂದರೆ 50 ಮೀಟರ್ ದೂರವಿದ್ದ ಮನೆಗಳಿಗೂ ಹಾನಿ ಆಯಿತು.

ತನಿಖೆಯಿಂದ ಗೊತ್ತಾಗಿದ್ದೇನೆಂದರೆ ದಿಲೀಪ್ ಕುಮಾರ್ ತನ್ನ ಬೈಕಿನಲ್ಲಿ ಸುಮಾರು ಮೂರು ಕೆಜಿಗಳಷ್ಟು ಸ್ಫೋಟಕಗಳನ್ನು ಸಾಗಿಸುತ್ತಿದ್ದು ಅದು ಆಕಸ್ಮಿಕವಾಗಿ ಬ್ಲಾಸ್ಟ್ ಆಗಿತ್ತೆಂದು. ಈ ದಿಲೀಪ್ ಕುಮಾರ್ ಎಂಬ 'ದೇಶಭಕ್ತ' ಯಾಕೆ ಸ್ಫೋಟಕಗಳನ್ನು ಸಾಗಿಸುತ್ತಿದ್ದ? ಅವುಗಳನ್ನು ಬಳಸಿ ಅವನು ಏನು ಮಾಡಬೇಕೆಂದಿದ್ದ? ಎಂಬೆಲ್ಲ ಪ್ರಶ್ನೆಗಳು ಭುಗಿಲೆದ್ದವು. ಆಗ ಕನ್ನೂರಿನ ಆರೆಸ್ಸೆಸ್ ಮುಖ್ಯಸ್ಥ ವಾಲ್ಸನ್ ಥಿಲ್ಲಂಕೇರಿ ಎಂಬಾತ ಏನೆಂದು ಹೇಳಿದ ಗೊತ್ತೆ? "ದಿಲೀಪ್ ಯಾವುದೇ ಭಯೋತ್ಪಾದಕ ಚಟುವಟಿಕೆಗಳಿಗೆ ಸ್ಫೋಟಕಗಳನ್ನು ತೆಗೆದುಕೊಂಡು ಹೋಗುತ್ತಿರಲಿಲ್ಲ, ಬದಲಾಗಿ ಆತನ ಕುಟುಂಬ ಪಟಾಕಿಗಳ ತಯಾರಿಕೆಯಲ್ಲಿ ತೊಡಗಿರುವುದರಿಂದ ಆತ ಅದನ್ನು ಇಟ್ಟುಕೊಂಡಿದ್ದ" ಎಂದರು. ಆದರೆ ವಾಸ್ತವವಾಗಿ ದಿಲೀಪನ ಕುಟುಂಬ ಪಟಾಕಿಗಳನ್ನು ತಯಾರಿಸಲು ಯಾವುದೇ ಪರವಾನಗಿಯನ್ನೇ ಪಡೆದಿರಲಿಲ್ಲ. ಇದು ಗೊತ್ತಾಗುತ್ತಿದ್ದಂತೆ ವಾಲ್ಸನ್ ಮತ್ತೊಂದು ಸುಳ್ಳು ಬೊಗಳಿದ. ಅದೇನೆಂದರೆ "ದಿಲೀಪ್ ನಮ್ಮ ಆರೆಸ್ಸೆಸ್ಸಿನ ಸದಸ್ಯನೇ ಆಗಿರಲಿಲ್ಲ, ಆತ ನಮ್ಮ ಆಶಯಗಳೊಂದಿಗೆ ಸಹಮತವುಳ್ಳವನಾಗಿದ್ದ ಅಷ್ಟೇ" ಎಂಬುದು.

ವಾಲ್ಸನ್‌ನ ಈ ಹೇಳಿಕೆಯನ್ನು ವಿಚಾರಣೆಗೆ ಒಳಪಡಿಸುವ ಹಾಗಿಲ್ಲ, ಯಾಕೆಂದರೆ ಮೊದಲಿನಿಂದಲೂ ಆರೆಸ್ಸೆಸ್ ಎಂದೂ ತನ್ನ ಸದಸ್ಯರ ಪಟ್ಟಿಯನ್ನು ಇಟ್ಟುಕೊಳ್ಳುವುದಿಲ್ಲ. ಆ ಕಾರಣಕ್ಕೇ ಆರೆಸ್ಸೆಸ್ ಮತ್ತು ಭಯೋತ್ಪಾದಕ ಕೃತ್ಯಗಳ ನಡುವಿನ ನಂಟು ಬಹಿರಂಗಗೊಂಡಾಗಲೆಲ್ಲ ಆರೆಸ್ಸೆಸ್ "ನಮಗೂ ಇದಕ್ಕೂ ಸಂಬಂಧವೇ ಇಲ್ಲ" ಎಂದು ಹೇಳುವ ಮೂಲಕ ಅಂತಹ 'ದೇಶಭಕ್ತ' ಕೃತ್ಯಗಳಿಂದ ಸಲೀಸಾಗಿ ಜಾರಿಕೊಳ್ಳುತ್ತದೆ.

ಮಾಲೆಗಾಂವ್ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಪೊಲೀಸರು ಸಾಧ್ವಿ ಪ್ರಜ್ಞಾಸಿಂಗ್ ಎಂಬ ಸಂಘಪರಿವಾರದ ಸದಸ್ಯೆಯನ್ನು ಬಂಧಿಸಿದಾಗಲೂ ಆರೆಸ್ಸೆಸ್ಸಿನವರು ತಮಗೂ, ತಮ್ಮ ಸಂಘಟನೆಗಳಿಗೂ ಮತ್ತು ಈ ಸಾಧ್ವಿಗೂ ಸಂಬಂಧವೇ ಇಲ್ಲ ಎಂದಿದ್ದರು. ಆದರೆ ಪ್ರಜ್ಞಾ ಸಿಂಗ್ ಬಿಜೆಪಿಯ ಅಧ್ಯಕ್ಷ ರಾಜನಾಥ್ ಸಿಂಗ್ ಮತ್ತು ಮಧ್ಯಪ್ರದೇಶದ ಬಿಜೆಪಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಜೊತೆ ಕೂತಿರುವ ಫೋಟೋ ಹೊರಬಿದ್ದಾಗ ಬಾಯಿ ಮುಚ್ಚಿಕೊಂಡಿದ್ದರು. ಇದು ಸಂಘಪರಿವಾರದ ಸೀಳು ನಾಲಿಗೆಗೆ ಒಂದು ಉದಾಹರಣೆಯಷ್ಟೇ.

ನಿನ್ನೆಯ ಬೆಂಗಳೂರು ಬಾಂಬ್ ಸ್ಫೋಟದ ಸುತ್ತ ಹಲವಾರು ಕುತೂಹಲಕರ ಪ್ರಶ್ನೆಗಳು ಹುಟ್ಟಿಕೊಂಡಿವೆ. ಬೆಂಗಳೂರಿನಂತಹ ಬೃಹತ್ ನಗರದಲ್ಲಿ ಎಲ್ಲಾ ಬಿಟ್ಟು ಅದ್ಯಾಕೆ ಬಿಜೆಪಿ ಕಚೇರಿಯ ಮುಂದೆಯೇ ಅದನ್ನು ಇಡಲಾಗಿತ್ತು? ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಬುಧವಾರ ಯಾರೂ ಪ್ರಮುಖ ಬಿಜೆಪಿ ನಾಯಕರು ಕಚೇರಿಯಲ್ಲಿ ಇಲ್ಲದಿರುವಾಗಲೇ ಅದು ಸ್ಫೋಟಗೊಂಡಿದ್ದು ಹೇಗೆ? ಬಿಜೆಪಿ ನಾಯಕರನ್ನೇ ದುಷ್ಕರ್ಮಿಗಳು ಗುರಿಯಾಗಿಸಿಕೊಂಡಿದ್ದರೆ ಬಾಂಬ್‌ಅನ್ನು ಬಿಜೆಪಿಯ ಕಚೇರಿಯ ಹೊರಗಡೆ ಇಡುವ ಬದಲು ಒಳಗಡೆಯೇ ಇಡಬಹುದಿತ್ತಲ್ಲವೇ? ಹಲವರಿಗೆ ಒಂದಿಷ್ಟು ಗಾಯಗಳನ್ನು ಮಾತ್ರ ಮಾಡಿದ ಈ ಸ್ಫೋಟದ ಹಿಂದಿನ ಉದ್ದೇಶವೇನು? ಮಾನ, ಮರ್ಯಾದೆ ಇತ್ಯಾದಿಗಳನ್ನು ಕಳೆದುಕೊಂಡು ಈಗ ಚುನಾವಣೆಯಲ್ಲೂ ಸೋಲನ್ನು ಎದುರು ನೋಡುತ್ತಿರುವ ಬಿಜೆಪಿಗೆ ಈ ಸ್ಫೋಟದಿಂದ ಎಷ್ಟು ಹಾನಿ? ಎಷ್ಟು ಲಾಭ?

ಹುಬ್ಬಳ್ಳಿ ನ್ಯಾಯಾಲಯದಲ್ಲಿನ ಬಾಂಬ್ ಸ್ಫೋಟ ಸೇರಿದಂತೆ ಕರ್ನಾಟಕದಲ್ಲಿ ಇಲ್ಲಿಯವರೆಗೂ ಸಂಭವಿಸಿರುವ ಭಯೋತ್ಪಾದಕ ಕೃತ್ಯಗಳ ಸಂಖ್ಯೆ ಐದು. 2005ರಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮೇಲೆ ನಡೆದ ದಾಳಿಯಲ್ಲಿ ಓರ್ವ ವಿಜ್ಞಾನಿ ಮೃತಪಟ್ಟಿದ್ದರು. ಆ ದಾಳಿಯ ಹಿಂದಿದ್ದದ್ದು ಯಾರು ಎಂಬುದು ಇಲ್ಲಿಯತನಕ ಸಾಬೀತಾಗಿಲ್ಲ.

ಹಾಗೆಯೇ 2008ರಲ್ಲಿ ಬೆಂಗಳೂರಿನ ವಿವಿಧ ಭಾಗಗಳಲ್ಲಿ ಒಂಭತ್ತು ಬಾಂಬ್‌ಗಳು ಸ್ಫೋಟಗೊಂಡು ಓರ್ವ ಮಹಿಳೆ ಸಾವನ್ನಪ್ಪಿದ್ದರು. ಆ ಕೃತ್ಯದ ಹಿಂದೆ ಕೇರಳದ ಮದನಿಯ ಕೈವಾಡ ಇದೆ ಎಂದು ಆತನನ್ನು ಬಂಧಿಸಲಾಗಿದ್ದರೂ ಸ್ವತಂತ್ರ ತನಿಖಾ ವರದಿಗಳ ಪ್ರಕಾರ ಮದನಿ ವಿರುದ್ಧ ರಾಜ್ಯ ಸರ್ಕಾರಕ್ಕೆ ಸಾಕಷ್ಟು ಮಾಹಿತಿ ಇಲ್ಲ. ಆ ಕಾರಣಕ್ಕೇ ಈ ಕುರಿತು ತನಿಖಾ ವರದಿ ಮಾಡಲು ಬಂದಿದ್ದ ಕೇರಳದ ವರದಿಗಾರ್ತಿ ಸಕೀನಾ ಅವರ ಮೇಲೆ ಸುಳ್ಳು ಕೇಸನ್ನು ದಾಖಲಿಸಿ ಅವರಿಗೆ ಹಿಂಸೆ ನೀಡಿದೆ ಬಿಜೆಪಿ ಸರ್ಕಾರ.

2010ರಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಕ್ರಿಕೆಟ್ ಮೈದಾನದ ಹತ್ತಿರ ಎರಡು ಬಾಂಬ್‌ಗಳು ಸ್ಫೋಟಗೊಂಡು ಹಲವರಿಗೆ ಗಾಯಗಳಾಗಿದ್ದವು. ಆ ಕೃತ್ಯದ ಹಿಂದೆಯೂ ಯಾರ ಕೈವಾಡ ಇತ್ತೆಂದು ಇಲ್ಲಿಯತನಕ ಗೊತ್ತಾಗಿಲ್ಲ.

ನಿನ್ನೆ ಬಿಜೆಪಿ ಕಚೇರಿಯ ಹತ್ತಿರ ಸ್ಫೋಟಗೊಂಡಿರುವ ಪ್ರಕರಣ ಐದನೆಯದು. ಅಂದರೆ ಇಲ್ಲಿಯವರೆಗೂ ಸಂಭವಿಸಿರುವ ಈ ಐದೂ ಕೃತ್ಯಗಳ ಹಿಂದೆ ಸಿಮಿ, ಇಂಡಿಯನ್ ಮುಜಾಹಿದ್ದೀನ್, ಲಷ್ಕರ್ ಇತ್ಯಾದಿ ಮುಸಲ್ಮಾನ ಸಂಘಟನೆಗಳ ಪಾತ್ರ ಇದೆಯೆಂದು ಪೊಲೀಸರು ಮತ್ತು ಮಾಧ್ಯಮದವರು 'ಶಂಕಿ'ಸಿದ್ದರೂ, ಬಾಯಿ ಬಡಿದುಕೊಂಡಿದ್ದರೂ, ಇಲ್ಲಿಯತನಕ ಸಾಬೀತಾಗಿರುವುದು ಹುಬ್ಬಳ್ಳಿ ಪ್ರಕರಣ ಹಿಂದಿದ್ದ ಹಿಂದೂತ್ವವಾದಿ ಉಗ್ರರ ಪಾತ್ರ ಮಾತ್ರ.


ಇದೆಲ್ಲ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರಿನ ಬಾಂಬ್ ಸ್ಫೋಟ ಪ್ರಕರಣವನ್ನು ಎಲ್ಲ ಕೋನಗಳಿಂದಲೂ ತನಿಖೆ ಮಾಡಬೇಕಿದೆ. ಹಾಗೆ ಮಾಡಿದ ನಂತರ ಅದರ ಹಿಂದೆ ಮುಸಲ್ಮಾನ ಉಗ್ರರಾಗಲಿ, ಹಿಂದೂತ್ವವಾದಿ ಭಯೋತ್ಪಾದಕರಾಗಲಿ, ಯಾರೇ ಇದ್ದರೂ ಅವರನ್ನು ಕೂಡಲೆ ಬಂಧಿಸಿ ಶಿಕ್ಷೆ ಆಗುವಂತೆ ಪೊಲೀಸರು ನೋಡಿಕೊಳ್ಳಬೇಕಿದೆ.


ಆಗ ಮಾತ್ರ ನಮ್ಮ ಬೆಂಗಳೂರು ನಿಜವಾಗಲೂ ನೆಮ್ಮದಿಯ, ಅಂದದ, ಚೆಂದದ ಬೆಂಗಳೂರಾಗುತ್ತದೆ... ○


ಉತ್ತರ ಕನ್ನಡ: ಕಾಂಗ್ರೆಸ್‌ಗೆ ಕಂಟಕ; ಬಿಜೆಪಿಗೆ ಭಯ!

ಉತ್ತರ ಕನ್ನಡದ ಚುನಾವಣಾ ಸಮರಾಂಗಣದಲ್ಲಿ ಕಟ್ಟಾಟಗಾರರ ಕಾಂಗ್ರೆಸ್ ಶಸ್ತ್ರಾಸ್ತ್ರ ಹಿಡಿವ ಮೊದಲೇ ಎಡವಿ ಬಿದ್ದಿದೆ. ಸಮರ್ಥ ಸೇನಾಧಿಪತಿಗಳನ್ನೆಲ್ಲ ಕಡೆಗಣಿಸಿ ಖಂಡಿತ ಸೋಲುವ ದಂಡ-ಪಿಂಡ, ಪುಂಡ-ಪೋಕರಿಗಳನ್ನು ಆಖಾಡಕ್ಕೆ ಇಳಿಸಿರುವ ಕಾಂಗ್ರೆಸ್ ಹೈಕಮಾಂಡ್ ಜಿಲ್ಲೆಯಲ್ಲಿ ಗೆಲ್ಲಲಿಕ್ಕಿದ್ದ ಅವಕಾಶವನ್ನು ಮಣ್ಣುಗೂಡಿಸಿಕೊಂಡಿದೆ. ಮಳ್ಳಿ ಆಳ್ವ ಮತ್ತು ದೋಷಪಾಂಡೆ ದಿಲ್ಲಿ ಮಟ್ಟದಲ್ಲೇ ಟಿಕೆಟ್ ಚಮತ್ಕಾರ ಯುದ್ಧ ಭೂಮಿಯಲ್ಲಿ ಭಯದಿಂದ ಬಿಜೆಪಿ ಮತ್ತು ಕಾಂಗ್ರೆಸ್ ತತ್ತರಿಸುತ್ತಿವೆ; ಜೆಡಿಎಸ್‌ನ ಇಬ್ಬರು ಶಾಸಕರು ಏದುಸಿರು ಬಿಡುತ್ತಿದ್ದಾರೆ. ಪರಂಪರಾಗತ ವೈರಿಗಳಾದ ಕಾಂಗ್ರೆಸ್ ಮತ್ತು ಬಿಜೆಪಿಯ ದಯನೀಯ ಪರಿಸ್ಥಿತಿಯ ಲಾಭವೇನಾದರೂ ತಮಗೆ ಸಿಕ್ಕೀತೇ ಎಂದು ಜೆಡಿಎಸ್-ಕೆಜೆಪಿ ಟೀಮ್‌ನ ಹುರಿಯಾಳುಗಳು ಕಣ್ಣು-ಬಾಯಿ ಬಿಡುತ್ತಿದ್ದಾರೆ. ವಿಪರ್ಯಾಸವೆಂದರೆ, ಈ ನಾಲ್ಕು ಪಕ್ಷಗಳು ಜನಪರ ದಂಧೆದಾರ ಸತೀಶ್ ಸೈಲ್ ಕಾಂಗ್ರೆಸ್‌ನಿಂದ ಸ್ಪರ್ಧಿಸದಂತೆ ನೋಡಿಕೊಳ್ಳುವ ಆತ್ಮ ರಕ್ಷಣೆ ಮಸಲತ್ತು ಶುರು ಹಚ್ಚಿಕೊಂಡಿದ್ದ. ಮ್ಯಾಗಿ ಕಾಲಿಗೆ ಬಿದ್ದು ಸೈಲ್‌ಗೆ ಕಾಂಗ್ರೆಸ್ ಟಿಕೆಟ್ ಕೊಡದಂತೆ ಬೇಡಿಕೊಂಡ. ರಾಹುಲ್-ಸೋನಿಯಾ ಜತೆಗಿನ ಗೆಳೆತನದ ದುರುಪಯೋಗ ಪಡೆದುಕೊಂಡು ಮ್ಯಾಗಿ ಪ್ರಬಲ ಹುರಿಯಾಳಾದ-ಗೆಲ್ಲುವ ಛಾನ್ಸೂ ಇದ್ದ ಸೈಲ್‌ಗೆ ಕಾಂಗ್ರೆಸ್ ಕ್ಯಾಂಡಿಡೇಟ್ ಆಗದಂತೆ ಮಾಡಿದರು.

ಕಾಂಗ್ರೆಸ್ ಕ್ಯಾಂಡಿಡೇಟ್ ರಮಾನಂದ ನಾಯಕ್ ಏನಿದ್ದರೂ ಸಾಂಕೇತಿಕ. ಆತ ಗೆಲ್ಲಲಾರ. ಸೈಲ್ ಪಕ್ಷೇತರನಾಗಿ ಆಖಾಡಕ್ಕೆ ಇಳಿದಿದ್ದಾರೆ. ಕಾರವಾರ-ಅಂಕೋ... ಎರಡೂ ತಾಲ್ಲೂಕಿನ ಕಾಂಗ್ರೆಸ್ ಆತನತ್ತ ಶಿಫ್ಟ್ ಆ... ಕಾಂಗ್ರೆಸ್ ಖಾಲಿಯಾಗಿದೆ. ನೇರ ಹೋರಾಟ ಅಸ್ನೋ... ಮತ್ತು ಸೈಲ್ ನಡುವೆ ನಡೆಯಲಿದೆ. ಕಾಂಗ್ರೆಸ್‌ನ ದೋ... ಸೈಲ್ ಪರ ಸಿಂಪಥಿ ಸೃಷ್ಟಿಸಿದರೆ ಬದಲಾವಣೆ ಆ...



ಆನಂದ್ ಅಸ್ನೋಟಿಕರ್



ಸತೀಶ್ ಸೈಲ್


ದಿನಕರ ಶೆಟ್ಟಿ



ಶಾರದಾ ಶೆಟ್ಟಿ



ಸೋನಿ



ಗಾಯತ್ರಿ ಗೌಡ



ಜೆ.ಡಿ. ನಾಯ್ಕ್


ಶಿವಾನಂದ ನಾಯಕ್


ಶಿವರಾಮ್ ಹೆಬ್ಬಾರ್


ಅನಿಲ್ ಕುಮಾರ್


ಎ.ಎಸ್. ಪಾಟೀಲ್


ದೇಶಪಾಂಡೆ

ಮಾಡಿ ಜಿಲ್ಲಾ ಕಾಂಗ್ರೆಸ್ ಕೊಂದು ಹಾಕಿಬಿಟ್ಟಿದ್ದಾರೆ. ಟಿಕೆಟ್ ಬೇಕೆಂದು ಅರ್ಜಿ ಹಾಕದವರಿಗೂ ಅಭ್ಯರ್ಥಿ ಮಾಡಿರುವ ಮ್ಯಾಗಿ-ದೇಶಪಾಂಡೆ ತಮ್ಮ ಮನೆಮುರುಕ ತೆವಲು ತೀರಿಸಿಕೊಂಡಿದ್ದಾರೆ.

ಹಾಗಂತ ಬ್ರಾಹ್ಮಣರ-ಭಂಡರ ಬಿಜೆಪಿಯೇನೂ ಜಿಲ್ಲೆಯಲ್ಲಿ ಬರ್ಕತಾಗಿಲ್ಲ, ಪಕ್ಷಕ್ಕಾಗಲಿ, ಗೆಲ್ಲಿಸಿದ ಜನರಿಗಾಗಲಿ ಎಂದೂ ನಿಷ್ಠರಲ್ಲದ ಸಮಯಸಾಧಕ- ಆನಂದ ಅಸ್ನೋಟಿಕರ್, ಎ.ಎಸ್. ಪಾಟೀಲರಂಥವರಿಗೇ ಟಿಕೆಟ್ ದಯಪಾಲಿಸಿರುವ ಬಿಜೆಪಿ ಬಾಸ್‌ಗಳ ಭ್ರಷ್ಟಾಚಾರ, ಬುರ್ನಾಸ್ ಛಾನ್ಸಡಿ ಜನರಲ್ಲಿ ವಾಕರಿಕೆ ಮೂಡಿಸಿದೆ. ಬಿಜೆಪಿ ಅದೆಂಥ ಹೀನಾಯಸ್ಥಿತಿ ತಲುಪಿದೆಯೆಂದರೆ, ಅದಕ್ಕೆ ಸರಿಯಾದ ಅಭ್ಯರ್ಥಿಗಳೇ ಸಿಕ್ಕಿಲ್ಲ! ಮಂತ್ರಿ ಕಾಗೇರಿ ಮಾಣಿ ಮತ್ತು ಸಂಸದ ಅನಂತ್ಮಾಣಿ ಕತ್ತಿ-ಗುರಾಣಿ ಹಿಡಿದುಕೊಂಡು ತಮ್ಮವರನ್ನೇ ಸಂಹಾರ ಮಾಡಲು ಮಸಲತ್ತು ಮಾಡುತ್ತಿದ್ದಾರೆ. ಮತ್ತೊಂದೆಡೆ ಕೆಜೆಪಿ ಎಂಬ ದಾಯಾದಿಗಳು ಬಿಜೆಪಿಯ ಸೊಂಟವನ್ನೇ ಮುರಿದುಹಾಕಿದ್ದಾರೆ.

ಜಿಲ್ಲೆಯಲ್ಲಿ ಎತ್ತಲಿಂದೆತ್ತ ನೋಡಿದರೂ ಚುನಾವಣಾ ಈಶ್ಯೂಗಳಿಲ್ಲದೆ ಬೋಗಸ್ ಕಾಳಗ ನಡೆಸಿವೆ. ಜಾತಿ-ಹಣದ ಹಣಾಹಣಿಯಲ್ಲಿ ಮತದಾರ ಗೊಂದಲಗೊಂಡಿದ್ದಾನೆ; ಅನಿರೀಕ್ಷಿತ ಫಲಿತಾಂಶದ ಲೆಕ್ಕಾಚಾರ ಹಾಕುತ್ತಿದ್ದಾನೆ!


ಸೈಲ್‌ಗೆ ಟಿಕೆಟ್ ತಪ್ಪಿಸಿದ ಅಸ್ನೋಟಿಕರ್

ಕಾರವಾರ-ಅಂಕೋಲಾ ಕ್ಷೇತ್ರದ ಎಲೆಕ್ಷನ್ ರಾಜಕೀಯದಲ್ಲಿ ಸ್ವಯಂಘೋಷಿತ ಅಂತಾರಾಷ್ಟ್ರೀಯ ಮುತ್ಸದ್ದಿ ಮಾರ್ಗರೆಟ್ ಆಳ್ವ ಅನೈತಿಕ ಆಟ ಆಡಿದ್ದಾರೆ. ಬಿಜೆಪಿ ಹುರಿಯಾಳಾದ ತನ್ನ ಅಚ್ಚುಮೆಚ್ಚಿನ ಶಿಷ್ಯ ಆನಂದ ಅಸ್ನೋಟಿಕರ್‌ನನ್ನು ಗೆಲ್ಲಿಸುವ ಹಠಕ್ಕೆ ಬಿದ್ದ ಮ್ಯಾಗಿ ಕಾಂಗ್ರೆಸ್‌ನಿಂದ ದುರ್ಬಲ ಅಭ್ಯರ್ಥಿ ಕಣಕ್ಕಿಳಿವಂಥ ಜಾದೂ ಮಾಡಿದ್ದಾರೆ. ಮ್ಯಾಗಿಗೆ ಆನಂದ ಅಸ್ನೋಟಿಕರ್‌ನನ್ನು ಕಾಂಗ್ರೆಸಿಗೆ ತಂದು ಕ್ಯಾಂಡಿಡೇಟ್ ಮಾಡುವ ಮನಸ್ಸಿತ್ತು, ಆದರೆ ಆಪರೇಷನ್ ಕಮಲ ಮಾಡಿಸಿಕೊಂಡಿದ್ದ ಆತನ ಕಾಂಗ್ರೆಸ್ ಎಂಟ್ರಿಗೆ ಮ್ಯಾಗಿ ವೈರಿ ದೇಶಪಾಂಡೆ ಬಿಡಲಿಲ್ಲ. ಆಗ ಅಸ್ನೋಟಿಕರ್ ತನಗೆದುರಾಗಿ ಬಲಾಢ್ಯ ಮೈನ್ಸ್ ಕ್ಷೇತ್ರದಲ್ಲಿ ರಂಗೀಲಾ ಲೀಲೆ, ದೋ ನಂಬರ್ ದಂಧೆ, ದಾದಾಗಿರಿ, ಜನ ದ್ರೋಹದಿಂದ ಹೆಸರು ಕೆಡಿಸಿಕೊಂಡಿದ್ದ ಅಸ್ನೋಟಿಕರ್‌ಗೆ ಸೈಲ್ ಕಾಂಗ್ರೆಸ್ ಹುರಿಯಾಳಾದರೆ ತಾನು ಮಾಜಿ ಆಗುವುದು ಖಾತ್ರಿಯಾಗಿಹೋಗಿತ್ತು. ಸೈಲ್ ಕಾರವಾರ-ಅಂಕೋಲಾದಲ್ಲಿ ಸತ್ತು ಹೋಗಿದ್ದ ಕಾಂಗ್ರೆಸ್‌ಗೆ ತನ್ನ ಹಣ ನೀರಿನಂತೆ ಹರಿಸಿ ಜೀವ ತಂದುಕೊಟ್ಟಿದ್ದ. ದೇಶಪಾಂಡೆ ಈ ಸೈಲ್ ಪರವಾಗೇ ಲಾಬಿ ಮಾಡಿದ್ದರು. ಆದರೆ ಮ್ಯಾಗಿ ಮಾತ್ರ ಸೈಲ್ ಒಬ್ಬನನ್ನು ಬಿಟ್ಟು ಇನ್ನಾರೇ ದೇಶಪಾಂಡೆ ಅನುಯಾಯಿಗೆ ಟಿಕೆಟ್ ಕೊಟ್ಟರೆ ತನ್ನ ವಿರೋಧವಿಲ್ಲ ಎಂದು ಚಂಡಿ ಹಿಡಿದು ಕೂತರು. ಆಗ ಅನಿವಾರ್ಯವಾಗಿ ದೇಶಪಾಂಡೆ ಟಿಕೆಟ್ ಅರ್ಜಿಯೂ ಹಾಕದ ತುಂಬ ಸರಳ-ಸಜ್ಜನ ರಮಾನಂದ ನಾಯಕ ಎಂಬಾತನಿಗೆ ಟಿಕೆಟ್ ಕೊಡಿ ಅನ್ನಬೇಕಾಯ್ತು. ಈ ರಮಾನಂದ್‌ಗೆ ಕಾಂಗ್ರೆಸ್ ಅಭ್ಯರ್ಥಿಯಾಗುವ ಆಸಕ್ತಿಯಿಲ್ಲ, ಅಸ್ನೋಟಿಕರ್‌ನ ಹಣ ಬಲದೆದುರು ಹೋರಾಡಲು ಸಾಧ್ಯವಿಲ್ಲ ಎಂಬ ಅಳುಕೂ ಇದೆ. ಹಾಗೆಯೇ ಕ್ಷೇತ್ರದಲ್ಲಿ ಆತ ಚಲಾವಣೆಯಲ್ಲಿ ಇದವರೂ ಅಲ್ಲ. ಸಾಧ್ಯತೆಯೂ ಇದೆ. ಅಸ್ನೋಟಿಕರ್ ಬಗೆಗಿನ ಜ... ಬೇಸರವೂ ಸೈಲ್‌ಗೆ ಪ್ಲಸ್ ಆಗಲಿದೆ. ಸದ್ಯಕ್ಕೆ ಸೈ... ಮತ್ತು ಅಸ್ನೋಟಿಕರ್ ಸಮಬಲದಲ್ಲಿದ್ದಾರೆ.

ಮೈದುನ V/s ಅತ್ತಿಗೆ


ಕುಮಟಾ-ಹೊನ್ನಾವರ ಕ್ಷೇತ್ರದಲ್ಲಿ ಸದ್ಯಕ್ಕೆ ಚತುಷ್ಕೋ... ಸ್ಪರ್ಧೆಯಂತೆ ಕಾಣಿಸುತ್ತಿದೆ. ಕಳೆದ ಬಾರಿ ಕೇವಲ ... ಮತದಂತರದಿಂದ ಸೋತಿದ್ದ ಕಾಂಗ್ರೆಸ್‌ನ ದಿವಂಗತ ಶ... ಮೋಹನ ಶೆಟ್ಟಿಯ ಧರ್ಮಪತ್ನಿ ಶಾರದಾ ಶೆಟ್ಟಿಗೆ ಮ... ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದಾರೆ. ಆಕೆಗೆ ಟಿಕೆಟ್ ಘೋ... ಆಗುತ್ತಿದ್ದಂತೆಯೇ ಈ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾ... ಆಸೆಯಲ್ಲಿದ್ದ ಒಂದೂವರೆ ಡಜನ್ ಕಾಕು-ಪೋಕು... ತಿರುಗಿಬಿದ್ದು ಬೊಬ್ಬೆ ಹೊಡೆದರು. ಇವರಿಗೆಲ್ಲಾ ಹ... ಹನಿ ಹಣ ಎಸೆದ ಶಾರದಾ ಶೆಟ್ಟಿ ಮಗ ರವಿಕುಮಾ... ಪರಿಸ್ಥಿತಿ ತಿಳಿಗೊಳಿಸಿಕೊಂಡಿದ್ದಾನೆ. ಕ್ಷೇತ್ರದಲ್ಲಿ ಕಾಂಗ... ಅಲೆ, ಮೋಹನ್ ಶೆಟ್ಟರ ಒಳ್ಳೆಯತನದ ಬಗ್ಗೆ ಅನುಕಂಪ... ಆದರೆ ರವಿಕುಮಾರ್ ಅಧಿಕಪ್ರಸಂಗ ಬಿಟ್ಟರಷ್ಟೇ ಅ...

ಕಾಗೇರಿಗೆ ಕೇಡುಗಾಲ!


ಶಿರಸಿ-ಸಿದ್ದಾಪುರ ಕ್ಷೇತ್ರದಾದ್ಯಂತ "ನಾಜೂಕಯ್ಯ" ವಿಶ್ವೇಶ್ವರ ಹೆಗಡೆ ಕಾಗೇರಿ ವಿರುದ್ಧ ಪ್ರಚಂಡ ಮಾರುತ ಎದ್ದಿದೆ. ಕಾಗೇರಿಯ ಜಾತಿಯತೆ ಶೂದ್ರರನ್ನು ಕೆರಳಿಸಿದರೆ, ಆತನ ಹೇತ್ಲಾಂಡಿತನ ಸ್ವಜಾತಿಬ್ರಾಹ್ಮಣರಲ್ಲಿ ಬೇಸರ ಮೂಡಿಸಿದೆ. ಸಂಘ ಪರಿವಾರವೂ ಕಾಗೇರಿ ವಿರುದ್ಧ ತಿರುಗಿ ಬಿದ್ದಿದೆ. ಬಿಜೆಪಿಯ ಬೆನ್ನೆಲುಬಾದ ಚೆಡ್ಡಿ-ಕಾವಿಗಳಿಗೂ ಕಿಮ್ಮತ್ತು ಕೊಡದೆ ತಾನೊಬ್ಬನೇ ಮೆರೆವ-ಮುಕ್ಕುವ ಆತನ ಗುಣ-ಧರ್ಮ ಬಿಜೆಪಿ-ಆರೆಸ್ಸೆಸ್-ಹಿಂಜಾವೇಯಲ್ಲಿ ದೊಡ್ಡಮಟ್ಟದ ಅಸಮಾಧಾನ ಮೂಡಿಸಿಬಿಟ್ಟಿದೆ. ತಳಮಟ್ಟದ ಬಿಜೆಪಿ ಕಾರ್ಯಕರ್ತರು ಈ ಸಲ ಕಾಗೇರಿಯನ್ನು ಮನೆಗೆ ಕಳಿಸುವ ಹಠಕ್ಕೆ ಬಿದ್ದಿದ್ದಾರೆ. ಆರೆಸ್ಸೆಸ್‌ನ ಹಳೆ ತಲೆಗಳು-ಮುದಿ ತಲೆಗಳೆಲ್ಲ ಕಾಗೇರಿಗೆ ಬಿಜೆಪಿ ಟಿಕೆಟ್ ಕೊಡುವುದು ಬೇಡ; ಕೊಟ್ಟರೆ ಫಲಿತಾಂಶ ಬದಲಿಸುತ್ತೇವೆ ಎಂದು ಅಬ್ಬರಿಸಿಯೂ ಆಗಿದೆ! ಆಜನ್ಮಶತ್ರು ಸಂಸದ ಅನಂತ್ಮಾಣಿಯಂತೂ ಕಾಗೇರಿ ಅದ್ದೇಗೆ ಈ ಬಾರಿ ಗೆಲ್ತಾನೋ ನೋಡ್ತಾ ಎಂಬ ಸವಾಲು ಹಾಕಿದ್ದಾನೆ. ಜೆಡಿಎಸ್ ಕ್ಯಾಂಡಿಡೇಟ್ ಶಶಿಭೂಷಣ ಹೆಗಡೆ ಪರ ಒಳಗೊಳಗೇ ಅನಂತ್ಮಾಣಿ ಪ್ರಚಾರ ನಡೆಸಿದ್ದಾನೆ.

ಕಾಗೇರಿ ಈ ಐದು ವರ್ಷ ಮಂತ್ರಿಯಾಗಿದ್ದರೂ ಮೂರು ಬಿಲ್ಲಿ ಪ್ರಯೋಜನ ಕ್ಷೇತ್ರಕ್ಕೆ ಆಗಿಲ್ಲ! ಒಂದಿಷ್ಟು ಪರ್ಸೆಂಟೇಜ್ ಹೊಡೆಯುವ ಕಾಮಗಾರಿಯಷ್ಟೇ ಆಗಿದೆ. ಹಾಗಂತ ಕಾಗೇರಿಯ ವೈಯಕ್ತಿಕ ಆಸ್ತಿ-ಅಂತಸ್ತಿನ ಉದ್ಧಾರಕ್ಕೇನೂ ಕುಂದಾಗಿಲ್ಲ, ಹತ್ತಾರು ಎಕರೆ ಭೂಮಿ ಖರೀದಿ, ತುಮಕೂರಿನಲ್ಲಿ ಶಾಪಿಂಗ್ ಕಾಂಪ್ಲೆಕ್ಸ್, ಹೋಮ್ ಸ್ಟೇದಂಥ ಭರ್ಜರಿ ಸ್ಥಿರಾಸ್ತಿ ಕಾಗೇರಿ ಮಾಡಿಕೊಂಡಿದ್ದಾನೆ. ಸಮಸ್ಯೆ-ಸಂಕಷ್ಟ ಹೇಳಿಕೊಂಡು ಬರುತ್ತಿದ್ದವರಿಗೆ ಕಾಗೇರಿಯ ತಮ್ಮ ಜಿ.ಎ. ಹೆಗಡೆ, ಪಿಎ ಸುಬ್ರಾಯ ಮತ್ತಿತರ ಚಾಂಡಾಲ ಚಾರಡಿಯವರು ಸತಾಯಿಸಿದ್ದೇ ಹೆಚ್ಚು. ಕಾಗೇರಿ ತಮ್ಮನ ಲೇವಾದೇವಿ-ವರ್ಗಾವರ್ಗಿ-ಪರ್ಸೆಂಟೇಜ್ ಕಲೆಕ್ಷನ್ ಹಾವಳಿಯಂತೂ ಮಿತಿಮೀರಿ ಹೋಗಿತ್ತು.

ಮೆಡಿಕಲ್ ಕಾಲೇಜು ಸ್ಥಾಪನೆ, ತೋಟಿಗರ ಆಸಾಮಿ ಸಾಲಮನ್ನಾ ಮುಂತಾದ ಈಶ್ಯೂಗಳನ್ನು ಕಾಗೇರಿ ಉದಾಸೀನದಿಂದ ಕಡೆಗಣಿಸಿದ್ದು ಆತನಿಗೀಗ ಮುಳುವಾಗಿದೆ. ಗೋಕರ್ಣ ದೇವಸ್ಥಾನ ಹಸ್ತಾಂತರದ ಹೊತ್ತಲ್ಲಿ ಡಬ್ಬಲ್ ಗೇಮ್ ಕಾಗೇರಿ ಆಡಿದ್ದು ರಗಳೆ ರಾಘವನನ್ನು ಕೆರಳಿಸಿದರೆ, ಸ್ವರ್ಣದಲ್ಲಿ ಮಠದ ಹೈಸ್ಕೂಲ್ ಪ್ರಕರಣದಲ್ಲಿ ಶಿಕ್ಷಣ ಮಂತ್ರಿಯಾಗಿ ಕಾಗೇರಿ ತೊಂದರೆ ಕೊಟ್ಟಿದ್ದನ್ನು ಗಂಗಾಧರೇಂದ್ರ ಸ್ವಾಮಿ ಇನ್ನೂ ಮರೆತಿಲ್ಲ.


ಶಶಿಭೂಷಣ್

ಈ ಪಾಪದ ಫಲದಿಂದ ತಾನು ಈ ಬಾರಿ ಸೋಲುತ್ತೇನೆಂಬ ಭಯ ಕಾಗೇರಿಗೆ ಕಾಡಲಾರಂಭಿಸಿತ್ತು, ಡಿಸಿಸಿ ಅಧ್ಯಕ್ಷ-ದಿವಂಗತ 'ಬಂ' ಭಾವ್ಮೈದ ಭೀಮಣ್ಣ ನಾಯ್ಕ್ ಕಾಂಗ್ರೆಸ್ ಕ್ಯಾಂಡಿಡೇಟಾದರೆ ತಾನು ಗೆಲ್ಲುವುದು ಸಾಧ್ಯವೇ ಇಲ್ಲ ಎಂಬುದೂ ಆತನಿಗೆ ಖಾತ್ರಿಯಾಗಿತ್ತು, ಬಿಜೆಪಿಯಲ್ಲಿದ್ದಾಗ ತನ್ನಿಂದ ಹಿಂಸೆ-ಅವಮಾನಕ್ಕೆ ಈಡಾಗಿದ್ದ ರಾಮಕೃಷ್ಣ ಹೆಗಡೆಜೀಯ ದಾಯಾದಿ ಮೊಮ್ಮಗ ಶಶಿಭೂಷಣ ಹೆ... ಜೆಡಿಎಸ್‌ನಿಂದ ಶಿರಸಿಯಲ್ಲಿ ಕ್ಯಾಂಡಿಡೇಟಾಗಿ ಸೆ... ಹೊಡೆಯಲು ಅಣಿಯಾದಾಗಂತೂ ಕಾಗೇರಿ ಕಂಗಾಲ... ಹೋಗಿದ್ದರು. ಆಗಾತ ಬಚಾವಾಗಲು ವಾಮಮಾ... ಹಿಡಿದು ಹೊರಟಿದ್ದರು. ಕಾಂಗ್ರೆಸ್‌ನಿಂದ ವೀಕ್ ಕ್ಯಾಂಡಿಡೇ... ಹಾಕಿ, ಬಲಾಢ್ಯ ದೀವರ ವಂಶದ ಕುಡಿ ಭೀಮಣ್ಣ ನಾಯ... ಕಾಂಗ್ರೆಸ್ ಟಿಕೆಟ್ ಕೊಡಲೇ ಬೇಡಿ ಎಂದು ಕಾಗೆ... ದೇಶಪಾಂಡೆ-ಮ್ಯಾಗಿಗೆ ದುಂಬಾ... ಬಿದ್ದಿದ್ದರು. ದೇಶಪಾಂಡೆಗಂತೂ ಬಿಜೆಪಿಯ ಸನ್ಮಿತ್ರ ಕಾಗೇ... ಎಂದೆಂದೂ ನಿರಾಯಾಸವಾ... ಗೆಲ್ಲಬೇಕೆಂಬ ಆಸೆ.

ಈಗ ಕಾಂಗ್ರೆಸ್ ಗೆಲ್ಲು... ಅವಕಾಶಗಳಿದ್ದ ಭೀಮಣ್ಣ ನಾಯ... ವಂಚಿಸಿ ದೀಪಕ್ ಹೊನ್ನಾವ... ಎಂಬಾತನಿಗೆ ಟಿಕೆಟ್ ಕೊಟ್ಟ... ಭೀಮಣ್ಣನ ದೀವರ ಓಟುಗ... ಕ್ಷೇತ್ರದಲ್ಲಿ 45 ಸಾವಿರದಷ್ಟಿದ್ದ... ದೀಪಕ್ ಹೊನ್ನಾವರನ ಜಾ... (ಶೇರುಗಾರ-ರಾಮಕ್ಷತ್ರಿಯ) ಮತ 1 ಸಾವಿರವೂ ಇ... ದೀಪಕ್ ಹೊನ್ನಾವರ ಯಾರೆಂದು ಬಹಳ ಮಂದಿ... ಗೊತ್ತಿಲ್ಲ. ಗೊತ್ತಿರುವವರು ಆತ ಬೀದಿ ಪುಂಡ, ಜುಗಾ... ಅಡ್ಡೆದಾರ, ಹಲವು ಹೆಂಡಿರ ಗಂಡ, ಅಡಿಕೆ ಕೊನೆ... ಕೊಯಿಸುವ ರೌಡಿ ಎಂದೇ ಆರೋಪಿಸುತ್ತಾರೆ. ಇ...

ಮ್ಮನಿಗೆ ಜಯ.

ಶಾರದಾ ಶೆಟ್ಟಿ ಎದುರು ಜೆಡಿಎಸ್‌ನಿಂದ ಸ್ಪರ್ಧಿಸಿರುವ ಲಿ ಶಾಸಕ ದಿನಕರ ಶೆಟ್ಟಿ ಸಂಬಂಧದಲ್ಲಿ ಆಕೆಯ ಯಾದಿ ಮೈದುನ. ದಿವಂಗತ ಮೋಹನ ಶೆಟ್ಟಿಯ ದೆ ಮತ್ತು ದಿನಕರ ಶೆಟ್ಟಿ ತಂದೆ ಅಣ್ಣ-ತಮ್ಮಂದಿರು. ಗೆ ಅಖಾಡಕ್ಕೆ ಇಳಿಯುತ್ತಿದ್ದಂತೆಯೇ ದಿನಕರನಿಗೆ ನಡುಕ ರುವಾಗಿದೆ. ಧನದಾಹ, ಒಣ ಗತ್ತು ದಿನಕರ್‌ಗೆ ದಾಂತರಕಾರಿಯಾಗಿದೆ. ಕ್ಷೇತ್ರದ ಗಾಬಿತ ೦ೀನುಗಾರ ಸಮುದಾಯ) ತಿಯವರು ದಿನಕರನ ವಿರುದ್ಧ ತಿರುಗಿ ದ್ದಾರೆ. ದೇವೇಗೌಡ-ಕುಮಾರಣ್ಣರ ೀಡಿ ಮತ ಹಾಕೋದು ಕ್ಷೇತ್ರದ ಗಾರರು ಮಾತ್ರ. ಅವರಿಗೂ ದಿನಕರನ ಸಮಾಧಾನ ಇಲ್ಲ. ಕೆಜೆಪಿಯಿಂದ ಸಿರುವ ಜಿಪಂ ಮಾಜಿ ಅಧ್ಯಕ್ಷೆ ಯುತ್ರಿ ಗೌಡ ಒಂದಿಷ್ಟು ಸ್ವಜಾತಿ ಲಕ್ಕಿ ಒಕ್ಕಲಿಗರ ಮತ ಸೆಳೆದು ಂಗ್ರೆಸ್-ಜೆಡಿಎಸ್‌ಗೆ ಹಾನಿ ಡಬಹುದೇ ಹೊರತು ಗೆಲ್ಲಲು ವ್ಯವಿಲ್ಲ, ಚುನಾವಣೆ ಹತ್ತಿರವಾದಂತೆ ಯನ್ನು ಕಾರ್ಯಕರ್ತರ-ಹಣಕಾಸಿನ ರತೆ ಕಾಡಲಿದೆ.



ಸುನೀಲ್ ಹೆಗಡೆ

ಬಿಜೆಪಿ ಕ್ಷೇತ್ರದಲ್ಲಿ ದ್ವಿತೀಯ ಬಹುಸಂಖ್ಯಾತರಾದ ವರ (ಈಡಿಗ) ಕುಲ ಕಂಠೀರವ ಸೂರಜ್ ನಾಯ್ಕ್ ಬ ಚಂದದ ತರುಣನನ್ನು ಅಖಾಡಕ್ಕೆ ಇಳಿಸಿದೆ. ಈತ ಜಕೀಯ ಪ್ರಜ್ಞೆಯ ಸ್ವಜಾತಿ ಮತಗಳನ್ನು ಸಾರಾಸಗಟಾಗಿ ಯುತ್ತಾನೆ. ಆದರೆ ಇತರ ಸಮುದಾಯಗಳ ಮತ ನಿಗೆ ಸಿಗದು. ಬ್ರಾಹ್ಮಣರನ್ನು ನಂಬಿಕೊಂಡಿರುವ ರಜ್ ನಾಯ್ಕ್‌ಗೆ ಆ ಜಾತಿಯ ಶೇ. 20ಕ್ಕಿಂತ ಹೆಚ್ಚು ಬಾರದು. ಬ್ರಾಹ್ಮಣರಿಗೆ ಬಿಜೆಪಿ ಬಗ್ಗೆ ಹೇಸಿಗೆ ಡಿದೆ. ಹಾಗಾಗಿ ದೊಡ್ಡ ಎರಡು ಬ್ರಾಹ್ಮಣ ಮತದ ಲು ಕಾಂಗ್ರೆಸ್-ಜೆಡಿಎಸ್‌ಗೆ ಹಂಚಿಹೋಗಲಿದೆ. ತಿಮವಾಗಿ ಕಾಂಗ್ರೆಸ್‌ನ ಅತ್ತಿಗೆ-ಜೆಡಿಎಸ್‌ನ ಮೈದುನರ ವೆಯೇ ಹೋರಾಟ. ಬ್ರಾಹ್ಮಣ ಮತಗಳು ನಿರ್ಣಾಯಕ.

ಕೆಜೆಪಿಗೆ ಛಾನ್ಸ್ ಜಾಸ್ತಿ

ಭಟ್ಕಳದಲ್ಲಿ ಕಾಂಗ್ರೆಸ್-ಕೆಜೆಪಿ ಮತ್ತು ಜೆಡಿಎಸ್ ನಡುವೆ ೋನ ಕಾಳಗ ನಡೆಯಲಿದೆ ಎಂದು ಮೇಲ್ನೋಟಕ್ಕೆ ಸಿದರೂ ಹೋರಾಟವೇನಿದ್ದರೂ ಕಾಂಗ್ರೆಸ್‌ನ ಹಾಲಿ ಕ ಜೆ.ಡಿ.ನಾಯ್ಕ್ ಮತ್ತು ಕೆಜೆಪಿಯ ಶಿವಾನಂದ ನಾಯ್ಕ್ ವೆಯೇ. ಜೆಡಿಎಸ್‌ನ ಕ್ರಿಯಾಶೀಲ ಮುಸ್ಲಿಮ್ ತರುಣ ಯಿತುಲ್ಲಾ ಶಾಬಂದ್ರಿಗೆ ಒಂದಿಷ್ಟು ಸ್ವಜಾತಿ ನವಾಯತರ ಷ್ಟೇ ಸಿಗಲಿದೆ. ದಖಣಿಗಳು-ಹಿಂದೂಗಳು ಜೆಡಿಎಸ್‌ಗೆ ಹಾಕುವುದು ಅನುಮಾನ. ಬಿಜೆಪಿಯ ಗೋವಿಂದ ಯ್ಕ್ ಎಂಬ ರಾಸಲೀಲಾ ವೀರ-ಬೇಕರಿ ಮಾಮ 10 ರ ಮತ ಪಡೆಯುವುದೂ ಕಷ್ಟ. ಒಂದು ಕಾಲದಲ್ಲಿ ಪಿಯ ಗಂಡು ಮೆಟ್ಟಿನ ಸ್ಥಳವಾಗಿದ್ದ ಭಟ್ಕಳದಲ್ಲಿ ಆ ನೆಲಕಚ್ಚಿದೆ. ಸಂಸದ ಅನಂತ್ಕುಮಾರ್ ಶೂದ್ರ ವಿರೋಧಿ ನಾ, ಬಿಜೆಪಿಯ ಭ್ರಷ್ಟ ಮಹಿಮೆ, ಶಾಸಕನಾಗಿದ್ದ ರಂಜನ್ ಹತ್ಯೆಯಾಗಿ 17 ವರ್ಷ ಕಳೆದರೂ ಕೇಂದ್ರ-ಜ್ಯದಲ್ಲಿ ಆಡಳಿತ ನಡೆಸಿದ ಬಿಜೆಪಿಯಿಂದ ಒಂದು ತ್ನರ ತನಿಖೆ ಮಾಡಲಾಗದ 'ಕೊಲೆಗಡುಕತನ' ಆ ಮುಳುವಾಗಿದೆ.

ಭಟ್ಕಳದಲ್ಲಿ ದೀವರದೇ ಮೆಜಾರಿಟಿ. ಸುಮಾರು 60 ಸಾವಿರ ದೀವರ ಮತವಿದೆ. ಇದರಲ್ಲಿ ಹೆಚ್ಚಿನ ಮತ ಕಾಂಗ್ರೆಸ್‌ನ ಜೆ.ಡಿ.ನಾಯ್ಕ್ ಮತ್ತು ಕೆಜೆಪಿಯ ಶಿವಾನಂದ ನಾಯ್ಕ್ ನಡುವೆ ಹಂಚಿಹೋಗಲಿದೆ. ಆದರೆ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಜೆಡಿ ಮೇಲೆ ಮುನಿದಿದ್ದಾರೆ. ಈ ಎರಡೂ ಸಮುದಾಯದ ಒಲವು ಶಿವಾನಂದ ನಾಯ್ಕ್ ಮೇಲಿದೆ. ನವಾಯತ ಮುಸ್ಲಿಮರಲ್ಲಿ ದೊಡ್ಡ ಪ್ರಭಾವವಿರುವ ಖಲೀಲ್ ಉಲ್ ರೆಹಮಾನ್ ರಂಥವರು ಶಿವಣ್ಣನ ಬೆನ್ನಿಗಿದ್ದಾರೆ. ಜೆಡಿಯ ಮುಂಗೋಪ-ಪಿಕ್ರೇಸತನ ಆತ ಮಾಜಿ ಮಾಡುವ ಸಾಧ್ಯತೆಯಿದೆ. ಎಂಪಿ ಅನಂತ್ಕುಮಾರ್ ಅದೆಷ್ಟೇ ಶಿವಣ್ಣನನ್ನು ಸೋಲಿಸಲು ಪ್ರಯತ್ನಿಸಿದರೂ ಈ ಬಾರಿ ಆ ಕಿತಾಪತಿ ವರ್ಕ್‌ಔಟ್ ಆಗಲಾರದು. ದೀವರು ಬಿಜೆಪಿ ಬ್ರಾಹ್ಮಣರ ಜಾತಿಯತೆಗೆ ಮದ್ದರೆಯುತ್ತಿರುವುದು ಶಿವಣ್ಣನ ಪರ ಅಲೆ ಎಬ್ಬಿಸಿದೆ. ಜೆಡಿ ಬಣ್ಣಗೆಡುತ್ತಿದ್ದರೆ, ಕೆಜೆಪಿಯ ಶಿವಣ್ಣ ಬಲಗೊಳ್ಳುತ್ತಿದ್ದಾರೆ. ಪಕ್ಷೇತರ ಅಭ್ಯರ್ಥಿ ಮಾಂಕಾಳು ವೈದ್ಯ ನಾಮಧಾರೇತರ ಮತ ಪಡೆದು ಫೈಟಿಂಗ್‌ಗೆ ಬರುವ ಭ್ರಮೆ ಮೂಡಿಸಿದ್ದಾರೆ. ಎರಡು ಬಾರಿ ಪಕ್ಷೇತರನಾಗಿ ಜಿಪಂಗೆ ಗೆದ್ದಿರುವ ವೈದ್ಯನ ಗದ್ದಲ ಮತವಾಗುವುದು ಕಷ್ಟ.

ಗೆಲ್ಲುವ ಕುದುರೆ ಹೆಬ್ಬಾರ್


ಯಲ್ಲಾಪುರ-ಮುಂಡಗೋಡ ಕ್ಷೇತ್ರದಲ್ಲಿ ಹೋರಾಟ ನಡೆದಿರುವುದು ಕಾಂಗ್ರೆಸ್‌ನ ಶಿವರಾಮ ಹೆಬ್ಬಾರ್ ಮತ್ತು ಜೆಡಿಎಸ್‌ನ ಅನಿಲ್‌ಕುಮಾರ್ ಎಂಬ ಅದಿರು ಅವ್ಯವಹಾರಿಗಳಿಬ್ಬರ ನಡುವೆ. ವಿಲ್ಮಾ ಗ್ರೂಪ್ ಆಫ್ ಬಿಸಿನೆಸ್‌ನ ಅನಿಲ್‌ಕುಮಾರ್ ಲೋಕಲ್ ದೀವರ ಸಮುದಾಯದವನಲ್ಲ, ಆತ ಮಲೆಯಾಳಿ ಬಿಲ್ಲವ (ಬೆಳ್ಚಡ). ಅನಾದಿಕಾಲದಲ್ಲಿ ಆತನ ತಂದೆ ಕೂಲಿ ಅರಸುತ್ತ ಯಲ್ಲಾಪುರಕ್ಕೆ ಬಂದು ನೆಲೆ ನಿಂತಿದ್ದರು. ಈ ಅನಿಲ್‌ಕುಮಾರ್ ಮತ್ತು ಆತನ ತಮ್ಮ ರವಿಕುಮಾರ್ ಬೆಂಗಳೂರು ಸೇರಿ ಅದೇನೇನು ಮಾಡಿದರೋ? ಈಗ ಕೋಟಿಗೆ ತೂಗುತ್ತಿದ್ದಾರೆ. ಸಿನಿಮಾ ನಿರ್ಮಾಣಕ್ಕೂ ಕೈಹಾಕಿದ್ದಾರೆ. ಇಂಥ ಅನಿಲ್‌ಕುಮಾರ್ ಎರಡು ವರ್ಷದ ಹಿಂದೆಯೇ ಬಿಜೆಪಿ ಬಿಟ್ಟು ಜೆಡಿಎಸ್ ಸೇರಿ ಯಲ್ಲಾಪುರದ ಕ್ಯಾಂಡಿಡೇಟೆಂದು ಬಿಂಬಿಸಿಕೊಂಡಿದ್ದರು. ಕೋಟಿಗಳ ಲೆಕ್ಕದಲ್ಲೇ ಹಣ ಹರಿಸಿ ಪಾರ್ಟಿ ಕಟ್ಟಿಕೊಂಡಿದ್ದಾರೆ ಅಣ್ಣ-ತಮ್ಮ.

ಈ ಕ್ಷೇತ್ರದಲ್ಲಿ ಸುಮಾರು 23 ಸಾವಿರ ದೀವರ ಓಟುಗಳಿವೆ. ಸಿರಸಿಯ ಬನವಾಸಿ-ದಾಸನಕೊಪ್ಪ ಏರಿಯಾದಲ್ಲಿ ಈ ದೀವರ ಬಾಹುಳ್ಯವಿದೆ. ಇದನ್ನು ಅನಿಲ್-ರವಿ ನೆಚ್ಚಿಕೊಂಡಿದ್ದಾರೆ. ಹಾಗೆಯೇ ಸಾಬರ ಓಟಿಗೆ ಬಲೆ ಬೀಸಿದ್ದಾರೆ. ಕ್ಷೇತ್ರದ ದಲಿತರ ಸೆಳೆಯುತ್ತಿದ್ದಾರೆ. ಇಂಥದೇ ಜಾತಿ ಲೆಕ್ಕಾಚಾರ ಕಾಂಗ್ರೆಸ್ ಕ್ಯಾಂಡಿಡೇಟ್ ಶಿವರಾಮ ಹೆಬ್ಬಾರ್ ಎಂಬ ವಿಪ್ರೋತ್ತಮ ಹಾಕಿದ್ದಾನೆ. ಯಲ್ಲಾಪುರ ಭಾಗದಲ್ಲಿ ಬ್ರಾಹ್ಮಣರ ಬಾಹುಳ್ಯವಿದೆ. ಈ 32 ಸಾವಿರ ಮತದಲ್ಲಿ ಹೆಚ್ಚು ಸಾರಾಸಗಟಾಗಿ ಹೆಬ್ಬಾರ್ ಪಾಲಾಗಲಿದೆ. ಒಂದಿಷ್ಟು ಬಿಜೆಪಿಗೆ ಹೋದರೂ ಆ ಪಕ್ಷದ

>>>6

ಯಾಸವಾಗಿ ಸೋಲುವ ಗುಲಾಮನಿಗೆ ಕಾಂಗ್ರೆಸ್ ಟ್ ಕೊಡಿಸಿದ ಮ್ಯಾಗ್ಗಿ ಧನ್ಯೆ! ಯಾವ ಜನಪರ ೋರಾಟದಲ್ಲಾಗಲಿ, ಕಾಂಗ್ರೆಸ್ ಸಂಘಟನೆಯಲ್ಲಾಗಲಿ ಸಿಕೊಳ್ಳದ ದೀಪಕ್ ಮ್ಯಾಗ್ಗಿಯ ಅಚ್ಚುಮೆಚ್ಚಿನ ಚಾರ-ಬಾಡಿಗಾರ್ಡ್ ಅಷ್ಟೇ. ಗೆ ಕಾಂಗ್ರೆಸ್ ಟಿಕೆಟ್ ಘೋಷಣೆ ತ್ತಲೇ ಇಡೀ ಜಿಲ್ಲೆಗೆ ಮ್ಯಾಗ್ಗಿ ೋಗ್ಯತೆಯೂ ಅರ್ಥವಾಗಿ ೋಗಿದೆ!


ಭೀಮಣ್ಣ ನಾಯ್ಕ್ ಬಂಡಾಯ ರ್ಥಿಯಾಗುವ ಧೈರ್ಯ ಡಿಲ್ಲ. ಇದು ಜೆಡಿಎಸ್‌ನ ಭೂಷಣ ಹೆಗಡೆಗೆ ಗೆಲ್ಲುವ ಾಶ ಹೆಚ್ಚಿಸಿದೆ. ಈ ಕ್ಷೇತ್ರದ ಸಂಖ್ಯಾತ ದೀವರ ಮೇಲಿನ್ನೂ ಪ್ರಭಾವ ಇದೆ. ಮಧು 'ಬಂ' ಎಸ್ ಪರ ಪ್ರಚಾರ ಮಾಡಿದರೆ ಶಶಿಗೆ ಕೂಲವಾಗಲಿದೆ. ದೀವರು ತಮ್ಮ ಕ್ಯಾಂಡಿಡೇಟ್ ರುವುದರಿಂದ ಮಧು 'ಬಂ' ಇರುವ ಪಕ್ಷಕ್ಕೆ ಒಲಿವ ಸಿರುವದೆ. ಹಾಗೆಯೇ ಕ್ಷೇತ್ರದ ದಲಿತರು ಕಾಗೇರಿಯಿಂದ ಬಳಲ್ಲಾಗಾದ ಸಿಟ್ಟಿನಲ್ಲಿದ್ದಾರೆ. ಮರು-ಕ್ರಿಶ್ಚಿಯನ್ನರು-ದಲಿತರು ಕಾಂಗ್ರೆಸ್-ಬಿಜೆಪಿಗೆ ಹಾಕುವ ಮನಸ್ಥಿತಿಯಲ್ಲಿಲ್ಲ, ಅವರದೆಲ್ಲ ಅನಿವಾರ್ಯ ಜೆಡಿಎಸ್‌ನ ಶಶಿಭೂಷಣ್ ಹೆಗಡೆ.



ಜೆಡಿಎಸ್ ಅಭ್ಯರ್ಥಿ ಶಶಿಭೂಷಣ ಹೆಗಡೆ ನರಿಯಣ್ಣ ಕಾಗೇರಿಗೆ ಹೋಲಿಸಿದರೆ ಸರಳ-ಸಜ್ಜನ. ಜನಪರ ತುಡಿತದ ತರುಣ. ಕ್ಷೇತ್ರದ ಬೇಕು-ಬೇಡಗಳ ಅರಿವಿರುವ ಸುಶಿಕ್ಷಿತ. ದೊಡ್ಡವರ ಮನೆ ಮಾಣಿ ಎಂಬ ದೊಡ್ಡಸ್ತಿಕೆಯಿಲ್ಲದೆ ಜನ ಸಾಮಾನ್ಯರೊಂದಿಗೆ ಬೆರೆಯುವ ಶಶಿಗೆ ಆತನ ತಂದೆ ವಿನಾಯಕ್ ರಾವ್ ಹೆಗಡೆ-ಅಜ್ಜ ಗಣೇಶ್ ಹೆಗಡೆಗಳ ಪಾಳೆಗಾರಿ ಇಮೇಜ್ ಒಂಚೂರು ತೊಡಕಾಗಿದೆ. ಆತ ಸಿದ್ದಾಪುರ ಭಾಗದಲ್ಲಿ ಅಪ್ಪನನ್ನು ಪ್ರಚಾರಕ್ಕೆ ಕಳಿಸದೆ, ಶಿರಸಿ ಏರಿಯಾದಲ್ಲಿ ಜೆಡಿಎಸ್‌ನ ಹೆಸರುವಾಸಿ ಮಹಿಳಾ ನಾಯಕಿ ರಾಜೇಶ್ವರಿ ಹೆಗಡೆಯನ್ನು ಫೀಲ್ಡಿಗೆ ಬಿಡದೇ ಇದ್ದರೆ ಲಾಭ ಹೆಚ್ಚು. ಒಣ ಪ್ರತಿಷ್ಠೆಯ ವಿನಾಯಕ ಹೆಗಡೆ ಪ್ರಚಾರಕ್ಕೆ ಹೋದಷ್ಟು ಮೈನಸ್ ಶಶಿಗಾಗಲಿದೆ. ಹಾಗೆಯೇ ತಾನು ಶಾಸಕನಾದರೆ ಅಪ್ಪನ ಹಿಡಿತದಲ್ಲಿರಲಾರೆ; ಜಾತಿಯತೆ ಮಾಡಲಾರೆನೆಂದು ತೋರಿಸಿಕೊಂಡರೆ ಆತ ಕಾಗೇರಿಗೆ ಸುಲಭವಾಗಿ ಮಣಿಸಬಹುದು.

ಸದ್ಯಕ್ಕೆ 60-40 ರ ವೇಗದಲ್ಲಿ ಶಶಿ-ಕಾಗೇರಿ ಇದ್ದಾರೆ. ದಿನಗಳೆದಂತೆ ಕಾಗೇರಿಯ ಸ್ವ-ಪಕ್ಷದ ವೈರಿಗಳು ಶಶಿಯ ವೇಗ ಹೆಚ್ಚಿಸಲಿದ್ದಾರೆ. ಕಾಗೇರಿಯನ್ನು ಮನೆಗೆ ಕಳುಹಿಸುವ ನಿರ್ಧಾರವಂತೂ ಕ್ಷೇತ್ರದ ಜನರು ಮಾಡಿದ್ದಾರೆ.

ರಗಳೆ ರಾಘವನ ಎಲೆಕ್ಷನ್ ಎಡವಟ್ಟು!!




ಹವ್ಯಕ ಬ್ರಾಹ್ಮಣರ ಮಠಾಧೀಶ ರಾಘವೇಶ್ವರ ಭಾರತೀ ಉರುಫ್ ರಗಳೆ ರಾಘವನೂ ಅಸೆಂಬ್ಲಿ ಎಲೆಕ್ಷನ್ ರಾಜಕಾರಣದ ರಂಗು-ಗುಂಗೇರಿಸಿಕೊಂಡಿದ್ದಾನೆ. ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಯ ಯಾವ್ಯಾವ ಕ್ಷೇತ್ರದಲ್ಲಿ ಸ್ವ-ಜಾತಿ ಕ್ಯಾಂಡಿಡೇಟ್‌ಗಳು ಇದ್ದಾರೋ ಅವರನ್ನು ಗೆಲ್ಲಿಸಲು ಗುಪ್ತ್‌ಗುಪ್ತ್ ಫರ್ಮಾನು ಹೊರಡಿಸಿ ಮಂತ್ರಾಕ್ಷತೆ ಎಸೆದಿದ್ದಾನೆ. ಕೋಟ್ಯಾಧೀಶನಾದ ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ದಾದಾಗಿರಿಯಿಂದ ತನ್ನ ಜೋಳಿಗೆಗೆ ಇಳಿಸಿದ ಬಳಿಕ ಉತ್ತರ ಕನ್ನಡವನ್ನು ಕಾರ್ಯಕ್ಷೇತ್ರ ಮಾಡಿಕೊಂಡಿರುವ ರಾಘವ ಜಿಲ್ಲೆಯ ಆರು ಕ್ಷೇತ್ರದಲ್ಲಿ ತನ್ನ ನಿಷ್ಠಾವಂತರೇ (ಯಾವ ಪಕ್ಷದವರೇ ಇರಲಿ) ಶಾಸಕರಾಗಬೇಕೆಂದು ಕಾರ್ಯಾಚರಣೆ ನಡೆಸಿದ್ದಾನೆ.

ಕುಮಟಾದ ಗೋರೆ ಗುಡ್ಡದ ಮೇಲೆ ವಾರಗಟ್ಟಲೆ 'ರಾಮಕಥಾ' ಎಂಬ ಸಮೂಹ ಸನ್ನಿ ಹಿಡಿಸುವ ಗಾನ-ನೃತ್ಯ-ಚಿತ್ರ-ಪ್ರವಚನ ಕಾರ್ಯಕ್ರಮ ನಡೆಸಿದ ರಾಘವ ಥೇಟ್ ತಲಬುದಾರ ನಿತ್ಯಾನಂದನ ಶೈಲಿಯಲ್ಲಿ ಹೆಂಗಸರು-ಗಂಡಸರನ್ನು ಕುಣಿಸಿ ಕುಪ್ಪಳಿಸಿದ್ದಾನೆ. ಹರೆಯದ ಹೆಂಗಸರು-ಹುಡುಗಿಯರು 'ರಾಮ... ರಾಮಾ...' ಎಂದು ಉನ್ಮಾದದಿಂದ ಕುಣಿವಾಗ ಅದೆಷ್ಟು ರಾವಣರು-ಕೀಚಕರು 'ಕಣ್ಣಾಟ' ಆಡಿದರೋ ಆ ಸಾಕ್ಷಾತ್ ರಾಘ ಶ್ರೀಗೇ ಗೊತ್ತು! ಏಕೆಂದರೆ, ಎಲ್ಲರೂ ಕಣ್ಮುಚ್ಚಿ ಕುಣಿವಾಗ ರಾಘವನೊಬ್ಬನೇ ಪೀಠದ ಮೇಲೆ ಕಣ್ಣು ಬಿಟ್ಟು ಕುಳಿತಿರುತ್ತಾನೆ. 'ನೃತ್ಯೋತ್ಸವ' ಆಸ್ವಾದಿಸುತ್ತಾನೆ. ಇಂಥದೊಂದು ಇಳಿಸಂಜೆಯಿಂದ ನಡು ರಾತ್ರಿವರೆಗಿನ 'ರಾಮ ಕಥಾ' ಗೋರೆಯಲ್ಲಿ ಮುಗಿಸಿದ ಮರುದಿನ ನೇರವಾಗಿ ಆತ ಹೋಗಿದ್ದು ಕುಮಟೆಯ ಶಾಸಕ- ಹಾಲಿ ಜೆಡಿಎಸ್ ಅಭ್ಯರ್ಥಿ ದಿನಕರ ಶೆಟ್ಟಿ ಮನೆಗೆ.

ಅಲ್ಲಿ ಶೆಟ್ರು ಹವ್ಯಕ ಬ್ರಾಹ್ಮಣರ ಮತ ಕಬಳಿಸುವ 'ಶ್ರೀರಾಮ ಪಟ್ಟಾಭಿಷೇಕ' ಎಂಬ ಧರ್ಮಕಾರಣ ಹಮ್ಮಿಕೊಂಡಿದ್ದರು. ಸದ್ರಿ ಶೆಟ್ರು ಜೆಡಿಎಸ್ ಆದರೂ ಕ್ಯಾಂಡಿಡೇಟ್ ಮನೆಗೂ ಹೋಗಿ ಒಪ್ಪೋದು ಬೆಟರ್..." ಎಂದಿತು ಸಲಹೆಗಾರ ತಂಡ. ಅಷ್ಟರಲ್ಲಾಗಲೇ ಕಾಂಗ್ರೆಸ್ ಕ್ಯಾಂಡಿಡೇಟ್ ಶಾರದಾ ಶೆಟ್ಟಿ ಮಗ ರವಿಕುಮಾರ ಶೆಟ್ಟಿ ಅಧಿಕೃತ ಆಹ್ವಾನ ಹಿಡಿದು ಹೈಗರ ಸ್ವಾಮಿ ಪದತಲದಲ್ಲಿ ಕುಳಿತಾಗಿತ್ತು! ಸ್ವಾಮಿಯ ಪೊಲೀಸ್ ಎಸ್ಕಾರ್ಟ್ ಸೀದಾ ಶಾರದಾ ಶೆಟ್ಟಿ ಮನೆಯೆಡೆ ಹೊರಟಿತು; ಸ್ವಾಮೀಜಿ ಕಾರು ಹಿಂಬಾಲಿಸಿತು.

ನಂತರ ರಾಘವನ ದಂಡು ಬಿಜೆಪಿ ಹುರಿಯಾಳು ಸೂರಜ್ ನಾಯ್ಕ್ ಮನೆಗೂ ದಯ ಮಾಡಿಸಿತು. "ನೀನು







ಬಿಜೆಪಿಯ ರಾಘವ ಸ್ವಾಮಿಗೆ ಅದೆಂಥದೋ ಒಂಥರಾ ಥರಾ ಕಕ್ಕುಲಾತಿ. ಕಾರಣ ಇಷ್ಟೇ. ಗೋಕರ್ಣ ಮಂಡಲಾಧಿಪತಿ ಆಗುವಾಗ ಇದೇ ಶಾಸಕ ಶೆಟ್ಟಿ ಸರಕಾರದ ಪ್ರತಿನಿಧಿಯಾಗಿ ದೇಗುಲದ ಚಾವಿ (ಬೀಗದ ಕೀಲಿಕೈ) ಸ್ವಾಮಿಯ ಪಾದಕ್ಕೆ ಸಮರ್ಪಿಸಿದ್ದರು; ಸ್ಥಳೀಯ ಬ್ರಾಹ್ಮಣರ ಪ್ರಬಲ ವಿರೋಧದ ನಡುವೆಯೂ ಕಪಟ ಸನ್ಯಾಸಿ ರಾಘವನ ಪರ ನಿಂತಿದ್ದರು. ಗೋಕರ್ಣ ಹವ್ಯಕರು ಮತ ಹಾಕದಿದ್ದರೂ ಅಡ್ಡಿಲ್ಲ, ಕ್ಷೇತ್ರದ ಇತರೆಡೆಯ ರಾಘವನ ಅನುಯಾಯಿ ಬ್ರಾಹ್ಮಣರು ಸಾರಾಸಗಟಾಗಿ ಸಪೋರ್ಟ್ ಮಾಡುತ್ತಾರೆಂಬ ದೂ(ದು)ರಾಲೋಚನೆ ಕಂತ್ರಿ ಶೆಟ್ಟಿಯದಾಗಿತ್ತು.


ಆ ಲೆಕ್ಕಾಚಾರದಲ್ಲೇ ಶಾಸಕ ಶೆಟ್ಟಿ ಈ ಚುನಾವಣೆ ಸಂದರ್ಭದಲ್ಲಿ ರಾಘವನನ್ನು ಮನೆಗೆ ಬರಮಾಡಿಕೊಂಡು ಪಾದಪೂಜೆ ಮಾಡುವ ಗಿಮಿಕ್ ಹಮ್ಮಿಕೊಂಡಿದ್ದರು. ಆದರೆ ಇದೊಂದು ಎಲೆಕ್ಷನ್ ನೀತಿಸಂಹಿತೆ ಉಲ್ಲಂಘನೆಯೆಂದು ರಾಘವನ ಒಲವಿನ ಬಿಜೆಪಿ ಪಕ್ಷದವರೇ ಬೊಬ್ಬೆ ಹೊಡೆದುಬಿಟ್ಟರು. ಬಿಜೆಪಿ ಕ್ಯಾಂಡಿಡೇಟ್ ಸೂರಜ್ ನಾಯ್ಕ್ ಎಂಬ ಧೀರ ಕಿಡಿಕಿಡಿ ಕೆಂಡವಾಗಿ ಹೋದ. ಬ್ರಾಹ್ಮಣರ ಓಟು ತನಗೆ ಬರದಂತೆ ಮಾಡುವ ಹೈಗರ ಸ್ವಾಮಿಯ ಹಿಕಮತ್ತಿದೆಂದು ಕಂಗಾಲು ಬಿದ್ದ. ಜಿಲ್ಲೆಯ ರಾಜಕೀಯದಲ್ಲಿ ದೀವರು (ಈಡಿಗರು) ಮತ್ತು ಹೈಗರು (ಬ್ರಾಹ್ಮಣ) ಪರಂಪರಾಗತ ದ್ವೇಷಿಗಳು. ಕೆರಳಿದ ಸೂರಜ್ ನಾಯ್ಕ್ ಚುನಾವಣಾ ಆಯೋಗಕ್ಕೆ ದೂರು ಕೊಟ್ಟುಬಿಟ್ಟರು.

ತಕ್ಷಣ ವೀಕ್ಷಕರು ಒಂದು ಜೆಡಿಎಸ್ ಅಭ್ಯರ್ಥಿ ದಿನಕರ ಶೆಟ್ಟಿ ಮನೆಗೆ ನುಗ್ಗಿದರು! ಅಲ್ಲಿ ಸೇರಿದ್ದ ಜನಜಂಗುಳಿ, ಸ್ವಾಮಿ ಪಾದಪೂಜೆ, ಊಟೋಪಚಾರ, ಪರೋಕ್ಷ ಪ್ರಚಾರ ವೀಡಿಯೋ ಮಾಡಿದರು. ಇದೆಲ್ಲ ನೋಡಿ ರಾಘವ ಕಕ್ಕಾಬಿಕ್ಕಿಯಾಗಿ ಹೋದ; ಸಿಕ್ಕಿಬಿದ್ದೆನಲ್ಲ ಎಂದು ಅಲವತ್ತುಕೊಂಡ. ಇದಕ್ಕೆ ಪರಿಹಾರ ತಕ್ಷಣಕ್ಕೆ ಹವ್ಯಕ ಪರಿವಾರ ಸೂಚಿಸಿತು. "ಸ್ವಾಮೀಜಿ ನಾಳೆ ಇದೊಂದು ದೊಡ್ಡ ವಿವಾದ ಆಗ್ತು... ರಾಮಚಂದ್ರಾಪುರ ಮಠಾಧೀಶ್ರು ಜೆಡಿಎಸ್ ಸೇರ್ಪಡೆ ಆದ್ರು ಎಂದು ಬೊಬ್ಬೆ ಬೀಳ್ತು... ಹಂಗಾಗಿ ತಾವು ಕಾಂಗ್ರೆಸ್, ಬಿಜೆಪಿ, ಕೆಜೆಪಿ ಪಾರ್ಟಿ ಗೆಲ್ಲಿ ಶಿಷ್ಯಾ..." ಎಂದು ಹರಸಿದ ರಾಘವ ಕೆಜೆಪಿ ಕ್ಯಾಂಡಿಡೇಟ್ ಗಾಯತ್ರಿ ಗೌಡ ಎಂಬ ಬುಡಕಟ್ಟು ಸಮುದಾಯದ ಹಾಲಕ್ಕಿ ಒಕ್ಕಲಿಗರ ಹೆಂಗಸಿನ ಬಿಡಾರಕ್ಕೂ ಹೋಗಬೇಕಾಗಿ ಬಂತು. "ರಾಮ... ರಾಮಾ... ಇದೆಂಥ ಕರ್ಮ...!? ಗೌಡ್ತಿ ಮನೆಗೆ ನಮ್ಮ ಗುರುಗಳು ಹೋಗಬೇಕಾಗಿ ಬಂತಲ್ಲ" ಎಂದು ಬ್ರಾಹ್ಮಣ ಬಳಗ ಅಲವತ್ತುಕೊಂಡಿತು. ಗೋಕರ್ಣ ಭಾನ್ಗಡಿಯಲ್ಲಿ ತನಗೆ ನೆರವಾಗಿದ್ದ ಶಾಸಕ ದಿನಕರ ಶೆಟ್ಟಿ ಪರ ಪರೋಕ್ಷವಾಗಿ ಪ್ರಚಾರ ಮಾಡಲು ಹೋದ ರಾಘವ ಎಲೆಕ್ಷನ್ ಕಮಿಷನ್ ಕೈಗೆ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದು ಬಚಾವಾಗಲು ಸರದಿಯಂತೆ ಕುಮಟಾ ಕ್ಷೇತ್ರದ ನಾಲ್ಕು ಪ್ರಮುಖ ಪಕ್ಷದ ಹುರಿಯಾಳುಗಳ ಮನೆಬಾಗಿಲಿಗೆ ಹೋಗಿಬರಬೇಕಾಗಿ ಬಂತು, ಪಾಪ! ರಾಘವ ಒಂದು ತಪ್ಪಿನಿಂದ ಬಚಾವಾಗಲು ಸಾಲಾಗಿ ಅಪಚಾರ ಮಾಡಿದ್ದು ಈಗ ಎಲೆಕ್ಷನ್ ಜೋಕಾಗಿ ಹೋಗಿದೆ. ಜನ ಪೆದ್ದು ರಾಘವನ ರಾಜಕೀಯ ರಗಳೆ ಕಂಡು ಬಿದ್ದು-ಬಿದ್ದು ನಗುತ್ತಿದ್ದಾರೆ.

ಅಂದಹಾಗೆ, ಈ ಹೈಗರ ಸ್ವಾಮೀಜಿ ಕುಮಟಾ ಮತ್ತು ಶಿರಸಿ ಕ್ಷೇತ್ರದಲ್ಲಿ ಜೆಡಿಎಸ್ ಪರವಾದರೆ, ಯಲ್ಲಾಪುರದಲ್ಲಿ ಕಾಂಗ್ರೆಸ್ ಹಿತೈಷಿ. ಇವರೆಲ್ಲ ಬ್ರಾಹ್ಮಣ ಅಭ್ಯರ್ಥಿಗಳು. 'ಮಂತ್ರಿ ಕಾಗೇರಿ ಎಂಗ್ರ ಮಾಣಿಯಾದ್ರೂ ಅಂವ ಹೆಸ್ರು ಹಾಳ್ ಮಾಡ್ಕಂಡಿಕ್ಕಿದಾ...' ಎನ್ನುತ್ತ ಆತನ ಎದುರಾಳಿ ಜೆಡಿಎಸ್ ಕ್ಯಾಂಡಿಡೇಟ್ ಶಶಿಭೂಷಣ ಹೆಗಡೆ ಗೆಲುವಿಗೆ ರಾಘವ ಹಿಕಮತ್ತು ನಡೆಸಿದ್ದಾನೆ. ಗೋಕರ್ಣ ದೇವಾಲಯ ಸ್ವಾಹಾ ಹೊತ್ತಲ್ಲಿ ಮಂತ್ರಿ ಕಾಗೇರಿ ತನಗೆ ನೆರವಾಗಲಿಲ್ಲ ಎಂಬ ಸಿಟ್ಟಿಂದ ರಾಘವ ದಿವಂಗತ ಮಾಜಿ ಸಿಎಂ ರಾಮಕೃಷ್ಣ ಹೆಗಡೆಜೀ ದಾಯಾದಿ ಮೊಮ್ಮಗ ಶಶಿಭೂಷಣನೇ ಬೆಟರ್ ಎಂದು ತಮ್ಮ ಶಿಷ್ಯಸಂಕುಲಕ್ಕೆ ಮೆಸೇಜು ಕಳಿಸಿದ್ದಾರೆ.

ಈ ರಾಘವ ಸ್ವಾಮಿಯ ಮಂತ್ರಾಕ್ಷತೆಗೆ ಯಾರನ್ನೂ ಗೆಲ್ಲಿಸುವ ಅಥವಾ ಸೋಲಿಸುವ ಶಕ್ತಿ ಇಲ್ಲ; ಆದರೂ ಆತನಿಗೆ ರಾಜ ಪುರೋಹಿತನಾಗುವ ತೆವಲು!!

● ನರುಷ



ಅನಿಲ್ ಲಾಡ್ ಸೊರಕೆ ಶಾಮನೂರು ಶಿವಶಂಕರಪ್ಪ ಸಂಗಮೇಶ್ ಇಬ್ರಾಹಿಂ ಬಿ.ಕೆ. ಚಂದ್ರಶೇಖರ್ ಬಿ.ಎಲ್. ಶಂಕರ್

ಕಾಂಗ್ರೆಸ್: ಟಿಕೆಟ್ ಹಂಚಿಕೆಯಲ್ಲಿ ಎಡವಟ್ಟು!!

ಕಾಂಗ್ರೆಸ್ ಹೈಕಮಾಂಡ್ ಈ ಬಾರಿಯ ಟಿಕೆಟ್ ಹಂಚಿಕೆ ಯಲ್ಲಿ ಹೆಜ್ಜೆಹೆಜ್ಜೆಗೂ, ಜಿಲ್ಲೆ ಜಿಲ್ಲೆಗೂ ಎಡವಟ್ಟು ಮಾಡಿ ಕೊಂಡು ಸುಲಭವಾಗಿ ಪಡೆಯಬಹುದಿದ್ದ ಅಧಿಕಾರಕ್ಕಾಗಿ ತಿಣುಕಾಡುವಂತಹ ಪರಿಸ್ಥಿತಿಯನ್ನು ತಂದುಕೊಂಡಿದೆ.

ಉದಾಹರಣೆಗೆ ಬಿಜೆಪಿ ಸರ್ಕಾರದ ಮಂತ್ರಿಗಳ ಭ್ರಷ್ಟಾಚಾರ ಮತ್ತು ಹಗರಣಗಳನ್ನು ಬಹಿರಂಗಪಡಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದ ವಿಧಾನಪರಿಷತ್ ಸದಸ್ಯ ಉಗ್ರಪ್ಪ ಮತ್ತು ಬಳ್ಳಾರಿಯ ಪ್ರಮುಖ ರಾಜಕಾರಣಿ ಕೆ.ಸಿ.ಕೊಂಡಯ್ಯ ಇಬ್ಬರಿಗೂ ಹೈಕಮಾಂಡ್ 'ಕೈ' ಕೊಟ್ಟಿದೆ. ಅಷ್ಟೇ ಅಲ್ಲ, ಬಳ್ಳಾರಿಯಲ್ಲಿ ಸೋತಿದ್ದ ಅನಿಲ್ ಲಾಡ್ ಅವರನ್ನು ಆನಂತರ ರಾಜ್ಯಸಭೆಗೆ ಕಳುಹಿಸಿದ್ದ ಕಾಂಗ್ರೆಸ್ ಈಗ ಅವರಿಗೆ ಮತ್ತೊಮ್ಮೆ ಟಿಕೆಟ್ ಕೊಟ್ಟಿದೆಯಲ್ಲದೆ ಗೆಲ್ಲುವ ಸಾಧ್ಯತೆ ಇದ್ದ ದಿವಾಕರ್ ಬಾಬುಗೆ ಖಾಲಿ ಕೈ ತೋರಿಸಿದೆ.

ಬೆಂಗಳೂರು ನಗರದಲ್ಲಂತೂ ಕಾಂಗ್ರೆ ಟಿಕೆಟ್ ಹಂಚಿದ್ದನ್ನು ನೋಡಿದರೆ ನಿಜಕ್ಕೂ ಹೈಕಮಾಂಡ್‌ನ ದೂರದೃಷ್ಟಿತ್ವದ ಬಗ್ಗೆಯೇ ಸಂಶಯ ಬರುತ್ತದೆ. ಬಿ.ಕೆ.ಚಂದ್ರಶೇಖರ್ ಮತ್ತು ಬಿ.ಎಲ್.ಶಂಕರ್ ಸಜ್ಜನರು ನಿಜ. ಆದರೆ ಅವರಿಗೆ ಬೆಂಗಳೂರಿನ ಜಿದ್ದಾಜಿದ್ದಿ ರಾಜಕಾರಣದಲ್ಲಿ ಗೆಲುವು ಸುಲಭದ್ದಲ್ಲ, ಆದರೂ ಅಂತಹ 'ಬುದ್ಧಿಜೀವಿ'ಗಳಿಗೆ ಕಾಂಗ್ರೆಸ್ ಟಿಕೆಟ್ ನೀಡಿರುವುದನ್ನು ನೋಡಿ ಕಾಂಗ್ರೆಸ್ ಕಾರ್ಯಕರ್ತರೇ ರೋಸಿಹೋಗಿದ್ದಾರೆ.

ಹಾಗೆಯೇ ಹೆಚ್.ಎಂ.ರೇವಣ್ಣನವರಿಗೂ ಬೆಂಗಳೂರಿನ ಹೆಬ್ಬಾಳ ಕ್ಷೇತ್ರದ ಟಿಕೆಟ್ ಅನ್ನು ನಿರಾಕರಿಸಲಾಗಿದೆ. ಸಿದ್ಧರಾಮಯ್ಯನವರ ಕಟ್ಟಾ ಬೆಂಬಲಿಗರಾದ ರೇವಣ್ಣ ಕಳೆದ ಬಾರಿ ಹೆಬ್ಬಾಳದಿಂದ ಅಲ್ಪ ಮತಗಳೊಂದಿಗೆ ಸೋತಿದ್ದರೂ ಈ ಬಾರಿ ಅಲ್ಲಿಂದ ಗೆಲ್ಲಲು ಕಳೆದೆರಡು ವರ್ಷಗಳಿಂದ ಕಾರ್ಯಪ್ರವೃತ್ತರಾಗಿದ್ದರು. ಆದರೂ ರೇವಣ್ಣನವರನ್ನು ಕಾಂಗ್ರೆಸ್ ನಿರ್ಲಕ್ಷಿಸಿದೆ.

ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಕಾಂಗ್ರೆ ಹೈಕಮಾಂಡ್ ನಿಜಕ್ಕೂ ಒಂದು ದೊಡ್ಡ ತಪ್ಪನ್ನು ಮಾಡಿದೆ. ಅದೇನೆಂದರೆ ಹಾಲಿ ಶಾಸಕ ಸಂಗಮೇಶ್ ಅವರಿಗೆ ಟಿಕೆಟ್ ನೀಡುವ ಬದಲು ಸಿ.ಎಂ.ಇಬ್ರಾಹಿಂ ಎಂಬ ಮಾತಿನ ಮಲ್ಲನಿಗೆ ಕೊನೆಕ್ಷಣದಲ್ಲಿ ಮಣೆ ಹಾಕಿದೆ. ಹಾಲಿ ಶಾಸಕರಿಗೆ ಯಾವುದೇ ಕಾರಣಕ್ಕೂ ಟಿಕೆಟ್ ತಪ್ಪಿಸುವುದಿಲ್ಲ ಎಂದು ಭರವಸೆ ನೀಡಿದ್ದ ಕಾಂಗ್ರೆ ಹೈಕಮಾಂಡ್ ಈ ಮೂಲಕ ತಾನೇ ನುಡಿದ ಮಾತನ್ನು ಈಗ ಮುರಿದ ಅಪಖ್ಯಾತಿಗೆ ಒಳಗಾಗಿದೆ.

ಕಳೆದ ಬಾರಿಯ ಚುನಾವಣೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿ ಕಾಂಗ್ರೆಸ್ ಧೂಳೀಪಟವಾಗಿತ್ತು. ಅಂತಹ ಸಂದರ್ಭದಲ್ಲೂ ಗೆದ್ದು ಬಂದಿದ್ದವರು ಸಂಗಮೇಶ್ ಎಂಬ ನಿಷ್ಠಾವಂತ ಕಾಂಗ್ರೆಸ್ಸಿಗ. ಅವರಿಗೆ ಕಾಂಗ್ರೆಸ್ ಟಿಕೆಟ್ ಸಿಗುವ ಬಗ್ಗೆ ಅದೆಷ್ಟು ಭರವಸೆ ಇತ್ತೆಂದರೆ ಕಾಂಗ್ರೆಸ್ 'ಬಿ' ಫಾರಂಅನ್ನು ನೀಡುವ ಮೊದಲೇ ತಮ್ಮ ನಾಮಪತ್ರವನ್ನು ಸಲ್ಲಿಸಿದ್ದರು. ಅಂತಹ ಸಂಗಮೇಶ್‌ಗೆ ಟಿಕೆಟ್ ನಿರಾಕರಿಸಿರುವುದು ಶಿವಮೊಗ್ಗ ಜಿಲ್ಲೆಯ ರಾಜಕೀಯ ಚಿತ್ರಣವನ್ನೇ ಬದಲಿಸುವ ಸಾಧ್ಯತೆಯಿದೆ.

ದಕ್ಷಿಣ ಕನ್ನಡದ ಕಾಪು ಕ್ಷೇತ್ರದಲ್ಲಿ ಮಾಜಿ ಸಚಿವ ವಸಂತ ಸಾಲಿಯಾನ್ ಬದಲಿಗೆ ಪುತ್ತೂರಿನ ಮಾಜಿ ಶಾಸಕ ವಿನಯ್‌ಕುಮಾರ್ ಸೊರಕೆ ಅವರನ್ನು ನಿಲ್ಲಿಸುವ ಮುಖಾಂತರ ಕಾಂಗ್ರೆ ಹೈಕಮಾಂಡ್ ಕರಾವಳಿ ಪ್ರದೇಶದಲ್ಲೂ ಅನಗತ್ಯವಾಗಿ ಕಿರಿಕ್ ಮಾಡಿಕೊಂಡಿದೆ. ಮಂಡ್ಯದ ರಾಜಕೀಯವಂತೂ ಕಾಂಗ್ರೆಸ್ ಹೈಕಮಾಂಡ್‌ನ ಕೈಮೀರಿ ಕೊಳೆತುಹೋಗಿದೆ.

ಕಾಂಗ್ರೆಸ್‌ನ ಹಿರಿಯ ನಾಯಕರಾದ, ಹಲವಾರು ವರ್ಷಗಳಿಂದ ಪಕ್ಷನಿಷ್ಠೆಯನ್ನು ತೋರಿರುವ ಶಾಮನೂರು ಶಿವಶಂಕರಪ್ಪ, ಜಾಫರ್ ಶರೀಫ್, ಮಲ್ಲಿಕಾರ್ಜುನ ಖರ್ಗೆ, ಧರಂಸಿಂಗ್ ಮೊದಲಾದವರು ಕೊನೆ ಕ್ಷಣದತನಕ ಟಿಕೆಟ್‌ಗಾಗಿ ಕಾಯುವಂತೆ ಮಾಡಿದ್ದು ಈ ಹಿರಿಯ ನಾಯಕರ ಅಭಿಮಾನಿಗಳಿಗೆ ಕಿರಿಕಿರಿಯುಂಟುಮಾಡಿದೆ.

> ಈಗ ಬೆಂಗಳೂರು, ಮಂಗಳೂರು, ಮಂಡ್ಯ, ಶಿವಮೊಗ್ಗ, ದಾವಣಗೆರೆ ಮತ್ತು ಬಳ್ಳಾರಿ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಒಂದೋ ಕಾಂಗ್ರೆಸ್ಸಿಗರು ಬಂಡಾಯ ಅಭ್ಯರ್ಥಿಗಳಾಗಿ ಸ್ಪರ್ಧಿಸುತ್ತಿದ್ದಾರೆ ಅಥವಾ ಅಂತಹ ಅತೃಪ್ತ ಆತ್ಮಗಳನ್ನು ಜೆಡಿಎಸ್ ಹೈಜಾಕ್ ಮಾಡುತ್ತಿದೆ. ಅಂದರೆ ಕಾಂಗ್ರೆಸ್ ಹಲವಾರು ಕಡೆ ಸ್ವತಃ ಡಿಕ್ಕಿ ಹೊಡೆದುಕೊಳ್ಳುತ್ತಿದೆ. ಒಂದು ಮಾತಂತೂ ನಿಜ. ಇದೇ ಮೊದಲ ಬಾರಿಗೆ ಕಾಂಗ್ರೆಸ್ ಹೈಕಮಾಂಡ್ ತನ್ನ ನಿಶ್ಶಕ್ತಿ ಮತ್ತು ದುರ್ಬಲತೆಯನ್ನು ಟಿಕೆಟ್ ಹಂಚಿಕೆಯ ಸಂದರ್ಭದಲ್ಲಿ ಪ್ರದರ್ಶಿಸಿದೆ. ಈ ಒಂದು ಗೊಂದಲ ಮತ್ತು ಗಲಿಬಿಲಿಯಿಂದಾಗಿ ಖಂಡಿತವಾಗಿಯೂ ಕಾಂಗ್ರೆಗೆ ಚುನಾವಣೆಯಲ್ಲಿ ಸಾಕಷ್ಟು ತೊಂದರೆಯಾಗುವುದರಲ್ಲಿ ಸಂಶಯವಿಲ್ಲ. ಫಲಿತಾಂಶದ ಮೇಲೆ ಇದು ದುಷ್ಪರಿಣಾಮ ಬೀರಲಿದೆ.

ಶಿವಮೊಗ್ಗೆಯಲ್ಲಿ ತನ್ನ ಪ್ರಾಬಲ್ಯವನ್ನು ಪ್ರದರ್ಶಿಸಲು ಹೆಣಗಾಡುತ್ತಿರುವ ಕೆ.ಜೆ.ಪಿ ನಾಯಕ ಯಡಿಯೂರಪ್ಪ ಈಗ ಸಂಗಮೇಶ್‌ನನ್ನು ತಮ್ಮ ಪಕ್ಷದ ಬುಟ್ಟಿಗೆ ಹಾಕಿಕೊಳ್ಳಲು ಭಗೀರಥ ಪ್ರಯತ್ನ ಮಾಡುತ್ತಿದ್ದಾರೆ. ಲಿಂಗಾಯತ ಸಮುದಾಯಕ್ಕೆ ಸೇರಿದ ಸಂಗಮೇಶ್‌ರಿಗೆ ಟಿಕೆಟ್ ನಿರಾಕರಿಸಿರುವುದು, ಈಗಾಗಲೇ ಕಾಂಗ್ರೆ ಹೈಕಮಾಂಡ್ ಮೇಲೆ ಮುನಿಸಿಕೊಂಡಿರುವ ಲಿಂಗಾಯತ ಸಮುದಾಯಕ್ಕೆ ಇನ್ನಷ್ಟು ಬೇಸರ ಮೂಡಿಸಿದೆ.

ಇಷ್ಟೇ ಅಲ್ಲ, ಕಾಂಗ್ರೆಸ್‌ನ ಹಿರಿಯ ನಾಯಕರಲ್ಲೊಬ್ಬರಾದ ಕೃಷ್ಣರಾಜಪುರದ ಎ.ಕೃಷ್ಣಪ್ಪ ಅವರಿಗೂ ಹೈಕಮಾಂಡ್ ಟಿಕೆಟ್ ನೀಡದಿರುವುದು ಅವರ ಗೊಲ್ಲ ಸಮುದಾಯದಲ್ಲಿ ಅಸಮಾಧಾನವನ್ನುಂಟುಮಾಡಿದೆ. ಈಗ ಕೃಷ್ಣಪ್ಪರವರನ್ನು ಜೆಡಿಎಸ್ ಹೈಜಾಕ್ ಮಾಡಿ ಹಿರಿಯೂರಿನಲ್ಲಿ ದಳದ ಅಭ್ಯರ್ಥಿಯಾಗಿ ನಿಲ್ಲಿಸಿದೆ.

ರಾಜಕೀಯವಾಗಿ ಗೊಲ್ಲರ ಸಮುದಾಯ ಪ್ರಭಾವಶಾಲಿ ಯಾಗಿದ್ದು ರಾಜ್ಯದಲ್ಲಿ ನಾಲ್ಕನೇ ಅತಿಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಈಗ ಕಾಂಗ್ರೆಸ್ ಕೃಷ್ಣಪ್ಪನವರಿಗಲ್ಲದೆ ಬೇರೆ ಯಾವ ಗೊಲ್ಲರಿಗೆ ಟಿಕೆಟ್‌ನ್ನೇ ನೀಡಿಲ್ಲ ಎಂಬ ಅಪಸ್ವರ ಕೇಳಿಬರುತ್ತಿದೆ. ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ಹಂಚಿಹೋಗಿರುವ ಈ ಗೊಲ್ಲರ ಮತಗಳು ವಿವಿಧ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಅಲ್ಪಮತಗಳ ಅಂತರದ ಸೋಲಿನ ಕಾರಣವಾದರೂ ಅಚ್ಚರಿ ಇಲ್ಲ.

ಟಿಕೆಟ್‌ಗೆ ಅರ್ಹರಾದ ವ್ಯಕ್ತಿಗಳ ಪಟ್ಟಿಯಲ್ಲಿ ಸಾಕಷ್ಟು ಮಹಿಳೆಯರ ಹೆಸರಿಲ್ಲ ಎಂದು ಗುಡುಗಿದ್ದ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅಂತಿಮ ಅಭ್ಯರ್ಥಿಗಳ ಪಟ್ಟಿಯಲ್ಲಿ ಅಂತಹ ಕಾಳಜಿ ತೋರಿಸಿಲ್ಲದಿರುವುದು ಎದ್ದು ಕಾಣಿಸುತ್ತಿದೆ. ಅದರಲ್ಲೂ ಎಐಸಿಸಿಯ ಸದಸ್ಯರಾಗಿಯೂ ಕೆಲಸ ಮಾಡಿರುವ ಮೋಟಮ್ಮನಂತಹ ಹಿರಿಯ ನಾಯಕಿ ಈ ಬಾರಿ ಟಿಕೆಟ್ ನೀಡದಿರುವುದು ನಿಜಕ್ಕೂ ಅಚ್ಚರಿಯ ವಿಷಯವಾಗಿದೆ. ಕಾಂಗ್ರೆ ಪಕ್ಷ ಕರ್ನಾಟಕದ[illegible] ನೆಲೆಯೂರುವಲ್ಲಿ ಮುಖ್ಯ ಪಾತ್ರ ವಹಿಸಿರುವ ಈ ದಲಿ[illegible] ಮಹಿಳೆಗೆ ಯಾವ ಕಾರಣಕ್ಕಾಗಿ ಕಾಂಗ್ರೆ ಹೈಕಮಾಂಡ್ ಟಿಕೆಟ್ ನೀಡಿಲ್ಲ ಎಂಬುದೇ ಅರ್ಥವಾಗುತ್ತಿಲ್ಲ.

ಇವರ ಜೊತೆಜೊತೆಗೆ ಮಾಜಿ ಸಚಿವೆ ರಾಣಿ ಸತೀಶ್, ಮಲ್ಲಾಜಮ್ಮ, ಜಲಜಾ ನಾಯಕ್, ಡಿ.ಕೆ.ತಾರಾದೇ[illegible] ಸಿದ್ಧಾರ್ಥ ಮೊದಲಾದವರನ್ನೂ ಸೋನಿಯಾ ಗಾಂ[illegible] ಸಂಪೂರ್ಣವಾಗಿ ಮೂಲೆಗುಂಪು ಮಾಡಿರುವುದು ಬಹು[illegible] ಕಾಂಗ್ರೆ ಮಹಿಳಾ ಕಾರ್ಯಕರ್ತೆಯರಲ್ಲಿ ಅಸಮಾಧಾನ[illegible] ಅಲೆಯನ್ನು ಸೃಷ್ಟಿಸಿದೆ.

ಈಗ ಬೆಂಗಳೂರು, ಮಂಗಳೂರು, ಮಂಡ್ಯ, ಶಿವಮೊ[illegible] ದಾವಣಗೆರೆ ಮತ್ತು ಬಳ್ಳಾರಿ ಸೇರಿದಂತೆ ಅನೇಕ ಜಿಲ್ಲೆಗಳ[illegible] ಒಂದೋ ಕಾಂಗ್ರೆಸ್ಸಿಗರು ಬಂಡಾಯ ಅಭ್ಯರ್ಥಿಗಳಾ[illegible] ಸ್ಪರ್ಧಿಸುತ್ತಿದ್ದಾರೆ ಅಥವಾ ಅಂತಹ ಅತೃಪ್ತ ಆತ್ಮಗಳನ[illegible] ಜೆಡಿಎಸ್ ಹೈಜಾಕ್ ಮಾಡುತ್ತಿದೆ. ಅಂದರೆ ಕಾಂಗ್ರೆ[illegible] ಹಲವಾರು ಕಡೆ ಸ್ವತಃ ಡಿಕ್ಕಿ ಹೊಡೆದುಕೊಳ್ಳುತ್ತಿದೆ. ಒಂದು ಮಾತಂತೂ ನಿಜ. ಇದೇ ಮೊದಲ ಬಾರಿಗೆ ಕಾಂಗ್ರೆ[illegible] ಹೈಕಮಾಂಡ್ ತನ್ನ ನಿಶ್ಶಕ್ತಿ ಮತ್ತು ದುರ್ಬಲತೆಯನ[illegible] ಟಿಕೆಟ್ ಹಂಚಿಕೆಯ ಸಂದರ್ಭದಲ್ಲಿ ಪ್ರದರ್ಶಿಸಿದೆ. ಈ ಒಂದು ಗೊಂದಲ ಮತ್ತು ಗಲಿಬಿಲಿಯಿಂದಾ[illegible] ಖಂಡಿತವಾಗಿಯೂ ಕಾಂಗ್ರೆಗೆ ಚುನಾವಣೆಯಲ್ಲಿ ಸಾಕಷ್ಟು ತೊಂದರೆಯಾಗುವುದರಲ್ಲಿ ಸಂಶಯವಿಲ್ಲ, ಈಗಿನ ಅಂದಾಜಿ[illegible] ಪ್ರಕಾರ ಕನಿಷ್ಠವೆಂದರೂ 20 ರಿಂದ 25 ಕ್ಷೇತ್ರಗ[illegible] ಫಲಿತಾಂಶದ ಮೇಲೆ ಇದು ದುಷ್ಪರಿಣಾಮ ಬೀರಲಿದೆ.

ಈ ಎಡವಟ್ಟುಗಳೆಲ್ಲವೂ ಕಾಂಗ್ರೆಸ್ ಪಕ್ಷದಲ್ಲಿರು[illegible] ಹಲವಾರು ನಾಯಕರ ನಡುವಿನ ಒಳಜಗಳದ ಫಲಿತಾಂ[illegible] ಎಂದು ಸುಲಭವಾಗಿ ಹೇಳಬಹುದು. ಈ ಬಾರಿ ಕಾಂಗ್ರೆ[illegible] ಅಧಿಕಾರಕ್ಕೆ ಬಂದೇ ಬರುತ್ತದೆಂಬ ಹುಮ್ಮಸ್ಸಿನಲ್ಲಿರು[illegible] ಮುಖ್ಯಮಂತ್ರಿ ಆಕಾಂಕ್ಷಿಗಳೆಲ್ಲರೂ ತೆರೆಮರೆಯಲ್ಲಿ ತಮ[illegible] ಎದುರಾಳಿಗಳನ್ನು ಮಟ್ಟ ಹಾಕುತ್ತಿರುವುದರಿಂದ ವಿವಿಧ[illegible] ಕಡೆ ಬಂಡಾಯದ ಅಲೆ ಎದ್ದಿದೆ.

ಈ ಹಿಂದೆ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರಗಳ[illegible] ಮುಂದೆ ಕಾಂಗ್ರೆಸ್ಸಿಗರು ತಲೆ ಬಾಗುತ್ತಿದ್ದರು. ಒಂದು ಶತಮಾನಕ್ಕೂ ಹೆಚ್ಚು ಇತಿಹಾಸವನ್ನು ಹೊಂದಿರುವ ಕಾಂಗ್ರೆ[illegible] ಪಕ್ಷದಲ್ಲಿ ಹೈಕಮಾಂಡಿನ ತೀರ್ಪು ಅಂತಿಮವಾಗುತ್ತಿತ್ತು[illegible] ಅದನ್ನು ಪ್ರಶ್ನಿಸುವ ಧೈರ್ಯ ತೋರುತ್ತಿರುವಲಿಲ್ಲ, ಆಕಸ್ಮಾತ[illegible] ತಮಗೆ ಪಕ್ಷದ ಟಿಕೆಟ್ ಸಿಗದಿದ್ದರೆ ಆ ಬೇಸರವನ[illegible] ನುಂಗಿಕೊಂಡು ಪಕ್ಷದ ಅಧಿಕೃತ ಅಭ್ಯರ್ಥಿಯ ಪರವಾ[illegible] ಎಲ್ಲರೂ ದುಡಿಯುತ್ತಿದ್ದರು. ಆದರೆ ಈಗ ಪರಿಸ್ಥಿ[illegible] ಬದಲಾಗಿದೆ. ಹೈಕಮಾಂಡನ್ನೇ ಬ್ಲಾಕ್‌ಮೇಲ್ ಮಾಡು[illegible] ಮಟ್ಟಕ್ಕೆ ಹಲವು ನಾಯಕರು ಹೋಗಿದ್ದಾರೆ.

ಟಿಕೆಟ್ ಹಂಚಿಕೆಯಲ್ಲಾಗಿರುವ ಯಡವಟ್ಟು ಕಾಂಗ್ರೆಸ್‌ಗ[illegible] ಶಾಪವಾಗಿಯೂ, ವಿರೋಧ ಪಕ್ಷಗಳಿಗೆ ವರವಾಗಿಯೂ ಕಾಣಿಸುತ್ತಿದೆ. ಕಾಂಗ್ರೆಸ್ ಮನೆ ಬಾಗಿಲಿಗೆ ಬಂದಿದ್ದ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಳ್ಳದೆ ಅತಿಯಾದ ಆತ್ಮವಿಶ್ವಾಸದಿಂದ ಬೇಕಾಬಿಟ್ಟಿಯಾಗಿ ಟಿಕೆಟ್ ಹಂಚಿದ್ದರಿಂದ ಕಾಂಗ್ರೆಸ್ ಅಧಿಕಾರವನ್ನು ಹಿಡಿಯಲು ಬೇಕಾದ ಸಂಖ್ಯೆಗ[illegible] ತಾನೇ ಚ್ಯುತಿ ತಂದುಕೊಂಡಿದೆ.

• ಶೆಣೈ

ಉತ್ತರ ಕನ್ನಡ...

5<<<

ಅಭ್ಯರ್ಥಿ ಹಾಲಿ ಶಾಸಕ ವಿ.ಎಸ್. ಪಾಟೀಲ್ ಫೈಟಿಗೆ ಬರುವುದಕ್ಕಾಗದು. ಕೆಜೆಪಿ-ಬಿಜೆಪಿ ನಡುವೆ ಹೊಯ್ದಾಡಿದ ಪಾಟೀಲ್ ಅಂತಿಮವಾಗಿ ಬಿಜೆಪಿ ಟಿಕೆಟ್ ತಂದಾಗ ಆ ಪಕ್ಷದ ಸಂಸದ ಅನಂತ್ಕುಮಾರ್ ಹೆಗಡೆಯೇ ಹಲ್ಲು ಕಚ್ಚಿ ಒಳಗೊಳಗೇ ಕೆರಳಿದ್ದಾರೆ. ಹೀಗಾಗಿ ಪಾಟೀಲ್‌ಗೆ ಎಲ್ಲ ದಿಕ್ಕಲ್ಲೂ ಅಪಶಕುನವೇ ಕಾಡಿದೆ. ಕೇವಣಿಗೇ ಈತ ಪರದಾಡ ಬೇಕಾಗಿದೆ. ಕಳ್ಳ ಕಾಸಿನ ಕುಳಗಳಾದ ಹೆಬ್ಬಾರ್-ಅನಿಲ್ ಅಬ್ಬರದ ನಡುವೆ ಪಟೇಲ್ ಸದ್ದಡಗಿ ಹೋಗಿದೆ.

ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಹೆಬ್ಬಾರ್ ಮತ್ತು ಜೆಡಿಎಸ್‌ನ ಅನಿಲ್ ನಡುವೆ ಜಿದ್ದಾಜಿದ್ದಿ ನಡೆಯುತ್ತಿದೆ. ಅನಿಲ್ ಗೆದ್ದರೆ ಬೆಂಗಳೂರು ಸೇರುತ್ತಾನೆ; ಹೆಬ್ಬಾರ್ ಗೆದ್ದರೆ ಕೈಗೆ ಸಿಗುತ್ತಾನೆಂದು ಜನ ಹೇಳುತ್ತಿದ್ದಾರೆ. ಹೀಗಾಗಿ ಒಂಚೂರು ಹೆಬ್ಬಾರ್ ಮುಂದಿದ್ದಾರೆ. ಕಳೆದ ಬಾರಿ ಸಣ್ಣ ಅಂತರದಲ್ಲಿ ಹೆಬ್ಬಾರ್ ಸೋತಿದ್ದು ಈಗದು ಅನುಕಂಪವಾಗಿ ಮಾರ್ಪಟ್ಟಿದೆ. ಹೀಗಾಗಿ ಹೆಬ್ಬಾರ್‌ಗೆ ವಿಧಾನಸೌಧದ ಯೋಗ ಖುಲಾಯಿಸುವ ಲಕ್ಷಣಗಳೇ ಜಾಸ್ತಿ. ಮುಸ್ಲಿಮರು ಈ ಕ್ಷೇತ್ರದಲ್ಲಿ ನಿರ್ಣಾಯಕರು. ಇಲ್ಲಿರುವುದು ಹಣದ ರಣ ಹಣಾಹಣಿ.

ದೇಶಪಾಂಡೆ-ಸುನಿಲ್ 50-50


ಪ್ರತಿಷ್ಠಿತ ರಣರಂಗ ಹಳಿಯಾಳ-ಜೋಯಿಡಾದಲ್ಲಿ ಕಾಂಗ್ರೆಸ್‌ನ ಹಳೆ ಹುಲಿ ಆರ್.ವಿ. ದೇಶಪಾಂಡೆ ಮತ್ತು ಜೆಡಿಎಸ್‌ನ ಹೊಸ ಹೊಸ ಗಿಮಿಕ್‌ಗಳ ಹುಡುಗ ಸುನಿಲ್ ಹೆಗಡೆ ಮುಖಾಮುಖಿಯಾಗಿ ನಿಂತಿದ್ದಾರೆ. ಕಳೆದ ಬಾರಿ ತಾನೇ ಸಾಕಿ ಬೆಳೆಸಿದ್ದ ಸ್ವಜಾತಿ ಕೊಂಕಣಿ ಪೋರ-ಆತ್ಮೀಯ ಗೆಳೆಯ ಮಾಜಿ ಎಮ್ಮೆಲ್ಸಿ ವಿ.ಡಿ. ಹೆಗಡೆ ಮಗ ಸುನಿಲ್ ಎದುರು ದೇಶಪಾಂಡೆ ಮಕಾಡೆ ಮಲಗಬೇಕಾಗಿ ಬಂದಿತ್ತು. ಆದರೆ ಸೋತ ಬಳಿಕ ದೇಶಪಾಂಡೆ ಕ್ಷೇತ್ರಕ್ಕೆ ಬೆನ್ನು ಹಾಕಿ ಹೋಗಲಿಲ್ಲ, ಕ್ಷೇತ್ರದ ಸಂಪರ್ಕ ಹೆಚ್ಚಿಸಿಕೊಂಡರು. ಜಿಪಂ, ತಾಪಂ, ಪೌರಾಡಳಿತ ಸಂಸ್ಥೆ ಇಲೆಕ್ಷನ್ ಬಂದಾಗ ಜೆಡಿಎಸ್ ಶಾಸಕ ಸುನಿಲ್‌ಗೆ ಏಳು ಕೆರೆ ನೀರು ಕುಡಿಸಿದರು. ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರ ಹಿಡಿದರು.

ಶಾಸಕ ಸುನಿಲ್‌ನ ಪಟ್ಟಿಗೆ ಪ್ರತಿ ಪಟ್ಟು ಹಾಕುತ್ತಲೇ ಹೋದರು ದೇಶಪಾಂಡೆ. ಇದರಿಂದ ಕಕ್ಕಾಬಿಕ್ಕಿಯಾದ ಸುನಿಲ್ ಪಾದಯಾತ್ರೆಯಂಥ ಗಿಮಿಕ್ ಮಾಡಿದರು. ನೀರಾವರಿ ಯೋಜನೆಯ ಗುಮ್ಮ ತೇಲಿಬಿಟ್ಟರು. ಸುನಿಲ್ ಹಾರಾಟ ತಡೆಯಲೆಂದೇ ದೇಶಪಾಂಡೆ ಕ್ಷೇತ್ರದಲ್ಲಿ ಬಹುಸಂಖ್ಯಾತರಾದ ಮರಾಠ ಸಮುದಾಯದ ಎಸ್.ಎಲ್. ಘೋಟನೇಕರ್ ಎಂಬ ಹರಕುಬಾಯಿ ಹುಂಬನನ್ನು ಎಮ್ಮೆಲ್ಸಿ ಮಾಡಿ ಛೂಬಿಟ್ಟರು. ಇದೆಲ್ಲ ಈಗ ದೇಶಪಾಂಡೆಗೆ ಹೆಲ್ಪ್ ಆಗಿದೆ. ಸುನಿಲ್‌ನೂ ಛಲ ಬಿಡದೇ ಗುರುವಿಗೆ ತಿರುಮಂತ್ರ ಹಾಕುತ್ತಲೇ ಇದ್ದಾನೆ.

ಮದ್ದಾನೆಗಳ ಗುದ್ದಾಟದ ಕಣದಂತಾಗಿದೆ ಈಗ ಹಳಿಯಾಳ ಕ್ಷೇತ್ರ. ಮುಸ್ಲಿಮರು ಮತ್ತು ಗುಡ್ಡಗಾಡು ಪ್ರದೇಶವಾದ ಶಾಪಗ್ರಸ್ತ ಜೋಯಿಡಾ ಬುಡಕಟ್ಟು ಮಂದಿಯೇ ಇಲ್ಲಿ ನಿರ್ಣಾಯಕರು. ಜೋಯಿಡಾದಲ್ಲಿ ಪಕ್ಕದ ಕಾರವಾರದ ಆನಂದ್ ಅಸ್ನೋಟಿಕರ್ ಫ್ಯಾಮಿಲಿ ಪ್ರಭಾವ ಇದೆ. ಅಸ್ನೋಟಿಕರ್‌ಗೆ ದೇಶಪಾಂಡೆ ತನಗೆ ಕಾಂಗ್ರೆಸ್ ಸೇರಲು ಬಿಡಲಿಲ್ಲ ಎಂಬ ಸಿಟ್ಟು. ಹಾಗಾಗಿ ದೇಶಪಾಂಡೆ ಜೋಯಿಡಾದಲ್ಲೇ ಶಕ್ತಿ ಹೆಚ್ಚು ಹಾಕುತ್ತಿದ್ದಾರೆ. ಸದ್ಯಕ್ಕೆ ದೇಶಪಾಂಡೆಯೇ ಒಂದೈದು ಪರ್ಸೆಂಟೇಜ್ ಮುಂದಿರುವಂತಿದೆ ಕ್ಷೇತ್ರದ ಸ್ಥಿತಿ-ಗತಿ. ಕೆಜೆಪಿಯ ರವಿ ರೇಡ್ಕರ್, ಬಿಜೆಪಿಯ ರಾಜೂ ಧೂಳಿ ಆಟಕ್ಕಷ್ಟೇ.

-ನಹುಷ

ನಿರಾಣಿಯ ವಂಚಕ ಅಳಿಯ ಕೊಲೆಯಾದನೆ?



ನಿರಾಣಿ ಅಳಿಯ ಬಸವರಾಜ್ ಇಂಗಳೆ

ನಾಲ್ಕೂ ಮುಕ್ಕಾಲು ವರ್ಷಗಳ ಕಾಲ ಗೆಲ್ಲಿಸಿದ ಬೀಳಗಿಯನ್ನೇ ಮರೆತು ಮಂತ್ರಿಗಿರಿ, ಫಾರಿನ್ ಟೂರ್, ರಿಯಲ್ ಎಸ್ಟೇಟ್ ಇತ್ಯಾದಿ ಕೋಟಿ ಕಮಾಯಿಯ ಆರಾಮದಲ್ಲೇ ಕಾಲಕಳೆದ ಮುರುಗೇಶ್ ನಿರಾಣಿ ಸದ್ಯ ಓಟಿಗೆಂದು ಬೀಳಗಿಗೆ ಬಂದರೆ-ಅಳಿಯನಿಂದ ಮನೆ ಮಠ ಕಳಕೊಂಡು ಬೀದಿಪಾಲಾದವರ ಕಣ್ಣೀರಿನ ಸ್ವಾಗತ!

ಬಹುಶಃ ನಿರಾಣಿಗಿದು ಅಚ್ಚರಿಯ ಆಘಾತವೂ ಹೌದು. ಮಂತ್ರಿಯಾದ ಎರಡೂವರೆ ವರ್ಷಕ್ಕೆ ಸರಿಯಾಗಿ ತಂಗಿ ಮಾದೇವಿಯ ಗಂಡ ಬಸವರಾಜ್ ಇಂಗಳೆ ಸತ್ತಿದ್ದ. ಅದೊಂದು ಕೊಲೆಯಾ ಅಥವಾ ನಿಗೂಢ ಸಾವಾ? ಎಂಬ ಬಗ್ಗೆ ಜಮಖಂಡಿಯ ಮಂದಿಗಿನ್ನು ನಿಖರ ಮಾಹಿತಿಯಿಲ್ಲ. ಬಹುಶಃ ನಿರಾಣಿಗಲ್ಲದೆ ಬೇರೆ ಯಾರಿಗೂ ಸತ್ಯ ಗೊತ್ತಿರಲಿಕ್ಕಿಲ್ಲ. ಆದರೆ ಎಲ್ಲಾ ಬಿಟ್ಟು ಮಗ ಭಂಗಿ ನೆಟ್ಟ ಹಾಬಂತೆ ರೊಕ್ಕದ ಕಂತೆ ಹಿಡಿದು ಓಟಿಗೆಂದು ಬೀಳಗಿಗೆ ಬಂದರೆ ಧಿಕ್ಕಾರ ಮೊಳಗಿದ್ದು ನಿರಾಣಿಯ ಸಕ್ಕರೆ ಕಾರ್ಖಾನೆಗೆ ಕಬ್ಬು ಕೊತ್ತು ಇನ್ನೂ ಬಾಕಿಗಾಗಿ ಅಲೆದಲೆದು ಸುಸ್ತೆದ್ದ ರೈತರಿಂದಾಗಲಿ, ತಮ್ಮ ಹಣಮಂತ ನಿರಾಣಿಯ ಗೂಂಡಾಗಿರಿಗೆ ರೋಸತ್ತ ರೈತರಿಂದಾಗಲಿ ಅಲ್ಲ-


ಬದಲಿಗೆ ಅಳಿಯ ದಿವಂಗತ ಬಸವರಾಜ ಇಂಗಳೆ ಮಾಸ್ತರ್‌ನ ವಂಚನೆಗೊಳಗಾಗಿ ಬೀದಿಪಾಲಾದವರೆಲ್ಲ ನಿರಾಣಿಗೆ ಧಿಕ್ಕಾರ ಹಾಕಿ ಎದೆ ಬಡಿದುಕೊಳ್ಳುತ್ತಿದ್ದಾರೆ!

ಮಂತ್ರಿ ನಿರಾಣಿಯ ಖಾಸಾ ತಂಗಿ ಮಾದೇವಿಯ ಗಂಡನ ಹೆಸರು ಬಸವರಾಜ್ ಇಂಗಳೆ ಅಲಿಯಾಸ್ ಮಾಸ್ತರ್. ಮೂಲತಃ ಬಿಜಾಪುರ ಜಿಲ್ಲೆ ತಿಕೋಟಾ ತಾಲ್ಲೂಕು ಘೋಣಸಗಿಯವನಾದ ಈತ ಜಮಖಂಡಿಯ ಕುಂಬಾರ ಓಣಿಯ ಬಾಲಕರ ಸರ್ಕಾರಿ ಗಂಡುಮಕ್ಕಳ ಬನಶಂಕರಿ ಶಾಲೆಯಲ್ಲಿ ಪೀಟಿ ಮಾಸ್ತರ್ ಅಂದರೆ ದೈಹಿಕ ಶಿಕ್ಷಕನಾಗಿದ್ದ. ಶಿಕ್ಷ ದೈಹಿಕ ವಾಂಛೆಗೂ ಅಷ್ಟೇ ಕುಖ್ಯಾತನಾಗಿದ್ದ ಬಸವರಾಜ್ ಇಂಗಳೆ ಹುಟ್ಟಾ ವಂಚಕ ಮತ್ತು ಪಕ್ಕಾ ಲೋಫಿವಾಲ. ಅದೇನಾಯಿತೋ 2011 ರ ಮಾರ್ಚ್ 29 ರಂದು ಆತ ನಿಗೂಢವಾಗಿ ಸತ್ತ.

ಆತ ಸತ್ತ ರೀತಿ, ಹೆಣವಾದ ಸಂದರ್ಭ, ಬದುಕಿದ್ದಷ್ಟೂ ದಿನ ಮಾಡಿಕೊಂಡ ಭಾನಗಡಿ, ಸಿಕ್ಕಸಿಕ್ಕವರನ್ನೆಲ್ಲ ಆತ ವಂಚಿಸಿದ ವೈಖರಿ ಎಲ್ಲವೂ ಆತನ ಅಕಾಲಿಕ, ಅನಿರೀಕ್ಷಿತ ಸಾವಿಗೆ ಬೇರೆಯದೇ ನಿಗೂಢವೊಂದನ್ನು ಕಲ್ಪಿಸಿದ್ದವು. ಬಿಜಾಪುರದ ಸ್ಟೇಷನ್ ರಸ್ತೆಯ ಗೋದಾವರಿ ಬಾರ್‌ಗೆ ಪತ್ನಿ ಮಾದೇವಿ, ನಿರಾಣಿಯ ತಮ್ಮ ಹಣಮಂತ, ಆತನ ಪತ್ನಿ ಮತ್ತಿತರರ ಜೊತೆ ಊಟಕ್ಕೆಂದು ಹೋಗಿದ್ದ ಇಂಗಳೆ ಮಾಸ್ತರ್ ಊಟದ ಅರ್ಧಕ್ಕೇ ಕುಸಿದು ಬಿದ್ದಿದ್ದ. ಹಾಗೆ ಕುಸಿದು ಬಿದ್ದವನನ್ನು ಬಿಜಾಪುರದ ಆಸ್ಪತ್ರೆಗಳೆಲ್ಲವನ್ನೂ ಬಿಟ್ಟು ದೂರದ ಬೆಳಗಾವಿಯ, ನಿರಾಣಿಯ ಗಾಡ್‌ಫಾದರ್ ಯಡ್ಡಿಗೆ ಪರಮಾಪ್ತರಾಗಿದ್ದ ಪ್ರಭಾಕರ್ ಕೋರೆಯ ಕೆಎಲ್‌ಇ ಆಸ್ಪತ್ರೆಗೆ ಸಾಗಿಸಲಾಯ್ತು. ಬೆಳಗಾವಿಯ ಕೆಎಲ್‌ಇ ಆಸ್ಪತ್ರೆಗೆ ತರುವ ಹೊತ್ತಿಗಾಗಲೇ ನಿರಾಣಿ ಅಳಿಯ ಹೆಣವಾಗಿದ್ದ!

ವಿಚಿತ್ರವೆಂದರೆ ಸತ್ತ ನಿರಾಣಿ ಅಳಿಯನ ಶವದ ಪೋಸ್ಟ್ ಮಾರ್ಟಮ್ ಮಾಡಲೇ ಇಲ್ಲ!

ಯಾವುದೇ ಅಸಹಜ, ಅಕಾಲಿಕ ಸಾವಿನ ಕುರಿತಂತೆ ಪೋಸ್ಟ್ ಮಾರ್ಟಮ್ ನಡೆಸಬೇಕಿದ್ದದ್ದು ನ್ಯಾಯವಾದರೂ ನಿರಾಣಿಯ ತಂಗಿ ಗಂಡನ ವಿಷಯದಲ್ಲಿ ಮಾತ್ರ ಪೊಲೀಸರಾಗಲಿ, ಪತ್ರಕರ್ತರಾಗಲಿ, ಸಂಬಂಧಿಗಳಾಗಲಿ



ತಮ್ಮ ಹಣಮಂತ ನಿರಾಣಿ

ಕಾಟಾಚಾರಕ್ಕೂ ವಿಚಾರಣೆ ನಡೆಸಲಿಲ್ಲ.

ಹಾಗೆ 2011 ರ ಮಾರ್ಚ್ 29 ರಂದು ಹೆಣವಾದ ಅಂದರೆ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದು ನಿರಾಣಿ ಭಾರೀ ಕೈಗಾರಿಕಾ ಮಂತ್ರಿ ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದಾಗಲೇ ಸತ್ತ ಬಸವರಾಜ ಇಂಗಳೆಯ ಹಕೀಕತ್ತು ಅಲ್ಲಿಗೇ ಮುಗಿದಿದ್ದರೆ ಬಹುಶಃ ನಿರಾಣಿ ಮತ್ತಾತನ ತಂಗಿ ನೆಮ್ಮದಿಯ ನಿಟ್ಟುಸಿರಿಡುತ್ತಿದ್ದರು. ಹಾಗಾಗಲಿಲ್ಲ. ಆತನಿಂದ ವಂಚಿತರು ನೌಕರಿಗೆಂದು ರೊಕ್ಕ ಕೊಟ್ಟು ಕಾಯುತ್ತಿದ್ದವರು, ಬೀದಿಗೆ ಬಿದ್ದವರೆಲ್ಲ ಒಬ್ಬೊಬ್ಬರಾಗಿ ನಿರಾಣಿ ಮನೆಬಾಗಿಲು ಬಡಿಯತೊಡಗಿದರು.

ಅಲ್ಲಿಗೆ ಇಂಗಳೆ ಮಾಸ್ತರ್‌ನ ನಿಗೂಢ ಸಾವಿನ ಸುತ್ತ ಬೇರೆಯದೇ ಕಾರಣವೊಂದು ಹೊಗೆಯಾಡತೊಡಗಿತ್ತು. ನಿರಾಣಿಯ ಖಾಸಾ ತಂಗಿ ಮಾದೇವಿಯ ಗಂಡ ಬಸವರಾಜ್ ಇಂಗಳೆ ಬಿಜೆಪಿ ಅಧಿಕಾರಕ್ಕೆ ಬರುವತನಕ ನೆಟ್ಟಗಿದ್ದ. ಯಡ್ಡಿ ಮುಖ್ಯಮಂತ್ರಿಯಾಗಿದ್ದೇ ನಿರಾಣಿ ಕೈಗಾರಿಕಾ ಮಂತ್ರಿಯಾಗಿ ಜಿಲ್ಲಾ ಉಸ್ತುವಾರಿ ಮಂತ್ರಿಯೂ ಆಗಿದ್ದು ಇಂಗಳೆ ಮಾಸ್ತರನ ಸಕಲ ಪರಾಕ್ರಮಗಳೆಲ್ಲಕ್ಕೂ ಮೂಲವಾಯ್ತು. ಇದಕ್ಕಿದ್ದಂತೆ ಶಾಲೆಯ ಮಾಸ್ತರಿಕೆಗೆ ಚಕ್ಕರ್ ಹಾಕಿ ಜಮಖಂಡಿಯ ಕೋರ್ಟ್ ರಸ್ತೆಯಲ್ಲಿ ವಿಜಯಾನಂದ್ ಟ್ರೇಡರ್ಸ್ ಎಂಬ ಪೇಯಿಂಟ್ ಮಳಿಗೆಯೊಂದನ್ನು ತೆರೆದ.


ಇದರ ಮುಂದುವರೆದ ಸಾಹಸವೆಂಬಂತೆ ನಿರಾಣಿ ಅಳಿಯ ಬ್ಯಾಂಕ್ ಒಂದನ್ನು ಹುಟ್ಟುಹಾಕಿ ಅದಕ್ಕೆ 'ಬಾಗಲಕೋಟೆ ಜಿಲ್ಲಾ ಸರ್ಕಾರಿ ನೌಕರರ ವಿವಿಧೋದ್ದೇಶ ಸಹಕಾರಿ ಸಂಘ' ಎಂಬ ಹೆಸರಿಟ್ಟ. ಬೀಳಗಿಯ ಮಾರ್ಕೆಟ್ ಮುಖ್ಯರಸ್ತೆಯಲ್ಲಿ ಸೊಸೈಟಿಗೆಂದು ಸುಸಜ್ಜಿತ ಕಟ್ಟಡವನ್ನೂ ಬಾಡಿಗೆ ಹಿಡಿದು ಸೊಸೈಟಿಗೆ ತನ್ನದೇ ಛೇಲಾಗಳಾದ ಶಿವಪ್ಪ ಪ್ರದಾನಿ ಹೂಗಾರ, ಪಿಡಬ್ಲ್ಯೂಡಿ ಇಂಜಿನಿಯರ್ ಅಲಗೂರು ಅಜಿತ್ ಅರಿಹಂತ, ಎಸ್.ಬಿ. ಬಿರಾದಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಕಲ್ಯಾಣಿ, ಬಡಿಗೇರ್ ಕಲ್ಲಪ್ಪ, ಚನ್ನಪ್ಪ ಅಜ್ಜಣ್ಣವರ್ ಪಾಂಡಪ್ಪ ಬಸಪ್ಪ ಮತ್ತು ಬೀಳಗಿ ಇಮಾಂಸಾಬ್ ನಬೀಸಾಬ್ ನಿರ್ದೇಶಕರಾದರೂ ಇಂಗಳೆ ಮಾಸ್ತರ್ ತಾನೇ ಅಧ್ಯಕ್ಷನೆಂದು ಘೋಷಿಸಿಕೊಂಡ.

ಅದು ನಿರಾಣಿಯನ್ನು ಮುಂದಿಟ್ಟುಕೊಂಡು ಇಡೀ ಬಾಗಲಕೋಟೆ ಜಿಲ್ಲೆಯ ಸರ್ಕಾರಿ ನೌಕರರನ್ನು ಸುಲಿಯುವ ಅಳಿಯನ ತಂತ್ರವಾಗಿತ್ತು. ಮೊದಲೇ ಮಂತ್ರಿಯ ತಂಗಿಯ ಗಂಡ. ನಿರಾಣಿಯೇ ಜಿಲ್ಲಾ ಉಸ್ತುವಾರಿ ಮಂತ್ರಿ. ಇಂಥಾದ್ದರಲ್ಲಿ ಯಾರೇ ಸರ್ಕಾರಿ ನೌಕರ ಅಳಿಯನ ಮರ್ಜಿಗೆ ಜಗ್ಗದೇ ಹೋದರೆ ಎತ್ತಂಗಡಿ ಕಟ್ಟಿಟ್ಟಬುತ್ತಿ!

ಇದಕ್ಕೆ ತಕ್ಕಂತೆ ಬಸವರಾಜ್ ಇಂಗಳೆ ಜಿಲ್ಲೆಯ ಪ್ರತಿಯೊಬ್ಬ ಸರ್ಕಾರಿ ನೌಕರನೂ ಕಡ್ಡಾಯವಾಗಿ ಸೊಸೈಟಿಗೆ ಷೇರುದಾರನಾಗಲೇಬೇಕು ಮತ್ತು ತಲಾ 1100 ರೂಪಾಯಿ ಮುಖಬೆಲೆಯ ಷೇರು ಖರೀದಿಸಲೇಬೇಕೆಂದು ಹುಕುಮ್ ಹೊರಡಿಸಿದ. ಮುಧೋಳ, ಬಿಜಾಪೂರ, ಬೀಳಗಿ, ಜಮಖಂಡಿ, ಬಾಗಲಕೋಟೆ, ಹುಬ್ಬಳ್ಳಿ-ಧಾರವಾಡ ಸೇರಿದಂತೆ ನಿಪ್ಪಾಣಿ, ಬೆಳಗಾವಿಯತನಕ ಸರ್ಕಾರಿ ನೌಕರರೆಲ್ಲ ಸಾವಿರದ ನೂರು ತೆತ್ತು ಷೇರುದಾರರಾಗಲೇಬೇಕಾಯ್ತು. ನಿರಾಣಿಯೇ ನಿಂತು ಅಳಿಯನ ಸೊಸೈಟಿಯನ್ನು ಉದ್ಘಾಟಿಸಿದ್ದ.

ಇಷ್ಟಾಗಿದ್ದೇ ತಡ, ಇಂಗಳೆ ಮಾಸ್ತರನ ಗೆಟಪ್ಪೇ ಬದಲಾಯಿತು. ಮಂತ್ರಿ ಅಳಿಯನಾದ್ದರಿಂದ ಸಿಕ್ಕಸಿಕ್ಕವರಿಗೆಲ್ಲ ಸರ್ಕಾರಿ ನೌಕರಿ ಕೊಡಿಸ್ತೀನಿ ಎಂದು ಲಕ್ಷಗಟ್ಟಲೇ ದುಡ್ಡೆತ್ತತೊಡಗಿದ. ಲೋಕಸೇವಾ ಆಯೋಗ ತಾಂತ್ರಿಕ ಹುದ್ದೆ ಕೊಡಿಸ್ತೀನಿ ಎಂದು ಜಮಖಂಡಿಯ ಖಾಜಿ ಬೀಳಗಿಯ ಅಶೋಕ್ ಕಾಂಬ್ಳೆಯಿಂದ 2 ಲಕ್ಷ ಕಿತ್ತ. ಜಮಖಂಡಿ ಆಲಗೂರಿನ ಗದಿಗೆಪ್ಪ ಬೆಟಗೇರಿಯಿಂದ ನಾಲ್ಕು ಲಕ್ಷ, ಶಿರೋಳದ ಮಂಜುನಾಥ್ ಅಂಗಡಿಯಿಂದ 1 ಲಕ್ಷ ಕಿತ್ತ. ಅಬಕಾರಿ ಸಬ್ ಇನ್ಸ್‌ಪೆಕ್ಟರ್ ಕೆಲಸ ಕೊಡಿಸುತ್ತೇನೆಂದು ಜಮಖಂಡಿ ಸಿದ್ಧಾಪುರದ ಎಂ.ವೈ. ನಾವಿಯಿಂದ 1 ಲಕ್ಷ, ಹೊನ್ನೂರಿನ ವಿನಾಯಕ ಗಂಗೊಳ್ಳಿಯಿಂದ 50 ಸಾವಿರ, ಸಂಜೀವ ದೇಸಾಯಿಯಿಂದ 50 ಸಾವಿರ, ಮುಧೋಳದ ಪಾಲಾಕ್ಷ ಹಾರೋಬಿಡಿಯಿಂದ 2 ಲಕ್ಷ, ಶಿರೋಳದ ಮಂಜುನಾಥ್ ಅಂಗಡಿಯಿಂದ 2 ಲಕ್ಷ, ತಿಕೋಟಾದ ರಂಗಪ್ಪ ಕಳಸದನಿಂದ 3 ಲಕ್ಷ, ಬಿಜಾಪುರದ ಕುಂಬಾರಹಳ್ಳಿಯ ವಿಜಯ್ ಮಠಪತಿಯಿಂದ 4 ಲಕ್ಷ ವಸೂಲಿ ಮಾಡಿಕೊಂಡ.

ಇದು ಅಬಕಾರಿ ಸಬ್ ಇನ್ಸ್‌ಪೆಕ್ಟರ್ ಹುದ್ದೆಯ ಬಾಬತ್ತಾದರೆ ಪೊಲೀಸ್ ಕೆಲಸ ಕೊಡಿಸ್ತೀನಿ ಎಂದು ಬೀಳಗಿ ಇಮಾಂಸಾಬ್‌ನಿಂದ 1 ಲಕ್ಷ, ಜಮಖಂಡಿ ಪಡಸಲಗಿಯ ಕಲ್ಯಾಣಿಯಿಂದ 1 ಲಕ್ಷ, ಜಮಖಂಡಿಯ ಬಡಿಗೇರ್ ಕಲ್ಲಪ್ಪನಿಂದ 50 ಸಾವಿರ, ಜಮಖಂಡಿಯ ಆಸಾಮಿ ಜಗದೀಶ್ ಕರಾದಿ ಎಂಬಾತನಿಂದ 5 ಲಕ್ಷ ಪೀಕಿದ್ದ. ಈ ರೀತಿ ಕೆಲಸ ಕೊಡಿಸ್ತೀನಿ ಎಂದು ಸುಲಿದ ರೊಕ್ಕವನ್ನೆಲ್ಲ ಎಕ್ಸಂಬಾದ ಬೀರೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ. ಮತ್ತು ಜಮಖಂಡಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಪತ್ನಿಯ ಜಂಟಿ ಖಾತೆಗೆ ಜಮಾಯಿಸಿದ್ದ. ಸಾಲದ್ದಕ್ಕೆ ಗೂಂಡಾಗಿರಿಯನ್ನೂ ಶುರು ಹಚ್ಚಿಕೊಂಡ. ಜಮಖಂಡಿಯ ಇನಾಂದಾರ್ ಪೆಟ್ರೋಲ್ ಬಂಕನ್ನು ತನ್ನ ಹೆಸರಿಗೆ ಬರೆದುಕೊಡು ಎಂದು ಅದರ ಮಾಲೀಕನಿಗೆ ಧಮಕಿ



ಹಾಕುತ್ತಿದ್ದ. ನೀಲಕಂಠಪ್ಪ ಕಲ್ಮೇಶ್ ಅನಂತ್ ಪೂರ್ ಎಂಬ ಪೊಲೀಸ್ ಎಎಸ್‌ಐನಿಂದ ಸಾಲ ಪಡೆದು ವಾಪಸ್ಸು ಕೊಡದೆ ಬೆದರಿಸಿದ್ದ. ಮಂಜುಳಾ ಹುಬ್ಬಳ್ಳಿ ಎಂಬ ಶಿಕ್ಷಕಿಯ ನೌಕರಿ ಖಾಯಂ ಮಾಡ್ತೀನಿ ಎಂದು ಓಡಾಡಿಸಿ ವಂಚಿಸಿದ್ದ.

ಸಾಲದ್ದಕ್ಕೆ ನಿರಾಣಿ ಅಳಿಯನಿಗೆ ಮೈತುಂಬಾ ಚಟ. ಪ್ರತಿ ರಾತ್ರಿ ಕಂಠಮಟ್ಟ ಕುಡಿಯಲೇಬೇಕು. ಹೆಂಗಸರ ಖಯಾಲಿ ಕೂಡ ನಿರಾಣಿಯಷ್ಟಲ್ಲದಿದ್ದರೂ ಜಮಖಂಡಿಯ ಮಟ್ಟಿಗೆ ವಿಪರೀತವೆಂಬಂತೆ ಇತ್ತು. ಈ ಮಧ್ಯೆ ಬಾಂಬೆಗೆ ಹೋಗಿ ಬಂದವನು ಐಷಾರಾಮಿ ಕಾರೊಂದನ್ನು ತಂದವನೇ 'ಇದು ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ನನಗೆಂದು ಗಿಫ್ಟಾಗಿ ಕೊಟ್ಟ ಕಾರು! ಆಕೆ ನನಗೆ ಕ್ಲೋಸ್‌ಫ್ರೆಂಡು. ಈಗಷ್ಟೇ ಆಕೆಯಿಂದ ಫೋನ್ ಬಂದಿತ್ತು. ಬಾಂಬೆಗೆ ಬಾ ಅಂತ ಪೀಡಿಸ್ತಾಳೆ" ಎಂದೆಲ್ಲ ರೈಲು ಬಿಡುತ್ತಿದ್ದ.

ಬಹುಶಃ ಇದು ನಿರಾಣಿಯಿಂದ ಅಂಟಿದ ಸಾಂಕ್ರಾಮಿಕವೆಂದು ಗೇಲಿ ಮಾಡಿದ ಜಮಖಂಡಿ ಮಂದಿಗೆ ಇಂಗಳೆ ಮಾಸ್ತರ್ ಹಾಸ್ಯದ ಐಟಮ್ಮಾಗಿದ್ದ. ಒಂದೆಡೆ ನೌಕರಿಗೆಂದು ಲಕ್ಷಗಟ್ಟಲೆ ರೊಕ್ಕ ಕೊಟ್ಟಿದ್ದವರ ಒತ್ತಾಯ, ಮತ್ತೊಂದೆಡೆ ಸೊಸೈಟಿಯ ಷೇರುದಾರರ ಒತ್ತಡ, ಮಗದೊಂಡೆ ಕಾರು-ಕರಿಮಣಿ ಶೋಕಿಯಲ್ಲೇ ಮುಳುಗಿದ ಬಸವರಾಜ್ ಇಂಗಳೆ ತನ್ನೆಲ್ಲಾ ವಂಚನೆಗೆ ಮಂತ್ರಿ ನಿರಾಣಿಯನ್ನೇ ರಾಜಾರೋಷವಾಗಿ ಬಳಸಿಕೊಂಡಿದ್ದ.

ಇದೆಲ್ಲದರ ಮಧ್ಯೆಯೇ ಬಸವರಾಜ್ ಇಂಗಳೆಯ ಅನಿರೀಕ್ಷಿತ ಸಾವೂ ಸಂಭವಿಸಿತು. ಬಿಜೆಪಿಯ ಅಧಿಕಾರ ಮತ್ತು ನಿರಾಣಿಯ ಮಂತ್ರಿಗಿರಿಯ ಮುಂದೆ ಅಳಿಯನ ಸಾವು ಸುತ್ತ ತಲೆ ಎತ್ತಿದ ಪ್ರಶ್ನೆಗಳೂ ಮುಚ್ಚಿಹೋದವು. ಇಂಗಳೆ ಮಾಸ್ತರನಿಂದ ವಂಚಿತರಾದ ಕೆಲವರಿಗೆ ಮಂತ್ರಿ ನಿರಾಣಿ ಮತ್ತು ತಮ್ಮ ಹಣವಂತ ಸೇರಿಕೊಂಡು ಬಾಕಿಯನ್ನೂ ತೀರಿಸಿದರು. ಆದರೆ ಎಷ್ಟು ಜನಕ್ಕೆ ತೀರಿಸುತ್ತಾರೆ?

ದುಡ್ಡು ಕಳಕೊಂಡ ಕೆಲ ಮಂದಿ ನಿರಾಣಿಯ ತಂಗಿ ಮಾದೇವಿಯನ್ನು ಕೇಳಿದರೆ ಆಕೆ ಅಣ್ಣ ನಿರಾಣಿಯತ್ತ ಕೈ ಮಾಡುತ್ತಾಳೆ. ನಿರಾಣಿಯನ್ನು ಹುಡುಕಿಕೊಂಡು ಬೆಂಗಳೂರಿಗೆ ಬಂದರೆ ಎಲ್ಲೆಂದು ಹುಡುಕುವ ಹೊತ್ತಿಗೇ ತಂದ ಕಾಸು ಖಾಲಿಯಾಗಿರುತ್ತದೆ. ಇನ್ನು ತಮ್ಮ ಹಣಮಂತ ನಿರಾಣಿಯನ್ನು ಕೇಳಿದರೆ ಆತನ ರೌಡಿ ಗ್ಯಾಂಗ್ ತಿರುಗಿಬೀಳುತ್ತದೆ. ಇಂಥ ತಾಪತ್ರಯಕ್ಕೆ ಸಿಲುಕಿದ್ದ ನಿರಾಣಿ ಅಳಿಯನ ಬಲಿಪಶುಗಳಿಗೀಗ ಏಕಾಏಕಿ ಅವಕಾಶ ಕೂಡಿಬಂದದ್ದು ಚುನಾವಣೆಯಿಂದ.

ಲಕ್ಷಗಟ್ಟಲೇ ಕಳಕೊಂಡವನೊಬ್ಬ ವಿಷದ ಬಾಟಲು ಹಿಡಿದು ನಿರಾಣಿಯ ಮನೆಯೆದುರು ನಿಂತಿದ್ದಾನೆ. ನೌಕರಿಯ ಆಮಿಷಕ್ಕೆ ಬಿದ್ದು ಮನೆ ಮಾರಿಕೊಂಡವನೊಬ್ಬ ನಿರಾಣಿಯ ಹೆಸರು ಬರೆದಿಟ್ಟು ನೇಣು ಹಾಕಿಕೊಳ್ಳುತ್ತೇನೆಂದು ಎದೆ ಬಡಿದುಕೊಳ್ಳುತ್ತಿದ್ದಾನೆ. ಅಳಿಯನಿಂದ ಬೀದಿಗೆ ಬಿದ್ದವರ ಪೈಕಿ ಒಂದು ಗುಂಪು ಪ್ರಚಾರಕ್ಕೆಂದು ಬರುವ ನಿರಾಣಿಯ ಕಾಲಿಗೆ ಬಿದ್ದು ಕಣ್ಣೀರಿಡುವ ದೃಶ್ಯ ಎಂಥವರ ಮನಸ್ಸನ್ನೂ ಕಲಕುತಿತ್ತು.

ಬೀಳಗಿಗೆ ಬೇರೇನು ಮಾಡದೇ ಹೋದರೂ ತನ್ನನ್ನು ಮುಂದಿಟ್ಟುಕೊಂಡು ಅಳಿಯ ಮಾಡಿದ ಮೋಸಕ್ಕೆ ಬಲಿಯಾದವರಿಗೆ ಕನಿಷ್ಠ ಸಮಾಧಾನ ಹೇಳುವುದಕ್ಕೂ ನಿರಾಣಿಗೆ ಕಷ್ಟವೆ?

ಕೊಂದ ಪಾಪಕ್ಕೆ ತಿಂದು ಪರಿಹಾರ ಎಂಬಂತೆ ಅಳಿಯನ ಪಾಪದ ಪಾಲು ಬೇಕು. ಅದಕ್ಕೆ ಬಲಿಯಾದವರ ಕಣ್ಣೀರು ಕಾಣುವುದಿಲ್ಲವೆ? ಅಥವಾ ನಿರಾಣಿಯ ಪಾಪದ ಕೊಡವೇ ತುಂಬಿ ಬಂದಿದೆ?

• ರಾ.ಸೋಮನಾಥ್

32 ಸಾವಿರ ನಕಲಿ ಮತದಾರರೇ ಇಲ್ಲವಾದರೆ...?

ಒಂದಲ್ಲ ಎರಡು ಬಾರಿ ಬೀಳಗಿಗೆ ಶಾಸಕರಾಗಿದ್ದ ಜೆ.ಟಿ. ಪಾಟೀಲ್ ಬಿರಾದಾರ್ ಅವರು ಶಾಸಕರಾಗಿದ್ದಾಗ ವಿಚಿತ್ರ ಘೋಷಣೆಯೊಂದನ್ನು ಹೊರಡಿಸಿದ್ದರು. ತಮ್ಮ ಇಡೀ ಕ್ಷೇತ್ರದ ಯಾವುದೇ ಹಳ್ಳಿಯ ರಸ್ತೆಗೆ ಎಲ್ಲೆ ಗುಣಿ ಬಿದ್ದದ್ದು ಅಥವಾ ಡಾಂಬರ್ ಕಿತ್ತು ಹೋಗಿದ್ದನ್ನು ಯಾರೇ ತೋರಿಸಿ ಕೊಟ್ಟರೂ ಅವರಿಗೆ 500 ರೂಪಾಯಿ ಬಹುಮಾನ!

ಇದು ಮಾಜಿ ಶಾಸಕ ಜೆ.ಟಿ. ಪಾಟೀಲ್ ಬೀಳಗಿಯನ್ನು ಎಷ್ಟೊಂದು ಪ್ರೀತಿಸಿದ್ದರು ಮತ್ತು ಮತದಾರರಿಗೆ ಎಷ್ಟು ನಿಯತ್ತಾಗಿದ್ದರೆಂಬುದಕ್ಕೆ ಒಂದು ಉದಾಹರಣೆ ಮಾತ್ರ. ಮತ್ತು ಬೀಳಗಿಯ 110 ಹಳ್ಳಿಗಳ ಯಾವುದೇ ರಸ್ತೆಯಲ್ಲಿ ಪಾಟ್‌ಹೋಲ್ ಕಾಣಿಸುತ್ತಿರಲಿಲ್ಲ, ಡಿಗ್ರಿ ಕಾಲೇಜು ಬಂತು. ಸರ್ಕಾರಿ ಕಚೇರಿಗಳಲ್ಲಿ ಲಂಚವಿರಲಿಲ್ಲ. ದುರಂತವೆಂದರೆ ರಸ್ತೆ ಅಪಘಾತವೊಂದಕ್ಕೆ ಸಿಲುಕಿದ ಜೆ.ಟಿ. ಪಾಟೀಲ್ ಶಾಸಕರಾಗಿದ್ದಾಗಲೇ ಕಾಲು ಮುರಕೊಂಡು ಒಂದೂವರೆ ವರ್ಷ ಹಾಸಿಗೆ ಹಿಡಿದರು.

ಶಾಸಕ ಪಾಟೀಲ್ ಹಾಸಿಗೆ ಹಿಡಿದದ್ದೇ, ಇದನ್ನೇ ಕಾದು ಕೂತವನಂತೆ ಕಾರಸ್ಥಾನಕ್ಕಿಳಿದ ನಿರಾಣಿ ಎಲ್ಲೆಲ್ಲಿಂದಲೋ, ಯಾರ್‍ಯಾರನ್ನೋ ಕರೆತಂದು ಬೀಳಗಿಯಲ್ಲಿ ನಕಲಿ ಮತದಾರರನ್ನು ಸೃಷ್ಟಿಸಿಬಿಟ್ಟ. ಇಂಥ ನಕಲಿ ಮತದಾರರನ್ನು ಬಳಸಿಕೊಂಡೇ ಚುನಾವಣೆಯನ್ನೂ ಗೆದ್ದ. ಶುರುವಿನಲ್ಲಿ ನಿರಾಣಿಯನ್ನು ಜನರೇ ಗೆಲ್ಲಿಸಿದ್ದಾರೆಂದು ಭಾವಿಸಿದ್ದ ಜೆ.ಟಿ. ಪಾಟೀಲರಿಗೆ ಕಾರಸ್ಥಾನದ ಅರಿವಾಗುವ ಹೊತ್ತಿಗೆ ನಿರಾಣಿ ಮಂತ್ರಿಯಾಗಿದ್ದ. ಆಗ ಜಿಲ್ಲಾಧಿಕಾರಿಯಾಗಿದ್ದ ಶಿವಶೈಲಮ್‌ಗೆ ಪಾಟೀಲ್ ದೂರೊಂದನ್ನು ಕೊಟ್ಟು ಇಡೀ ಬೀಳಗಿಯುದ್ದಕ್ಕೂ ಸರಿಸುಮಾರು 25,000 ನಕಲಿ ಮತದಾರರಿದ್ದಾರೆಂದೂ ಅವರನ್ನು ಪತ್ತೆಹಚ್ಚಿ ಹೊಸ ಮತಪಟ್ಟಿ ತಯಾರಿಸಬೇಕೆಂದು ಒತ್ತಾಯಿಸಿದರು.

ಆದರೆ ಜಿಲ್ಲಾಧಿಕಾರಿ ಶ್ರೀಶೈಲಂ ನಡೆಸಿದ ಮತದಾರರ ಸಮೀಕ್ಷೆಯಿಂದ ಅದಕ್ಕಿಂತಲೂ ಭಯಾನಕ ಸತ್ಯ ಹೊರಬಿದ್ದಿತ್ತು. ನಕಲಿ ಮತದಾರರ ಒಟ್ಟು ಸಂಖ್ಯೆ 25,000 ಮಾತ್ರವೇ ಆಗಿರಲಿಲ್ಲ. ಒಟ್ಟು 32,000 ನಕಲಿ ಮತದಾರರಿದ್ದರು. ನಿರಾಣಿ ಆ ಮಟ್ಟಿಗೆ ಅಕ್ರಮವೆಸಗಿದ್ದ!

ಈಗ ಬೀಳಗಿ ಮತಪಟ್ಟಿಯಿಂದ ನಿರಾಣಿ ಸೇರಿಸಿದ್ದ ಈ ಮೂವತ್ತೆರಡು ಸಾವಿರ ಮತದಾರರ ಹೆಸರುಗಳೆಲ್ಲವನ್ನೂ ಕಿತ್ತು ಹಾಕಲಾಗಿದೆ. ಉಳಿದವರೆಲ್ಲ ಅಸಲಿ ಮತದಾರರು ಮಾತ್ರ. ಇದು ಗೊತ್ತಾಗಿಯೇ ತನ್ನ ಬುಡಕ್ಕೆ ಬೆಂಕಿಬಿದ್ದಂತೆ ಆಘಾತಕ್ಕೆ ಬಿದ್ದ ನಿರಾಣಿ ಪಕ್ಕದ ಜಮಖಂಡಿಗಾಗಿ ಪಟ್ಟುಹಿಡಿದದ್ದು!

ಪಾಪಿ ದುಡ್ಡು ಪ್ರಾಯಶ್ಚಿತ್ತಕ್ಕಲ್ಲದೆ ಇನ್ಯಾತಕ್ಕೆ?

ರಂಜನೆ | ಬೋಧನೆ | ಪ್ರತೋದನೆ ಲಂಕೇಶ್

ದಾವಣಗೆರೆ ಜಿಲ್ಲೆ 'ಕೈ' ಹಿಡಿಯುವರೆ ಲಿಂಗಾಯತರು?

ರಾಜ್ಯದ ಮಧ್ಯ ಭಾಗದಲ್ಲಿರುವ ದಾವಣಗೆರೆ ಜಿಲ್ಲಾ ರಾಜಕಾರಣದ ವೈಖರಿಯೇ ವಿಚಿತ್ರವಾದದ್ದು. ದಾವಣಗೆರೆ ಹಳೇ ಮೈಸೂರು ಭಾಗವಾದರೂ ಉತ್ತರ ಕರ್ನಾಟಕದ ಸಾಂಸ್ಕೃತಿಕ ಸೊಗಡು ಹೊಂದಿರುವ ಜಿಲ್ಲೆ.

ಕರ್ನಾಟಕ ರಾಜಕಾರಣಕ್ಕೆ ಎಸ್.ನಿಜಲಿಂಗಪ್ಪ ಕೊಂಡಜ್ಜಿ ಬಸಪ್ಪ ಬಸವಲಿಂಗಪ್ಪ ಸಿದ್ದವೀರಪ್ಪ ಗಾಂಜೀವೀರಪ್ಪ ಬಳ್ಳಾರಿ ಸಿದ್ದಮ್ಮ, ಕಾಂ.ಪಂಪಾಪತಿ, ಜೆ.ಹೆಚ್.ಪಟೇಲ್‌ರಂಥಾ ದಿಗ್ಗಜರನ್ನು ನೀಡಿದ ಜಿಲ್ಲೆಯಿದು. ಮೈಸೂರು ಭಾಗದ ಒಕ್ಕಲಿಗರ ಪ್ರಭಾವದ ಎದುರು ಇಲ್ಲಿನ ಲಿಂಗಾಯತರ ರಾಜಕಾರಣ ಸವಾಲಾಗಿ ಬೆಳೆಯುತ್ತಾ ಹೋಗಿದೆ.

ಹಾಗೆ ನೋಡಿದರೆ ಈಗಲೂ ಈ ಜಿಲ್ಲೆಯ ಹರಿಹರ, ಚನ್ನಗಿರಿ, ದಾವಣಗೆರೆ ದಕ್ಷಿಣ ಮತ್ತು ಉತ್ತರ ಹಾಗೂ ಹೊನ್ನಾಳಿ ವಿಧಾನಸಭಾ ಕ್ಷೇತ್ರಗಳು ಲಿಂಗಾಯತರ ಕೈಯಲ್ಲಿವೆ. ಜಗಳೂರು ಮತ್ತು ಮಾಯಕೊಂಡ ಕ್ಷೇತ್ರಗಳು ಎಸ್.ಟಿ. ಮತ್ತು ಎಸ್.ಸಿ. ಮೀಸಲಾತಿ ಕ್ಷೇತ್ರಗಳಾಗಿದ್ದರೂ ಇಲ್ಲೂ ಲಿಂಗಾಯತರೇ ನಿರ್ಣಾಯಕ.


ಸ್ವಾತಂತ್ರ್ಯಾನಂತರದಲ್ಲಿ ನಡೆದ ಚುನಾವಣೆಗಳೆಲ್ಲ ಕಾಂಗ್ರೆಸ್ ಪರವಾಗಿದ್ದವು. ಆದರೆ 80ರ ದಶಕದಲ್ಲಿ ಜನತಾ ಪಕ್ಷದ ಪ್ರಭಾವ ಹೆಚ್ಚಾಗಿತ್ತು. 90ರ ದಶಕದಲ್ಲಿ ಮತ್ತೆ ಕಾಂಗ್ರೆಸ್ ತಲೆ ಎತ್ತಿತ್ತು, ಆದರೆ 2008 ರ ಚುನಾವಣೆ ಕರ್ನಾಟಕದ ರಾಜಕಾರಣವನ್ನೇ ಅಡ್ಡದಾರಿಗೆ ತಂದು ನಿಲ್ಲಿಸಿದಂತೆ ಈ ಜಿಲ್ಲೆಯನ್ನೂ ಕೋಮುವಾದಿ ಬಿಜೆಪಿಗಳ ಕೈಗಿಟ್ಟಿತ್ತು. ಕಳೆದ ಬಾರಿಯ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರ ಒಂದನ್ನು ಬಿಟ್ಟರೆ ಉಳಿದ ಏಳೂ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿತ್ತು, ಅದಕ್ಕೆ ಕಾರಣ ಮತ್ತದೇ ಲಿಂಗಾಯತರ ಪ್ರಾಮುಖ್ಯತೆ. ಆದರೆ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಆಧಿಪತ್ಯ ಮೆರೆಯುವ ಲಕ್ಷಣಗಳಿವೆ.

ದಾವಣಗೆರೆ ಉತ್ತರ ಮತ್ತು ದಕ್ಷಿಣ


ದಾವಣಗೆರೆ ಉತ್ತರ ಮತ್ತು ದಕ್ಷಿಣ ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣೆಯ ಜಿದ್ದಿಗೆ ಜೀವ ಬಂದದ್ದೇ 16ರ ಮಧ್ಯರಾತ್ರಿಯಿಂದ. ದಕ್ಷಿಣ ಕ್ಷೇತ್ರದಿಂದ ಶಾಮನೂರು ಶಿವಶಂಕರಪ್ಪನವರಿಗೆ ಕಾಂಗ್ರೆಸ್ ದೊರೆಸಾನಿ ಸೋನಿಯಾ ಗಾಂಧಿ ಎರಡನೆ ಪಟ್ಟಿಯಲ್ಲಿ ಹಸಿರು ನಿಶಾನೆ ತೋರಿಸಿದರೆ ಹೊರತು ಉತ್ತರ ಕ್ಷೇತ್ರದಿಂದ ಶಾಮನೂರರ ಪುತ್ರ ಮಾಜಿ ಮಂತ್ರಿ ಮಲ್ಲಿಕಾರ್ಜುನರಿಗೆ ಟಿಕೆಟು ನಿರಾಕರಿಸಲಾಗಿತ್ತು. ಅಷ್ಟೇ ಅಲ್ಲ, ಚನ್ನಗಿರಿಯಲ್ಲಿ ಟಿಕೆಟು ವಂಚಿತರಾಗಿದ್ದ ಮಹಿಮಾ ಪಟೇಲರಿಗೆ ಉತ್ತರದ ಟಿಕೆಟು ನೀಡುವ ಪ್ರಯತ್ನ ನಡೆದಿತ್ತು.

ಯಾವಾಗ ಚನ್ನಗಿರಿ ಕ್ಷೇತ್ರದಿಂದ ವಡ್ನಾಳು ರಾಜಣ್ಣನಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿತೋ ಆಗಲೇ ಮಹಿಮಾ ಪಟೇಲ್ ಚುನಾವಣೆಯಲ್ಲಿ ಸ್ಪರ್ಧಿಸುವ ಗುಂಗಿನಿಂದ ಹೊರಬಂದು ಚೆನ್ನೈ ದಾರಿ ಹಿಡಿದುಬಿಟ್ಟದ್ದರು. ಅವರ ಉದ್ದೇಶ ಯಾರ ಪರವೂ, ವಿರೋಧವೂ ಬೇಡವಾಗಿ ಅದ್ಯಾವುದೋ ಆಧ್ಯಾತ್ಮಿಕ ರೆಸಾರ್ಟಿನಲ್ಲಿ ರೆಸ್ಟ್ ಪಡೆಯುವುದಾಗಿತ್ತು. ಆದರೂ ಮಹಿಮಾ ಪಟೇಲರನ್ನು ಚೆನ್ನೈನಿಂದ ವಾಪಾಸು ಕರೆಸಿ ದಾವಣಗೆರೆ ಉತ್ತರ ಕ್ಷೇತ್ರದಿಂದ ಚುನಾವಣಾ ಕಣಕ್ಕೆ ಇಳಿಸುವ ಉಮೇದಿನಲ್ಲಿತ್ತು ಕಾಂಗ್ರೆಸ್ ಹೈಕಮಾಂಡ್.


ಮಹಿಮಾ ಪಟೇಲರನ್ನು ದಾವಣಗೆರೆ ಉತ್ತರ ಕ್ಷೇತ್ರದಿಂದ ಕಣಕ್ಕಿಳಿಸುವ



ರವೀಂದ್ರನಾಥ್



ಎಸ್.ಎಸ್. ಮಲ್ಲಿಕಾರ್ಜುನ್



ಶಾಮನೂರು ಶಿವಶಂಕರಪ್ಪ

ನಿರ್ಧಾರವೇ ಎಡವಟ್ಟಿನದಾಗಿತ್ತು. ಮಹಿಮಾ ಪಟೇಲರಿಗೆ ದಾವಣಗೆರೆಯಲ್ಲಿ ರಕ್ತಸಂಬಂಧಿಗಳಿದ್ದಾರೆಯೇ ಹೊರತು ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವಷ್ಟು ಬೆಂಬಲಿಗರಿಲ್ಲ, ಜೊತೆಗೆ ಮಹಿಮಾ ಪಟೇಲ್ ಈ ಮತಕ್ಷೇತ್ರಕ್ಕೆ ಹೊಸಬ.

ಮಹಿಮಾರಿಗೆ ಟಿಕೆಟ್ ಎಂಬ ಸುದ್ದಿ ಗೊತ್ತಾಗುತ್ತಿದ್ದಂತೆ ದೇವನಗರಿಯಲ್ಲಿ ಕಾಂಗ್ರೆಸ್ ವಿರುದ್ಧದ ಬಂಡಾಯ ಭುಗಿಲೆದ್ದಿತು. ದೆಹಲಿ ಹೈಕಮಾಂಡಿನ ತೀರ್ಮಾನವೇ ಕಾರ್ಯಕರ್ತರಲ್ಲಿ ಗೊಂದಲ ಹುಟ್ಟು ಹಾಕಿತು. ಸಾವಿರಾರು ಕಾರ್ಯಕರ್ತರು ಸಭೆ ನಡೆಸಿ ಮಲ್ಲಿಕಾರ್ಜುನರನ್ನು ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಸುವ ತೀರ್ಮಾನ ತೆಗೆದುಕೊಂಡರು. ಜೊತೆಗೆ ಹರಪನಹಳ್ಳಿ ಮತ್ತು ಹೊನ್ನಾಳಿ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಟಿಕೆಟ್ ಪಡೆದಿದ್ದ ಅಭ್ಯರ್ಥಿಗಳು ಚುನಾವಣೆಯ ಕಣದಿಂದ ಹಿಂದೆ ಸರಿಯುವ ಬೆದರಿಕೆ ಹಾಕಿದರು. ಅಷ್ಟೇ ಅಲ್ಲ, ದಾವಣಗೆರೆ ಮಹಾನಗರ ಪಾಲಿಕೆಯ 40 ಜನ ಕಾಂಗ್ರೆಸ್ ಕಾರ್ಪೊರೇಟರುಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಲು ಮುಂದಾದರು.

17 ನಾಮಪತ್ರ ಸಲ್ಲಿಸಲು ಕೊನೆಯ ದಿನವಾದರೂ ಕಾಂಗ್ರೆಸ್ ಟಿಕೆಟು ಅಖೈರಾಗಿರಲಿಲ್ಲ, ಕಾರ್ಯಕರ್ತರು ಆರಂಭಿಸಿದ ಬಂಡಾಯಕ್ಕೆ ಮಣಿದು 16ರ ಮಧ್ಯರಾತ್ರಿ ಮಹಿಮನ ಬದಲಿಗೆ ಮಲ್ಲಿಕಾರ್ಜುನರಿಗೆ ಟಿಕೆಟು ನೀಡಿತು. ಒಂದೇ ಕುಟುಂಬದ ಇಬ್ಬರಿಗೆ ಟಿಕೆಟ್ ನಿರಾಕರಿಸುವ ರಾಹುಲ್ ಗಾಂಧಿಯ ಫಾರ್ಮುಲಾ ಮಕಾಡೆ ಮಲಗಿದ್ದೇ ಆಗ.

ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಶಿವಶಂಕರಪ್ಪ ಕಾಂಗ್ರೆಸ್‌ನಿಂದ ಸ್ಪರ್ಧಿಸಿದರೆ, ಕಾಂಗ್ರೆಸ್ ಟಿಕೆಟ್ ವಂಚಿತರಾದ ಸೈಯದ್ ಸೈಫುಲ್ಲರಿಗೆ ಜೆಡಿಎಸ್ ಟಿಕೆಟ್ ನೀಡಿದೆ. ಬಿಜೆಪಿಯಿಂದ ಬಿ. ಲೋಕೇಶ್ ಟಿಕೆಟು ಪಡೆದಿದ್ದಾರೆ.

ಈ ಕ್ಷೇತ್ರದಲ್ಲಿ 40 ಸಾವಿರ ಮುಸ್ಲಿಮ್ ಮತಗಳಿರುವುದರಿಂದ ಸೈಯದ್ ಸೈಫುಲ್ಲಾ ಚುನಾವಣಾ ಕಣದಲ್ಲಿರುವುದು ಶಿವಶಂಕರಪ್ಪನವರಿಗೆ ನಡುಕ ಹುಟ್ಟಿಸಿರುವುದು ನಿಜ. ಆದರೆ ಶಿವಶಂಕರಪ್ಪನವರ ಜಾತ್ಯತೀತ ರಾಜಕಾರಣವನ್ನು ಮೆಚ್ಚುವ ಮುಸಲ್ಮಾನರೂ ಇಲ್ಲಿದ್ದಾರೆ. ಆದ್ದರಿಂದ ಮುಸ್ಲಿಮರ 20ರಷ್ಟು ಮತಗಳು ಸಿಕ್ಕರೂ ಶಿವಶಂಕರಪ್ಪ ಗೆಲ್ಲುತ್ತಾರೆ.

ಬಿಜೆಪಿಯ ಲೋಕೇಶ್ ಯಾವ ನಿಟ್ಟಿನಲ್ಲೂ ಶಿವಶಂಕರಪ್ಪನವರಿಗೆ ಸವಾಲಲ್ಲ, ಅವರದೇ ರಾಜಕೀಯ ಗರಡಿಯಲ್ಲಿ ತಾಲೀಮು ಮಾಡಿ ಲೋಕೇಶ್ ಕಳೆದ ಮಹಾನಗರ ಪಾಲಿಕೆ ಚುನಾ ಸಮಯದಲ್ಲಿ ಬಿಜೆಪಿಗೆ ಹಾರಿಹೋದವರು. ಈತ ಕ್ಷೇತ್ರಕ್ಕೆ ಹೊಸಬ. ಜೊತೆಗೆ ಇಲ್ಲಿ ಬಿಜೆಪಿ ಮತಗಳ ಒಂದಷ್ಟು ಕೆಜೆಪಿ ಪಾಲಾಗುವುದೂ ಕಾಂಗ್ರೆಸ್‌ಗೆ ಲಾಭದಾಯ ಆದ್ದರಿಂದ ಶಿವಶಂಕರಪ್ಪ ಮುಸ್ಲಿಂ ಮತಗಳನ್ನು ಅದೆಷ್ಟರಮಟ್ಟ ಸೆಳೆಯುತ್ತಾರೆನ್ನುವುದರ ಮೇಲೆ ಅವರ ಗೆಲುವು ನಿಂತಿ

ಉತ್ತರದಿಂದ ತಡವಾಗಿಯಾದರೂ ಕಾಂಗ್ರೆಸ್ ಟಿಕೆ ಪಡೆದಿರುವ ಮಲ್ಲಿಕಾರ್ಜುನ ಮತ್ತು ಬಿಜೆಪಿಯ ತರಕಾ ಮಂತ್ರಿ ರವೀಂದ್ರ ನಡುವೆ ಜಿದ್ದಾಜಿದ್ದಿನ ಸಮರ ನಡೆಯಲಿ

ಇವರಿಬ್ಬರ ನಡುವೆ ಕೆಜೆಪಿ 'ಜನತಾವಾಣಿ' ದಿನಪತ್ರಿಕೆ ಸಂಪಾದಕ ವಿಕಾಸನಿಗೆ ಟಿಕೆಟ್ ಕೊಟ್ಟಿದೆ. ಅಪ್ಪ ದಿವಂ ಷಡಾಕ್ಷರಪ್ಪನವರ ನಂತರ 'ಜನತಾವಾಣಿ' ಪತ್ರಿಕೆಯ ಹೊಣೆ ಹೊತ್ತಿರು ವಿಕಾಸ್ ರಾಜಕಾರಣ ಹುನ್ನಾರಗಳನ್ನು ಅರಿಯದ ಬಾಲಕ.

ಈ ಕ್ಷೇತ್ರದಲ್ಲಿ ಸಾಧುಲಿಂಗಾಯತರ ಮತಗಳಿಗೆ ಸರಿಸಮನಾಗಿ ಹಿಂದುಳಿ ದಲಿತ ಮತ್ತು ಅಲ್ಪಸಂಖ್ಯಾತರ ಮತಗಳಿವೆ. ಬಿಜೆಪಿ ಮತ್ತು ಕೆಜೆಪಿ ನಡು ಹಲವು ಲಿಂಗಾಯತ ಮತಗಳ ಹಂಚಿಕೆಯಾದರೂ ಮಲ್ಲಿಕಾರ್ಜುನರಿಗೆ ಸಾಕಷ್ಟು ಲಿಂಗಾಯತ ಮತಗಳು ಬೀಳುತ್ತವೆ. ಜೊತೆಗೆ ಇತರೆ ಸಮುದಾಯಗ ಬೆಂಬಲ ಸಿಕ್ಕರಂತೂ ಅವರ ಗೆಲುವು ಸುಲಭ.

ಹರಿಹರ

ಹರಿಹರದಲ್ಲಿ ಚುನಾವಣೆ ನಡೆಯುವುದು ಜಾತಿ ಆಧಾರದ ಮೇಲೆ ಇಲ್ಲಿ ಕುರುಬರ ಮತ್ತು ವೀರಶೈವರ ಮತಗಳು ಸರಿಸಮನಾಗಿರುವುದರಿಂ ಇಲ್ಲಿ ಈ ಎರಡೂ ಸಮುದಾಯಗಳ ನಡುವೆ ರಾಜಕೀಯ ಜಿದ್ದಿ ನಡೆಯುತ್ತ ಆದರೂ ಇಲ್ಲಿ ನಿರ್ಣಾಯಕ ಪಾತ್ರ ವಹಿಸುವುದು ಮುಸ್ಲಿಂ ಮತ್ತು ದಲಿ ಮತಗಳು.

ಕಳೆದ ಚುನಾವಣೆಯಲ್ಲಿ ಬೆರಳೆಣಿಕೆಯಷ್ಟು ಮತಗಳಿಂದ ಬಿಜೆಪಿಯಿಂ ಗೆದ್ದಿದ್ದ ಹರೀಶ್ ಈಗ ಕೆಜೆಪಿ ಸೇರಿದ್ದಾರೆ. ಈತ ಶಾಸಕರಾಗಿದ್ದಾಗ ಮಾಡಿದ ಬರೀ ಜಾತಿರಾಜಕಾರಣ. ಜೊತೆಗೆ ತುಂಗಭದ್ರಾ ನದಿಯಲ್ಲಿ ಮರಳು ಮಾಫಿಯಾ ಕುಮ್ಮಕ್ಕು ಕೊಟ್ಟದ್ದು ಮತ್ತು ತನ್ನನ್ನು ಗೆಲ್ಲಿಸಿದ್ದ ಕ್ಷೇತ್ರವನ್ನು ನಿರ್ಲಕ್ಷಿಸಿದ ಎರಡೂ ಈಗ ಮೈನಸ್ ಪಾಯಿಂಟ್‌ಗಳಾಗಿವೆ. ಈಗ ಈತ ಯಡ್ಡಿಯ ಪಲ್ಲಕ್ಕಿ ಹೊತ್ತಿದ್ದರೂ ಗೆಲುವು ಕಷ್ಟಸಾಧ್ಯ ಎಂಬ ಪರಿಸ್ಥಿತಿ ಇದೆ.


ಹರೀಶ್ ಗುಡ್‌ಬೈ ಹೇಳಿದ್ದರಿಂದ ಬಿಜೆಪಿ ಎಸ್.ಎಂ.ವೀರೇಶ್ ಎಂಬುವವರಿಗೆ ಟಿಕೆಟ್ ನೀಡಿದೆ. ಇವರು ಈ ಹಿಂದೆ ಜಿಲ್ಲಾ ಪಂಚಾಯತಿಯ ಅಧ್ಯಕ್ಷರಾಗಿದ್ದವರು. "ಬಿಜೆಪಿ ಪರವಾಗಿ ನಾನು ಸ್ಪರ್ಧಿಸುತ್ತೇನೆ" ಎನ್ನು ದನಿಗಳೇ ಈ ಕ್ಷೇತ್ರದಲ್ಲಿ ಇಲ್ಲದಾಗಿರುವಾಗ ವೀರೇಶ್ ಬಿಜೆಪಿಗೆ ಅನಿವಾಯ ಅಭ್ಯರ್ಥಿಯಾಗಿದ್ದಾರೆ.

ಮಾಜಿ ಮಂತ್ರಿ ಡಾ.ವೈ.ನಾಗಪ್ಪನವರನ್ನು ದೂರ ಸರಿಸಿರುವ ಕಾಂಗ್ರೆ ಎಸ್.ರಾಮಪ್ಪ ಅವರಿಗೆ ಟಿಕೆಟ್ ನೀಡಿದೆ. ನಾಗಪ್ಪ ಮತ್ತು ರಾಮಪ್ಪ ಇಬ್ಬರು ಕುರುಬ ಸಮುದಾಯದವರಾದರೂ ರಾಮಪ್ಪ ಇನ್ನೂ ನಾಗಪ್ಪನವರಂತೆ ತ ಸಮುದಾಯದ ಮೇಲೆ ಹಿಡಿತ ಸಾಧಿಸಿಲ್ಲ.

ಜೆಡಿಎಸ್ ಪರವಾಗಿ ಶಿವಶಂಕರ್ ಸ್ಪರ್ಧಿಸಿದ್ದಾರೆ. ರಾಜಕೀಯ ಹಿನ್ನೆಲೆಯ ಕುಟುಂಬದವರಾದ ಶಿವಶಂಕರ್ ಒಂದು ಅವಧಿಗೆ ಪದವೀಧರ ಕ್ಷೇತ್ರದಿಂ ಗೆದ್ದು ಬಂದಿದ್ದರು. ಅವರ ತಂದೆ ಮಾಜಿ ಮಂತ್ರಿ ಹೆಚ್.ಶಿವಪ್ಪನವರ ರಾಜಕೀಯ ಪ್ರಭಾವವೂ ಶಿವಶಂಕರ್ ಅವರಿಗೆ ಸಹಕರಿಸಲಿದೆ.

ಸಾದರು ಮತ್ತು ಬಣಜಿಗ ಲಿಂಗಾಯತರ ನಡುವಿನ ಜಿದ್ದಿನ ರಾಜಕಾರ

ಸುರಪುರ: ದೊರೆಗಳ ನಾಡಿನಲ್ಲಿ ನಾಯಕರ ದರ್ಬಾರು



ವೆಂಕಟಪ್ಪ ನಾಯಕ

ದೊರೆಗಳ ಸಂಸ್ಥಾನ ಸುರಪುರದಲ್ಲಿ ನಾಯಕರ ದರ್ಬಾರು ಮುಂದುವರೆದಿದೆ. ಭಯಾನಕ ಉರಿ ಬಿಸಿಲಿನ, ಬೇಸಿಗೆಯಲ್ಲಿ ಬೆಂಕಿಯುಂಡೆಯಂತಾಗುವ ಬಂಡೆಗಳ, ಹಸಿರೇ ಕಾಣಸಿಗದ ಬೋಳು ಬೆಟ್ಟಗಳಿಂದ ಸುತ್ತುವರೆದಿರುವ ಈ ನಾಡನ್ನು ಆ ನಾಯಕ ಜನಾಂಗದ ದೊರೆಗಳು ಅದು ಹೇಗೆ ಪಳಗಿಸಿಕೊಂಡರೋ ಗೊತ್ತಿಲ್ಲ, ಶತಮಾನಗಳ ಕಾಲ ಆಳಿದ ನಾಯಕ ಜನಾಂಗದ ಹಿಡಿತದಿಂದ ಇನ್ನೂ ದೂರ ಸರಿದಿಲ್ಲ.


1982ರಲ್ಲಿ ನಡೆದ ಮೊಟ್ಟ ಮೊದಲ ಚುನಾವಣೆಯಲ್ಲಿ ಇಲ್ಲಿನ ಬಹುಸಂಖ್ಯಾತ ಕುರುಬ ಸಮುದಾಯದ ಮಲ್ಲಪ್ಪ ಕೋಳೂರು ಆಯ್ಕೆಯಾದದ್ದು ಬಿಟ್ಟರೆ, 1957ರಿಂದ ಇಂದಿನವರೆಗೂ ಆ ಕ್ಷೇತ್ರ ನಾಯಕ ಜನಾಂಗಕ್ಕೆ ಮೀಸಲಾಗಿದೆ. 2.23 ಲಕ್ಷ ಮತದಾರರಿರುವ ಈ ಕ್ಷೇತ್ರದಲ್ಲಿ 60,000ದಷ್ಟಿರುವ ಕುರುಬರು ಮತ್ತು 52 ಸಾವಿರದಷ್ಟಿರುವ ನಾಯಕ ಜನಾಂಗದವರೇ ನಿರ್ಣಾಯಕ. ಇಂತಹ ಮತಕ್ಷೇತ್ರದಲ್ಲಿ ಪ್ರತಿಸಾರಿ ಪಕ್ಷಗಳಿಗಿಂತ ವ್ಯಕ್ತಿಗಳ ಮಧ್ಯದ ಹಣಾಹಣಿಯೇ ತೀವ್ರವಾಗಿರುತ್ತದೆ. ಈ ಸಾರಿ ಕೂಡ ಒಂದೇ ಜನಾಂಗಕ್ಕೆ ಸೇರಿದ ರಾಜುಗೌಡ (ನರಸಿಂಹ ನಾಯಕ), ವೆಂಕಟಪ್ಪ ನಾಯಕ ಹಾಗು ಮದನಗೋಪಾಲ ನಾಯಕರ ಮಧ್ಯ ತೀವ್ರ ಪೈಪೋಟಿ ಇದೆ.

ಹಾಲಿ ಶಾಸಕನಾಗಿರುವ ರಾಜುಗೌಡ ಬಿಜೆಪಿ ಸರಕಾರದಲ್ಲಿ ಮಂತ್ರಿಯಾಗಿದ್ದವರು. ಈಗ ಜೆಡಿಎಸ್‌ನಿಂದ ಕಣದಲ್ಲಿದ್ದಾರೆ. ಇವರದೊಂದು ವಿಶೇಷವೆಂದರೆ ಜಿಲ್ಲಾ ಪಂಚಾಯತಿ ಸದಸ್ಯರಾಗಿ ರಾಜಕೀಯ ಅಖಾಡಕ್ಕಿಳಿದ ಇವರು ಮೊಟ್ಟಮೊದಲ ವಿಜಯಸಂಕೇಶ್ವರ ಸ್ಥಾಪಿಸಿದ್ದ ಕನ್ನಡನಾಡು ಪಕ್ಷದಿಂದ ಗೆದ್ದು ಆ ಪಕ್ಷದ ಏಕೈಕ ಶಾಸಕರಾಗಿದ್ದರು. ನಂತರ ಕರ್ನಾಟಕದಲ್ಲಿ ಚಲಾವಣೆಯಲ್ಲಿದ್ದ ಎಲ್ಲ ಪಕ್ಷಗಳಲ್ಲೂ ಸುತ್ತಾಡಿ ಕಳೆದ ಬಾರಿ ಬಿಜೆಪಿ ಶಾಸಕನಾಗಿ ಮಂತ್ರಿ ಕೂಡ ಆಗಿದ್ದರು. ಈಗ ಮತ್ತೆ ಪಕ್ಷ ಬದಲಿಸಿ ಜೆಡಿಎಸ್‌ನಿಂದ ರಣಕ್ಕಿಳಿದಿದ್ದಾರೆ. ಈಗ ಇವರಿಗೆ ತೀವ್ರವಾದ ಸ್ಪರ್ಧೆ ಒಡ್ಡುತ್ತಿರುವುದು ಕಾಂಗ್ರೆಸ್‌ನ ವೆಂಕಟಪ್ಪ ನಾಯಕ. ಬಿಜೆಪಿಯಿಂದ ಸಭ್ಯ, ಸರಳ ವ್ಯಕ್ತಿತ್ವದ ಮಾಜಿ ಸಚಿವ ಮದನಗೋಪಾಲ ನಾಯಕ ಸ್ಪರ್ಧಿಸಿದ್ದಾರೆ. ಆದರೆ ಬಿಜೆಪಿಯ ನೆಲೆ ಇಲ್ಲಿ ಅಷ್ಟಕ್ಕಷ್ಟೇ. ಹಾಗಾಗಿ ಈ ಬಾರಿ ಜೆಡಿಎಸ್ ಹಾಗು ಕಾಂಗ್ರೆಸ್ ಮಧ್ಯ ತೀವ್ರ ಹಣಾಹಣಿ ನಡೆಯಲಿದೆ.

ರಾಜುಗೌಡನಿಗೆ ಹಿನ್ನೆಡೆ

ಸುರಪುರ ಕ್ಷೇತ್ರವನ್ನು ಬೇರೆ ಬೇರೆ ಪಕ್ಷಗಳಿಂದ ಅನೇಕ ಸಾರಿ ಪ್ರತಿನಿಧಿಸಿರುವ ರಾಜುಗೌಡ ನಡೆಸಿದ ಭ್ರಷ್ಟಾಚಾರ, ದಬ್ಬಾಳಿಕೆಯಿಂದಾಗಿ ಈ ಸಾರಿ ಇಲ್ಲಿನ ಜನರ ಪ್ರತಿರೋಧ ಹೆಚ್ಚಾಗಿದೆ. ಅಭಿವೃದ್ಧಿ ಕೆಲಸಗಳೂ ಅಷ್ಟಕ್ಕಷ್ಟೇ. ಬಿ.ಎಂ.ಹಳ್ಳಿಕೋಟೆ, ಎಸ್.ಸಿ.ಪಾಟೀಲ, ಯಲ್ಲಪ್ಪ ಕುರಕುಂದಿಯಂತಹ ಕೆಲವೇ ಕೆಲವು ತನ್ನ ಹಿಂಬಾಲಕರಿಗೆ ಸರಕಾರಿ ಗುತ್ತಿಗೆ ಕಾಮಗಾರಿಗಳನ್ನು ನೀಡಿ ಕಮಿಷನ್ ವಸೂಲಿ ಮಾಡಿಕೊಂಡದ್ದನ್ನು ಬಿಟ್ಟರೆ ಬೇರೆ ಯಾವ ಕಾರ್ಯಕರ್ತರಿಗೂ ಇವರಿಂದ ಉಪಕಾರವಾಗಿಲ್ಲ. ಕಳೆದ ಚುನಾವಣೆಯಲ್ಲಿ ನೀಡಿದ್ದ ಭಾರೀ ಪ್ರಮಾಣದ ಆಶ್ವಾಸನೆಗಳೆಲ್ಲ ಬರೀ ಆಶ್ವಾಸನೆಗಳಾಗಿ ಮಾತ್ರ ಉಳಿದಿವೆ. ಇನ್ನೂ ಸದಾ ನೀರಿನ ಕೊರತೆಯಿಂದ ಬಳಲುವ ಈ ಭಾಗದ ರೈತರಿಗೆ ನೀರು ಒದಗಿಸುವ ಯಾವ ಕಾರ್ಯಗಳೂ ಆಗಿಲ್ಲ.

ಇವೆಲ್ಲ ಕಾರಣಗಳಿಂದಾಗಿ ಇಲ್ಲಿನ ಮತದಾರರು ಕಳೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ಮೂಲಕ ರಾಜುಗೌಡನಿಗೆ ಸೋಲಿಸುವ ಸೂಚನೆಯನ್ನು ನೀಡಿದ್ದಾಗಿದೆ. ಇಲ್ಲಿನ ತಾಲ್ಲೂಕು ಪಂಚಾಯತಿಯ 31 ಸದಸ್ಯರಲ್ಲಿ 18 ಜನ ಕಾಂಗ್ರೆಸ್ ಸದಸ್ಯರಿದ್ದು ತಾ.ಪಂ. ಕಾಂಗ್ರೆಸ್ ಕೈಯಲ್ಲಿದೆ. ಇನ್ನು ಜಿಲ್ಲಾ ಪಂಚಾಯತಿಯ 8 ಸದಸ್ಯರ ಪೈಕಿ 5 ಜನ ಕಾಂಗ್ರೆಸ್‌ನವರಿದ್ದಾರೆ. ಎಪಿಎಂಸಿಯಲ್ಲೂ 19 ಜನ ನಿರ್ದೇಶಕರಲ್ಲಿ 11 ಜನ ಕಾಂಗ್ರೆಸ್‌ನವರಾಗಿದ್ದರೆ 8 ಜನ ಬಿಜೆಪಿಯವರಿದ್ದಾರೆ. ಮೊನ್ನೆ ನಡೆದ ಸ್ಥಳೀಯ ಸಂಸ್ಥೆಗಳ



ರಾಜು ಗೌ

ಚುನಾವಣೆಯಲ್ಲಿ 27ರಲ್ಲಿ 15 ಕಾಂಗ್ರೆಸ್ ಪಾಲಾದ ರಾಜುಗೌಡ ಬೆಂಬಲಿತರು ಗೆದ್ದದ್ದು 11 ಜನ ಮಾತ್ರ ಇದು ರಾಜುಗೌಡನ ಹಿನ್ನೆಡೆಗೆ ಕಾರಣವಾದರೆ ಕಾಂಗ್ರೆಸ್ ವೆಂಕಟಪ್ಪ ನಾಯಕನ ಪಾಲಿಗೆ ವರವಾಗುವ ಸಾಧ್ಯತೆ ಇದೆ ಇದಲ್ಲದೆ ವೆಂಕಟಪ್ಪ ನಾಯಕ ಮೊನ್ನೆ ಪಾದಯಾತ್ರೆ ಮಾಡಿ ಡ್ಯಾಂನಿಂದ ನೀರು ಬಿಡಿಸಿಕೊಂಡು ಬಂದಿರುವುದು ಜನರ ಮೆಚ್ಚುಗೆಗೆ ಕಾರಣವಾಗಿದೆ. ಈ ಎಲ್ಲ ಕಾರಣಗಳಿಗಾಗಿ ರಾಜುಗೌಡನ ಸೋಲು ಮತ್ತು ವೆಂಕಟಪ್ಪ ನಾಯಕನ ಗೆಲುವು ಖಾತ್ರಿಯಾದಂತಾಗಿದೆ.

– ಮಹಾಲಿಂಗಪ್ಪ ಆಲಬಾಳ

ನಲೂ ಮಾಶಿಲ್ಲ. ಈಗ ಈ ಎರಡೂ ಸಮುದಾಯಗಳಿಗೆ ಪೋಟಿ ನೀಡುತ್ತಿರುವುದು ಕುರುಬ ಸಮುದಾಯ. ಗಾಗಿಯೇ ಕ್ಷೇತ್ರದಲ್ಲಿ ಯಾರು ಗೆದ್ದರೂ ಬೆರಳೆಣಿಕೆ ಮತಗಳ ತರದಿಂದ ಮಾತ್ರ.

ಸದ್ಯದ ಚುನಾವಣಾ ಹಣಾಹಣಿಯಲ್ಲಿ ಪೈಪೋಟಿ ವುದು ಜೆಡಿಎಸ್‌ನ ಶಿವಶಂಕರ್ ಮತ್ತು ಕಾಂಗ್ರೆಸ್‌ನ ಮಪ್ಪ ನಡುವೆ. ಕುರುಬರ ಮತಗಳು ಕದಲದೆ ಮಪ್ಪನವರಿಗೆ ಬಿದ್ದರೆ ಕಾಂಗ್ರೆಸ್ ಈ ಕ್ಷೇತ್ರದಲ್ಲಿ ದುಕೊಂಡಿರುವ ಅಸ್ತಿತ್ವವನ್ನು ಮತ್ತೆ ಗಳಿಸಬಹುದು.

ಜಗಳೂರು

ಈ ಕ್ಷೇತ್ರದಲ್ಲಿ ಚುನಾವಣೆಗೆ ಇಳಿದಿರುವ ಜನ ಒಂದು ಯಲ್ಲಿ ಮಕ್ಕಳ 'ಮ್ಯೂಸಿಕಲ್ ಚೇರ್' ಆಟದಲ್ಲಿರುವಂತೆ ವಾಗುತ್ತದೆ. ಯಾಕೆಂದರೆ ಕಳೆದ ಬಾರಿ ಕಾಂಗ್ರೆಸ್‌ನಿಂದ ದ್ದ ಆನಂತರ ಆಪರೇಷನ್ ಕಮಲಕ್ಕೆ ತುತ್ತಾಗಿ ಬಿಜೆಪಿ ಾಗಿದ್ದ ರಾಮಚಂದ್ರ ಮತ್ತೊಮ್ಮೆ ಪಕ್ಷಾಂತರ ಮಾಡಿ ಯಡ್ಡಿಯ ಕೆಜೆಪಿ ಅಭ್ಯರ್ಥಿಯಾಗಿದ್ದಾರೆ. ಇವರಿಗೆ ಪೋಟಿ ನೀಡುತ್ತಿರುವವರು ಕಳೆದ ಬಾರಿ ಬಿಜೆಪಿಯ ರ್ಥಿಯಾಗಿದ್ದ ಆದರೀಗ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿರುವ .ಪಿ.ರಾಜೇಶ್.

ಈ ರಾಜೇಶ್ ಈಗ ಜೈಲಿನಲ್ಲಿರುವ ಖದೀಮ ಅರಣ್ಯ ಕಾರಿ ಮುತ್ತಯ್ಯನ ಖಾಸಾ ಅಳಿಯ. ಮುತ್ತಯ್ಯ ಈಗ ಎಣಿಸುತ್ತಿದ್ದರೂ ಮೊಳಕಾಲ್ಮೂರು ಮತ್ತು ಜಗಳೂರಿನ ಕಾರಣದಲ್ಲಿ ಕೈಯಾಡಿಸುತ್ತಿದ್ದಾನೆ.

ರಾಜೇಶನನ್ನು ಜಗಳೂರಿನ ಮತದಾರ ಎರಡು ಬಾರಿ ಕಚ್ಚಿಸಿದ್ದಾನೆ. ಆದರೂ ಈಗ ಮೂರನೆ ಬಾರಿಗೆ ಗಿಳಿದಿದ್ದಾನೆ. ಕಳ್ಳ ಮಾವನಿಂದ ಬಂದು ಜಮೆಯಾದ ಟಿ ರೊಕ್ಕ ರಾಜೇಶನ ರಾಜಕೀಯ ಠೇಂಕಾರವನ್ನೇ ಹೆಚ್ಚಿಸಿದೆ. ಾನ್ಯ ಜನರ ನಡುವೆ ಬೆರೆಯದ ರಾಜೇಶ್ ವೈಟ್‌ಕಾಲರ್ ುದಾಯದ ಚಕ್ರವರ್ತಿಯಂತೆ ವರ್ತಿಸುತ್ತಾನೆ. ರಾಜೇಶ್ ಂಚಂದ್ರನಷ್ಟು ಸರಳ ವ್ಯಕ್ತಿತ್ವದವನಲ್ಲ ಎನ್ನುವುದೇ ಇವನ ಸ್.

ಹಾಗೆ ನೋಡಿದರೆ ಶಾಸಕ ಎಸ್.ವಿ.ರಾಮಚಂದ್ರಪ್ಪನ ನೆ ರಾಜೇಶನ ವರ್ತನೆಗೆ ತದ್ವಿರುದ್ಧವಾದದ್ದು. ಂಚಂದ್ರಪ್ಪನ 'ಹಂಬಲ್' ವರ್ತನೆಯೇ ಜನರ ಮನಸ್ಸು ತ್ತದೆ. ಇವರು ಶಾಸಕರಾದ ನಂತರ ಜಗಳೂರು ಚಮಟ್ಟಿಗೆ ಉದ್ಧಾರವಾಗಿದೆ.

ಎಸ್.ಟಿ. ಮೀಸಲು ಕ್ಷೇತ್ರವಾದ ಜಗಳೂರಿನಲ್ಲಿ ಾಯತರು ನಿರ್ಣಾಯಕ ಪಾತ್ರವಹಿಸುತ್ತಾರೆ. ಹರಪನಹಳ್ಳಿ ನಲ್ಲಿ ಬರುವ ಪಂಚಮಸಾಲಿ ಲಿಂಗಾಯತರ ಮತಗಳನ್ನು ಂಚಂದ್ರಪ್ಪ ಬಾಚುವ ಲಕ್ಷಣಗಳಿವೆ.

2008ರ ಚುನಾವಣೆಯಲ್ಲಿ ಜಾರಕೀಹೊಳಿಯ ಬೀಗ ೀಕೆರೆಯ ದೇವೇಂದ್ರಪ್ಪ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ತಿದ್ದರು. ಈಗ ಕಾಂಗ್ರೆಸ್ ರಾಜೇಶನಿಗೆ ಟಿಕೆಟ್ ್ಟಿರುವುದು ಸಹಜವಾಗಿಯೇ ದೇವೇಂದ್ರಪ್ಪನವರನ್ನು ಿಸಿದೆ. ಅದಕ್ಕೆ ಅವರೀಗ ರಾಮಚಂದ್ರಪ್ಪನವರ ಗೆಲುವಿಗೆ ರಿಸುತ್ತಿದ್ದಾರೆ. ಇದು ರಾಜೇಶನಲ್ಲಿ ನಡುಕ ಹುಟ್ಟಿಸಿದೆ.


ಇಲ್ಲಿ ಬಿಜೆಪಿಯಿಂದ ಡಾ. ಅರುಣಕುಮಾರ ನಿಂತಿದ್ದರೂ ು ಆಟಕ್ಕುಂಟು ಲೆಕ್ಕಕ್ಕಿಲ್ಲ. ಇಲ್ಲಿ ಯಡ್ಡಿ ಪ್ರಭಾವ ್ಪುದರಿಂದ ಲಿಂಗಾಯತರ ಮತಗಳು ಕೆಜೆಪಿಗೆ ಒಲಿಯುವ ಚಾರವಿದೆ. ಅದೇನೇ ಇದ್ದರೂ ಮತದಾರರು ಬಿಜೆಪಿಯ ದ್ಧ ಇರುವುದೇ ಕೆಜೆಪಿಯ ಅದೃಷ್ಟ ಎಂಬ ಸ್ಥಿತಿ ಇದೆ.

ಹರಪನಹಳ್ಳಿ


ಮಾಜಿ ಮಂತ್ರಿ ಕರುಣಾಕರ ರೆಡ್ಡಿ ಮತ್ತೆ ಬಿಜೆಪಿಯಿಂದ ಳಿದಿದ್ದಾನೆ. ಈ ಬಾರಿಯ ಚುನಾವಣೆ ರೆಡ್ಡಿಯ ರಾಜಕೀಯ ್ಯವನ್ನೇ ಬುಡಮೇಲು ಮಾಡುವ ಲಕ್ಷಣಗಳಿವೆ. ಐದು ಶಾಸಕನಾಗಿದ್ದ-ಮಂತ್ರಿಯಾಗಿದ್ದ ಕರುಣಾಕರ ಕ್ಷೇತ್ರದ ಿನ ಮಾಡಿದ್ದು ಅಪರೂಪ. ಹರಪನಹಳ್ಳಿಯಲ್ಲಿ ಅವನ ಾಗಳದ್ದೇ ದುರಾಡಳಿತ ಮತ್ತು ದರ್ಬಾರು. ಇದು ದಾರರನ್ನು ಕೆರಳಿಸಿದೆ.

ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಎಂ.ಪಿ.ರವೀಂದ್ರ ಗೆಲುವಿನ ್ಚಿದ್ದಾರೆ. ಅವರ ತಂದೆ ದಿವಂಗತ ಎಂ.ಪಿ.ಪ್ರಕಾಶರ ಕೀಯ ಮುತ್ಸದ್ದಿತನದ ಪ್ರಭಾವ ರವೀಂದ್ರರಿಗೆ ರಿಯಾಗುತ್ತದೆ ಎಂಬ ತರ್ಕವಿದೆ. ಆದರೂ ಅದ್ಯಾಕೋ ದೊಡ್ಡ ಸಮುದಾಯವಾದ ಪಂಚಮಸಾಲಿ ಲಿಂಗಾಯತರು ದ್ರರನ್ನು ಒಪ್ಪಿದಂತೆ ಕಾಣುತ್ತಿಲ್ಲ.


ಈ ಕ್ಷೇತ್ರ ಉದಯವಾದಾಗಿನಿಂದ ಪಂಚಮಸಾಲಿಗಳು ಬಹುಸಂಖ್ಯಾತರಾದರೂ ತಮ್ಮ ಸಮುದಾಯದವರು ದ ಗೆದ್ದಿಲ್ಲ ಎಂಬ ಕೊರಗು ಅವರಲ್ಲಿದೆ. ಇದನ್ನೇ ಾಗಿ ಪರಿವರ್ತಿಸಲು ಯಡಿಯೂರಪ್ಪ ಕೆಜೆಪಿ ಟಿಕೆಟ್ ಪಂಚಮಸಾಲಿ ಲಿಂಗಾಯತರ ಕೊಟ್ರೇಶನಿಗೆ ಪಾಲಿಸಿದ್ದಾರೆ. ಈ ಕೊಟ್ರೇಶ ರಾಜಕಾರಣಕ್ಕೆ ಹೊಸಬ. ಗ ಪುಡಿ ರಾಜಕಾರಣ ಮಾಡಿದವನು. ಆತನ ಕೈಯಲ್ಲಿ ರುವ ಕಾರಣಕ್ಕೆ ಆತನಿಗೆ ಯಡ್ಡಿ ಟಿಕೆಟ್ ನೀಡಿದ್ದಾರೆ ಗುಮಾನಿ ಜನರಲ್ಲಿದೆ.




ಬಿ.ಪಿ. ಹರೀಶ್




ರಾಮಚಂದ್ರಪ್ಪ




ಕರುಣಾಕರ ರೆಡ್ಡಿ




ಎಂ.ಪಿ. ರವೀಂದ್ರ



ವಡ್ನಗೆರೆ ರಮೇಶ್



ವಿರೂಪಾಕ್ಷಪ್ಪ



ರೇಣುಕಾಚಾರ್ಯ

ಅಜಮಾಸ 50 ಸಾವಿರ ಚಿಲ್ಲರೆ ಮತಗಳಿರುವ ಪಂಚಮಸಾಲಿ ಲಿಂಗಾಯತರು ಮನಸ್ಸು ಮಾಡಿದರೆ ಕೊಟ್ರೇಶಿಯನ್ನು ಆಯ್ಕೆ ಮಾಡಬಹುದಾದರೂ ಅಂತಹ ಸಾಧ್ಯತೆಗಳು ಕಮ್ಮಿ ಇವೆ. ಯಾಕೆಂದರೆ ಇಲ್ಲಿ ಜಾತಿರಾಜಕಾರಣವನ್ನು ವಿರೋಧಿಸುವ ಹಲವು ಹಳೆಯ ತಲೆಮಾರಿನ ಹಿರಿಯ ರಾಜಕಾರಣಿಗಳಿದ್ದಾರೆ, ಪ್ರಕಾಶರ ಒಡನಾಡಿಗಳಿದ್ದಾರೆ. ಪ್ರಕಾಶರ ಒಳ್ಳೆಯತನ ಮತ್ತು ಜನಪರ ಕಾಳಜಿಯನ್ನು ಮೆಚ್ಚಿದ್ದವರೂ ಇಲ್ಲಿದ್ದಾರೆ. ಇವೆಲ್ಲ ರವೀಂದ್ರರಿಗೆ ಪ್ಲಸ್ ಪಾಯಿಂಟ್ ಆಗಲಿವೆ.

ಬಿಜೆಪಿಯ ಕರುಣಾಕರನ ದುರಹಂಕಾರ, ಕೆಜೆಪಿಯ ಕೊಟ್ರೇಶನ ಅನನುಭವದ ಜೊತೆಗೆ ಕಾಂಗ್ರೆಸ್ ಕಾಯಂ ಮತಗಳು ಜಮೆ ಆದರೆ ಕಾಂಗ್ರೆಸ್‌ನ ರವೀಂದ್ರರ ಗೆಲುವು ಸ್ಪಷ್ಟ ಎಂಬ ವಾತಾವರಣವಿದೆ.

ಚನ್ನಗಿರಿ

ಇದು ವಿಚಿತ್ರ ರಾಜಕೀಯ ರಂಗು ಪಡೆದಿರುವ ಕ್ಷೇತ್ರ. ಕಳೆದ ಬಾರಿ ಬಿಜೆಪಿಯಿಂದ ಗೆದ್ದಿದ್ದ ಮಾಡಾಳು ವಿರುಪಾಕ್ಷಪ್ಪ ಈಗ ಕೆಜೆಪಿ ಕ್ಯಾಂಡಿಡೇಟ್ ಆಗಿ ಕಣಕ್ಕಿಳಿದಿದ್ದಾರೆ. ವಿರುಪಾಕ್ಷಪ್ಪ ಸ್ವತಃ ಒಳ್ಳೆಯವರಾದರೂ ಅವರ ಪುತ್ರ ರತ್ನ ಮಲ್ಲಿಕಾರ್ಜುನ ತಂದೆಯ ರಾಜಕೀಯ ಭವಿಷ್ಯಕ್ಕೆ ಶಾಪವಾಗುವಂತೆ ವರ್ತಿಸಿ ಜನರ ಆಕ್ರೋಶಕ್ಕೆ ಗುರಿಯಾಗಿದ್ದಾನೆ.

ಮಹಿಮಾ ಪಟೇಲ್ ಮತ್ತು ವಡ್ನಾಳು ರಾಜಣ್ಣರ ನಡುವೆ ಕಾಂಗ್ರೆಸ್ ಟಿಕೆಟ್‌ಗಾಗಿ ಸಮರ ನಡೆದು ಈಗ ಮಹಿಮಾ ಔಟಾಗಿದ್ದಾರೆ. ಕಾಂಗ್ರೆಸ್ ಕೂಡ ಈ ಕ್ಷೇತ್ರದಲ್ಲಿರುವ ಸಾಧು ಲಿಂಗಾಯತರ ಮತಗಳ ಮೇಲೆ ಕಣ್ಣಿಟ್ಟು ರಾಜಣ್ಣರಿಗೆ ಟಿಕೆಟು ನೀಡಿದೆ.

ಬಿಜೆಪಿಯಿಂದ ಎಸ್.ಎನ್.ಶಿವಕುಮಾರ್ ಕಣದಲ್ಲಿದ್ದಾರೆ. ಕೆಜೆಪಿಯ ಮಾಡಾಳು ವಿರುಪಾಕ್ಷಪ್ಪ ಮತ್ತು ಕಾಂಗ್ರೆಸ್‌ನ ವಡ್ನಾಳು ರಾಜಣ್ಣರಂತೆ ಈ ಬಿಜೆಪಿಯ ಶಿವಕುಮಾರ್ ಕೂಡ ಲಿಂಗಾಯತರು. ಕಾಂಗ್ರೆಸ್ ಟಿಕೆಟ್ ವಂಚಿತ ಮಹಿಮನ ಗುಂಪು ಒಳಗೊಳಗೇ ರಾಜಣ್ಣರ ವಿರುದ್ಧ ಕೆಲಸ ಮಾಡುವ ಸೂಚನೆಗಳಿವೆ. ಇವರಿಬ್ಬರ ಜಿದ್ದಾಜಿದ್ದು, ಜೊತೆಗೆ ಕೆಜೆಪಿ ಮತ್ತು ಬಿಜೆಪಿ ನಡುವೆ ಹಂಚಿಹೋಗಲಿರುವ ಲಿಂಗಾಯತ ಮತಗಳ ನಡುವೆ ಗೆಲುವು ಸಾಧಿಸಲು ಜೆಡಿಎಸ್‌ನ ಹೊದಿಗೆರೆ ರಮೇಶ್ ಕಾಯುತ್ತಿದ್ದಾರೆ.

ಒಂದೆಡೆ ಮೂವರು ಲಿಂಗಾಯತ ಅಭ್ಯರ್ಥಿಗಳ ನಡುವೆ ಆ ಸಮುದಾಯದ ಮತಗಳು ಹಂಚಿ ಹೋಗಿ, ಇನ್ನೊಂದೆಡೆ ಇಲ್ಲಿರುವ ದಲಿತರು, ನಾಯಕರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದವರ ಮತಗಳು ಜೆಡಿಎಸ್‌ನ ಕಡೆ ಮುಖಮಾಡಿದರೆ ರಮೇಶನಿಗೆ ಲಾಭವಾಗುವುದು ಗ್ಯಾರಂಟಿ.

ಹೊನ್ನಾಳಿ

ರೇಣುಕಾಚಾರ್ಯನಂತಹ ಐಲು ಆಸಾಮಿಯನ್ನು ಕಳೆದ ಬಾರಿ ಗೆಲ್ಲಿಸಿ ರಾಜ್ಯದ ಜನರ ನಗೆಪಾಟಲಿಗೀಡಾಗಿದ್ದ ಹೊನ್ನಾಳಿ ಈ ಸಾರಿ ಆ ಅವಮಾನದಿಂದ ಪರಿಹರಿಸಿಕೊಳ್ಳುವ ತವಕದಲ್ಲಿದೆ. ಒಂದೆಡೆ ರೇಣುಕನ ಕಿಸ್ಸಿಂಗ್ ಪುರಾಣ, ಇನ್ನೊಂದೆಡೆ ಆತನ ದುರಾಡಳಿತದಿಂದ ಜನ ಬೇಸತ್ತಿದ್ದಾರೆ. ಜೊತೆಗೆ ಆತನ ಸಹೋದರರ ದರ್ಬಾರು ಜನರನ್ನು ಕೆರಳಿಸಿದೆ.

ರೇಣುಕಾಚಾರ್ಯ ಅಬಕಾರಿ ಮಂತ್ರಿ ಆದ ನಂತರವಂತೂ ಕ್ಷೇತ್ರದ ತುಂಬಾ ಹೆಂಡದ ಹೊಳೆಯನ್ನೇ ಹರಿಸಿದ್ದಾನೆ. ಅದಲ್ಲದೆ ಚುನಾವಣಾ ಪೂರ್ವದಿಂದಲೂ ಯಾವ ಕಾನೂನಿಗೂ ಅಂಜದೆ ಸೀರೆ, ಪಂಚೆ, ನತ್ತುಗಳನ್ನು ಹಂಚಿದ್ದಾನೆ. ತಾನು ಅಕ್ರಮವಾಗಿ ಗಳಿಸುವ ಹಣದಲ್ಲಿ ಸ್ವಲ್ಪ ಪಾಲನ್ನು ಕ್ಷೇತ್ರದಲ್ಲಿ ಹಂಚುವ ಮೂಲಕ ಮತ್ತೆ ಗೆಲ್ಲುವ ದುರಾಶೆಯಲ್ಲಿದ್ದಾನೆ ರೇಣುಕಾಚಾರ್ಯ. ಒಂದು ಅಂದಾಜಿನ ಪ್ರಕಾರ ಆತ ಈಗಾಗಲೇ ಕ್ಷೇತ್ರದಲ್ಲಿ ಹತ್ತಾರು ಕೋಟಿ ರೊಕ್ಕ ವೆಚ್ಚ ಮಾಡಿದ್ದಾನೆ.

ಕಾಂಗ್ರೆಸ್‌ನಿಂದ ಮಾಜಿ ಶಾಸಕ ಶಾಂತನ ಗೌಡ ಸ್ಪರ್ಧಿಸಿದ್ದಾರೆ. ಶಾಂತನಗೌಡರ ಕುಟುಂಬಕ್ಕೆ ರಾಜಕೀಯ ಹಿನ್ನೆಲೆ ಇದೆ. ಅವರು ಪ್ರಬುದ್ಧ ರಾಜಕಾರಣಿಯಾದರೂ ಅವರ ಅಣ್ಣನ ಮಗ ಪಕ್ಷೇತರನಾಗಿ ಕಣಕ್ಕಿಳಿದಿರುವುದು ಅವರಿಗೆ ಸ್ವಲ್ಪ ಕಷ್ಟ ಕೊಡಲಿದೆ.


ಬಿಜೆಪಿಯಿಂದ ಡಾ.ರಾಜಕುಮಾರ ಪೈಪೋಟಿ ನೀಡುತ್ತಿದ್ದಾರೆ. ಇವರು ರಾಜಕಾರಣಕ್ಕೆ ಹೊಸಬರಾದರೂ ಅವರು ಕುರುಬ ಸಮುದಾಯದವರಾದ್ದರಿಂದ ಈಶ್ವರಪ್ಪ ಶಿಫಾರಸ್ಸು ಮಾಡಿ ಟಿಕೆಟ್ ಕೊಡಿಸಿದ್ದಾರೆ. ಆದರೆ ಜೆಡಿಎಸ್ ಕೂಡ ಅದೇ ಕುರುಬ ಸಮುದಾಯದ ಮಹೇಶ್ ಅವರನ್ನು ಕಣಕ್ಕಿಳಿಸಿದೆ.

ರೇಣುಕನನ್ನು ಮಾಜಿ ಮಾಡಿಯೇ ತೀರಬೇಕು ಎನ್ನುವ ಇಲ್ಲಿನ ಜನರ ನಿಲುವೇ ಶಾಂತನಗೌಡರಿಗೆ ಲಾಭವಾಗುವ ಲಕ್ಷಣಗಳಿವೆ.


• ಟಿ.ಎನ್.ಷಣ್ಮುಖ

ಗದಗ: ಶುದ್ಧನೀರು V/s ಕೊಳಚೆ ನೀರು


ಗದಗ ಕ್ಷೇತ್ರದಲ್ಲಿ ಇವತ್ತು ಕಾಂಗ್ರೆಸ್ ಗೆಲುವು ನಿಚ್ಚಳವಾಗಿದೆ ಎಂಬುದಕ್ಕೆ ಕಣದಲ್ಲಿರುವ ಇತರೆ ಪಾರ್ಟಿಗಳು ತೋರುತ್ತಿರುವ ವರ್ತನೆಯೇ ಸಾಕ್ಷಿಯಾಗಿದೆ. ಮೊನ್ನೆ ಮತ್ತು ನಿನ್ನೆ (15 ಮತ್ತು 16ನೇ ತಾರೀಖು) ಬಿಜೆಪಿ, ಕೆಜೆಪಿ, ಬಿಎಸ್‌ಆರ್ ಮತ್ತು ಜೆಡಿಎಸ್ ಪಕ್ಷಗಳ ಸ್ಥಳೀಯ ಘಟಕಗಳ ನಾಯಕರು ಲಯನ್ಸ್ ಕ್ಲಬ್‌ನಲ್ಲಿ ಸಭೆ ನಡೆಸಿ ಕಾಂಗ್ರೆಸ್‌ನ ಎಚ್.ಕೆ.ಪಾಟೀಲ್ ವಿರುದ್ಧ ಒಮ್ಮತದ ಅಭ್ಯರ್ಥಿಯನ್ನು ನಿಲ್ಲಿಸುವ ವಿಫಲ ಯತ್ನವನ್ನು ಮಾಡುವುದರ ಮೂಲಕ ಜನರ ಮುಂದೆ ನಗೆಪಾಟಲಿಗೀಡಾಗಿದ್ದಾರೆ. ಇದರರ್ಥ ಈಗಾಗಲೇ ಹಸ್ತದ ಎದುರು ಕೈ ಎತ್ತಿ ಸೋಲನ್ನು ಒಪ್ಪಿಕೊಂಡಿವೆ ಈ ಪಾರ್ಟಿಗಳು.



ಶಂಕಣ್ಣನವರ್



ಎಚ್.ಕೆ. ಪಾಟೀಲ್



ಶ್ರೀಶೈಲಪ್ಪ ಬಿದರೂರ

ಕಳೆದ ಚುನಾವಣೆಯಲ್ಲಿ ಬಿಜೆಪಿಯ ಶ್ರೀಶೈಲಪ್ಪ ಬಿದರೂರರ ಗೆಲುವಿಗೆ ಜಾತಿ ಮತ್ತು ಗಣಿಗಳ್ಳರ ದುಡ್ಡು ಕಾರಣವಾಗಿದ್ದವು. ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ಶ್ರೀರಾಮುಲು ಇಲ್ಲಿ ಒಂದಿಷ್ಟು ಹವಾ ಎಬ್ಬಿಸಿದ್ದ. ಗಾಂಧೀ, ಕೆ.ಚ್.ಪಾಟೀಲ್, ಪುಟ್ಟರಾಜ ಗವಾಯಿಗಳ ಮೂರ್ತಿ ಸ್ಥಾಪನೆಯನ್ನು ಅದ್ದೂರಿಯಾಗಿ ಮಾಡಿದ್ದ, ಸಾಮೂಹಿಕ ವಿವಾಹಗಳ ಹೆಸರಲ್ಲಿ ಜಾತ್ರೆ ಮಾಡಿದ್ದ, ಗಣಿ ಲೂಟಿಯ ದುಡ್ಡನ್ನು ಗುಡಿ ಗುಂಡಾರಗಳಿಗೆ ಹಂಚಿದ್ದ, ಚುನಾವಣೆ ವೇಳೆ ಕತ್ತಲ್ ರಾತ್‌ನಲ್ಲಿ ಯಥೇಚ್ಛವಾಗಿ ಹಣ, ಹೆಂಡ ಹರಿಸಿದ್ದ. ಇದೆಲ್ಲವನ್ನೂ 'ಅಭಿವೃದ್ಧಿ' ಎಂಬಂತೆ ಬಿಂಬಿಸಲಾಗಿತ್ತು, ಜೊತೆಗೆ ಲಿಂಗಾಯತರು ಬಿಜೆಪಿ ಪರವಾಗಿ ನಿಂತಿದ್ದರು. ಇಷ್ಟೆಲ್ಲ ಇದ್ದರೂ ರೋಣ ತಾಲೂಕಿನ ಶ್ರೀಶೈಲಪ್ಪ ಬಿದರೂರ ಎಂಬ ಪಂಚಮಸಾಲಿ ಲಿಂಗಾಯತ ಕೇವಲ ಐದು ಸಾವಿರ ಮತಗಳ ಅಂತರದಿಂದ ಎಚ್.ಕೆ ವಿರುದ್ಧ ಗೆಲುವು ಸಾಧಿಸಿದ್ದ.

ಆದರೆ ಈಗ ಪರಿಸ್ಥಿತಿ ಬಿಜೆಪಿಗೆ ಅನುಕೂಲಕರವಾಗಿಲ್ಲ. ಹಿಂದೆ ಎರಡು ಸಲ ಸೋತಿರುವ, ಬಿಜೆಪಿಯಿಂದ ಹೊರಬಂದು ಕೆಜೆಪಿಯಿಂದ ಸ್ಪರ್ಧಿಸಿರುವ ಸಂಕಣ್ಣನವರ್ ಕೂಡಾ ಶ್ರೀಶೈಲಪ್ಪ ಬಿದರೂರನ ಪಂಚಮಸಾಲಿ ಜಾತಿಗೆ ಸೇರಿದ 'ಜಾತಿವಾದಿ'. ಬಿಎಸ್‌ಆರ್‌ನ ಪೋಕರಿ ಅನಿಲ್ ಮೆಣಸಿನಕಾಯಿ ಲಿಂಗಾಯತ ಬಣಜಿಗ ಶೆಟ್ಟಿ. ಅಲ್ಲಿಗೆ ಲಿಂಗಾಯತ ವೋಟ್‌ಗಳನ್ನು ಇವರ್‍ಯಾರೂ ನೆಚ್ಚುವಂತಿಲ್ಲ.

ಜಾತಿ ಬಿಡಿ, ಈ ಐದು ವರ್ಷ ಶ್ರೀಶೈಲಪ್ಪ ಬಿದರೂರು ಬರೀ ಆಸ್ತಿ ಗಳಿಕೆ ಮಾಡಿದ್ದಷ್ಟೇ ಬಂತು. ಯಲಬುರ್ಗದಲ್ಲೊಂದು ಪೆಟ್ರೋಲ್ ಬಂಕ್, ರೋಣ, ಗದಗಗಳಲ್ಲಿ ಅಪಾರ ಪ್ರಮಾಣದ ಭೂಮಿ ಗಳಿಸಿದ ಬಿದರೂರ ಗದಗಿನಲ್ಲಿ 'ಪಬ್ಲಿಕ್ ಸ್ಕೂಲ್' ಎಂಬ ದುಬಾರಿ ಡೊನೇಶನ್ನಿನ ಕಾನ್ವೆಂಟ್ ತೆಗೆದು ಸುಲಿಯುವ ಕೆಲಸ ಮಾಡುತ್ತಿದ್ದಾನೆ. ಇತ್ತೀಚಿನವರೆಗೂ ಯಡ್ಡಿಯ ಪರ ಇದ್ದು ಈಗ ಬಿಜೆಪಿಯ ಅಭ್ಯರ್ಥಿಯಾಗಿದ್ದಾನೆ.

ಎಸ್.ಎಮ್.ಕೃಷ್ಣ ಮತ್ತು ಡಿ.ಕೆ.ಶಿವಕುಮಾರ್ ಎಚ್.ಕೆ ಅವರನ್ನು ತುಳಿಯಲೆಂದೇ ಅನಿಲ ಮೆಣಸಿನಕಾಯಿಯನ್ನು ಬೆಳೆಸಿದರು. ಕಾಂಗ್ರೆಸ್‌ನಲ್ಲಿದ್ದೇ ಕಾಂಗ್ರೆಸ್‌ಗೆ ದ್ರೋಹ ಬಗೆದ ಮೆಣಸಿನಕಾಯಿ ಕಳೆದ ಆರು ತಿಂಗಳಿಂದ ರಾಮುಲು ಜೊತೆ ಗುರುತಿಸಿಕೊಂಡಿದ್ದಾನೆ. ಇವನ ಪಾಲಿಗೆ ಅಭಿವೃದ್ಧಿ ಎಂದರೆ ಕ್ರಿಕೆಟ್ ಟೂರ್ನಮೆಂಟ್ ನಡೆಸುವುದು, ರಂಗೋಲಿ ಸ್ಪರ್ಧೆ ಏರ್ಪಡಿಸುವುದು, ಕುಂಟಾಬಿಲ್ಲೆ ಆಡಿಸುವುದು ಅಷ್ಟೇ.

ಕೆಜೆಪಿಯ ಸಂಕಣ್ಣನವರ ಎಂಬ 68ರ ಹಿರಿಯರು ಬಿದರೂರರ ಓಟುಗಳಿಗೆ ಕತ್ರಿ ಹಾಕಬಲ್ಲ ವ್ಯಾಪಾರಿಯಷ್ಟೇ. ಜೆಡಿಎಸ್‌ಗೆ ಠೇವಣಿ ಉಳಿಯುವುದೇ ಕಷ್ಟ.

ಮೊನ್ನೆಯ ನಗರಸಭೆಯ ಚುನಾವಣೆಯಲ್ಲಿ 35 ಸ್ಥಾನಗಳ ಪೈಕಿ ಕಾಂಗ್ರೆಸ್‌ಗೆ 18, ಬಿಎಸ್‌ಆರ್ 7, ಬಿಜೆಪಿ 5 ಸ್ಥಾನಗಳು ಬಂದಿವೆ ಅಷ್ಟೇ. ಈ ಚುನಾವಣೆಯಲ್ಲಿ ಗುಪ್ತಗಾಮಿನಿಯಂತೆ ಕಾಂಗ್ರೆಸ್‌ಗೆ ನೆರವಾಗಿದ್ದು ಗದಗಿನಲ್ಲಿ ಕೆ.ಎಚ್.ಪಾಟೀಲ್ ಪ್ರತಿಷ್ಠಾನದಿಂದ ಆರಂಭಗೊಂಡಿರುವ 13 ಶುದ್ಧನೀರಿನ ಘಟಕಗಳು. ಕೇವಲ ಎರಡು ರೂ.ಗೆ 20 ಲೀಟರ್ ಶುದ್ಧನೀರು ಲಭಿಸುತ್ತಿದ್ದು ದಿನವೊಂದಕ್ಕೆ 1 ಲಕ್ಷ 20 ಸಾವಿರ ಲೀಟರ್ ನೀರನ್ನು ಜನ ಕುಡಿಯಲು ಒಯ್ಯುತ್ತಿದ್ದಾರೆ. ಈ ಇಡೀ ಯೋಜನೆ ನಿಂತಿರುವುದೇ ಸಹಕಾರಿ ತತ್ವದ ಮೇಲೆ. ಹೀಗಾಗಿ ಇವು ಜನರ ಸ್ವತ್ತುಗಳೇ ಆಗಿವೆ. ನೈಜ ಅಭಿವೃದ್ಧಿಯ ಸ್ಯಾಂಪಲ್ ಎಂದು ದೆಹಲಿ ವಲಯದಲ್ಲೂ ಹೆಸರು ಗಳಿಸಿದ ಈ ಮಾಡೆಲ್ ಅನ್ನು ಹೋಲುವ ಯೋಜನೆಯೊಂದನ್ನು ಚಿದಂಬರಮ್ ಬಜೆಟ್ಟಿನಲ್ಲಿ ಪ್ರಸ್ತಾಪಿಸಿ 1400 ಕೋಟಿ ಒದಗಿಸಿದ್ದಾರೆ.

ಗದಗಿನ ಬಡವರ, ಮಧ್ಯಮ ವರ್ಗದವರ ಪಾಲಿಗೆ ಇದು ಸಂಜೀವಿನಿಯಾಗಿದೆ. ಶುದ್ಧನೀರಿನ ಎದುರು ಕಲ್ಮಶ ಜಾತೀಯತೆ ಶರಣಾಗತೊಡಗಿದೆ. ಎಚ್.ಕೆ.ಪಾಟೀಲ್ ಗೆಲುವು ಖಾತ್ರಿಯಾಗಿ ಹೋಗಿದೆ.

• ಪಿ.ಕೆ.ಮಲ್ಲನಗೌಡರ್

ಸಿಎಂ ಗಾದಿಗೆ ಷಡ್ಯಂತ್ರ




ಬಿಜೆಪಿ ಕಾರ್ಯಾಲಯದ ಬಾಂಬ್ ಸ್ಫೋಟ

ಅನಂತ ಜಾಲ

ಅತ್ತ ಮಲ್ಲೇಶ್ವರದ ಬಿಜೆಪಿ ಕೇಂದ್ರ ಕಚೇರಿಯ ಆವರಣದಲ್ಲಿ ಉಗ್ರರು(!) ಇಟ್ಟ ಸೋಕಾಲ್ಡ್ ಬಾಂಬು ಸ್ಫೋಟಗೊಳ್ಳುವುದಕ್ಕೂ, ಇತ್ತ ಜೆಡಿಎಸ್ ತನ್ನ ಅಭ್ಯರ್ಥಿಗಳ ಅಂತಿಮ ಲಿಸ್ಟನ್ನು ಆಖೈರುಗೊಳಿಸುವುದಕ್ಕೂ ಇರುವ ನಿಗೂಢ ಸಂಬಂಧ ಕಾಕತಾಳೀಯವೇ ಇರಬಹುದು!

ಆದರೆ ರಾಜಾಜಿನಗರದಲ್ಲಿ ಬಿಜೆಪಿ ನಾಯಕ ಸುರೇಶ್‌ಕುಮಾರ್ ವಿರುದ್ಧ ಜೆಡಿಎಸ್ ಆನಂದ್ ಎಂಬ ಅನಾಮಧೇಯನನ್ನು ಕಣಕ್ಕಿಳಿಸುವುದೂ ಮತ್ತು ಹೆಬ್ಬಾಳದಲ್ಲಿ ಮುನಿಕೃಷ್ಣ ಎಂಬ ಪ್ರಭಾವಿ ನಾಯಕನಿಗೆ ಜೆಡಿಎಸ್ ಟಿಕೆಟ್ ತಪ್ಪಿರುವುದು ಮಾತ್ರ ಕಾಕತಾಳೀಯ ವಾಗಿರಲಿಕ್ಕಿಲ್ಲ. ಅಲ್ಲಿಗೆ ಪೊಲೀಸ್ ಅಧಿಕಾರಿ ಅಬ್ದುಲ್ ಅಜೀಮ್ ಜೆಡಿಎಸ್ ಅಭ್ಯರ್ಥಿಯಾಗಿರುವುದು ಕೂಡ ಕಾಕತಾಳೀಯವೇನಲ್ಲ.



ದೇವೇಗೌಡ



ಕುಮಾರಸ್ವಾಮಿ



ಕರಂದ್ಲಾಜೆ

ಹಾಗೆಯೇ ಜೆಡಿಎಸ್ ವರಿಷ್ಠ ದೇವೇಗೌಡ ಮತ್ತು ಬಿಜೆಪಿ ರಾಷ್ಟ್ರನಾಯಕ ಅನಂತ್ ಕುಮಾರ್ ಮಧ್ಯೆ ಕಳೆದ ವಾರ ನಡೆಯಿತೆನ್ನಲಾದ ಭೇಟಿ ಕೂಡ ಸುಮ್ಮನೇನಲ್ಲ!

ಜೆಡಿಎಸ್ ಮತ್ತು ಬಿಜೆಪಿ ಮಧ್ಯೆ ಚುನಾವಣಾ ಪೂರ್ವ ಹೊಂದಾಣಿಕೆಯೆಂಬುದನ್ನು ಕುಮಾರಸ್ವಾಮಿಯಾಗಲಿ ದೇವೇಗೌಡರಾಗಲಿ ಏನೇ ಆಣೆ ಪ್ರಮಾಣ ಮಾಡಿ ನಿರಾಕರಿಸಿದರೂ ಬಿಜೆಪಿ ನಾಯಕ ಅನಂತ್‌ಕುಮಾರ್ ಆಡುವ ಪ್ರತಿ ಮಾತು ಮತ್ತು ಇಡುವ ಪ್ರತಿ ಹೆಜ್ಜೆಯೂ ಇಂಥದ್ದೇ ಸಾಧ್ಯತೆಯೊಂದರ ವಾಸನೆಯನ್ನು ದಟ್ಟವಾಗಿಸುತ್ತದೆ. ಶತಯಗತಾಯ ಈ ಬಾರಿ ಮುಖ್ಯಮಂತ್ರಿಯಾಗಲೇಬೇಕೆಂಬ ಅನಂತ್‌ಕುಮಾರ್ ಕನಸಿಗೆ ಬೇಕಾದ ಸಿದ್ಧತೆಗಳೆಲ್ಲ ಸದ್ದಿಲ್ಲದೆ ನಡೆಯುತ್ತಿದೆ.

ಅನಂತ್ ಹುನ್ನಾರ

ಇದ್ದಕ್ಕಿದ್ದಂತೆ ಬೆಂಗಳೂರು ಪೊಲೀಸ್ ಕಮೀಷನರ್ ಹುದ್ದೆಯಿಂದ ಜ್ಯೋತಿ ಪ್ರಕಾಶ್ ಮಿರ್ಜಿಗೆ ಕೊಕ್ ಕೊಟ್ಟು ಆ ಜಾಗಕ್ಕೆ ಅನಂತ್ ನಿಷ್ಠ ರಾಘವೇಂದ್ರ ಔರಾದ್‌ಕರ್‌ರನ್ನು ತಂದಿದ್ದು ಇನ್ನೇನು ಕೆಜೆಪಿಗೆ ಹೋಗೇಬಿಟ್ಟರು ಎಂಬಂತಿದ್ದ ನಿರಾಣಿ, ಕತ್ತಿ ಬೊಮ್ಮಾಯಿ ಮತ್ತು ಸೋಮಣ್ಣ ರಾತ್ರೋರಾತ್ರಿ ತಮ್ಮ ನಿಷ್ಠೆ ಬದಲಾಯಿಸಿ ಬಿಜೆಪಿಯಲ್ಲೇ ಬೇರೂರಿದ್ದು, ಚುನಾವಣೆಯ ಸಂದಿಗ್ಧದಲ್ಲೂ ಪ್ರಹ್ಲಾದ್ ಜೋಷಿಯಂಥ ನರಸತ್ತ ಮನುಷ್ಯನನ್ನು ತಂದು ಬಿಜೆಪಿಯ ಅಧ್ಯಕ್ಷ ಗಾದಿಯಲ್ಲಿ ಪ್ರತಿಷ್ಠಾಪಿಸಿದ್ದು ಮತ್ತು ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಗೆ ಈಶ್ವರಪ್ಪ, ಶೆಟ್ಟರ್, ಅಶೋಕ್ ಇತ್ಯಾದಿ ಘಟಾನು ಘಟಗಳನ್ನೆಲ್ಲ ಹೊರಗಿಟ್ಟು ಅನಂತ್ ಮಾತ್ರವೇ ಏಕಮೇವಾದ್ವಿತೀಯನಾಗಿ ನೇಮಕಗೊಂಡಿದ್ದು- ಇತ್ಯಾದಿಗಳೆಲ್ಲವೂ ಮುಂದೊಮ್ಮೆ ಅನಂತ್‌ಕುಮಾರ್ ಮುಖ್ಯಮಂತ್ರಿ ಗಾದಿಗೆ ವಕ್ಕರಿಸುವ ಪೂರ್ವತಯಾರಿಯಂತೆಯೇ ಕಾಣಿಸುತ್ತಿವೆ.

ಏನೇ ಕಾಂಗ್ರೆಸ್ ಅಲೆ, ಕೆಜೆಪಿ ಜೊತೆ ಹೊಂದಾಣಿಕೆ ಎಂದೆಲ್ಲ ಘಟಿಸಿದರೂ ಹೆಚ್ಚೆಂದರೆ 80ರ ಆಸುಪಾಸಿಗಿಂತ ಅಧಿಕ ಸ್ಥಾನ ಕಾಂಗ್ರೆಸ್ಸಿಗೆ ಸಾಧ್ಯವೇ ಇಲ್ಲ. ಯಡ್ಡಿಯ ಕೆಜೆಪಿ ತಾನೇ ಇನ್ನೆಷ್ಟು? ಅಮ್ಮಮ್ಮಾ ಎಂದರೂ 15 ರಿಂದ 20ಕ್ಕಿಂತ ಹೆಚ್ಚಿಗೆ ಗೆಲ್ಲುವುದೇ ಕಷ್ಟ. ಇಂಥಾದ್ದರಲ್ಲಿ ಜೆಡಿಎಸ್ ಕನಿಷ್ಠ 50 ಸ್ಥಾನ ಗಳಿಸಿದರೂ ಬಿಜೆಪಿಗೆ 70ರಲ್ಲಿ ಗೆಲ್ಲುವುದು ದೊಡ್ಡ ಸಮಸ್ಯೆಯೇನಲ್ಲ. ಹಾಗೊಮ್ಮೆ ಬಿಜೆಪಿ ಐವತ್ತಕ್ಕೋ ಅರವತ್ತಕ್ಕೋ ಸುಸ್ತು ಹೊಡೆದು ಜೆಡಿಎಸ್ ನಲವತ್ತಕ್ಕೆ ನಿಂತರೂ ಬಿಎಸ್‌ಆರ್ ಕಾಂಗ್ರೆಸ್ ಮತ್ತು ಪಕ್ಷೇತರರಿಗೆ ಗಾಳ ಹಾಕಿ ಸರ್ಕಾರ ರಚಿಸುವುದು ಕಷ್ಟವೇನಲ್ಲ.

ಸದ್ಯದ ಕಾಂಗ್ರೆಸ್ ಆಂತಃಕಲಹ, ಟಿಕೆಟ್ ವಂಚಿತರ ಬಂಡಾಯ, ಅದರದ್ದೇ ನಾಯಕರ ಕಾಲೆಳೆಯುವ ಚಾಳಿ ಮತ್ತು ಅಶಿಸ್ತಿನ ಫಲವಾಗಿ ಬರಬೇಕಿದ್ದ ಕನಿಷ್ಠ ಹತ್ತು ಸೀಟುಗಳು ಕಮ್ಮಿಯಾದರೂ ದೇವೇಗೌಡರ ತಲೆಗಾರಿಕೆಯ ಎದುರು ಸರ್ಕಾರ ರಚಿಸುವುದು ಅಸಾಧ್ಯವೇನಲ್ಲ. ಮತ್ತೆ 20-20 ಸರ್ಕಾರ ರಚಿಸುವುದು ತೀರ ದೂರದ ಮಾತೇನಲ್ಲ. ಈಗಾಗಲೇ ಬಿಜೆಪಿ ಶೆಟ್ಟರ್‌ರನ್ನು ಮುಖ್ಯಮಂತ್ರಿ ಅಭ್ಯರ್ಥಿಯೆಂದು ಘೋಷಿಸಿದೆಯಾದರೂ ನಾಳೆ ದೇವೇಗೌಡರ ಮೂಲಕ ಹೊಂದಾಣಿಕೆಯ ಷರತ್ತಾಗಿ 'ತಾನು ಮುಖ್ಯಮಂತ್ರಿಯಾಗುವಂತಿದ್ದರೆ ಮಾತ್ರ' ಎಂದು ಹೇಳಿಸಿಬಿಟ್ಟರೆ ಯಾರೇನೂ ಮಾಡುವಂತಿಲ್ಲ. ಹಾಗೊಮ್ಮೆ ಮೊದಲ ಎರಡೂವರೆ ವರ್ಷಗಳ ಕಾಲ ಕುಮಾರಸ್ವಾಮಿಯೇ ಮುಖ್ಯಮಂತ್ರಿಯಾಗುವುದಾದರೆ ತದನಂತರದ ಮುಖ್ಯಮಂತ್ರಿ ಪ್ರಶ್ನೆಗೆ 'ಆರೆಸ್ಸೆಸ್ ಮಾಣಿ' ಸಂತೋಷ್‌ಜಿಯ ಹೆಸರನ್ನು ತೇಲಿಬಿಟ್ಟು ಕ್ರಮೇಣ ಶೆಟ್ಟರ್ ಮತ್ತು ಸಂತೋಷ್ ಜಿದ್ದಾಜಿದ್ದಿಗೆ ರಾಜಿ ಅಭ್ಯರ್ಥಿಯಾಗಿ ತಾನು ವಕ್ಕರಿಸುವುದು ಅನಂತ್ ಲೆಕ್ಕಾಚಾರ.



ಅನಂತ್‌ಕುಮಾರ್

ಮುಖ್ಯಮಂತ್ರಿಗಿರಿಗಾಗಿ

ಬಹುಶಃ ಇದನ್ನು ದೇವೇಗೌಡರೂ ಒಪ್ಪಿರುವಂತಿದೆ. ಹಾಗೊಮ್ಮೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೇನಾದರೂ ಅಧಿಕಾರ ಗಿಟ್ಟಿತೆಂದರೆ ಮೊದಲ ಸರತಿಗೆ ಮುಖ್ಯಮಂತ್ರಿಯಾದ ತಾನು ಕೇಂದ್ರಮಂತ್ರಿಯಾಗಿ ಜಾಗ ಖಾಲಿ ಮಾಡುವುದರಿಂದ ಮಿಕ್ಕ ಕೆಲವೇ ತಿಂಗಳುಗಳ ಮಟ್ಟಿಗೆ ಶೆಟ್ಟರ್‌ರನ್ನೋ ಸಂತೋಷ್‌ಜಿಯನ್ನೋ ಮುಂದಿಟ್ಟರಾಯ್ತು ಅಥವಾ ಅವಧಿ ಪೂರ್ತಿ ತಾನೇ ಮುಖ್ಯಮಂತ್ರಿ ಯಾಗಿ ಆಮೇಲೆ ಕೇಂದ್ರಮಂತ್ರಿಗಿರಿಗೆ ಹೋದರಾಯ್ತು. ಒಂದು ಪಕ್ಷ ಮೊದಲ ಸರತಿ ಕುಮಾರಸ್ವಾಮಿಯದಾದರೆ ಅಲ್ಲಿಯತನಕ ನಾನು ಕೇಂದ್ರ ಮಂತ್ರಿಯಾಗಿದ್ದು ಸಂದರ್ಭಾನುಸಾರ ಮುಖ್ಯಮಂತ್ರಿ ಹುದ್ದೆಗೆ ಮರಳಿದರಾಯ್ತು!



ಶೆಟ್ಟರ್



ಯಡ್ಡಿ

ಇದು ಬಿಜೆಪಿ ರಾಜ್ಯಾಧಿಪತಿ ಅನಂತ್‌ಕುಮಾರ್ ತಲೆಹೊಕ್ಕಿರುವ ದೂರಾಲೋಚನೆ. ಜೀವಿತಾವಧಿಯೊಳಗೆ ಒಂದಲ್ಲ ಒಂದು ದಿನದ ಮಟ್ಟಿಗಾದರೂ ರಾಜ್ಯದ ಮುಖ್ಯಮಂತ್ರಿ ಆಗಲೇಬೇಕೆಂಬುದು ಅನಂತ್‌ನ ಧಮನಿಗಳಲ್ಲಿ ಪ್ರವಹಿಸುತ್ತಿರುವ ವಾಂಛೆ. ಈಗಲ್ಲದಿದ್ದರೆ ಮುಂದೆಂದೂ ಇದು ಸಾಧ್ಯವಿಲ್ಲದ್ದೆಂಬುದೂ ಅನಂತ್‌ಗೆ ಮನದಟ್ಟಾಗಿದೆ. ಇಂಥ ದುರಾಶೆ ಹೊತ್ತೇ ಸದಾನಂದ ಗೌಡರನ್ನು ಮುಂದ... ಬಿಟ್ಟು ದೇವೇ ಗೌಡರ ಮುಂದೆ ಬುಗುರಿ ಆಡಿಸತೊಡಗಿದ್ದಾರೆ. ಇನ್ನು ಕುಮಾರಸ್ವಾಮಿಗಾಗಲಿ, ದೇವೇಗೌಡರಿಗಾಗಲಿ ಇದಕ್ಕಿಂತ ಉತ್ತಮ ಅವಕಾಶ ವಾದರೂ ಎಲ್ಲಿದೆ?

ಇಂಥದೊಂದು ಸಾಧ್ಯತೆಯ ವಾಸನೆ ಹತ್ತಿದ್ದು ಈ ಬಾರಿಯ ಬಿಜೆಪಿ ಟಿಕೆಟ್ ಹಂಚಿಕೆಯಲ್ಲಿ. ಹಾಗೆ ನೋಡಿದರೆ ಬಿಜೆಪಿಯ ಕೇಂದ್ರ ಚುನಾವಣಾ ಕಮಿಟಿಯಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷರಿರಬೇಕು ಅಥವಾ ಮುಖ್ಯಮಂತ್ರಿ ಶೆಟ್ಟರ್ ಆದರೂ ಇರಬೇಕಿತ್ತು. ಕನಿಷ್ಠ ಉಪಮುಖ್ಯ ಮಂತ್ರಿಗಳಾದ ಈಶ್ವರಪ್ಪ ಅಥವಾ ಅಶೋಕ್ ಯಾರೂ ಬೇಡವೆಂದರೆ ಮಾಜಿ ಮುಖ್ಯಮಂತ್ರಿ ಸದಾನಂದಗೌಡರಾದರೂ ಇರಬೇಕು. ಆದರೆ ಅಡ್ವಾಣಿಯ ಮೂಲಕ ಬಲೆಬೀಸಿದ ಅನಂತ್ ಮಿಕ್ಕೆಲ್ಲರನ್ನೂ ಹೊರಗಿಟ್ಟು ತಾವೊಬ್ಬರೇ ರಾಜ್ಯ ನಾಯಕರ ಪೈಕಿ ಚುನಾವಣಾ ಸಮಿತಿಯಲ್ಲಿ ರುವಂತೆ ಮಾಡಿಕೊಂಡರು. ಇದೆಲ್ಲಕ್ಕೂ ಪೂರಕವೆಂಬಂತೆ ತನ್ನ ಕಡುನಿಷ್ಠ ಭಟ್ಟಂಗಿ ಪ್ರಹ್ಲಾದ್ ಜೋಷಿಯನ್ನು ಮಿಕ್ಕೆಲ್ಲರ ವಿರೋಧದ ನಡುವೆಯೂ ಬಿಜೆಪಿ ರಾಜ್ಯಾಧ್ಯಕ್ಷನನ್ನಾಗಿಸಿದರು.

ಈ ಥರದ ಪೂರ್ವ ಸಿದ್ಧತೆಗಳನ್ನೆಲ್ಲ ಮುಗಿಸಿಕೊಂಡೇ ಅನಂತ್ ಜೆಡಿಎಸ್‌ಗೆ ಪೂರಕವಾದ ಟಿಕೆಟ್ ಹಂಚಿಕೆಗೆ ಕೈಯಿಟ್ಟದ್ದು. ಅಷ್ಟೇ ಅಲ್ಲ 'ಜಿ.ಟಿ. ದೇವೇಗೌಡನಂಥ ಸಮಯಸಾಧಕನನ್ನು ತಾನೇ ನಿಂತು ಜೆಡಿಎಸ್ ಪಾಳಯಕ್ಕೆ ಸಾಗಹಾಕಿದ್ದು.' ಏನೇ ಲಗಾಟಿ ಹೊಡೆದರೂ ಮೈಸೂರು ಪ್ರಾಂತ್ಯದ ಒಕ್ಕಲಿಗರು ಬಿಜೆಪಿಗೆ ಓಟು ಕೊಡುವುದು ಕಷ್ಟ. ಅಂಥಾದ್ದರಲ್ಲಿ ಜೀಟಿಯಂಥವರು ದೇವೇಗೌಡರ ಜೊತೆಗಿದ್ದರೇನೇ ಹೆಚ್ಚು ಲಾಭ. ಸಾಲದ್ದಕ್ಕೆ ಈ ಬಾರಿ ಹುಣಸೂರಿನಲ್ಲಿ 40 ಸಾವಿರಕ್ಕೂ ಅಧಿಕ ಕುರುಬ...

ಮೋದಿಯನ್ನು ಯಾಮಾರಿಸಿ ಮತ್ತೆ ಅಡ್ವಾಣಿಗೆ ಪಟ್ಟಕಟ್ಟಲು


ನಾನು ಲಿಂಗಾಯತರ ವಿರೋಧಿಯಾಗಿದ್ದರೆ ಆವತ್ತು ಯಡಿಯೂರಪ್ಪನನ್ನು ಉಚ್ಚಾಟಿಸುವಂತೆ ಬಿಜೆಪಿ ನಾಯಕರೊಬ್ಬರು ನನ್ನ ಮನೆ ಬಾಗಿಲಿಗೇ ಬಂದಿದ್ದರಲ್ಲ, ಆವತ್ತೇ ಆ ಕೆಲಸ ಮಾಡುತ್ತಿದ್ದೆ. ಯಡಿಯೂರಪ್ಪ ವಿರುದ್ಧ ಮನೆತನಕ ಬಂದಿದ್ದ ಬಿಜೆಪಿ ನಾಯಕರಿಗೇ ಬುದ್ಧಿ ಹೇಳಿ ಕಳಿಸಿದ್ದೆ. ಮನಸ್ಸು ಮಾಡಿದ್ದರೆ ಆವತ್ತೇ ಯಡಿಯೂರಪ್ಪನ್ನ ಮುಖ್ಯಮಂತ್ರಿ ಗಾದಿಯಿಂದ ಇಳಿಸುತ್ತಿದ್ದೆ...!



ಮೋದಿ



ಸುಷ್ಮಾ ಸ್ವರಾಜ್



ಅಡ್ವಾಣಿ

ಇದು ಜೆಡಿಎಸ್ ಪಿತಾಮಹ ದೇವೇಗೌಡರು ತಾನು ಲಿಂಗಾಯತರ ವಿರೋಧಿಯಲ್ಲ ಎಂಬುದಕ್ಕೆ ಆಗಾಗ ನೀಡುವ ಸಮಜಾಯಿಷಿಯಷ್ಟೇ. ಇದರ ಗೂಢಾರ್ಥವನ್ನು ಬಿಡಿಸಿ ನೋಡಿದರೆ ಅವತ್ತು ಯಡ್ಡಿಯನ್ನು ಸಿಎಂ ಗಿರಿಯಿಂದ ಉಚ್ಚಾಟಿಸಲು ದೇವೇಗೌಡರ ಮನೆತನಕ ಬಂದದ್ದು ಅನಂತ್‌ಕುಮಾರ್.

ಕೇವಲ ಯಡ್ಡಿ ವಿರುದ್ಧ ಮಾತ್ರವೇ ಅಲ್ಲ, ದೆಹಲಿ ಬಿಜೆಪಿ ವಲಯದಲ್ಲಿ ಅಡ್ವಾಣಿಯ ಮಾನಸ ಪುತ್ರನೆಂದೇ ಚಾಲ್ತಿಯಲ್ಲಿರುವ ಅನಂತ್ ಹೊಟ್ಟೆಕಿಚ್ಚಿಗೆ ಬಿದ್ದು 'ಗಣಿರೆಡ್ಡಿಗಳ ಮಾತೆ' ಸುಷ್ಮಾ ಸ್ವರಾಜ್‌ರನ್ನು ಮೂಲೆಗುಂಪಾಗಿಸಿದ್ದು, ಜೆಟ್ಲಿ, ಗಡ್ಕರಿ, ರಾಜನಾಥ್ ಎಷ್ಟೇ ಪರದಾಡಿದರೂ ಯಡ್ಡಿಯನ್ನು ಪಕ್ಷದಲ್ಲಿ ಉಳಿಸಿಕೊಳ್ಳಲಾಗದೆ ಹೊರಬೀಳುವಂತೆ ಮಾಡಿದ್ದು ಮತ್ತು ತನ್ನ ಮನೋಪಿತ ಅಡ್ವಾಣಿಯ ಪರವಾಗಿ ನರೇಂದ್ರ ಮೋದಿಯನ್ನು ಹಣಿಯಲು ಬೇಕಾದ ಎಲ್ಲಾ ಷಡ್ಯಂತ್ರಗಳನ್ನು ರಚಿಸುತ್ತಿರುವುದು ಗುಟ್ಟೇನಲ್ಲ.

ಏನೆಲ್ಲಾ ರಣತಂತ್ರ ಮಾಡಿ ತಾನು ಮುಖ್ಯಮಂತ್ರಿಯಾಗಬೇಕೆಂಬ ದುರಾಶೆ ಹೇಗೆ ಭುಗಿಲೆದ್ದಿದೆಯೋ ಹಾಗೆ ಮುಂದೊಮ್ಮೆ ನರೇಂದ್ರ ಮೋದಿಯನ್ನು ಯಾಮಾರಿಸಿ ಅಡ್ವಾಣಿಯನ್ನು ಪ್ರಧಾನಿಯಾಗಿಸುವ ಹುನ್ನಾರವು ಚಾಲ್ತಿಯಲ್ಲಿದೆ. ಇದೆಲ್ಲ ಲೆಕ್ಕ ಹಾಕಿಯೇ ತಾನೆ ಯಡ್ಡಿ ಮೋದಿಯನ್ನು ಹೊಗಳಿ ಅಟ್ಟಕ್ಕೇರಿಸುತ್ತಿರುವುದು?

ಅಧಿಕಾರಕ್ಕಾಗಿ ಕಾಂಗ್ರೆಸ್ಸಿಗೂ ಜೈ! ಮುಸ್ಲಿಮರಿಗೂ ಸೈ!

ಪ್ರಬಲ ಜೆಡಿಎಸ್ ಅಭ್ಯರ್ಥಿಗಳ ಪರವಾಗಿ ಬಿಜೆಪಿಯಿಂದ ಡಮ್ಮಿಗಳನ್ನು ಹಾಕಿಕೊಟ್ಟು ತನ್ನ ದೇವೇಗೌಡರ ನಿಷ್ಠೆಯನ್ನೂ ಮುಖ್ಯಮಂತ್ರಿಗಾದಿಯ ಬಯಕೆಯನ್ನೂ ಒಟ್ಟೊಟ್ಟಿಗೆ ಪೂರೈಸಿಕೊಂಡ ಅನಂತ್‌ಗೆ ಕಾಂಗ್ರೆಸ್‌ನಲ್ಲಿ ಮಿತ್ರರಿಲ್ಲವೆಂದೇನಲ್ಲ.

ಉದಾಹರಣೆಗೆ ರಾಯಚೂರಿಗೆ ಬಿಜೆಪಿ ಅಭ್ಯರ್ಥಿಯಾದ ವಿಕ್ರಮ ಜೋಷಿ ಹೆಚ್ಚು ಕಮ್ಮಿ ಅನಂತ್ ಮನೆಯ ಕೆಲಸದಾಳಿನಂಥವನು. ಅನಂತ್ ಹಾಳುಬಾವಿಗೆ ಬೀಳೆಂದರೂ ಕಣ್ಣು ಮುಚ್ಚಿ ಹಾರಬಲ್ಲ, ಬೆನ್ನಿಗೆ ಹತ್ತು ಮಂದಿ ಬೆಂಬಲಿಗರಿಲ್ಲ. ಇಂಥವನನ್ನು ಕಾಂಗ್ರೆಸ್‌ನ ಮಾಜಿ ಶಾಸಕ ಯಾಸಿನ್ ವಿರುದ್ಧ ಅಭ್ಯರ್ಥಿಯಾಗಿಸಿದ್ದಾರೆ ಅನಂತ್‌ಕುಮಾರ್. ಹಾಗಂತ ರಾಯಚೂರಿಗೆ ಬೇರೆ ಅಭ್ಯರ್ಥಿಗಳಿರಲಿಲ್ಲ ಎಂದಲ್ಲ, ಜಾತಿಯಲ್ಲಿ 'ಮುನ್ನೂರು' ಜನಾಂಗಕ್ಕೆ ಸೇರಿದ, ಬಲಾಢ್ಯ ಮತ್ತು ಹಿಂದೆ ಇದೇ ಯಾಸಿನ್‌ರನ್ನು ಸೋಲಿಸಿ ಶಾಸಕರೂ ಆಗಿದ್ದ ಪಾಪಾರೆಡ್ಡಿ ಎಂಬ ಜನಪ್ರಿಯ ನಾಯಕ ಇದ್ದಾರೆ. ಈ ಬಾರಿ ಗೆಲ್ಲುವ ಅವಕಾಶ, ಸಿಂಪಥಿ, ಶಕ್ತಿ ಎಲ್ಲಾ ಇದ್ದಾಗ್ಯೂ ಅನಂತ್ ಪಾಪಾರೆಡ್ಡಿಗೆ ಟಿಕೆಟ್ ತಪ್ಪಿಸಿ ದುರ್ಬಲ ವಿಕ್ರಮ ಜೋಷಿಗೆ ಟಿಕೆಟ್ ನೀಡಿಬಿಟ್ಟರು.

ಅದು ಅನಂತ ತಂತ್ರ. ಕೇವಲ ಜೆಡಿಎಸ್ ಮಾತ್ರವೇ ಅಲ್ಲ, ಅಧಿಕಾರಕ್ಕಾಗಿ ಎದುರಾಳಿ ಕಾಂಗ್ರೆಸ್ ಆದರೂ ಸೈ ವಿರೋಧಿ ಮುಸ್ಲಿಮರಾದರೂ ಜೈ.



...ಶ್ವರ್ ಆಸ್ಕರ್ ಫರ್ನಾಂಡಿಸ್ ಖರ್ಗೆ ಯಡಿಯೂರಪ್ಪ ಕುಮಾರಸ್ವಾಮಿ ಮ್ಯಾಗಿ ದೇಶಪಾಂಡೆ ಅಂಬರೀಷ್ ಎಸ್.ಎಂ. ಕೃಷ್ಣ

...ಾಂಗ್ರೆಸ್ ಅಧಿಕಾರದ ಗದ್ದುಗೆ ಏರಬಹುದಾ?

ರಾಜ್ಯದ ಉದ್ದಗಲಕ್ಕೆ ಈಗ ವಿಧಾನಸಭೆ ...ವಣೆಯ ರಂಗು-ಗುಂಗು ಒಂದೇ ಸಮನೆ ಏರುತ್ತಿದೆ! ...ವವರು ಯಾರು? ಸೋಲುವ ಸರದಾರ ಯಾರು? ...ಸ್ ಅಧಿಕಾರ ಹಿಡಿಯಬಹುದಾ? ಹಂಗ್ ಅಸೆಂಬ್ಲಿ ...ಣ ಆದೀತಾ? ಸಮ್ಮಿಶ್ರ ಸರ್ಕಾರವೇ ಗತಿನಾ? ... ಚರ್ವಿತಚರ್ವಣ-ಸಮೀಕ್ಷೆ-ಭವಿಷ್ಯಗಳು ಪುಂಖಾನು...ವಾಗಿ ಬರುತ್ತಿವೆ.

...ರ್ನಾಟಕದಲ್ಲಿ ಈ ಬಾರಿ ಬುರ್ನಾಸ್ ಬಿಜೆಪಿ ವಿರುದ್ಧ ...ದ ಮಾರುತ ಎದ್ದಿದೆ ನಿಜ. ಹಾಗಂತ ಕಾಂಗ್ರೆಸ್ ...ನೂ ಅಲೆಯಿಲ್ಲ. ಕೆಜೆಪಿ-ಬಿಜೆಪಿ ದಾಯಾದಿ ಕಲಹ, ... ಫ್ಯಾಮಿಲಿಯ ಪ್ರೈವೇಟ್ ಕಂಪನಿ, ಕರಾಮತ್ತಿನ ...ನೆ ಕಾಂಗ್ರೆಸ್ ಜನರಿಗೆ ಅನಿವಾರ್ಯ ಆಯ್ಕೆ ...ವಾಗಿದೆ. ಕಾಂಗ್ರೆಸ್‌ನ ಟಿಕೆಟ್ ಡೀಲ್‌ನ ಗೌಜಿ-...ಗೂ ಮೊದಲು ಆ ಪಕ್ಷವೇ ಅಧಿಕಾರಕ್ಕೆ ಏರುತ್ತದೆಂಬ ... ಸಾಮಾನ್ಯವಾಗಿತ್ತು, ನಗರಾಡಳಿತ ಸಂಸ್ಥೆಗೆ ನಡೆದ ...ವಣೆ ಫಲಿತಾಂಶ ಜನರ ಒಲವು ಕಾಂಗ್ರೆಸ್ ಕಡೆಗಿದೆ ... ಸಂಕೇತಗಳನ್ನು ಬಿತ್ತರಿಸಿತ್ತು.

...ಾಂಗ್ರೆಸ್ ಗೆದ್ದೇ ಗೆಲ್ಲುತ್ತದೆಂಬ ಭಾವನೆಯಿಂದ ...ವಾರಿ ತರಲೆ ಮಂದಿಯೆಲ್ಲ ಆ ಪಕ್ಷದ ಟಿಕೆಟ್‌ಗೆ ...ಬೀಳತೊಡಗಿದರು. ಆ ಕ್ಷಣದಲ್ಲಿ ಕಾಂಗ್ರೆಸ್ ಟಿಕೆಟ್ ...ವವರು, ದಾನ ಮಾಡುಹವರು, ತಮ್ಮವರಿಗಾಗಿ ...ಸುವವರೂ ಎಚ್ಚೆತ್ತುಕೊಂಡು ಕಾರ್ಯಾಚರಣೆಗೆ ...ಬಿಟ್ಟರು. ಕಾಂಗ್ರೆಸ್‌ನ ಟಿಕೆಟ್ ದಂಧೆ ಅದೆಷ್ಟು ...ರ್ಣಗೊಂಡಿತೆಂದರೆ, ಟಿಕೆಟ್ ಖರೀದಿದಾರರು ...ಚೆಯಾದರೆ, ಬೇರೆ ಪಕ್ಷದವರೂ ಕಾಂಗ್ರೆಸ್‌ನ ಟಿಕೆಟ್ ...ಯಲ್ಲಿ ಕೈಚಳಕ ನಡೆಸಲಾರಂಭಿಸಿದರು. ತನಗೆ ಪ್ರಬಲ ...ಟಿ ಕೊಡುವ ಕಾಂಗ್ರೆಸ್ ಕ್ಯಾಂಡಿಡೇಟ್‌ಗೆ ಟಿಕೆಟ್ ...ತೆ ಮಾಡಲು ಆ ಪಾರ್ಟಿಯ ದಿಲ್ಲಿ-ಬೆಂಗಳೂರು ...ವ ದೊಡ್ಡ-ದೊಡ್ಡ ಲೀಡರ್, ಲೀಡರಿಣಿಗಳ ಜತೆ ಬೇರೆ ಪಕ್ಷದವರೂ ಡೀಲ್‌ಗೆ ಇಳಿದುಬಿಟ್ಟರು!

ಈಗ ಕಾಂಗ್ರೆಸ್ ಹಂಚಿಕೆ ಮಾಡಿರುವ ಟಿಕೆಟ್ ಪಟ್ಟಿ, ಆನಂತರ ಭುಗಿಲೆದ್ದ ಭಿನ್ನಮತ-ಬಂಡಾಯ ನೋಡಿದರೆ ಅದು ಕನಿಷ್ಠವೆಂದರೂ 25-30 ಸೀಟುಗಳನ್ನು ಅನಾಯಾಸವಾಗಿ ಕಳೆದುಕೊಳ್ಳುತ್ತದೆ ಅನ್ನಿಸುತ್ತದೆ. ಗೆಲ್ಲಬಹುದಾದ ಕ್ಷೇತ್ರಗಳಲ್ಲಿನ ಜಾತಿಸಮೀಕರಣ, ಟಿಕೆಟ್ ಆಕಾಂಕ್ಷಿಗಳ ಅರ್ಹತೆ-ಜನಪ್ರಿಯತೆ, ಎದುರಾಳಿ ಪಕ್ಷದ ಸ್ಥಿತಿ-ಗತಿ ಯಾವುದೂ ಪರಿಗಣಿಸದೆ ತಮಗೆ ಬೇಕಾದವರಿಗೆ ಅಥವಾ ಎದುರಾಳಿಗಳಿಗೆ ಅನುಕೂಲಕರವಾದ ದುರ್ಬಲರಿಗೆ ಕಾಂಗ್ರೆಸ್ ದೊರೆಗಳು ಟಿಕೆಟ್ ಕೊಟ್ಟಿದ್ದಾರೆ! ರಾಜ್ಯದ ಕಾಂಗ್ರೆಸ್ ಮಹಾಮಹಿಮರು ಮತ್ತು ಅವರ ಮಾತು ಕೇಳುವ ದಿಲ್ಲಿ ನೇತಾರರು ಕ್ಷೇತ್ರದೊಳಗಿನ ವಾಸ್ತವ ಏನೆಂದು ಯೋಚಿಸದೆ ತಂತಮ್ಮ ಒಣ ಪ್ರತಿಷ್ಠೆ-ಅಹಂಕಾರ ಪ್ರದರ್ಶಿಸಲು ಹವಣಿಸಿದ್ದು ಅಥವಾ ಕಾಸಿಗೆ ಕೈಯೊಡ್ಡಿದ್ದೇ ಈಗ ಕಾಂಗ್ರೆಸ್‌ಗೆ ಮುಳುವಾಗಿದೆ.

ಎತ್ತಿಂದೆತ್ತ ರಾಜಕೀಯ ಪರಿಸ್ಥಿತಿ ಲೆಕ್ಕ ಹಾಕಿದರೂ ಈ ಸಲ ಕಾಂಗ್ರೆಸ್‌ಗೆ ಗೆದ್ದು ಗದ್ದುಗೆ ಏರುವ ಅವಕಾಶಗಳೇ ಹೆಚ್ಚಿದ್ದದ್ದು ಕಾಣಿಸುತ್ತದೆ. ಐದು ವರ್ಷ ಅಧಿಕಾರ ನಡೆಸಿದ ಸ್ವಯಂಘೋಷಿತ ದೇಶಭಕ್ತರ, ಶೀಲ-ಶಿಸ್ತಿನ ಗುತ್ತಿಗೆದಾರ ಬಿಜೆಪಿಯ ಅನೈತಿಕತೆ-ಅನ್ಯಾಯ-ಅಕ್ರಮ-ಅವಾಂತರ ಮತದಾರರನ್ನು ಭ್ರಮನಿರಸನಕ್ಕೆ ತಳ್ಳಿತ್ತು, ಯಡ್ಡಿ ಎಂಬ ಭಸ್ಮಾಸುರ ಸಿಟ್ಟಿನಿಂದ ಕಟ್ಟಿಕೊಂಡಿದ್ದ ಕೆಜೆಪಿಯಿಂದ ಬಿಜೆಪಿಯ ಬಲ ಕುಸಿದಿತ್ತು. ಲಿಂಗಾಯತ ರಾಜಕಾರಣ-ಮಠಾಧೀಶರ ರಾಜಕಾರಣ ಮಾಡುವ ಯಡ್ಡಿ ಬಿಜೆಪಿಯಲ್ಲಿದ್ದಾಗ ಕಾಂಗ್ರೆಸ್‌ಗೆ ದುಃಸ್ವಪ್ನದಂತಾಗಿದ್ದರು. ಆತ ಬಿಜೆಪಿಯಿಂದ ಹೊರಬಂದು ಪರೋಕ್ಷವಾಗಿ ಕಾಂಗ್ರೆಸ್‌ಗೆ ಅನುಕೂಲ ಮಾಡಹತ್ತಿದ್ದರು. ಕೆಲವೇ ಜಿಲ್ಲೆಗಳಲ್ಲಿ ಅಥವಾ ಒಕ್ಕಲಿಗರ ಏರಿಯಾದಲ್ಲಷ್ಟೇ ಇರುವ ದೇವೇಗೌಡ-ಕುಮಾರಸ್ವಾಮಿಗಳ ಜೆಡಿಎಸ್ ಆಂತರಿಕ ಬಿಕ್ಕಟ್ಟಿನಲ್ಲಿ ಸುಸ್ತಾಗಿತ್ತು. ಇದೆಲ್ಲಾ ಕಾಂಗ್ರೆಸ್‌ಗೆ ಚುನಾವಣೆ ಸುಲಭವಾಗಿ ಎದುರಿಸಲು ಛಾನ್ಸ್ ಕೊಟ್ಟಿತ್ತು.

ಆದರೆ ಸಿಕ್ಕ ಅವಕಾಶ ಸಮರ್ಥವಾಗಿ ಬಳಸಿಕೊಳ್ಳಲಾಗದೆ ಕಾಂಗ್ರೆಸ್ ಯುದ್ಧಾಂಗಣದಲ್ಲಿ ಎಡವಿ ಬಿದ್ದಿದೆ. ಹಾಗಿದ್ದರೆ ಆ ಪಕ್ಷಕ್ಕೆ ತೊಂದರೆ ಏನು? ಕಾಂಗ್ರೆಸ್‌ಗೆ ದಿಲ್ಲಿಯಲ್ಲಿರುವ ಕುರುಡು ನಾಯಕಾಗ್ರೇಸರೇ ಸಮಸ್ಯೆ; ರಾಜ್ಯದಲ್ಲಿರುವ ದಗಲುಬಾಜಿ ದಿಗ್ಗಜರೇ ಶಾಪ!! ರಾಜಕೀಯ ವಿಶ್ಲೇಷಕರು ಕಂಡುಕೊಂಡಂತೆ, ಕಾಂಗ್ರೆಸ್ ಸುಲಭ ಗೆಲುವನ್ನು ಸೋಲಾಗಿ ಪರಿವರ್ತಿಸಿಕೊಳ್ಳುವ ಕರ್ಮಗೇಡಿ ಪಾರ್ಟಿ. ರಾಜ್ಯದ ಟಿಕೆಟ್ ಹಂಚಿಕೆ ಕಮಿಟಿಯ ಕಿಂಗ್‌ಗಳು ಮತ್ತವರ ದಿಲ್ಲಿ ಧಣಿಗಳು ನೈಜಸ್ಥಿತಿಯನ್ನು ಬುದ್ಧಿಪೂರ್ವಕವಾಗೇ ಕಡೆಗಣಿಸಿ ತಮ್ಮ ಖಾಸಗೀ ಸೇಡು-ಲಾಭವನ್ನಷ್ಟೇ ಪರಿಗಣಿಸಿದ್ದಾರೆ. ಸ್ವಜನಪಕ್ಷಪಾತವೇ ಪಕ್ಷದ ಗೆಲುವಿಗಿಂತ ದೊಡ್ಡದು ಅವರಿಗೆಲ್ಲ. ಪರಮೇಶ್ವರ್, ಖರ್ಗೆ, ಮೊಯ್ಲಿ, ಆಸ್ಕರ್, ದೇಶಪಾಂಡೆ, ಮಾರ್ಗರೆಟ್ ಆಳ್ವ, ಅಂಬರೀಷ್, ಎಸ್ಸೆಂಕೆ... ಎಲ್ಲರಿಗೂ ಪಾರ್ಟಿಯನ್ನು ಹೇಗೆ ಗೆಲ್ಲಿಸಬೇಕು, ಎದುರಾಳಿಯನ್ನು ಯಾವ ಸ್ಟ್ರೆಟಜಿಯಿಂದ ಹಣಿಯಬೇಕೆಂಬ ಕಾಳಜಿ ಇಲ್ಲ, ತಂತಮ್ಮ ಈಗೋ ತಣಿದರಾಯ್ತು; ತಮ್ಮವರು ಎಮ್ಮೆಲ್ಲೆ-ಮಂತ್ರಿಯಾದರಾಯ್ತು ಅಷ್ಟೇ!

ತೀರಾ ಸುಲಭವಾಗಿ ಗೆಲ್ಲುವ ತಂತ್ರಗಾರಿಕೆ ರೂಪಿಸಿ ಪ್ರಚಂಡ ಬಹುಮತದಿಂದ ಅಧಿಕಾರ ಸ್ಥಾಪಿಸಬಹುದಾಗಿದ್ದ ಕಾಂಗ್ರೆಸಿಗರು ಕಂಡ-ಕಂಡಲ್ಲಿ ಬಂಡಾಯಕ್ಕೆ ಅವಕಾಶ ಕಲ್ಪಿಸಿ ಗೆಲ್ಲುವ ಪಾರ್ಟಿಯನ್ನು ಸೋಲಿನೆಡೆ ತಳ್ಳಿಬಿಟ್ಟದ್ದಾರೆ; ತಮ್ಮ ಪಕ್ಷದ ಮೇಲೇ ಚಪ್ಪಡಿ ಎಳೆದಿದ್ದಾರೆ. ಟಿಕೆಟ್ ಹಂಚುವಾಗ ನಿಷ್ಠೆ-ಪ್ರಾಮಾಣಿಕತೆ ಪರಿಗಣಿಸಿಲ್ಲ; ಮುಸ್ಲಿಮ್, ಒಕ್ಕಲಿಗ, ಲಿಂಗಾಯತ, ದಲಿತ ಸಮುದಾಯಗಳನ್ನು ಬ್ಯಾಲೆನ್ಸ್ ಮಾಡಿ ಟಿಕೆಟ್ ಹಂಚಿಕೆ ಮಾಡಿಲ್ಲ, ಕೇಂದ್ರ ಮಂತ್ರಿಮಂಡಲದಲ್ಲಿ ಅಥವಾ ಪಾರ್ಟಿ ಮಂಡಲದಲ್ಲಿ ಪ್ರಭಾವಿಗಳಾಗಿರುವ ವಂಶದ ಕುಡಿಗಳಿಗೆ ಅಥವಾ ಅವರ ಚೇಲಾಗಳಿಗೆ ಅಭ್ಯರ್ಥಿತನ ದಯಪಾಲಿಸಿದ್ದಾರೆ. ರಿಯಲ್ ಎಸ್ಟೇಟ್ ಮಾಫಿಯಾಕ್ಕೆ, ಗಣಿ ಕಳ್ಳರಿಗೆ, ರೌಡಿಗಳಿಗೆ, ಚಾರಿತ್ರ್ಯಹೀನರಿಗೆ, ಜನರ ತಾತ್ಸಾರ-ತಿರಸ್ಕಾರಕ್ಕೆ ತುತ್ತಾದವರಿಗೆ, ಕೊನೆಗೆ ತಮಗೆ ಟಿಕೆಟ್ ಬೇಕೆಂದು ಅರ್ಜಿ ಹಾಕದ ದಂಡ-ಪಿಂಡಗಳಿಗೂ ಟಿಕೆಟ್ ಕೊಡಲಾಗಿದೆ. ಇದೆಲ್ಲ ಗಮನಿಸಿದರೆ ಕಾಂಗ್ರೆಸ್ ಕನಿಷ್ಠ 30-35 ಕಡೆ ಖಂಡಿತ ಸೋಲುತ್ತದೆಂದು ಎಂಥ ಪೆದ್ದ-ಪಾಮರನೂ ಥಟ್ಟನೆ ಹೇಳಬಲ್ಲ!

ಕಾಂಗ್ರೆಸ್‌ನಲ್ಲಿರುವಂತೆ ಬಿಜೆಪಿ ಮತ್ತು ಜೆಡಿಎಸ್‌ನಲ್ಲೂ ಟಿಕೆಟ್ ತರಲೆ-ತಂಟೆಗಳಿವೆ. ಆದರೆ ಆ ಪಾರ್ಟಿಗಳಿಗೆ ಅಂಥ ಡ್ಯಾಮೇಜ್ ಆಗಲಾರದು. ಕಾಂಗ್ರೆಸ್‌ಗೆ ಸಣ್ಣ ಹಾನಿಯಾದರೂ ಅದರ ಅಧಿಕಾರದ ಕನಸು ಭಗ್ನವಾಗುತ್ತದೆ. ಈ ಎಲ್ಲ ಟಿಕೆಟ್ ಡೀಲ್, ಧಮಾಕಾ, ದಗಲುಬಾಜಿಯ ನಡುವೆಯೂ ಕಾಂಗ್ರೆಸ್ 95-100 ಸ್ಥಾನಕ್ಕೆ ಬಂದು ನಿಲ್ಲುವ ಸಾಧ್ಯತೆಯೇ ಹೆಚ್ಚು, ಆಗ ಅದು ಕೆಜೆಪಿ ಮತ್ತು ಪಕ್ಷೇತರರ ಎದುರು ಮಂಡಿಯೂರಬೇಕಾಗುತ್ತದೆ. ಇನ್ನೊಂದೆಡೆ ಬಿಜೆಪಿ 30-35 ಸ್ಥಾನ ಜೆಡಿಎಸ್ 25-30 ಪಡೆಯಬಹುದು. ಆದರೆ ಬಿಜೆಪಿ ಗುರಿ 60 ಮತ್ತು ಜೆಡಿಎಸ್ 40ಕ್ಕೆ ಪ್ರಯತ್ನಿಸುತ್ತಿದೆ. ಹಾಗಾದರೆ ಅಧಿಕಾರ ಬಿಜೆಪಿ-ಜೆಡಿಎಸ್ ಪಾಲಾಗಲೂಬಹುದು! ಹಾಗಾದರೆ ಕಾಂಗ್ರೆಸ್‌ಗೆ ವಿರೋಧ ಪಕ್ಷದ ಸ್ಥಾನವೇ ಗತಿ. ಆಗ ಕರ್ನಾಟಕ ಕಾಂಗ್ರೆಸ್ ಉತ್ತರ ಪ್ರದೇಶ ಕಾಂಗ್ರೆಸ್‌ನಂತಾಗುತ್ತದೆ.

ಈ ಬಾರಿ ಅತಂತ್ರ ಅಸೆಂಬ್ಲಿ ಆಗುವ ಸಾಧ್ಯತೆ ದಿನಗಳೆದಂತೆ ದಟ್ಟವಾಗುತ್ತಿದೆ. ಮತ ಎಣಿಕೆ ನಂತರ ಮೂರು ಥರದ ಸಂಭವನೀಯತೆ ಆಗಬಹುದು. ಒಂದು, ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ. ಎರಡು ನೂರು ಸ್ಥಾನ ಪಡೆವ ಕಾಂಗ್ರೆಸ್ ನೇತೃತ್ವದ ಕೆಜೆಪಿ-ಪಕ್ಷೇತರರ ಕಿಚಡಿ ಸರ್ಕಾರ. ಮೂರು, ಕಾಂಗ್ರೆಸ್ ಅವಸಾನ. ಈ ಮೂರರಲ್ಲಿ ಯಾವುದೂ ಆದೀತು!!

● ನಹುಷ

...ರರು 'ಸಿದ್ದು' ಮುಖ್ಯಮಂತ್ರಿ ಆಗುತ್ತಾರೆಂಬ ಒಂದೇ ...ಕ್ಕೆ ಸಾರಾಸಗಟಾಗಿ ಕಾಂಗ್ರೆಸ್ ಬೆನ್ನಿಗೆ ನಿಲ್ಲುತ್ತಾರೆ. ...ಶಾಸಕ ಹೆಚ್.ಬಿ. ಮಂಜುನಾಥ್ ವಿರುದ್ಧ ...ಾಗಲಿ, ಚಿಕ್ಕ ಮಾದು ಆಗಲಿ ಗೆಲ್ಲುವುದು ಸಾಧ್ಯವೇ

ಕುರುಬ-ದಲಿತರ ಛಿದ್ರ!

...ದಕ್ಕೆಂದು ಜೀಟಿಯನ್ನು ಪಕ್ಕದ ...ಂಡೇಶ್ವರಿಗೆ ನಿಲ್ಲುವಂತೆ ಮಾಡಿ ಜೀಟಿ ...ದ್ಧ ಬಿಜೆಪಿಯಿಂದ ...ಂತಗೌಡನೆಂಬ ಡಮ್ಮಿಯನ್ನು ...ನಲ್ಲೂ ಅನಂತ್ ಹಿತಾಸಕ್ತಿ ಕೆಲಸ ...ದೆ. ಹುಣಸೂರಿನಲ್ಲಿ ಹಾಲೀ ಶಾಸಕ ...ನಾಥ್ ಜನಾಂಗವಾದ ಕೋಮಟಿ ... ಒಟ್ಟು ಮತ ಹೆಚ್ಚೆಂದರೆ ಐನೂರು ... ಕುರುಬರು ಮತ್ತು ದಲಿತರು ... ಬೆನ್ನಿಗೆ ನಿಲ್ಲುವುದರಿಂದಲೇ ಜಾತಿ ...ದ್ಧದ ಮಂಜುನಾಥ್ ಗೆಲ್ಲುತ್ತಿರುವುದು. ...ನಾಥ್ ಸೋಲಿಸುವ ಮೂಲಕ ... ಪೆಟ್ಟು ನೀಡಬೇಕೆಂದರೆ ಕುರುಬರ ... ಒಡೆಯಬೇಕು. ಅದಕ್ಕೆ ಜೆಡಿಎಸ್‌ನ ...ಂದರೆ ಕುರುಬ ಜನಾಂಗಕ್ಕೆ ಸೇರಿದ ...ರಸ್ವಾಮಿಯನ್ನು ಜೆಡಿಎಸ್ ...ಯನ್ನಾಗಿಸಿರುವುದು!

...ಗಂತ ಬಿಜೆಪಿ ಕೂಡ ಜೆಡಿಎಸ್ ...ಕ್ಕೆ ಸ್ಪಂದಿಸಬೇಕಲ್ಲವೇ? ಜೆಡಿಎಸ್ ...ಬರ ಓಟ್ ಬ್ಯಾಂಕ್ ಧ್ವಂಸ ...ರಣೆಗೆ ನೆರವಾಗಲೆಂದೇ ಅಣ್ಣಯ್ಯ ...ನೆಂಬ ಡಮ್ಮಿಗೆ ಬಿಜೆಪಿ ಟಿಕೆಟ್ ...ದೆ. ಇದು ಅನಂತ್ ಮತ್ತು ದೇಗೌ. ...ನಿಗೊಂದು ಸಣ್ಣ ಉದಾಹರಣೆ ಯಷ್ಟೆ. ಹುಣಸೂರಿನ ...ರಿಲ್ಲಿ ಅರ್ಕ ವೈಶ್ಯರ ಹುಡುಗ ಮಂಜುನಾಥ್ ವಿರುದ್ಧ ...ಬಳೆಂಬ ಒಂದೇ ಕಾರಣಕ್ಕೆ, ಜೆಡಿಎಸ್‌ನ ಕುಮಾರಸ್ವಾಮಿಗೆ ಓಟು ಕೊಟ್ಟು ಸಿದ್ದು ಮುಖ್ಯಮಂತ್ರಿ ಕನಸಿಗೆ ಕೊಳ್ಳಿ ಇಡುತ್ತಾರಾ?



ಬೊಮ್ಮಾಯಿ




ಸೋಮಣ್ಣ

ಇದು ಕೇವಲ ಒಂದು ಕ್ಷೇತ್ರದ ಲೆಕ್ಕಾಚಾರವಷ್ಟೇ ಅಲ್ಲ. ಬೆಂಗಳೂರಿನ ಯಶವಂತಪುರದಲ್ಲಿ ಈ ಬಾರಿ ಕಾಂಗ್ರೆಸ್ ನಾಯಕ ಎಸ್.ಟಿ. ಸೋಮಶೇಖರ್ ಗೆಲ್ಲುವುದು ಶತಸ್ಸಿದ್ಧ. ಶೋಭಾ ಕರಂದ್ಲಾಜೆ ಕೂಡ ಇದನ್ನು ಮನಗಂಡೇ ಪಕ್ಕದ ರಾಜಾಜಿನಗರಕ್ಕೆ ವಲಸೆ ಹೋಗಬೇಕಾಯ್ತು. ಕಳೆದ ಪಾಲಿಕೆ ಚುನಾವಣೆಯ ಓಟುಗಳ ಲೆಕ್ಕಾಚಾರದ ಪ್ರಕಾರ ಎತ್ತಿಂದೆತ್ತ ಗುಣಿಸಿದರೂ ಸೋಮಶೇಖರ್ ಗೆಲ್ಲಲೇಬೇಕು. ಆದರೆ ಜೆಡಿಎಸ್ ಇಲ್ಲಿ ಜವರಾಯಿಗೌಡ ಎಂಬ ಧನಾಢ್ಯನನ್ನು ಕಣಕ್ಕಿಳಿಸಿದೆ. ಕಳೆದ ಬಾರಿ ಇಲ್ಲಿಗೆ ಜೆಡಿಎಸ್ ಅಭ್ಯರ್ಥಿಯಾಗಿದ್ದ ರೈತನಾಯಕ ಪಂಚಲಿಂಗಯ್ಯ ಬಂಡೆದ್ದು ಕಾಂಗ್ರೆಸ್ ಬೆಂಬಲಕ್ಕೆ ನಿಂತದ್ದು ಸೋಮಶೇಖರ್ ಗೆಲುವನ್ನು ನಿಚ್ಚಳಗೊಳಿಸಿದೆ. ಹಾಗಿದ್ದೂ ಜೆಡಿಎಸ್ ಗೆಲ್ಲಬೇಕೆಂದರೆ ಇಲ್ಲಿ ಜವರಾಯಿಗೌಡ ವಿರುದ್ಧ ಬಿಜೆಪಿ ಡಮ್ಮಿಯನ್ನು ಇಳಿಸಬೇಕು. ಅದಕ್ಕೆ ಅನಂತ್ ಹೆಚ್.ಎಲ್. ಕೃಷ್ಣಪ್ಪನೆಂಬ ದಲಿತ ಪುಢಾರಿಯನ್ನು ಬಿಜೆಪಿ ಟಿಕೆಟ್ಟಿನಿಂದ ಛೂ ಬಿಟ್ಟಿದ್ದಾರೆ.

ಬಿಜೆಪಿಯ ಕೃಷ್ಣಪ್ಪ ದಲಿತರ ಓಟು ಕಿತ್ತಷ್ಟೂ ಕಾಂಗ್ರೆಸ್ಸಿಗೆ ಅಪಾಯ ಕಟ್ಟಿಟ್ಟ ಬುತ್ತಿ!

ಬೆಂಗಳೂರಿನಲ್ಲೂ...!

ಹಾಗೇ ಗೋವಿಂದರಾಜನಗರಕ್ಕೆ ಬಂದರೆ ಇಲ್ಲಿ ಪ್ರಿಯಾಕೃಷ್ಣರ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿರುವವನು ವಿಜಯನಗರದ ಖತರ್‌ನಾಕ್ ಕೌನ್ಸಿಲರ್ ರವೀಂದ್ರ. ಇಲ್ಲಿ ರಂಗೇಗೌಡ ಜೆಡಿಎಸ್ ಅಭ್ಯರ್ಥಿ. ರಂಗೇಗೌಡರು ಒಕ್ಕಲಿಗರ ಓಟು ಕಿತ್ತಷ್ಟೂ ಪ್ರಿಯಾಕೃಷ್ಣರಿಗೆ ಸಮಸ್ಯೆಯಾಗುತ್ತದೆ. ಇದಕ್ಕೆ ಪ್ರತಿಯಾಗಿ ಪಕ್ಕದ ವಿಜಯನಗರಕ್ಕೆ ಕಾಂಗ್ರೆಸ್ಸಿನ ಕೃಷ್ಣಪ್ಪ ವಿರುದ್ಧ ಅನುಕೂಲವಾಗಲೆಂದು ಬಿಜೆಪಿಯ ಸೋಮಣ್ಣನ ವಿರುದ್ಧ ಕನ್ಯಾಕುಮಾರಿಗೌಡ ಎಂಬ ಒಕ್ಕಲಿಗರ ಹೆಂಗಸನ್ನು ಜೆಡಿಎಸ್ ಹಾಕಿದೆ. ಒಕ್ಕಲಿಗರ ಓಟು ಜೆಡಿಎಸ್ ಕಿತ್ತಷ್ಟೂ ಸೋಮಣ್ಣನಿಗೆ ಲಾಭ!



ಜಿ.ಟಿ. ದೇವೇಗೌಡ



ಪ್ರಹ್ಲಾದ್ ಜೋಷಿ

ಇದೇ ಹೊಂದಾಣಿಕೆ ಬೆಂಗಳೂರಿನ ದಾಸರಹಳ್ಳಿ, ಪದ್ಮನಾಭನಗರ, ಬಸವನ ಗುಡಿ, ಹೆಬ್ಬಾಳ, ರಾಜಾಜಿನಗರ, ಮಲ್ಲೇಶ್ವರಂ, ರಾಜರಾಜೇಶ್ವರಿನಗರ, ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ, ಕೆ.ಆರ್.ಪುರಗಳಲ್ಲೂ ಮುಂದುವರಿದಿದೆ. ದಾಸರಹಳ್ಳಿಯಲ್ಲಿ ಹಾಲೀ ಬಿಜೆಪಿ ಶಾಸಕ ಮುನಿರಾಜು ಗೆಲುವಿಗೆ ಪೂರಕವಾಗೇ ಲಗ್ಗೆರೆಯ ಅಂದಾನಪ್ಪನಿಗೆ ಜೆಡಿಎಸ್ ಟಿಕೆಟ್ ನೀಡಿದೆ. ಅಂದಾನಪ್ಪ ಎಷ್ಟೇ ತಿಣುಕಾಡಿದರೂ ಜೆಡಿಎಸ್ ಓಟ್‌ಬ್ಯಾಂಕ್ ಒಡೆಯಲೆಂದೇ ಹೆಗ್ಗನಹಳ್ಳಿಯ ಗೋವಿಂದೇಗೌಡನೆಂಬ ಮತ್ತೊಬ್ಬ ಜೆಡಿಎಸ್ ಕೌನ್ಸಿಲರ್ ಬಂಡಾಯವಾಗಿ ನಿಂತಿರುವುದರಿಂದ ಇಲ್ಲಿ ಬಿಜೆಪಿಗೇ ಲಾಭ!

ಹೆಬ್ಬಾಳದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಜಾಫರ್ ಷರೀಫ್ ಮೊಮ್ಮಗ ಅಬ್ದುಲ್ ರೆಹಮಾನ್ ಷರೀಫ್ ನಿಂತಿದ್ದರಿಂದಾಗಿ ಅಲ್ಲಿ ಜೆಡಿಎಸ್‌ನ ಅಬ್ದುಲ್ ಅಜೀಂ ಕೀಳುವ ಪ್ರತಿ ಮುಸಲ್ಮಾನರ ಓಟೂ ಬಿಜೆಪಿಯ ಭೂಗತ ಅಭ್ಯರ್ಥಿ ಕಟ್ಟಾ ಗೆಲ್ಲುವಿಗೆ ನೆರವಾಗುತ್ತದೆ. ಬೊಮ್ಮನಹಳ್ಳಿಯಲ್ಲಿ ಸತೀಶ್ ರೆಡ್ಡಿಗೆ ಅನುಕೂಲವಾಗಲೆಂದೇ ಕಾಂಗ್ರೆಸ್ ನಾಯಕ ಹುಳಿಮಾವು ರಾಮಯ್ಯನ ಮಗನಿಗೆ ಜೆಡಿಎಸ್ ಟಿಕೆಟ್ ಕೊಟ್ಟಿದೆ. ಆತ ಕಾಂಗ್ರೆಸ್ ಓಟು ಕಿತ್ತಷ್ಟೂ ಸತೀಶ್ ರೆಡ್ಡಿಗೆ ಲಾಭ.

ಬೆಂಗಳೂರಿನ ಬಹುತೇಕ ಕ್ಷೇತ್ರಗಳಲ್ಲಿ ಇಂಥದೊಂದು ಲೆಕ್ಕಾಚಾರವೇ ಅನಂತ್ ಮತ್ತು ದೇವೇಗೌಡರ ಗುಪ್ತ ಮೈತ್ರಿಯನ್ನು ಸಾರಿ ಹೇಳುವಂತೆ ಉತ್ತರ ಕರ್ನಾಟಕದ ಹಲವೆಡೆಯೂ ನಡೆದಿದೆ. ಬಸವನ ಬಾಗೇವಾಡಿಯಲ್ಲಿ ಬಿಜೆಪಿಯ ಬೆಳ್ಳುಬ್ಬಿಗೆ ಲಾಭವಾಗಲೆಂದು ಪಂಚಮಸಾಲಿ ಅಪ್ಪುಗೌಡರ್‌ಗೆ ಜೆಡಿಎಸ್ ಟಿಕೆಟ್ ನೀಡಿದಂತೆಯೇ ಶೆಟ್ಟರ್ ವಿರುದ್ಧ ಜೆಡಿಎಸ್ ಸೋಲುವ ಕುದುರೆಯನ್ನು ಕಣಕ್ಕಿಳಿಸಿದೆ. ಹಾಗೇ ಕುಮಾರಸ್ವಾಮಿ ವಿರುದ್ಧ ರಾಮನಗರದಲ್ಲಿ ಬಿಜೆಪಿಯಿಂದ ನಿಂತ ಕೆ.ಪಿ. ದೊಡ್ಡಿ ಶಿವಮಾದುಗೆ ಠೇವಣಿ ಹುಟ್ಟುವುದೂ ಕಷ್ಟ. ಬೇಲೂರಿನಂಥ ಸಾಮಾನ್ಯ ಕ್ಷೇತ್ರದಲ್ಲೂ ಜೆಡಿಎಸ್ ತೊರೆದು ಕೆಜೆಪಿಗೆ ಹೋದರೆಂಬ ಒಂದೇ ಕಾರಣಕ್ಕೆ, ಸಕಲೇಶಪುರದ ಮಾಜಿ ಶಾಸಕ ವಿಶ್ವನಾಥ್ ವಿರುದ್ಧ ಜೆಡಿಎಸ್ ಲಿಂಗಾಯತ ಅಭ್ಯರ್ಥಿಯನ್ನು ಹಾಕುತ್ತದೆ. ಅದನ್ನು ಬೆಂಬಲಿಸಿದ ಬಿಜೆಪಿ ಅನಾಮಧೇಯನಿಗೆ ಟಿಕೆಟ್ ನೀಡುತ್ತದೆ!

ಇದು ದೇವೇಗೌಡರ ಆದೇಶಕ್ಕೆ ತಕ್ಕಂತೆ ಅನಂತ್ ತಾಳ ಹಾಕುತ್ತಿರುವ ಪರಿ. ರಾಜ್ಯದ 224 ಕ್ಷೇತ್ರಗಳ ಪೈಕಿ ಕನಿಷ್ಠ ನೂರರಲ್ಲಾದರೂ ಕೊಟ್ಟುಕೊಳ್ಳುವ ವ್ಯವಹಾರಕ್ಕೆ ಅನಂತ್ ಕೈಯಿಟ್ಟಿರುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಕೊನೆ ಘಳಿಗೆಯಲ್ಲಿ ಇನ್ನೇನು ಕೆಜೆಪಿಗೆ ಹೋಗೇಬಿಟ್ಟರು ಅಂತಿದ್ದ ಉಮೇಶ್ ಕತ್ತಿಗೆ ನಾಳೆ ನೀವೇ ಉಪ ಮುಖ್ಯಮಂತ್ರಿಯೆಂದು ಅನಂತ್ ಪಂಚ್ ಹೊಡೆದದ್ದೂ ಗುಟ್ಟೇನಲ್ಲ. ವಿಕಟವೆಂದರೆ ಬೊಮ್ಮಾಯಿ ಮತ್ತು ನಿರಾಣಿಗೂ ಇದೇ ರೀತಿ ಡಿಸಿಎಂ ಪಟ್ಟದ ಆಮಿಷವೊಡ್ಡಿ ಯಡ್ಡಿ ತೆಕ್ಕೆಯಿಂದ ಸೆಳಕೊಂಡದ್ದು ಸುಳ್ಳಲ್ಲ.

ಹಗಲುಕನಸು ಕಾಣುವುದು ತಪ್ಪಲ್ಲ; ಆದರೆ ನನಸಾಗಬೇಕಲ್ಲ?

● ರಾ.ಸೋಮನಾಥ್

ಶ್ರೀರಂಗಪಟ್ಟಣದಲ್ಲಿ ಸೋಲಿನ ಖಾತೆ ತೆರೆದ ಕಾಂಗ್ರೆಸ

ಕೊನೆಗೂ ಅಂಬರೀಷ್ ಹಠವೇ ಗೆದ್ದಿದೆ. ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಿಂದ ರವೀಂದ್ರ ಶ್ರೀಕಂಠಯ್ಯನಿಗೆ ಕಾಂಗ್ರೆಸ್ ಟಿಕೆಟ್ ಘೋಷಿಸಿದ ತಕ್ಷಣ ಸಿಟ್ಟಿಗೆದ್ದ ಅಂಬಿ ತಾನು ಮಂಡ್ಯದಿಂದ ಸ್ಪರ್ಧಿಸುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿದ್ದಕ್ಕೆ ಬೆದರಿದ ರಾಜ್ಯ ಕಾಂಗ್ರೆಸ್ ನಾಯಕರು ರವೀಂದ್ರನಿಗೆ ಮತ್ತೊಮ್ಮೆ 'ಕೈ' ಕೊಟ್ಟು ಅಂಬಿ ಶಿಷ್ಯ ಎಸ್.ಎಲ್.ಲಿಂಗರಾಜುಗೆ 'ಬಿ' ಫಾರಂ ನೀಡಿದ್ದಾರೆ. ಹಾಗಾಗಿ ಇಲ್ಲಿ ಚುನಾವಣೆಗೂ ಮೊದಲೇ ಕಾಂಗ್ರೆಸ್ ಸೋಲಿನ ಖಾತೆ ತೆರೆದಿದೆ.

ಎಸ್.ಎಂ.ಕೃಷ್ಣ ಮತ್ತು ಡಿ.ಕೆ.ಶಿವಕುಮಾರ್ ತರಹದ ನಾಯಕರನ್ನು ಹಿಡಿದುಕೊಂಡು ಅಂಬಿಯ ಪ್ರಬಲ ವಿರೋಧದ ನಡುವೆಯೂ ಟಿಕೆಟ್ ತಂದಿದ್ದ ರವೀಂದ್ರರ ಆಸೆಯನ್ನು ಒಂದೇ ದಿನದಲ್ಲಿ ಅಂಬಿ ನುಚ್ಚುನೂರು ಮಾಡಿದ್ದಾರೆ. ಇದರಿಂದಾಗಿ ಅಂಬಿ ಜನರ ಆಕ್ರೋಶಕ್ಕೆ ಗುರಿಯಾಗಿದ್ದಾರೆ. ಅಷ್ಟೇ ಅಲ್ಲ, ಈಗ ರವೀಂದ್ರ ಶ್ರೀರಂಗಪಟ್ಟಣ ಮಾತ್ರವಲ್ಲದೆ ಮಂಡ್ಯದಲ್ಲೂ ನಾಮಪತ್ರ ಸಲ್ಲಿಸುವ ಮೂಲಕ ಬಂಡಾಯ ಅಭ್ಯರ್ಥಿಯಾಗಿದ್ದಾರಲ್ಲದೆ ಎರಡೂ ಕಡೆ ಅಂಬಿಗೆ ನೇರ ಸವಾಲು ಹಾಕಿದ್ದಾರೆ.

ಜೆಡಿಎಸ್‌ನ ರಮೇಶ್‌ಬಾಬು ಬಂಡಿಸಿದ್ದೇಗೌಡರ ಎದುರು ನಿಜಕ್ಕೂ ಫೈಟ್ ನೀಡಬಲ್ಲ ಸಾಮರ್ಥ್ಯ ಇದ್ದದ್ದು ರವೀಂದ್ರರಿಗೆ ಹೊರತು ಬೇರ್‍ಯಾರಿಗೂ ಅಲ್ಲ, ಆ ಕಾರಣಕ್ಕೇ ಅವರಿಗೆ ಟಿಕೆಟ್ ನಿಡಲಾಗಿತ್ತು. ಆದರೆ ಅಂಬಿಗೆ ಅದು ಸಹ್ಯವಾಗದಿದ್ದರಿಂದ ಮುನಿಸಿಕೊಂಡರು. ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಇತರರು ಅಂಬಿ ಮನವೊಲಿಸಲು ಪ್ರಯತ್ನಿಸಿದರೂ ಅಂಬಿ ಸುತರಾಂ ಒಪ್ಪಲಿಲ್ಲ, ಕಡೆಗೆ ಹೈಕಮಾಂಡ್ ವಿಧಿ ಇಲ್ಲದೆ ಅಂಬಿಯ ಬ್ಲ್ಯಾಕ್‌ಮೇಲ್‌ಗೆ ಮಣಿಯಿತು.

ಕಳೆದ ಬಾರಿ ತನ್ನ ಶಿಷ್ಯ ರವೀಂದ್ರನಿಗೆ ಟಿಕೆಟ್ ತಪ್ಪಿಸಿದ್ದ ಅಂಬಿ ಈ ಬಾರಿಯೂ ಆ ನಿಟ್ಟಿನಲ್ಲಿ ಗೆದ್ದಿದ್ದರಿಂದ ತೀವ್ರ ಆಕ್ರೋಶಗೊಂಡಿರುವ ಎಸ್.ಎಂ.ಕೃಷ್ಣ ತಾನು ಚುನಾವಣಾ ಪ್ರಚಾರಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಜೊತೆಗೆ ರವೀಂದ್ರರ ಬೆಂಬಲಿಗರು ನೂರಾರು ಬೈಕ್‌ಗಳಲ್ಲಿ ಶ್ರೀರಂಗಪಟ್ಟಣದಿಂದ ಮಂಡ್ಯಕ್ಕೆ ಬಂದು ಜಿಲ್ಲಾ ಕಾಂಗ್ರೆಸ್ ಕಚೇರಿ ಎದುರು ಅಂಬಿ ಪ್ರತಿಕೃತಿ ದಹಿಸಿ ಅವಾಚ್ಯ ಶಬ್ದಗಳನ್ನು ಬಳಸಿ ಬೈದು ಸಿಟ್ಟು ಕಾರಿಕೊಂಡಿದ್ದಾರೆ.

ಅಂಬಿಯ ಹಟದಿಂದಾಗಿ ಈಗ 'ಬಿ' ಫಾರಂ ಪಡೆದಿರುವ ಜಿಲ್ಲಾ ಪಂಚಾಯತಿಯ ಮಾಜಿ ಸದಸ್ಯ ಎಸ್.ಎಲ್.ಲಿಂಗರಾಜುಗೆ ಕ್ಷೇತ್ರದಲ್ಲಿ ಅಷ್ಟೇನೂ ಬೆಂಬಲವಿಲ್ಲ, ನೈಸ್ ಅಶೋಕ್ ಖೇಣಿಯ ಚಮಚಾಗಿರಿ ಮಾಡುತ್ತಾ ಆತನ ಹಡಬೆ ದುಡ್ಡಿನಿಂದ ದುಂಡಗಾಗಿರುವ ಲಿಂಗರಾಜು ಮತ್ತು ಆತನ ಅಳಿಯ ಸಚ್ಚಿದಾನಂದನಿಗೆ ಕ್ಷೇತ್ರದಲ್ಲಿ ಕವಡೆಕಾಸಿನ ಕಿಮ್ಮತ್ತಿಲ್ಲ. ಈ ಮಾವ-ಅಳಿಯ ಇದುವರೆಗೂ ಕ್ಷೇತ್ರದಲ್ಲಿ ನಡೆದಿರುವ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದು ಅಷ್ಟರಲ್ಲೇ ಇದೆ.

ರವೀಂದ್ರರಿಗೆ ಟಿಕೆಟ್ ತಪ್ಪುವಲ್ಲಿ ಅಶೋಕ್ ಖೇಣಿಯ ಕುರುಡು ಕಾಂಚಾಣವೂ ಪ್ರಭಾವ ಬೀರಿದೆ. ಖೇಣಿಯ ಬೆಂಗಳೂರು-ಮೈಸೂರು ಕಾರಿಡಾರ್ ರಸ್ತೆಗೆ ರೈತರಿಂದ ಪಡೆಯುವ ಭೂಮಿಗೆ ಹೆಚ್ಚಿನ ಪರಿಹಾರ ನೀಡಬೇಕೆಂದು ರವೀಂದ್ರ ತಮ್ಮ ಜಮೀನು ಕಳೆದುಕೊಳ್ಳುವ ರೈತರೊಂದಿಗೆ ಸೇರಿ ಪ್ರತಿಭಟನೆಗೆ ಇಳಿದಿದ್ದರು. ಹಾಗಾಗಿ ಖೇಣಿಗೂ ರವೀಂದ್ರ ಗೆದ್ದು ಶಾಸಕನಾಗುವುದು ಬೇಡವಾಗಿತ್ತು, ಬದಲಾಗಿ ತನಗೂ ಮತ್ತು ಅಂಬಿಗೂ ಬೇಕಾಗಿರುವ ಲಿಂಗರಾಜುಗೆ ಟಿಕೆಟ್ ಸಿಗಬೇಕೆಂದು ಆಶೆ ಖೇಣಿಯದ್ದಾಗಿತ್ತು, ಆದ್ದರಿಂದ ಖೇಣಿಯೂ ಇದರಲ್ಲಿ ಕೈಯಾಡಿಸಿದ್ದಾನೆ.

ಚಿಕ್ಕಮಕ್ಕಳಂತೆ ಚಂಡಿಹಿಡಿದು ಶ್ರೀರಂಗಪಟ್ಟಣದಲ್ಲಿ ರವೀಂದ್ರರಿಗೆ 'ಬಿ' ಫಾರಂ ತಪ್ಪಿಸಿ ಲಿಂಗರಾಜುಗೆ ಟಿಕೆಟ್ ಕೊಡಿಸುವ ಮೂಲಕ ಅಂಬರೀಷ್ ಮೊದಲ ಸುತ್ತಿನಲ್ಲಿ ಗೆದ್ದಿದ್ದಾರೆ ನಿಜ. ಆದರೆ ಚುನಾವಣೆಗೂ ಮುನ್ನವೇ ಕಾಂಗ್ರೆಸ್ ಇಲ್ಲಿ ಜೆಡಿಎಸ್‌ನ ರಮೇಶ್‌ಬಾಬು ಎದುರು ಮಕಾಡೆ ಮಲಗಿರುವುದು ಈಗಲೇ ಗೊತ್ತಾಗಿದೆ.

ಮಳವಳ್ಳಿಯಲ್ಲಿ ನರೇಂದ್ರ ಮೇಲುಗೈ

ಮಳವಳ್ಳಿಯ ಕಾಂಗ್ರೆಸ್ ಟಿಕೆಟ್ ನರೇಂದ್ರಸ್ವಾಮಿಗೆ ಸಿಗಬಾರದೆಂದು ಮಲ್ಲಾಜಮ್ಮ, ಯಮದೂರು ಸಿದ್ದರಾಜು, ಡಾ.ಮೂರ್ತಿ ಎಂಬ 'ತ್ರಿಮೂರ್ತಿ'ಗಳ ಬಳಗ ಎಷ್ಟೆಲ್ಲಾ ಹರಸಾಹಸ ಮಾಡಿ, ತಿಪ್ಪರಲಾಗ ಹಾಕಿದರೂ ಕ್ಯಾರೇ ಎನ್ನದ ಸೋನಿಯಾ ಗಾಂಧಿ ಸಿದ್ದರಾಮಯ್ಯನವರ ಮಾತಿನಂತೆ ನರೇಂದ್ರಸ್ವಾಮಿಗೆ 'ಬಿ' ಫಾರಂ ನೀಡಿದ್ದಾರೆ.

ನರೇಂದ್ರಸ್ವಾಮಿ ವಿರುದ್ಧ ದೆಹಲಿಯಲ್ಲಿರುವ ಸೋನಿಯಾ ನಿವಾಸ ಹಾಗೂ ಕಾಂಗ್ರೆಸ್‌ನ ರಾಷ್ಟ್ರ ನಾಯಕರ ಮುಂದೆ ಅತ್ತು ಕರೆದು ರಂಪಾಟ ಮಾಡಿದ ಮಲ್ಲಾಜಮ್ಮ ತನಗೇ ಟಿಕೆಟ್ ನೀಡಬೇಕೆಂದು ಪಟ್ಟು ಹಿಡಿದಿದ್ದರು. ಆದರೆ ಮಳವಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಮಲ್ಲಾಜಮ್ಮ, ಸಿದ್ದರಾಜು, ಡಾ.ಮೂರ್ತಿ ಇವರಲ್ಲಿ ಯಾರಿಗೆ ಟಿಕೆಟ್ ನೀಡಿದರೂ ಕಾಂಗ್ರೆಸ್ ಪಕ್ಷಕ್ಕೆ ಠೇವಣಿಯೂ ಹುಟ್ಟಲಾರದು ಎಂದು ನಂಬಿದ ಕಾಂಗ್ರೆಸ್ ಹೈಕಮಾಂಡ್ ನರೇಂದ್ರಸ್ವಾಮಿಗೆ ಮಣೆ ಹಾಕಿದೆ.

ಕಳೆದ ಚುನಾವಣೆಯಲ್ಲೇ ನರೇಂದ್ರಸ್ವಾಮಿ ಗೆಲ್ಲುವ ವಾತಾವರಣವಿದ್ದರೂ ಮಲ್ಲಿಕಾರ್ಜುನ ಖರ್ಗೆ ತನ್ನ ಶಿಷ್ಯ ಯಮದೂರು ಸಿದ್ದರಾಜುಗೆ 'ಬಿ' ಫಾರಂ ಕೊಡಿಸುವ ಮೂಲಕ ನರೇಂದ್ರ ಸ್ವಾಮಿಗೆ ಟಿಕೆಟ್ ತಪ್ಪಿಸಿದ್ದರು. ಟಿಕೆಟ್ ವಂಚಿತರಾದ ನರೇಂದ್ರಸ್ವಾಮಿ 'ಬಂಡಾಯ ಕಾಂಗ್ರೆಸ್' ಅಭ್ಯರ್ಥಿಯಾಗಿ ಕಣಕ್ಕಿಳಿದರು. ಅದಕ್ಕೂ ಹಿಂದೆ ಎರಡು ಬಾರಿ ಸೋತಿದ್ದ ಅನುಕಂಪದ ಜೊತೆಗೆ ಕಾಂಗ್ರೆಸ್ ಟಿಕೆಟ್ ವಂಚನೆ ಜೊತೆಗೂಡಿದ್ದರಿಂದ ಕ್ಷೇತ್ರದ ಮತದಾರರು ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ ಯಮದೂರು ಸಿದ್ದರಾಜು ಮತ್ತು ಜೆಡಿಎಸ್‌ನ ಅನ್ನದಾನಿಯನ್ನು ಮನೆಗೆ ಕಳುಹಿಸಿದ್ದರು.

ಪ್ರಸ್ತುತ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ನರೇಂದ್ರ ಸ್ವಾಮಿ, ಜೆಡಿಎಸ್‌ನಿಂದ ಅನ್ನದಾನಿ, ಕೆಜೆಪಿಯಿಂದ ಬೆಂಗಳೂರಿನ ರಿಯಲ್ ಎಸ್ಟೇಟ್ ಕುಳ ಮುನಿರಾಜು, ಜೆಡಿ(ಯು)ನಿಂದ ಮಾಜಿ ಸಚಿವ ಬಿ.ಸೋಮಶೇಖರ್ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಡಾ.ಮೂರ್ತಿ ಟಿಕೆಟ್ ಸಿಗದೆ ಬಿಎಸ್‌ಆರ್ ಕಾಂಗ್ರೆಸ್ ಸೇರ್ಪಡೆಯಾಗಿ ಸ್ಪರ್ಧಿಸುತ್ತಿದ್ದಾರೆ.

ಕೇಂದ್ರ ಸರ್ಕಾರದ 'ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಯೋಜನೆ'ಯನ್ನು ಕೇಂದ್ರ ಸಚಿವ ಖರ್ಗೆ ಮೂಲಕ ಮಂಜೂರು ಮಾಡಿಸಿಕೊಂಡಿದಲ್ಲದೆ ಅದಕ್ಕೆಂದು ಬಂದ ಮೂರು ಕೋಟಿ ರೂಪಾಯಿಗಳನ್ನೂ ಬಿಂಬಿಸಿದ ವ್ಯಕ್ತಿ ಈ ಡಾ.ಮೂರ್ತಿ. ಆದರೆ ಕ್ಷೇತ್ರದ ಜನತೆಗೆ ಡಾ.ಮೂರ್ತಿಯ ನಾಟಕ ಬಹಳ ಬೇಗ ಗೊತ್ತಾಗಿತ್ತು.

ಇನ್ನು ಯಮದೂರು ಸಿದ್ದರಾಜು, ದಡದಪುರ ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮೊದಲಾದವರು ಗತ್ಯಂತರವಿಲ್ಲದೆ ನರೇಂದ್ರಸ್ವಾಮಿ ಪರ ನಿಂತಿದ್ದಾರೆ. ಮಲ್ಲಾಜಮ್ಮ ಏನು ಮಾಡುತ್ತಾರೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.


ಜೆಡಿಎಸ್‌ನ ಅನ್ನದಾನಿ ಕಳೆದ ಬಾರಿ ಸೋಲಲು ಮುಖ್ಯ ಕಾರಣ ಹಲಗೂರು ಹೋಬಳಿ. ಕುಮಾರಸ್ವಾಮಿ ಸಿಎಂ ಆಗಿದ್ದಾಗ ಅಧಿಕಾರ ದರ್ಪದಿಂದ ಮೆರೆದ ಅನ್ನದಾನಿ ಒಕ್ಕಲಿಗರು ಹಾಗೂ ದಲಿತರ ಮಧ್ಯೆ ಸಂಘರ್ಷ ತಂದಿಟ್ಟು, ಒಕ್ಕಲಿಗರ ವಿರುದ್ಧ ಅಟ್ರಾಸಿಟಿ ಕೇಸುಗಳು ದಾಖಲಾಗುವಂತೆ ಮಾಡಿದ್ದರು. ಇದರಿಂದ ಸಿಟ್ಟಾಗಿದ್ದ ಒಕ್ಕಲಿಗರು ಅನ್ನದಾನಿ ವಿರುದ್ಧ ತೊಡೆತಟ್ಟಿ ನರೇಂದ್ರಸ್ವಾಮಿಗೆ ಬೆಂಬಲ ನೀಡಿದ್ದರು.



ಕೆ.ಬಿ. ಚಂದ್ರಶೇಖರ್



ಕೆ.ಸಿ. ನಾರಾಯಣಗೌಡ




ರಮೇಶ್ ಬಾಬು



ಕೆ.ಆರ್. ಪೇಟೆ ಕೃಷ್ಣ



ಅಂದಾನಿ




ಲಿಂಗರಾಜು



ಅಂಬರೀಷ್



ನರೇಂದ್ರ ಸ್ವಾಮಿ



ಮೂರ್ತಿ



ರವೀಂದ್ರ ಶ್ರೀಕಂಠಯ್ಯ

ಅನ್ನದಾನಿಯ ಈ ಧೋರಣೆಯ ವಿರುದ್ಧ ಸಿಡಿದೆದ್ದ ಹಲಗೂರು ಹೋಬಳಿಯ ಒಕ್ಕಲಿಗ ಮುಖಂಡರು ಕಾಂಗ್ರೆಸ್ ಹಾಗೂ ಕೆಜೆಪಿ ಸೇರಿದ್ದಾರೆ. ಈ ಭಾಗದ ಪ್ರಮುಖ ಮುಖಂಡರಾದ ಜಿ.ಪಂ ಮಾಜಿ ಸದಸ್ಯ ರವೀಗೌಡ, ಹುಸ್ಕೂರು ಲೋಕೇಶ್ ಜೆಡಿಎಸ್ ತೊರೆದು ಕೆಜೆಪಿಯ ರೊಕ್ಕದ ಕುಳ ಮುನಿರಾಜುಗೆ ಜೈ ಎಂದಿದ್ದಾರೆ. ಹಾಗಾಗಿ ಇಲ್ಲಿಯ ಒಕ್ಕಲಿಗರ ಮತಗಳು ಮುನಿರಾಜು ಹಾಗೂ ನರೇಂದ್ರಸ್ವಾಮಿಯವರಿಗೆ ಹಂಚಿಕೆಯಾಗಲಿದೆ. ಇದು ಅನ್ನದಾನಿಗೆ ಮೈನಸ್ ಪಾಯಿಂಟ್ ಆಗಲಿದೆ.

ಈಗಾಗಲೇ ಮಳವಳ್ಳಿ ಕ್ಷೇತ್ರದಲ್ಲಿ ಪ್ರಚಾರ ಬಿರುಸುಗೊಂಡಿದೆ. ಅನ್ನದಾನಿ ಪರವಾಗಿ ಹೆಚ್.ಡಿ.ಕುಮಾರಸ್ವಾಮಿ ಒಂದು ರೌಂಡ್ ಪ್ರಚಾರ ನಡೆಸಿದ್ದಾರೆ. ನರೇಂದ್ರಸ್ವಾಮಿ ಪರವಾಗಿ ಸಿದ್ದರಾಮಯ್ಯ ಸಿ.ಎಂ.ಇಬ್ರಾಹಿಂ ಬಂದು ಪ್ರಚಾರ ಮಾಡಿದ್ದಾರೆ. "ಈ ಬಾರಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದ್ದು, ನಾನು ಕೂಡ ಸಿಎಂ ಆಕಾಂಕ್ಷಿಯಾಗಿದ್ದು ಈ ಚುನಾವಣೆಯಲ್ಲೂ ನರೇಂದ್ರಸ್ವಾಮಿಗೆ ಆಶೀರ್ವಾದ ಮಾಡಬೇಕು" ಎಂದು ಸಿದ್ದರಾಮಯ್ಯ ಕೋರಿದ್ದು ಕ್ಷೇತ್ರದಲ್ಲಿ 34 ಸಾವಿರದಷ್ಟಿರುವ ಕುರುಬ ಮತದಾರರ ಮೇಲೆ ಪ್ರಭಾವ ಬೀರಲಿದೆ.

ಕಳೆದ ಬಾರಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಕಲ್ಕುಣಿ ಮಹದೇವಯ್ಯನವರು 30 ಸಾವಿರಕ್ಕೂ ಅಧಿ... ಮತಗಳಿಸಿದ್ದರು. ಅವರ ನಿಧನದ ನಂತರ ಅವರ ಪ... ಸೌಭಾಗ್ಯ ಮಹದೇವಯ್ಯನವರಿಗೆ ಬಿಜೆಪಿ ಟಿಕೆಟ್ ಕೊಡ... ಮುಂದಾಗಿತ್ತು, ಆದರೆ ಸೌಭಾಗ್ಯ ಮಹದೇವಯ್ಯ ಹಾಗು ಅವರ ಪುತ್ರ ಸುಹಾಸ್‌ಪ್ರಭು ಸೇರಿದಂತೆ ಬಿಜೆಪಿಯ... ಪ್ರಮುಖ ಮುಖಂಡರು ನರೇಂದ್ರಸ್ವಾಮಿಗೆ ಬೆಂಬ... ಸೂಚಿಸಿ ಕಾಂಗ್ರೆಸ್ ಪಕ್ಷ ಸೇರಿದ್ದಾರೆ. ಇವರಿಬ್ಬ... ಆಗಮನದಿಂದ ಸುಮಾರು 15,000ಕ್ಕೂ ಹೆಚ್ಚು ಮತಗಳ... ಕಾಂಗ್ರೆಸ್ ಪಕ್ಷಕ್ಕೆ ಬೀಳಲಿರುವುದ... ನರೇಂದ್ರಸ್ವಾಮಿಗೆ ಪ್ಲಸ್ ಆಗಲಿದೆ.

ಮಂಡ್ಯ: ಅಂಬಿಗೆ ಬಂಡಾಯದ ಲಾಭ!

ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಹಾ... ಶಾಸಕ ಎಂ.ಶ್ರೀನಿವಾಸ್‌ಗೆ ಜೆಡಿಎಸ್ ಟಿಕೆಟ್... ನೀಡಿದ್ದು, ಮತ್ತೊಬ್ಬ ಪ್ರಬಲ ಟಿಕೆಟ್... ಆಕಾಂಕ್ಷಿ ಮಾಜಿ ಸಚಿವ ಎಸ್.ಡಿ.ಜಯರಾ... ಅವರ ಪುತ್ರ ಅಶೋಕ್ ಜಯರಾ... ಬಂಡಾಯವೇಳಲು ಕಾರಣವಾಗಿದ... ಜೆಡಿಎಸ್ ಒಳಗಿನ ಬಂಡಾಯದ ಲಾಭವನ್ನು ಪಡೆದು ಅಂಬರೀಶ್ ಇಲ್ಲಿ ಗೆಲುವು... ಸಾಧಿಸುವ ತವಕದಲ್ಲಿದ್ದಾರೆ.

ಸ್ವಾತಂತ್ರ್ಯದ ನಂತರ ಕಾಂಗ್ರೆಸ್‌ನ... ಭದ್ರಕೋಟೆಯಾಗಿದ್ದ ಮಂಡ್ಯ ಕ್ಷೇತ್ರವನ್ನು ಮೊದಲು ಬೇಧಿಸಿದವರು ಜನತಾ ದಳದ... ಎಸ್.ಡಿ.ಜಯರಾಂ. ಅವರ ನಿಧನದ ನಂತ... ಕಾಂಗ್ರೆಸ್ ಮತ್ತೆ ಇಲ್ಲಿ ಗೆದ್ದಿತ್ತು, ಕಳೆದ... ಎರಡು ಚುನಾವಣೆಗಳಲ್ಲಿ ಮಂಡ್ಯ ಕ್ಷೇತ್ರವನ್ನು ಮತ್ತೆ ಜೆಡಿಎಸ್ ತೆಕ್ಕೆಗೆ ತೆಗೆದುಕೊಂಡವರು... ಎಂ.ಶ್ರೀನಿವಾಸ್. ಈಗ ಮೂರನೆ ಬಾರಿ... ಗೆಲ್ಲಲು ಎಂ.ಶ್ರೀನಿವಾಸರಿಗೆ ತೊಡಕಾಗಿ... ರುವವರು ಜೆಡಿಎಸ್‌ನ ಬಂಡಾಯ... ಅಭ್ಯರ್ಥಿಗಳು.

ಜೆಡಿಎಸ್ ಟಿಕೆಟ್ ಪಡೆಯಲು ಈ... ಬಾರಿ ಆಕಾಂಕ್ಷಿಗಳ ದೊಡ್ಡ ದಂಡೇ ಇತ್ತು... ಚಂದಗಾಲು ಶಿವಣ್ಣ ಅಶೋಕ್ ಜಯರಾಂ... ಮೀರಾ ಶಿವಲಿಂಗಯ್ಯ ಸೇರಿದಂತೆ ಹಲವರು... ಭಾರೀ ಪ್ರಯತ್ನ ನಡೆಸಿದ್ದರು. ಅದರಲ್ಲೂ... ಅಶೋಕ್ ಜಯರಾಂ ಹಾಗೂ ಚಂದಗಾಲು... ಶಿವಣ್ಣ ಕಡೆಗಳಿಗೆಯವರೆಗೂ ಕಸರತ್ತು... ನಡೆಸಿದ್ದರು.

ಇದರಿಂದ ತೀವ್ರ ಇಕ್ಕಟ್ಟಿಗೆ ಒಳಗಾದ... ಕುಮಾರಸ್ವಾಮಿ ನಾಮಪತ್ರ ಸಲ್ಲಿಸುವ... ಕೊನೆಯ ದಿನದವರೆಗೂ ಈ ಕ್ಷೇತ್ರದ... ಅಭ್ಯರ್ಥಿಯನ್ನು ಘೋಷಿಸಿರಲಿಲ್ಲ, ಕೊನೆಗೂ... 'ಬಿ' ಫಾರಂನ್ನು ಹಾಲಿ ಶಾಸಕ... ಎಂ.ಶ್ರೀನಿವಾಸ್‌ಗೆ ಕೊಟ್ಟ ಕುಮಾರಸ್ವಾಮಿ... ಹಾಗೂ ದೇವೇಗೌಡರ ವಿರುದ್ಧ... ಸಿಟ್ಟಿಗೆದ್ದಿರುವ ಅಶೋಕ್ ಜಯರಾಂ... ಬಂಡಾಯ ಸಾರಿದ್ದಾರೆ.

ಅಶೋಕ್ ಜಯರಾಂ ಬಂಡಾಯಕ್ಕೆ ಮಾಜಿ ಶಾಸಕರಾದ... ಜಿ.ಬಿ.ಶಿವಕುಮಾರ್, ಹೆಚ್.ಬಿ.ರಾಮು, ಕೆ.ಟಿ.ಶ್ರೀಕಂಠೇಗೌಡ... ಮೊದಲಾದವರು ಸಾಥ್ ನೀಡಿ ಹಾಲಿ ಶಾಸಕ... ಎಂ.ಶ್ರೀನಿವಾಸ್‌ಗೆ ಬೆವರಿಳಿಯುವಂತೆ ಮಾಡಿದ್ದಾರೆ. ಕಳೆದ... ಮೂರು ವರ್ಷಗಳಿಂದ ದೇವೇಗೌಡರ ಮಾತಿನಂತೆ ಮಂಡ್ಯ... ಕ್ಷೇತ್ರದಲ್ಲಿ ಜೆಡಿಎಸ್ ಕಟ್ಟಲು ಕೋಟ್ಯಾಂತರ ರೂಪಾಯಿ... ಬಂಡವಾಳ ಹಾಕಿದ್ದ ಅಶೋಕ್ ಜಯರಾಂ ಶಾಸಕನಾಗುವ... ಪ್ರಬಲ ಆಸೆ ಇಟ್ಟುಕೊಂಡಿದ್ದರು. ಅವರ ಆಸೆಗೆ... ಕುಮಾರಸ್ವಾಮಿ ತಣ್ಣೀರೆರಚಿರುವುದು ಅವರು... ಕುದ್ಧರಾಗುವಂತೆ ಮಾಡಿದೆ.

ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಮಾಜಿ ಸಚಿವ... ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಂ.ಎಸ್.ಆತ್ಮಾನಂದರಿಗೆ ಸಿಗಬೇಕಿತ್ತು... ಕಳೆದ ಬಾರಿ ಶ್ರೀರಂಗಪಟ್ಟಣ ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ನ್ನೂ... ಕೊನೆಯ ಗಳಿಗೆಯಲ್ಲಿ ರವೀಂದ್ರ ಶ್ರೀಕಂಠಯ್ಯನಿಗೆ ತಪ್ಪಿಸಿ... ಪಡೆದುಕೊಂಡ ರೆಬಲ್‌ಸ್ಟಾರ್ ಅಂಬರೀಶ್ ವಿರುದ್ಧ ಜನ... 'ರೆಬೆಲ್' ಆಗಿ ಅವರನ್ನು ಸೋಲಿಸಿ ಮನೆಗೆ ಕಳುಹಿಸಿದ್ದರು.

ಕಳೆದ ಬಾರಿ ಶ್ರೀರಂಗಪಟ್ಟಣದಲ್ಲಿ ಮಾಡಿದ್ದನ್ನೇ ಈ... ಬಾರಿ ಮಂಡ್ಯ ಕ್ಷೇತ್ರದಲ್ಲೂ ಅಂಬರೀಶ್... ಪುನರಾವರ್ತಿಸಿದ್ದಾರೆ. ಆತ್ಮಾನಂದರಿಗೆ ಟಿಕೆಟ್ ತಪ್ಪಿಸಿ ತಾವು... ಪಡೆದುಕೊಂಡಿದ್ದಾರೆ. ಇದರಿಂದಾಗಿ ಅಂಬಿ ವಿರುದ್ಧ ಕ್ಷೇತ್ರದ... ಅನೇಕ ಕಾಂಗ್ರೆಸ್ ಮುಖಂಡರೇ ತಿರುಗಿಬಿದ್ದಿದ್ದಾರೆ.

ಈಗಾಗಲೇ ಆತ್ಮಾನಂದ ಬೆಂಬಲಿಗರು ಬಹಿರಂಗ ಸಭೆ... ನಡೆಸಿ ಆತ್ಮಾನಂದ ತೀರ್ಮಾನದಂತೆ ನಡೆದುಕೊಳ್ಳುವುದಾಗಿ...

ಕೆರಳಿಸಿದ್ದಾರೆ. ಕಳೆದ ಬಾರಿಯೂ ಅಂಬಿ ಶಿಷ್ಯ ಎಸ್.ಬಿ.ರಾಮು ಟಿಕೆಟ್ ಪಡೆದು ಆತ್ಮಾನಂದರಿಗೆ ತೀವ್ರ ನಿರಾಸೆ ಉಂಟು ಮಾಡಿದ್ದರು. ಈ ಬಾರಿ ಸ್ವತಃ ಅಂಬಿಯೇ ನಿರಾಸೆ ಮಾಡಿದ್ದಾರೆ.

ಕಾಂಗ್ರೆಸ್ ಟಿಕೆಟ್ ಈ ಬಾರಿಯೂ ಸಿಗದಿದ್ದರಿಂದ ಆತ್ಮಾನಂದರ ರಾಜಕೀಯ ಜೀವನವೇ ಅಂತ್ಯಗೊಂಡಂತಾಗಿದೆ. ಇದರಿಂದ ಅವರು ಅಂಬಿ ಪರ ಕೆಲಸ ಮಾಡುತ್ತಾರೋ ಅಥವಾ ಕಳೆದ ಬಾರಿಯಂತೆ ಒಳಗೊಳಗೆ ಜೆಡಿಎಸ್‌ಗೆ ಸಹಕಾರ ನೀಡುತ್ತಾರೋ ಎಂಬುದು ಯಕ್ಷ ಪ್ರಶ್ನೆಯಾಗಿದೆ.

ಬಂಡಾಯ ಶಮನಗೊಳಿಸದಿದ್ದರೆ ಆಪತ್ತು

ಅಂಬಿಯ ವಿಲಾಸಿತನ, ಉಡಾಫೆ ವ್ಯಕ್ತಿತ್ವ, ಸೋಮಾರಿತನಗಳಿಂದ ಕ್ಷೇತ್ರದ ಜನ ಬೇಸತ್ತಿದ್ದಾರೆ. "ಈವಯ್ಯ ಜನರ ಕೈಗೆ ಸಿಗೋಲ್ಲ, ಅವನ ಬೆಂಬಲಿಗರ ಮನೆ ಬಾಗಿಲು ಕಾಯುವ ಪರಿಸ್ಥಿತಿ ಗ್ಯಾರಂಟಿ ಎದುರಾಗುತ್ತದೆ" ಎಂದು ಕ್ಷೇತ್ರದ ಜನ ಮಾತನಾಡುತ್ತಿದ್ದಾರೆ.

ಆತ್ಮಾನಂದರ ಅಸಹಕಾರ, ಎಸ್.ಎಂ.ಕೃಷ್ಣರ ನಕಾರ, ಅಂಬಿಯ ಸೋಮಾರಿತನ ಇವನ್ನೆಲ್ಲಾ ಬಳಸಿಕೊಂಡು ಜೆಡಿಎಸ್‌ಗೆ ಈ ಬಾರಿಯೂ ಅಂಬಿಯನ್ನು ಮಣ್ಣು ಮುಕ್ಕಿಸಲು ಉತ್ತಮ ಅವಕಾಶವಿತ್ತು. ಆದರೆ ಜೆಡಿಎಸ್‌ನಲ್ಲೇ ಬಂಡಾಯವೆದ್ದಿರುವುದರಿಂದ ಅಂಬಿಗೆ ಲಾಭ ತಂದುಕೊಡಲಿದೆ. ಹಾಗಾಗಿ ಜೆಡಿಎಸ್ ನಾಯಕರು ಯಾವ ರೀತಿ ಬಂಡಾಯಗಳನ್ನು ಶಮನಗೊಳಿಸುತ್ತಾರೆ ಎಂಬುದರ ಮೇಲೆ ಕ್ಷೇತ್ರದ ಫಲಿತಾಂಶ ನಿಂತಿದೆ.

ಕಾಂಗ್ರೆಸ್ -ಜೆಡಿಎಸ್ ಬಿಟ್ಟರೆ ಈ ಭಾಗದಲ್ಲಿ ಬಿಜೆಪಿ, ಕೆಜೆಪಿಗೆ ನೆಲೆಯೂ ಇಲ್ಲ, ಬೆಲೆಯೂ ಇಲ್ಲ. ಬಿಜೆಪಿಯಿಂದ ಸ್ಪರ್ಧಿಸಲು ಇದ್ದ ಏಕೈಕ ಅಭ್ಯರ್ಥಿ ಜಿಲ್ಲಾಧ್ಯಕ್ಷ ಸಿ.ಪಿ.ಮಹೇಶ್ ಕಮಲ ಕಿತ್ತೆಸೆದು ಅಂಬಿಗೆ ಸಾಥ್ ನೀಡಿದ್ದಾರೆ. ಚುನಾವಣೆಯಲ್ಲಿ ಮಂಡ್ಯದಿಂದ ಸ್ಪರ್ಧಿಸಲು ಬಯಸಿದ್ದ ಗಣಿಗ ರವಿಕುಮಾರ್ ಮತ್ತು ಪ್ರೇಮ ಶಿವರಾಜ್ ಕಾಂಗ್ರೆಸ್ ಸೇರಿರುವುದು ಅಂಬಿಗೆ ಬಲ ತಂದಿದೆ.

ಸತತ ಸೋಲಿನಿಂದ ಕಂಗೆಟ್ಟಿರುವ ಅಂಬಿ ಈ ಬಾರಿ ಜನ ವಿರೋಧವಿದ್ದರೂ ಶತಾಯಗತಾಯ ಗೆಲ್ಲಲೇಬೇಕೆಂದು ತೀರ್ಮಾನಿಸಿದ್ದಾರೆ. ಶ್ರೀರಂಗಪಟ್ಟಣದಲ್ಲಿ ರವೀಂದ್ರನಿಗೆ ಟಿಕೆಟ್ ಸಿಕ್ಕಿದ್ದರಿಂದ ಖುಷಿಯಾಗಿರುವ ಅಶೋಕ್ ಖೇಣಿ ಚುನಾವಣೆಯ ಸಕಲ ಖರ್ಚನ್ನು ಭರಿಸಲಿದ್ದಾರೆ ಎಂಬ ರೂಮರ್ ಕ್ಷೇತ್ರದಲ್ಲಿ ಹಬ್ಬಿದೆ.


ಕೆ.ಆರ್.ಪೇಟೆ: ಜೆಡಿಎಸ್ 'ಬಿ' ಫಾರಂ ಮಾರಾಟ

ಕೆ.ಆರ್.ಪೇಟೆಯ ಜೆಡಿಎಸ್ ಟಿಕೆಟ್ ಮುಂಬೈ ಉದ್ಯಮಿ ನಾರಾಯಣಗೌಡನ ಪಾಲಾಗುತ್ತಿದ್ದಂತೆ ಸಿಟ್ಟಿಗೆದ್ದ ಜೆಡಿಎಸ್ ಮುಖಂಡರು ಮಾಜಿ ಸ್ಪೀಕರ್ ಕೃಷ್ಣ ಅವರ ನೇತೃತ್ವದಲ್ಲಿ ಬಂಡಾಯವೆದ್ದಿದ್ದಾರೆ. ಹಾಲಿ ಶಾಸಕ ಕೆ.ಬಿ.ಚಂದ್ರಶೇಖರ್‌ನ ದುರಾಡಳಿತಕ್ಕೆ ಬೇಸತ್ತ ಮತದಾರರು ಈ ಬಾರಿ ಕೃಷ್ಣರತ್ತ ಒಲವು ತೋರಿದ್ದರು. ಕ್ಷೇತ್ರದಾದ್ಯಂತ ಈ ಬಾರಿ ಕೃಷ್ಣರ ಪರ ವಾತಾವರಣವೂ ಸೃಷ್ಟಿಯಾಗಿತ್ತು. ಆದರೆ ನಾರಾಯಣಗೌಡ ಜೆಡಿಎಸ್‌ನ ವರಿಷ್ಠ ಹೆಚ್.ಡಿ.ದೇವೇಗೌಡ ಮತ್ತು ಕುಮಾರಸ್ವಾಮಿಗೆ ಅದೇನು ಮಂಕುಬೂದಿ ಎರಚಿದನೋ ಗೊತ್ತಿಲ್ಲ, ಅಂತೂ ಆ ಪಕ್ಷದ ಟಿಕೆಟ್ ಆತನ ತೆಕ್ಕೆಗೆ ಬಿದ್ದಿದೆ.

ಜೆಡಿಎಸ್ ನಾಯಕರ ಈ ನಿರ್ಧಾರದಿಂದ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರು ಮಾತ್ರವಲ್ಲದೆ ಕೆ.ಆರ್.ಪೇಟೆ ಕ್ಷೇತ್ರದ ಜನರೇ ಬೆಚ್ಚಿಬಿದ್ದಿದ್ದಾರೆ. ಕುಮಾರಸ್ವಾಮಿ ಮತ್ತು ದೇವೇಗೌಡರಿಗೆ ಶಾಪ ಹಾಕಿ ಕೃಷ್ಣರನ್ನು ಬಂಡಾಯ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದ್ದಾರೆ. 'ಬಿ' ಫಾರಂ ನಾರಾಯಣಗೌಡ ಬೆಂಗಳೂರಿನಿಂದ ನೊಂದ ಕೃಷ್ಣ ಮೈಸೂರಿಗೆ ಬಸ್ಸಿನಲ್ಲಿ ತೆರಳುತ್ತಿದ್ದರು. ಅದನ್ನು ತಡೆದ ಕಾರ್ಯಕರ್ತರು ಬಸ್ಸಿನಿಂದ ಕೆಳಗಿಳಿಸಿ ಸ್ಪರ್ಧಿಸಲೇಬೇಕೆಂದು ಕಣ್ಣೀರು ಸುರಿಸುತ್ತಾ ಮನವಿ ಮಾಡಿ ಸ್ಥಳದಲ್ಲೇ ಮೂರು ಲಕ್ಷ ರೂಪಾಯಿ ಸಂಗ್ರಹಿಸಿ ಕಣಕ್ಕಿಳಿಸಿದ್ದಾರೆ.

ಕೃಷ್ಣರಿಗೆ ಅನ್ಯಾಯ ಮಾಡಿದ್ದರಿಂದ ಅಸಮಾಧಾನಗೊಂಡಿರುವ ತಾಲ್ಲೂಕು ಅಧ್ಯಕ್ಷ ವೆಂಕಟಸುಬ್ಬೇಗೌಡ, ಪ್ರಧಾನ ಕಾರ್ಯದರ್ಶಿ ಅಂಬರೀಶ್ ಮೊದಲಾದವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಮನ್‌ಮುಲ್ ಅಧ್ಯಕ್ಷ ಬಿ.ಹರೀಶ್, ಜಿ.ಪಂ ಸದಸ್ಯೆ ಗೌರಮ್ಮ ಶ್ರೀನಿವಾಸ್ ಸೇರಿದಂತೆ ಶೇಕಡ 80ಕ್ಕೂ ಹೆಚ್ಚು ಪ್ರಮುಖರು ಕೃಷ್ಣರಿಗೆ ಬೆಂಬಲ ನೀಡಿದ್ದಾರೆ.

ಶಾಸಕ ಕೆ.ಬಿ.ಚಂದ್ರಶೇಖರ್ ಅವರ ಕುಟುಂಬದ ಕೈಗೆ ಸಿಲುಕಿ ಕೆ.ಆರ್.ಪೇಟೆ ಕ್ಷೇತ್ರದ ಜನತೆ ನಲುಗಿದ್ದರು. ಕೃಷ್ಣರನ್ನು ಗೆಲ್ಲಿಸಿ ಚಂದ್ರಶೇಖರ್ ಅವರನ್ನು ಸೋಲಿಸುವ ಮೂಲಕ ನೆಮ್ಮದಿ ಕಂಡುಕೊಳ್ಳಲು ಬಯಸಿದ್ದರು. ಆದರೆ ಮತದಾರರ ಅಪೇಕ್ಷೆಗೆ ವಿರುದ್ಧವಾಗಿ ಜೆಡಿಎಸ್ ವರಿಷ್ಠರು ನಡೆದುಕೊಂಡಿದ್ದಾರೆ. ಇದರ ಲಾಭವನ್ನು ಪಡೆಯಲು ಶಾಸಕ ಚಂದ್ರಶೇಖರ್ ಸಂಚು ಹೂಡಿದ್ದು ಏನಾಗಲಿದೆಯೋ ಎಂದು ಕುತೂಹಲ ಮೂಡಿಸಿದೆ. ○



ರೇಣುಕಾಚಾರ್ಯ ಮಹಿಮೆ

ಹಳ್ಳಿಹಳ್ಳಿಗಳಲ್ಲೂ ಮದ್ಯದ ಹೊಳೆ

ಕರ್ನಾಟಕದಾದ್ಯಂತ ಬಿಸಿಲಿನ ತೀವ್ರತೆ ಏರುತ್ತಿದೆ. ಈ ಶತಮಾನದ ಭಯಾನಕ ಬರಗಾಲ ಈ ಸಾರಿ ಅಪ್ಪಳಿಸಲಿದೆ ಎಂಬ ವಿಜ್ಞಾನಿಗಳ ಲೆಕ್ಕಾಚಾರ ರೈತರು ಹಾಗು ಸಾಮಾನ್ಯ ಜನರಲ್ಲಿ ಆತಂಕ ಹೆಚ್ಚಾಗುವಂತೆ ಮಾಡಿದೆ. ಪ್ರತಿ ಸಾರಿ ಮೇ ಹಾಗು ಜೂನ್ ತಿಂಗಳಲ್ಲಿ ಎದುರಾಗುತ್ತಿದ್ದ ನೀರಿನ ಕೊರತೆ ಈಗಾಗಲೇ ತನ್ನ ವಿರಾಟರೂಪ ಪ್ರದರ್ಶಿಸುತ್ತಿದೆ. ನಾಡಿನ ನದಿಗಳು, ಅಣೆಕಟ್ಟುಗಳು ಬತ್ತಿ ಹೋಗಿ ಬಣಗು ಡುತ್ತಿವೆ. ರೈತರ ಬೆಳೆಗಳೆಲ್ಲ ಒಣಗಿಹೋಗುತ್ತವೆ. ಬಾವಿ, ಬೋರ್‌ವೆಲ್‌ಗಳ ನೀರು ಪಾತಾಳ ಕಂಡಿದೆ. ಈಗಾಗಲೇ ರಾಜ್ಯದ ಸಾವಿರಾರು ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರ ಶುರುವಾಗಿದೆ. ಒಂದು ಕೊಡ ನೀರಿಗಾಗಿ ಮಹಿಳೆಯರು ಕಿಲೋಮೀಟರ್‌ಗಟ್ಟಲೆ ಅಲೆಯುವ ಪರಿಸ್ಥಿತಿ ಎದುರಾಗಿದೆ. ಬೇಸಿಗೆಯ ಆರಂಭದಲ್ಲೇ ಹೀಗಾದರೆ ಇನ್ನೂ ಎರಡು ತಿಂಗಳು ಕಳೆಯುವುದಾದರೂ ಹೇಗೆ? ಎಂಬ ಚಿಂತೆ ಹಳ್ಳಿಗಳ ಬಹುಪಾಲು ಜನರನ್ನು ಕಾಡುತ್ತಿದೆ.

ಇಂತಹ ರಣಬಿಸಿಲಿನಲ್ಲಿ ಕುಡಿಯಲು ನೀರು ಸಿಗದೇ ಇದ್ದರೂ ನಾಡಿನ ಹಳ್ಳಿಹಳ್ಳಿಗಳಲ್ಲಿ ಅನಧಿಕೃತ ಮದ್ಯ ಮಾತ್ರ ಹೊಳೆಯಂತೆ ಹರಿಯುತ್ತಿದೆ. ಯಾವುದೇ ಪರವಾನಗಿ ಇಲ್ಲದೆಯೂ ಮಾರಾಟ ದಂಧೆ ಯಾವ ಅಡೆತಡೆಯೂ ಇಲ್ಲದೆ ಸರಾಗವಾಗಿ ಸಾಗಿದೆ. ಇದು ಮಾಜಿ ಅಬಕಾರಿ ಸಚಿವ ನರ್ಸ್ ರೇಣುಕಾಚಾರ್ಯನ ಮಹಿಮೆ.

ಮಂಗನಿಗೆ ಹೆಂಡ ಕುಡಿಸಿದರೆ ಅದು ಏನೇನು ಮಾಡಬಹುದೋ ಅದೆಲ್ಲವನ್ನೂ ಈ ಮಾನವ ರೂಪಿ ಮಂಗನಾಡಿನಲ್ಲಿ ಮಾಡಿದೆ. ಶಾಸಕನಾಗಿದ್ದಾಗಲೇ ನರ್ಸ್ ಜಯಲಕ್ಷ್ಮಿಯೊಂದಿಗೆ ನಡೆಸಿದ ರಂಗಿನಾಟದ ಫೋಟೋಗಳು ಮಾಧ್ಯಮಗಳ ಮೂಲಕ ನಾಡಿನ ಮನೆಮನೆಗಳಿಗೂ ತಲುಪಿದ್ದವು. ಆ ಸಮಯದಲ್ಲಿ ರೇಣುಕಾಚಾರ್ಯ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಮನೆ ಸೇರಬಹುದೆಂದು ನಿರೀಕ್ಷಿಸಿದ್ದ ಜನರಿಗೆ ನಿರಾಸೆಯಾಗಿತ್ತು. ನಾಚಿಕೆ, ಮಾನ, ಮರ್ಯಾದೆ ಇಂತಹ ಯಾವುದನ್ನೂ ಮೈ, ಮನಸ್ಸಿಗೆ ತಾಕಿಸಿಕೊಳ್ಳದೇ ತನ್ನನ್ನು ತಾನು ಬಹಿರಂಗವಾಗಿ ಸಮರ್ಥಿಸಿಕೊಂಡ ಮತ್ತು ಶಾಸಕನಾಗಿ ಮುಂದುವರೆದ. ಇದಕ್ಕೆ ಈತನ 'ಹಿರಿಕರಾದ' ಗಾಡ್‌ಫಾದರ್ ಯಡಿಯೂರಪ್ಪನವರ ಬೆಂಬಲವೂ ಇತ್ತು. ಹೀಗೆಯೇ ಸಾರ್ವಜನಿಕ ಮೆರವಣಿಗೆಗಳಲ್ಲಿ ಡಾನ್ಸ್ ಮಾಡುವುದು, ಬಯಲಾಟ ಆಡುವುದು ಮುಂದುವರೆಯಿತು.

ಐಲುಪೈಲು ಮಾತುಗಳು, ಎಡಬಿಡಂಗಿ ನಡೆಗಳ ಮೂಲಕ ನಾಡಿನ ಜನರಿಗೆ ಸಾಕಷ್ಟು ಮನರಂಜನೆಯನ್ನು ರೇಣುಕಾಚಾರ್ಯ ನೀಡುತ್ತ ಕಾಲ ತಳ್ಳುತ್ತಿರುವಾಗಲೇ ಅಧಿಕಾರಕ್ಕಾಗಿ ಗಣಿಕಳ್ಳ ಜನಾರ್ದನ ರೆಡ್ಡಿ ಯಡಿಯೂರಪ್ಪನ ವಿರುದ್ಧ ತಿರುಗಿ ಬಿದ್ದು ಶಾಸಕರನ್ನೆಲ್ಲ ಹೈದರಾಬಾದ್ ರೆಸಾರ್ಟ್‌ನಲ್ಲಿ ಕೂಡಿ ಹಾಕಿದ. ಅಲ್ಲಿಯವರೆಗೂ "ಯಡಿಯೂರಪ್ಪ ನನ್ನ ತಂದೆ ಇದ್ದಂತೆ. ಅವರು ನಮ್ಮ ಪರಮೋಚ್ಚ ನಾಯಕ" ಎಂದೆಲ್ಲ ಹೇಳುತ್ತ ಜನರನ್ನು ನಗಿಸುತ್ತಿದ್ದ ಈ ರೇಣುಕ ಏಕಾಏಕಿ ಜನಾರ್ದನ ರೆಡ್ಡಿಗಳ ಪಾಳೆಯದಲ್ಲಿ ಕಾಣಿಸಿಕೊಂಡಿದ್ದ. ಮಂತ್ರಿಗಿರಿಯ ಹಾಗು ಗಣಿಧೂಳಿನ ರೊಕ್ಕದ ಆಸೆಗೆ ಬಿದ್ದು 'ತಂದೆ'ಯ ವಿರುದ್ಧ ತಿರುಗಿ ಬಿದ್ದು ಬಾಯಿಗೆ ಬಂದಂತೆಲ್ಲ ಮಾತನಾಡಿದ್ದ. ಇವನಷ್ಟೇ ಅಧಿಕಾರ ಲಾಲಸೆ ಇರುವ ಯಡಿಯೂರಪ್ಪ ಎಲ್ಲಿ ಅಧಿಕಾರ ಕೈ ತಪ್ಪಿ ಹೋದೀತೆಂಬ ಭಯದಲ್ಲಿ ಬಳ್ಳಾರಿ ಗಣಿ ಕಳ್ಳರ ಬೇಡಿಕೆಗಳನ್ನೆಲ್ಲ ಈಡೇರಿಸಿ ಈ ರೇಣುಕಾಚಾರಿಗೆ ಮಂತ್ರಿ ಪದವಿ ನೀಡಿದ. ಆಗ ಈತ ಭರಪೂರ ಕಮಾಯಿ ಇರುವ ಅಬಕಾರಿ ಇಲಾಖೆಗೆ ಮಂತ್ರಿಯಾದ.

ಅಷ್ಟು ಹೊತ್ತಿಗಾಗಲೇ ಈತನ ಹಳೆಯ ಗೆಳತಿ ನರ್ಸ್ ಈತನ ವಿರುದ್ಧ ಗುಡುಗುತ್ತಿದ್ದಳು; ಈತನ ಬಣ್ಣ ಬಯಲು ಮಾಡುವ ಬೆದರಿಕೆ ಹಾಕುತ್ತಿದ್ದಳು. ಅದೇ ಹೊತ್ತಿಗೆ ಬಿಜೆಪಿಯ ಜನ ಈತನನ್ನು ಸಂಶಯದಿಂದ ನೋಡುತ್ತಿದ್ದರು. 'ನೀನೇ ನಮ್ಮ ತಂದೆ ಇದ್ದಂತೆ. ಇದನ್ನು ಮರೆತು ತಪ್ಪು ಮಾಡಿದ್ದೇನೆ. ಕ್ಷಮಿಸು ತಂದೆ' ಎಂದು ರೇಣುಕಾ ಎಷ್ಟೇ ಗೋಗರೆದರೂ ಯಡಿಯೂರಪ್ಪ ಸಹ ಸಂಪೂರ್ಣ ನಂಬಿಕೆಯಿಂದ ಪೋಷಿಸುತ್ತಿರಲಿಲ್ಲ. ಇದಲ್ಲದೆ ಮಾಧ್ಯಮಗಳು ಈತನನ್ನು ಒಬ್ಬ 'ಜೋಕರ್'ನನ್ನಾಗಿಸಿ ಬಿಟ್ಟಿದ್ದವು.

ಪಾಪ, ಇದರಿಂದ ನೊಂದುಕೊಂಡು ಗಂಭೀರವಾದುದನ್ನೇನಾದರೂ ಮಾಡಿ ತೋರಿಸಬೇಕೆಂದು ಯೋಚಿಸುತ್ತಿರುವಾಗಲೇ ಹೊಳೆದದ್ದು ಅದಾಗಲೇ ಹಳ್ಳಿಗಳಲ್ಲಿ ಅಬಕಾರಿ ಗುತ್ತಿಗೆದಾರರ ಮೂಲಕ ಅಧಿಕೃತವಾಗಿ ಮಾರಾಟವಾಗುತ್ತಿದ್ದ ಸಾರಾಯಿಯನ್ನು ನಿಷೇಧಿಸಬೇಕೆಂಬ ಐಡಿಯಾ. ಅದನ್ನು ಯಡಿಯೂರಪ್ಪನ ಕಿವಿಯಲ್ಲಿ ಗಂಭೀರವಾಗಿಯೇ ಉಸುರಿದ್ದಾನೆ. ಆಪರೇಷನ್ ಕಮಲದಿಂದ ಮುಖಕ್ಕೆ ಅಂಟಿದ್ದ ಕೆಸರು, ಬ್ರಹ್ಮಾಂಡ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅಧಿಕಾರಕ್ಕಾಗಿನ ಕಚ್ಚಾಟ, ರೆಸಾರ್ಟ್ ರಾಜಕಾರಣದಿಂದಾಗಿ ಸಾಕಷ್ಟು ಡ್ಯಾಮೇಜ್‌ಗೊಳಗಾಗಿದ್ದ ಯಡಿಯೂರಪ್ಪನಿಗೂ ಹೊಸದನ್ನೇನಾದರೂ ಮಾಡಿ ಜನರ ನಂಬಿಕೆ ಮರುಗಳಿಸಿಕೊಳ್ಳುವ ಅನಿವಾರ್ಯತೆ ಇತ್ತು. ಹಾಗಾಗಿ ರೇಣುಕಾಚಾರಿಯ 'ಜನೋದ್ಧಾರಕ' ಐಡಿಯಾಗೆ ಗ್ರೀನ್‌ಸಿಗ್ನಲ್ ತೋರಿಸಿದರು.

ಜನರಿಂದಲೂ ವಿರೋಧ ಪಕ್ಷದವರಿಂದಲೂ ಈ ವಿಚಾರದಲ್ಲಿ ತೀವ್ರ ಪ್ರತಿರೋಧ ಎದುರಾದಾಗ ಈ ಪಾಕೆಟ್ ಸಾರಾಯಿ ಬದಲಾಗಿ ಕಡಿಮೆ ದರದಲ್ಲಿ ಒಳ್ಳೆ ಗುಣಮಟ್ಟದ ಮದ್ಯವನ್ನು ಪರ್ಯಾಯವಾಗಿ ಸರಬರಾಜು ಮಾಡುತ್ತೇವೆ ಎಂದೆಲ್ಲ ಬೊಗಳೆ ಬಿಟ್ಟ ಯಡ್ಡಿ-ರೇಣುಕ ಸಾರಾಯಿ ನಿಷೇಧವನ್ನು ಜಾರಿಗೆ ತಂದರು. ಸಾರಾಯಿ ನಿಷೇಧ ಮಾಡಿ ತಾವು ಭಾರಿ ಸಾಧನೆ ಮಾಡಿದ್ದೇವೆ, ಹಳ್ಳಿಗಳನ್ನು ಉದ್ಧಾರ ಮಾಡುತ್ತೇವೆ, ಮದ್ಯಮುಕ್ತ ಗ್ರಾಮ ರಾಜ್ಯ ನಿರ್ಮಿಸುತ್ತೇವೆ, ಪ್ರತಿ ಕುಟುಂಬ ನೆಮ್ಮದಿಯಾಗಿರುತ್ತದೆ ಎಂದೆಲ್ಲ ನಾಡಿದುದ್ದಕ್ಕೂ ಬಾಯಿಬಾಯಿ ಬಡಿದುಕೊಂಡದ್ದೇ ಬಂತು. ಆದರೆ ಇವರ ಈ ಅವೈಜ್ಞಾನಿಕ ನಿರ್ಧಾರದಿಂದಾಗಿ ಹಳ್ಳಿಗಳು ಮತ್ತು ಕುಟುಂಬಗಳು ಉದ್ಧಾರವಾಗುವುದಿರಲಿ ಹಳ್ಳಿಗೆ ಹಳ್ಳಿಗಳೇ ಮದ್ಯದ ಅಂಗಡಿಗಳಾಗಿವೆ.

ಈ ಮೊದಲು ಹಳ್ಳಿಗಳಲ್ಲಿ ಸೇಂದಿ ತಯಾರಿಕೆ ಮತ್ತು ಮಾರಾಟವನ್ನೇ ನಂಬಿಕೊಂಡು ಬದುಕುವ ವರ್ಗದ ಜನರಿದ್ದರು. ಹಿಂದಿನ ಸರ್ಕಾರಗಳು ಈ ಸೇಂದಿ ತಯಾರಿಕೆ ಮತ್ತು ಮಾರಾಟವನ್ನು ನಿಷೇಧಿಸಿ ಸಾರಾಯಿಯನ್ನು ಪರಿಚಯಿಸಿದ್ದವು. ಇದರಿಂದ ಸರಕಾರಗಳಿಗೂ ಹೆಚ್ಚಿನ ಆದಾಯವಿತ್ತು, ಸೇಂದಿ ತಯಾರಿಸಿ ಮಾರುತ್ತಿದ್ದ ಜನ ಸರಕಾರದಿಂದ ಸರಬರಾಜಾಗುತ್ತಿದ್ದ ಸಾರಾಯಿ ಮಾರಾಟದಿಂದ ಬದುಕು ಸಾಗಿಸತೊಡಗಿದರು. ಮುಂದೆ ಈ ಸಾರಾಯಿ ಪಾಕೆಟ್‌ಗಳಲ್ಲಿ ಮಾರಾಟವಾಗತೊಡಗಿತು. ಪರವಾನಗಿ ಪಡೆದ ಒಂದೋ ಎರಡೋ ಹಳ್ಳಿಗಳಲ್ಲಿ ಮಾತ್ರ ಇದು ಮಾರಾಟವಾಗುತ್ತಿತ್ತು, ಜನ ಕೂಡ ಈ ಕಡಿಮೆ ಬೆಲೆಯ ಸರಕಾರಿ ಸಾರಾಯಿಯನ್ನು ಕುಡಿಯ ತೊಡಗಿದರು. 10 ರಿಂದ 15 ರೂಪಾಯಿಗೆ ಸಿಗುತ್ತಿದ್ದ 90 ಎಂಎಲ್ ಸಾರಾಯಿ ಹಳ್ಳಿಗಳಲ್ಲಿ ದುಡಿಯುವ ವರ್ಗದ ಜನರಿಗೂ ಅಷ್ಟಾಗಿ ಹೊರೆಯಾಗುತ್ತಿರಲಿಲ್ಲ. ಹೆಚ್ಚೆಂದರೆ ಎರಡು ಪಾಕೆಟು ಸಾರಾಯಿ ಕುಡಿದು ಮನೆ ಸೇರುತ್ತಿದ್ದರು. ಆದರೆ ಯಾವಾಗ ರೇಣುಕಾಚಾರಿಯ ವಕ್ರದೃಷ್ಟಿ ಈ ಬಡಪಾಯಿ ಹಳ್ಳಿಯ ಜನರ ಮೇಲೆ ಬಿತ್ತೋ ಅಲ್ಲಿಗೆ ಅವರ ದಿವಾಳಿತನವೂ ಆರಂಭವಾಯಿತು.

ತಲೆ ಎತ್ತಿದ ನಕಲಿ ಸಾರಾಯಿ ದಂಧೆ

[illegible]

ಈ ಸಾರಾಯಿ ನಿಷೇಧದ ಹಿಂದೆ ಹಳ್ಳಿಗಳನ್ನು ಅಥವಾ ಹಳ್ಳಿಗರನ್ನು ಉದ್ಧಾರ ಮಾಡುವ ಉದ್ದೇಶವಿರಲಿಲ್ಲ. ಬದಲಿಗೆ ಪಾಕೆಟ್ ಸಾರಾಯಿ ಗುತ್ತಿಗೆದಾರರು ಸರಕಾರಕ್ಕೆ ಹಣ ಕಟ್ಟಿದಾಗ ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಅಮದನಿ ಕೊಡುವ ಪ್ರಮಾಣ ಬಹಳ ಕಡಿಮೆ ಇತ್ತು, ಅಧಿಕಾರಿಗಳು ತಮ್ಮೊಂದಿಗೆ ಸಹಕರಿಸಬೇಕೆಂಬ ಕಾರಣಕ್ಕಾಗಿ ಅವರಿಗೆ ಅಷ್ಟು ಇಷ್ಟು ಕೊಟ್ಟು ಕೈತೊಳೆದುಕೊಳ್ಳುತ್ತಿದ್ದರು. ಇವರಿಗೆ ಹೆಚ್ಚಿನ ಆದಾಯ ಬರುತ್ತಿದ್ದದ್ದು ಬಾರ್‌ಗಳ ಮೂಲಕ. ಪ್ರತಿ ತಿಂಗಳು ಲಕ್ಷಾಂತರ ರೂಪಾಯಿ ಬಾರ್‌ಗಳಿಂದ ಹರಿದು ಬಂದು ಅಧಿಕಾರಿಗಳ ಮೂಲಕ ಅಬಕಾರಿ ಮಂತ್ರಿ-ಮುಖ್ಯಮಂತ್ರಿಗಳ ಕೈ ಸೇರುತ್ತಿತ್ತು. ಆದರೆ ಹಳ್ಳಿಗರು ಕುಡಿಯುತ್ತಿದ್ದ ಸಾರಾಯಿ ವ್ಯಾಪಾರದಿಂದ ಲಂಚದ ರೂಪದಲ್ಲಿ ಬರುತ್ತಿದ್ದದ್ದು ಅತ್ಯಲ್ಪ ಹಣ ಮಾತ್ರ. ಈ ಕಾರಣಕ್ಕಾಗಿ ಸಾರಾಯಿಯನ್ನು ನಿಷೇಧಿಸಿ ಪರ್ಯಾಯವಾಗಿ ಕಡಿಮೆ ದರದಲ್ಲಿ ಮದ್ಯವನ್ನು ನೇರವಾಗಿ ಅಬಕಾರಿ ಇಲಾಖೆ ಮೂಲಕ ಸರಬರಾಜು ಮಾಡುವ ಅಥವಾ ಬಾರ್ ಹಾಗು ವೈನ್‌ಶಾಪ್‌ಗಳಲ್ಲಿ ಮಾರಾಟಮಾಡುವ ಮೂಲಕ ಹೆಚ್ಚು ಲಂಚವನ್ನು ಪಡೆಯುವ ಉದ್ದೇಶ ಇದರ ಹಿಂದೆ ಇತ್ತು.

ಸಾರಾಯಿ ನಿಷೇಧದ ನಂತರ ಹಳ್ಳಿಯ ಜನ ಕಡಿಮೆ ದರದ ಪರ್ಯಾಯ ಮದ್ಯಕ್ಕಾಗಿ ಕಾದದ್ದೇ ಬಂತು. ಅದು ಮಾತ್ರ ಬರಲೇ ಇಲ್ಲ, ಬದಲಿಗೆ ಬಂದದ್ದು ಬಾರ್‌ಗಳಲ್ಲಿ ಮಾತ್ರ ಸಿಗುತ್ತಿದ್ದ ರಾಜಾ ವಿಸ್ಕಿ, ಹೇವರ್ಡ್ಸ್ ಒರಿಜನಲ್ ಚಾಯ್ಸ್, ಓಲ್ಡ್‌ಟವರ್, ಮ್ಯಾಕ್‌ಡೊವೆಲ್ಸ್‌ನಂತಹ ವಿಸ್ಕಿ ಮತ್ತು ರಮ್ ಬಾಟಲ್‌ಗಳು. ಅದೂ ಸಹ ಅನಧಿಕೃತವಾಗಿ. ಸಾರಾಯಿಗೆ ಬದಲಿಗೆ ಬೇರೇನೂ ಸಿಗದಿದ್ದಾಗ ಜನ ಅನಿವಾರ್ಯವಾಗಿ ಇವುಗಳನ್ನೇ ಖರೀದಿಸಿ ಕುಡಿಯತೊಡಗಿದರು. ಈ ಬಾಟಲ್ ಅಥವಾ ಪೌಚ್ ಮದ್ಯದ ಬೆಲೆ 60 ರೂಪಾಯಿಯಿಂದ 80 ರೂಪಾಯಿ. ಇಲ್ಲಿಗೆ ಹಳ್ಳಿಯ ಮನೆಗಳಲ್ಲಿ ಹಾಹಾಕಾರ ಶುರುವಾಯಿತು. ದುಡಿದು ತಂದ ಸಂಬಳದಲ್ಲಿ ಪಾಕೆಟ್ ಸಾರಾಯಿಗಾಗಿ ಹದಿನೈದೋ, ಮೂವತ್ತೋ ರೂಪಾಯಿ ಖರ್ಚು ಮಾಡುತ್ತಿದ್ದ ಗಂಡಸರು ಈಗ ಭರ್ತಿ 60 ರಿಂದ 80 ರೂಪಾಯಿ ಕಳೆದುಕೊಂಡು ಮನೆ ಸೇರತೊಡಗಿದರು.

ನಿಮಗೆ ಆಶ್ಚರ್ಯವಾಗಬಹುದು. ಇವತ್ತು ಹಳ್ಳಿಗಳಲ್ಲಿ ಹಣ್ಣು, ಹಾಲು, ತರಕಾರಿ, ಔಷಧಿ, ದಿನಸಿ ಸಾಮಾನು ಒಂದೋ, ಎರಡೋ ಕಡೆ ಸಿಗಬಹುದು. ಆದರೆ ಈ ಬಾಟಲ್ ಮದ್ಯ ಮಾತ್ರ ಪ್ರತಿ ಹಳ್ಳಿಗಳಲ್ಲಿ ಕನಿಷ್ಠ ನಾಲ್ಕರಿಂದ ಎಂಟು ಕಡೆಗಳಲ್ಲಾದರೂ ದೊರೆಯುತ್ತದೆ. ಪಾನ್‌ಶಾಪ್‌ಗಳಲ್ಲಿ, ಹೋಟೇಲುಗಳಲ್ಲಿ, ಖಾನಾವಳಿಗಳಲ್ಲಿ ಮಾತ್ರವಲ್ಲ, ಮನೆಗಳಲ್ಲೂ ಮಾರಾಟ ಮಾಡಲಾಗುತ್ತಿದೆ. ಇಲ್ಲಿ ಮುಚ್ಚುಮರೆ ಯಾವುದೂ ಇಲ್ಲ. ಬಹುಪಾಲು ಹಳ್ಳಿಗಳ ಬಸ್ ನಿಲ್ದಾಣಗಳ ಪಕ್ಕದಲ್ಲೇ ಬೆಂಚು, ಟೇಬಲು, ನೀರು, ಗ್ಲಾಸ್ ಎಲ್ಲ ವ್ಯವಸ್ಥೆಯನ್ನು ಮಾಡಿ ಕೌಂಟರ್‌ಗಳಲ್ಲಿ ಬಹಿರಂಗವಾಗಿಯೇ ಮಾರಲಾಗುತ್ತಿದೆ. ಇನ್ನೂ ಕೆಲವು ಕಡೆಗಳಲ್ಲಿ ಬಾರ್‌ಗಳಲ್ಲಿ ಸಿಗಬಹುದಾದ ಸ್ನ್ಯಾಕ್ಸ್, ಸೋಡಾ, ಕೋಲ್ಡ್ ಡ್ರಿಂಕ್ಸ್ ಇನ್ನಿತರ ಎಲ್ಲ ಸೌಲಭ್ಯಗಳೂ ದೊರೆಯುತ್ತವೆ. ಇನ್ನೂ ಒಂದು ವಿಶೇಷವೆಂದರೆ ಇಲ್ಲಿ ಸಿಗುವ ಸಾರಾಯಿ ಬೆಲೆ ಬಾರ್‌ಗಳಲ್ಲಿಗಿಂತಲೂ 10 ರಿಂದ 20 ರೂಪಾಯಿ ಹೆಚ್ಚು. ಇದೆಲ್ಲವೂ ಅನಧಿಕೃತ. ಹೀಗೆ ಹಳ್ಳಿಯೊಂದರಲ್ಲಿ ದಿನಂಪ್ರತಿ ಲಕ್ಷಾಂತರ ರೂಪಾಯಿ ಅಕ್ರಮ ಸಾರಾಯಿ ವಹಿವಾಟು ನಡೆಯುತ್ತಿದೆ. ಇದಕ್ಕೆ ಲಕ್ಷಾಂತರ ಬಡವರು, ದುಡಿಯುವ ಜನರು ಬಲಿಯಾಗುತ್ತಿದ್ದಾರೆ. ಇದು ಈ ನಾಡಿನ ಬಹುಪಾಲು ಹಳ್ಳಿಗಳ ಕತೆ.

ಇಷ್ಟೆಲ್ಲ ಅಕ್ರಮ ಬಹಿರಂಗವಾಗಿಯೇ ನಡೆಯುತ್ತಿದ್ದರೂ ಅಬಕಾರಿ ಇಲಾಖೆ ಅಧಿಕಾರಿಗಳೇನು ಮಾಡುತ್ತಿದ್ದಾರೆ ಮತ್ತು ಇಷ್ಟೊಂದು ಭಾರೀ ಪ್ರಮಾಣದ ಮದ್ಯ ಹಳ್ಳಿಗಳಿಗೆ ಹರಿದು ಬರುತ್ತಿರುವುದಾದರೂ ಎಲ್ಲಿಂದ ಎಂದು ನೋಡಿದರೆ ರೇಣುಕಾಚಾರ್ಯನ ಅಸಲಿ ಮುಖ ಅನಾವರಣವಾಗುತ್ತದೆ.

ಇಷ್ಟೆಲ್ಲ ಮದ್ಯ ಅಕ್ರಮವಾಗಿ ಹಳ್ಳಿಗಳಿಗೆ ಹರಿದುಹೋಗುತ್ತಿರುವುದು ಸರ್ಕಾರದಿಂದ ಅಧಿಕೃತವಾಗಿ ಪರವಾನಗಿ ಪಡೆದು ನಡೆಯುತ್ತಿರುವ ವೈನ್‌ಶಾಪ್‌ಗಳು ಮತ್ತು ಬಾರ್‌ಗಳಿಂದ. ಸರಕಾರವೇ ಇವುಗಳಿಗೆ ಇಲಾಖೆ ಮೂಲಕ ಹೆಚ್ಚುವರಿ ಮದ್ಯ ವಿತರಿಸಿ ಅದನ್ನು ಮಾರಾಟ ಮಾಡಲು ಒತ್ತಡ ಹೇರುತ್ತಿದೆ. ಇದು ಮೌಖಿಕ ಆದೇಶ. ಪಾಕೆಟ್ ಸಾರಾಯಿ ನಿಷೇಧದಿಂದಾಗುವ ನಷ್ಟವನ್ನು ಸರಿದೂಗಿಸುವ ಸಲುವಾಗಿ ಈ ಅಡ್ಡ ಮಾರ್ಗ. ಹೀಗೆ ಹೆಚ್ಚುವರಿಯಾಗಿ ಬಾರ್ ಹಾಗು ವೈನ್‌ಸ್ಟೋರ್‌ಗಳಿಗೆ ಹರಿಯುತ್ತಿರುವ ಮದ್ಯ ನೇರವಾಗಿ ಹಳ್ಳಿಗಳನ್ನು ಸೇರುತ್ತಿದೆ. ಇದು ಸರಕಾರದ ಆದಾಯವನ್ನು ಹೆಚ್ಚಿಸುತ್ತಿದೆ. ಮಾತ್ರವಲ್ಲ, ಇಲಾಖೆಯ ಅಧಿಕಾರಿಗಳಿಗೂ ಮಂತ್ರಿಗಳಿಗೂ ಕೋಟ್ಯಂತರ ರೂಪಾಯಿ ಲಂಚದ ರೂಪದಲ್ಲಿ ಹರಿದುಹೋಗುತ್ತಿದೆ. ಆದರೆ ಹಳ್ಳಿಯ ಬಡವರ ಆರ್ಥಿಕ ಬೆನ್ನೆಲುಬು ಮಾತ್ರ ಮುರಿದುಹೋಗುತ್ತಿದೆ. ಹೀಗೆ ಹರಿದು ಬರುತ್ತಿರುವ ಆಮದನಿಯ ಸಲುವಾಗಿಯೇ ರೇಣುಕಾಚಾರ್ಯ ಕೊನೆಗಳಿಗೆವರೆಗೂ ಬಿಜೆಪಿ ಸರಕಾರದಲ್ಲಿ ಅಬಕಾರಿ ಮಂತ್ರಿಯಾಗಿ ಬಂದದ್ದನ್ನೆಲ್ಲ ಬಾಚಿಕೊಂಡು ಈಗ ಕೆಜೆಪಿಗೆ ಹೋಗಿ ಯಡಿಯೂರಪ್ಪನ ಬಗಲಲ್ಲಿ ನಿಂತಿದ್ದಾನೆ.

ದೇಶಭಕ್ತಿ, ಸಚ್ಚಾರಿತ್ರ್ಯ, ಸದೃಢ ಭಾರತದ ನಿರ್ಮಾಣ ಎಂದರೆ ಇದೇನಾ?

● ಮಹಾಲಿಂಗಪ್ಪ ಆಲಬಾಳ

ಶಿವಮೊಗ್ಗ: ಬಿಜೆಪಿ ಧೂಳೀಪಟ

2008-13 ರ ವಿಧಾನಸಭಾ ಅವಧಿಯಲ್ಲಿ ರಾಜ್ಯ ರಾಜಕೀಯದ ಶಕ್ತಿಕೇಂದ್ರವಾಗಿದ್ದ ಶಿವಮೊಗ್ಗದ ರಾಜಕೀಯ ಸನ್ನಿವೇಶ ಈ ಬಾರಿ ಡೋಲಾಯಮಾನಸ್ಥಿತಿಗೆ ತಲುಪಿದೆ. ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತಂದಿದ್ದೇ ತಾನು ಎಂದು ಕೊಚ್ಚಿಕೊಳ್ಳುತ್ತಿದ್ದ ಮಾಜಿ ಸಿಎಂ ಯಡಿಯೂರಪ್ಪ ಮಾಡಬಾರದ್ದನ್ನೆಲ್ಲಾ ಮಾಡಿದ್ದೂ ಆಯ್ತು; ಆಗಬಾರದ್ದೆಲ್ಲಾ ಆಗಿದ್ದೂ ಆಯ್ತು, ಅಂತಿಮ ಪರಿಣಾಮದಲ್ಲಿ ಇದೇ ಬಿಜೆಪಿಯ ನಂ.1 ಶತ್ರುವಾಗಿ ಪರಿಣಮಿಸಿರುವ ಯಡಿಯೂರಪ್ಪ ಬಿಜೆಪಿಯನ್ನು ಮಣ್ಣು ಮುಕ್ಕಿಸುವುದೇ ತನ್ನ ಗುರಿಯೆಂದು ಬಹಿರಂಗವಾಗಿಯೇ ಘೋಷಿಸಿ ರಣತಂತ್ರಗಳನ್ನು ರೂಪಿಸುತ್ತಿದ್ದಾರೆ.

ಮತ್ತೊಂದು ಕಡೆ ಬಿಜೆಪಿಯ ರಾಜ್ಯಾಧ್ಯಕ್ಷ ಪದವಿಯನ್ನು ಅಲಂಕರಿಸಿ, ಉಪ ಮುಖ್ಯಮಂತ್ರಿಯೂ ಆಗಿ ಮೆರೆದ ಈಶ್ವರಪ್ಪನದು ಇನ್ನೊಂದು ಕತೆ. ಆರೆಸ್ಸೆಸ್‌ನ ಸಿದ್ಧಾಂತಕ್ಕೆ ಗಟ್ಟಿಯಾಗಿ ಜೋತು ಬಿದ್ದಂತೆ ಪೋಸು ಕೊಡುತ್ತಾ ಬಂದ ಈಶ್ವರಪ್ಪ ತನ್ನ ದುರ್ವರ್ತನೆ, ದುರಾಡಳಿತ, ಭ್ರಷ್ಟಾಚಾರಗಳಿಂದಾಗಿ ಕುಖ್ಯಾತಿ ಗಳಿಸಿದ್ದಾರೆ. ಪರಿಣಾಮವಾಗಿ ಇಂದು ಸೋಲಿನ ಭೀತಿಯಲ್ಲಿ ತತ್ತರಿಸುತ್ತಿದ್ದಾರೆ.

ಈಶ್ವರಪ್ಪನ ದುಸ್ಥಿತಿಗೆ ಶಿವಮೊಗ್ಗದ ನಾಗರಿಕರ ನಡುವಿನ ಚರ್ಚೆಯೇ ಸಾಕ್ಷಿ. ಇಲ್ಲಿ ಈಶ್ವರಪ್ಪ ಗೆಲ್ಲುತ್ತಾರೋ? ಸೋಲುತ್ತಾರೋ? ಎಂಬುದು ಚರ್ಚೆಯ ವಿಷಯವೇ ಆಗಿ ಉಳಿದಿಲ್ಲ. ಬದಲಿಗೆ ಎಷ್ಟು ಅಂತರದಿಂದ ಸೋಲಬಹುದು ಹಾಗೂ ಎಷ್ಟನೇ ಸ್ಥಾನಕ್ಕೆ ಕುಸಿಯಬಹುದು ಎಂಬುದೇ ಈಗ ಹಾದಿಬೀದಿಯ ಚರ್ಚೆಯ ವಿಷಯವಾಗಿದೆ.

ಇತರೆಡೆಗಳಲ್ಲಿ ಟಿಕೆಟ್ ಹಂಚಿಕೆ ಕಚ್ಚಾಟಗಳೇನೇ ಇದ್ದರೂ ಶಿವಮೊಗ್ಗದಲ್ಲಿ ಅಂಥಾ ಸಮಸ್ಯೆಯೇನಿಲ್ಲ. ಕೆ.ಬಿ.ಪ್ರಸನ್ನಕುಮಾರ್ ಎಂಬ ಬ್ರಾಹ್ಮಣ ಅಭ್ಯರ್ಥಿಯನ್ನು ಒಮ್ಮತದಿಂದ ಕಣಕ್ಕಿಳಿಸುವ ಮೂಲಕ ಕಾಂಗ್ರೆಸ್‌ನವರು ತಮಗೂ ತಲೆಯಲ್ಲಿ ಮಿದುಳಿದೆ ಎಂಬುದನ್ನು ತೋರಿಸಿಕೊಂಡಿದ್ದಾರೆ. ಶಿವಮೊಗ್ಗ ಕ್ಷೇತ್ರದಲ್ಲಿ ಬ್ರಾಹ್ಮಣ ಮತದಾರರು 30 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಮುಸ್ಲಿಂ ಮತದಾರರು ಕೂಡ ಸುಮಾರು 35 ಸಾವಿರದಷ್ಟಿದ್ದಾರೆ. ಇದರೊಂದಿಗೆ ದಲಿತರ ಹಾಗೂ ಹಿಂದುಳಿದ ಜಾತಿಗಳ ಬೆಂಬಲವೂ ಕಾಂಗ್ರೆಸ್‌ಗಿದೆ. ಈ ಎಲ್ಲಾ ಅಂಶಗಳಿಗಿಂತಲೂ ಮುಖ್ಯವಾದದ್ದೆಂದರೆ ಮತದಾರರು ಬಿಜೆಪಿ ಪಕ್ಷ ಹಾಗೂ ಈಶ್ವರಪ್ಪನ ದುರಾಡಳಿತದಿಂದ ಬೇಸತ್ತು ಹೋಗಿದ್ದಾರೆ. ಇವರ ಅಟ್ಟಹಾಸದ ಬಗ್ಗೆ ಎಲ್ಲೆಡೆ ಅಸಹ್ಯದ ಭಾವನೆ ಮೂಡಿದೆ.

ಸಾಂಪ್ರದಾಯಿಕವೆಂಬಂತೆ ಬಿಜೆಪಿಗೆ ಮತ ಹಾಕುತ್ತಿದ್ದ ಬ್ರಾಹ್ಮಣರು ಈ ಬಾರಿ ಈಶ್ವರಪ್ಪನಿಗೆ ಮತ ಹಾಕದಿರಲು ನಿರ್ಧರಿಸಿದ್ದಾರೆ. ಯಾಕೆಂದರೆ ಎಲ್ಲಾ ಎಲ್ಲೆಗಳನ್ನು ಮೀರಿರುವ ಈಶ್ವರಪ್ಪನ ಹುಚ್ಚಾಟಗಳು ಬ್ರಾಹ್ಮಣರಲ್ಲಿ ಜಿಗುಪ್ಸೆ ಮೂಡಿಸಿಬಿಟ್ಟಿದೆ. ಬ್ರಾಹ್ಮಣರನ್ನು ತನ್ನತ್ತ ಸೆಳೆದುಕೊಳ್ಳಲು ಇತ್ತೀಚೆಗೆ ಈಶ್ವರಪ್ಪ ಮತ್ತೊಮ್ಮೆ ತಮ್ಮ ಮಾಮೂಲಿ ಚಾಳಿಯನ್ನು ಪ್ರದರ್ಶಿಸಿದ್ದಾರೆ. ಲವ್ ಜಿಹಾದ್ ಹೆಸರಿನಲ್ಲಿ ಮುಸ್ಲಿಮ್ ಹುಡುಗರು 68 ಬ್ರಾಹ್ಮಣ ಹುಡುಗಿಯರನ್ನು ಬಳಸಿ ಬಿಸಾಡಿದ್ದಾರೆ ಎಂಬ ಆಧಾರರಹಿತ ಹೀನ ಅಭಿರುಚಿಯ ಮಾತುಗಳನ್ನಾಡಿದ್ದಾರೆ. ಈಶ್ವರಪ್ಪನ ಈ ಉಡಾಫೆ ಮಾತುಗಳಿಂದ ಬ್ರಾಹ್ಮಣ ಸಮುದಾಯದ ಸ್ವಾಭಿಮಾನಕ್ಕೆ ತೀವ್ರ ಧಕ್ಕೆಯುಂಟಾಗಿದೆ. ತಮ್ಮ ಹೆಣ್ಣು ಮಕ್ಕಳ ಬಗ್ಗೆ ಕೀಳು ಅಭಿಪ್ರಾಯ ಬರುವ ರೀತಿಯಲ್ಲಿ ದುರಹಂಕಾರದಿಂದ ಮಾತಾಡಿರುವ ಈಶ್ವರಪ್ಪನಿಗೆ ಸರಿಯಾದ ಪಾಠ ಕಲಿಸಲು ಬ್ರಾಹ್ಮಣ ಸಂಘವೇ ತೀರ್ಮಾನ ಕೈಗೊಂಡಿದೆಯೆಂಬ ಮಾತೂ ಕೇಳಿ ಬರುತ್ತಿದೆ.

ಮೇಲಾಗಿ ಬ್ರಾಹ್ಮಣ ಅಭ್ಯರ್ಥಿಯಾಗಿರುವ ಪ್ರಸನ್ನಕುಮಾರ್ ಎರಡು ಬಾರಿ ಕೌನ್ಸಿಲರ್ ಆಗಿ ಆಯ್ಕೆಯಾಗಿದ್ದು ಹೆಸರು ಕೆಡಿಸಿಕೊಂಡಿಲ್ಲ. 40ರ ಹರೆಯದ ಈ ವ್ಯಕ್ತಿ ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ ಕಾರ್ಯಪ್ರವೃತ್ತರಾಗುವ ಜಾಯಮಾನದವರು ಎಂಬುದು ಅವರ ಪ್ಲಸ್ ಪಾಯಿಂಟ್. ಹೀಗಾಗಿ ಬಹುತೇಕ ಬ್ರಾಹ್ಮಣ ಮತಗಳು ಪ್ರಸನ್ನಕುಮಾರ್ ಗೆಲುವಿನ ಓಟವನ್ನು ಖಾತ್ರಿಪಡಿಸಲಿವೆ.

ಕಣದಲ್ಲಿರುವ ಇನ್ನಿತರ ಪ್ರಮುಖ ಅಭ್ಯರ್ಥಿಗಳೆಂದರೆ ಕೆಜೆಪಿಯಿಂದ ರುದ್ರೇಗೌಡ ಎಂಬ ಲಿಂಗಾಯತ ಅಭ್ಯರ್ಥಿ ಮತ್ತು ಜೆಡಿಎಸ್‌ನಿಂದ ಶ್ರೀಕಾಂತ್ ಎಂಬ ಕುರುಬರ ಅಭ್ಯರ್ಥಿ. ಕ್ಷೇತ್ರದಲ್ಲಿ ಲಿಂಗಾಯತರ ಸಂಖ್ಯೆ 20 ಸಾವಿರಕ್ಕೂ ಅಧಿಕವಾಗಿದ್ದರೆ ಕುರುಬ ಜಾತಿಯ ಓಟುಗಳು ಸುಮಾರು 15 ಸಾವಿರದಷ್ಟಿದೆ.

ರುದ್ರೇಗೌಡ ಮೂಲತಃ ಕೈಗಾರಿಕೋದ್ಯಮಿ. ವಾಸ್ತವದಲ್ಲಿ ಅವರಿಗೆ ರಾಜಕೀಯದಲ್ಲಿ ಹೆಚ್ಚಿನ ಆಸಕ್ತಿಯಿರಲಿಲ್ಲ. ವ್ಯಕ್ತಿಗತವಾಗಿ ಹೆಸರು ಕೆಡಿಸಿಕೊಂಡಿಲ್ಲ. ಇಂಥವರನ್ನು ಯಡಿಯೂರಪ್ಪ ತಮ್ಮ ಜಾತಿ ರಾಜಕಾರಣದ ಭಾಗವಾಗಿ ಒತ್ತಾಯಪೂರ್ವಕವಾಗಿ ಕೆಪಿಎಸ್‌ಸಿಗೆ ತಂದು ಕೂರಿಸಿದ್ದರು. ಈಗ ಕೆಜೆಪಿ ಅಭ್ಯರ್ಥಿಯಾಗಿರುವುದೂ ಇಂಥದೇ ಕಾರಣಕ್ಕೆ


ಕಾಗೋಡು


ಕಿಮ್ಮನೆ


ಇಬ್ರಾಹಿಂ


ಯಡ್ಡಿ


ಈಶ್ವರಿ

ಎಂಬ ಅಭಿಪ್ರಾಯ ಸಾರ್ವಜನಿಕರಲ್ಲಿ ಮೂಡಿದೆ. ಆದರೆ ಯಡಿಯೂರಪ್ಪನ ಬಗ್ಗೆ ಅನುಕಂಪವಿರುವ ಲಿಂಗಾಯತ ಮತದಾರರು ರುದ್ರೇಗೌಡರಿಗೆ ಮತಹಾಕಲಿದ್ದಾರೆಂಬುದು ಮೇಲ್ನೋಟಕ್ಕೆ ಕಾಣುವ ಸಂಗತಿ. ಆದರೆ ಜನಸಾಮಾನ್ಯರ ಕೈಗೆ ಎಟುಕದ ಅಭ್ಯರ್ಥಿಯನ್ನು ಮುಂದಿಟ್ಟುಕೊಂಡಿರುವ ಕೆಜೆಪಿ ಗೆಲುವಿನ ಸಮೀಪಕ್ಕೆ ಹೋಗುವುದು ಬಹಳ ತ್ರಾಸದಾಯಕ.

ಜೆಡಿಎಸ್ ಅಭ್ಯರ್ಥಿ ಶ್ರೀಕಾಂತ್ ಬಗ್ಗೆ ಸದಭಿಪ್ರಾಯಗಳಿವೆ. ಶ್ರೀಕಾಂತ್ ಕೂಡ ಕುರುಬ ಜಾತಿಯವರೇ ಆಗಿರುವುದರಿಂದ ಈಶ್ವರಪ್ಪನ ಮತಗಳು ಹಂಚಿ ಹೋಗುವ ಸಾಧ್ಯತೆಯಿದೆ. ಜೆಡಿಎಸ್ ಕ್ಯಾಂಡಿಡೇಟ್ ಈಶ್ವರಪ್ಪನ ಸೋಲಿನ ಅಂತರವನ್ನು ಮತ್ತಷ್ಟು ಹೆಚ್ಚಿಸಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಈ ವಾಸ್ತವವನ್ನು ಚೆನ್ನಾಗಿಯೇ ಅರಿತಿರುವ ಈಶ್ವರಪ್ಪ ಮತ್ತು ಆತನ ಬಿಜೆಪಿ ಹತಾಶರಾಗಿ ಕೋಮು ದಳ್ಳುರಿ ಹಚ್ಚಿ ತಮ್ಮ ಬೇಳೆ ಬೇಯಿಸಿಕೊಳ್ಳುವ ದುಷ್ಕೃತ್ಯಕ್ಕೆ ತೊಡಗಬಹುದು ಎಂಬ ಆತಂಕ ಕ್ಷೇತ್ರದಲ್ಲಿ ಅಲ್ಲಲ್ಲಿ ಕೇಳಿಬರುತ್ತಿದೆ. ಇತ್ತೀಚೆಗೆ ಈಶ್ವರಪ್ಪ ಮಾಡಿದ ಲವ್ ಜಿಹಾದ್ ಭಾಷಣವನ್ನು ಇದರ ಜೊತೆ ಲಿಂಕ್‌ಮಾಡಿ ಒಂದಷ್ಟು ಜನರು ಆತಂಕಿತರಾಗಿದ್ದಾರೆ. ಆದರೆ ವಾಸ್ತವವೇನೆಂದರೆ ಇವರ ಇಂಥಾ ಎಲ್ಲಾ ತಂತ್ರಗಳು ಈಗ ಬಟಾಬಯಲಾಗಿ ನಿಂತಿದ್ದು, ಅಂಥಾ ದುಷ್ಟ ಪ್ರಯತ್ನಕ್ಕೆ ಕೈಹಾಕಿದರೆ ಈ ಸಂದರ್ಭದಲ್ಲಿ ಅದು ತಿರುಗುಬಾಣವಾಗುವ ಸಾಧ್ಯತೆಗಳೇ ಹೆಚ್ಚು ಎಂಬುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯ.

ಇನ್ನು ಈಶ್ವರಪ್ಪನಿಗೆ ನೋಟು ಎಣಿಸುವ ಯಂತ್ರ ಎಣಿಸಿಟ್ಟಿರುವ ಕಂತೆಗಳಷ್ಟೇ ಉಳಿದಿರುವ ಆಸರೆ. ಹಾಗಾಗಿ ಎಲ್ಲೆಡೆ ಯಥೇಚ್ಛವಾಗಿ ಹಣ ಹರಿಯಲಿದೆ. ನಾಮಪತ್ರ ಸಲ್ಲಿಕೆಯ ದಿನ ಜನಜಾತ್ರೆ ಸೇರಿಸಲೂ ಇವರು ಮೊರೆಹೋಗಿದ್ದು ಹಣವನ್ನೇ ಎಂಬುದು ಪ್ರಜ್ಞಾವಂತ ನಾಗರಿಕರ ಅಭಿಪ್ರಾಯ.

ಒಂದು ತಿಂಗಳ ಹಿಂದಷ್ಟೆ ನಡೆದ ನಗರಸಭಾ ಚುನಾವಣೆಯ ಫಲಿತಾಂಶವನ್ನು ನಾವು ಇಲ್ಲಿ ಗಣನೆಗೆ ತೆಗೆದುಕೊಳ್ಳಲೇಬೇಕು. ಬಿಜೆಪಿಯ 19 ಮಂದಿ ಕೌನ್ಸಿಲರ್‌ಗಳಲ್ಲಿ 11 ಮಂದಿ ಮಕಾಡೆ ಬಿದ್ದಿದ್ದಾರೆ. ಬಿಜೆಪಿಯಿಂದ ಗೆದ್ದವರು ಕೇವಲ 8 ಮಂದಿಯಾದರೆ ಕಾಂಗ್ರೆಸ್‌ನಿಂದ 12, ಕೆಜೆಪಿಯಿಂದ 7, ಜೆಡಿಎಸ್‌ನಿಂದ 5, ಎಸ್‌ಡಿಪಿಐ ಹಾಗೂ ಪಕ್ಷೇತರರು ತಲಾ ಒಂದೊಂದು ಕ್ಷೇತ್ರದಲ್ಲಿ ಆರಿಸಿಬಂದಿದ್ದಾರೆ. ಮೇಲ್ನೋಟಕ್ಕೆ ಕಾಂಗ್ರೆಸ್ ಮೇಲುಗೈ ಎಂಬಂತೆ ಕಂಡುಬಂದರೂ ಓಟಿನ ಪ್ರಮಾಣವನ್ನು ಗಮನಿಸಿದರೆ ಅದು ಕಾಂಗ್ರೆಸ್‌ಗೆ ಎಚ್ಚರಿಕೆಯ ಗಂಟೆ ನೀಡಿದೆ. ಸ್ಥಳೀಯ ಅಭ್ಯರ್ಥಿಗಳ ಪ್ರಭಾವ ಇತ್ಯಾದಿ ಏನೇ ಕಾರಣಗಳಿದ್ದಾಗ್ಯೂ ಬಿಜೆಪಿ ಒಟ್ಟು 35,500 ಮತಗಳನ್ನು ಗಳಿಸಿದ್ದರೆ ಕಾಂಗ್ರೆಸ್ 35,000 ಮತ ಗಳಿಸಿ ಎರಡನೇ ಸ್ಥಾನದಲ್ಲಿದೆ. ಇನ್ನು ಕೆಜೆಪಿ 27,000, ಜೆಡಿಎಸ್ 25,000 ಮತ ಗಳಿಸಿದ್ದರೆ ಸ್ವತಂತ್ರ ಅಭ್ಯರ್ಥಿಗಳು ಒಟ್ಟು 17,000 ಮತ ಗಳಿಸಿದ್ದಾರೆ.

ಈ ಲೆಕ್ಕಾಚಾರದ ಪ್ರಕಾರ ನೋಡಿದರೂ ಈಶ್ವರಪ್ಪ ಕ್ಯಾಂಡಿಡೇಟ್ ಆಗಿರುವ ಕಾರಣಕ್ಕೆ ಮೇಲಿನ ಮತಗಳಲ್ಲಿ ಗಣನೀಯ ಪಾಲು ಇತರರ ಪಾಲಾಗುವುದು ನಿಶ್ಚಿತ. ಅದರ ಜೊತೆಗೆ ಪಕ್ಷೇತರರ ಪಾಲಿನ 17,000 ಮತಗಳೂ ಗೆಲ್ಲುವ ಅಭ್ಯರ್ಥಿಯ ಪರ ವಾಲಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ಅದೇನೇ ಇದ್ದರೂ ಕಾಂಗ್ರೆಸ್‌ನವರು ಮತ್ತಷ್ಟು ಒಗ್ಗಟ್ಟು ಪ್ರದರ್ಶಿಸಿ ಕೆಲಸ ಮಾಡಬೇಕಿದೆ ಎಂಬುದನ್ನು ಅಲ್ಲಗಳೆಯಲಾಗದು.

ಅಂತಿಮ ವಿಶ್ಲೇಷಣೆಯಲ್ಲಿ ಪ್ರಸನ್ನಕುಮಾರ್ ಗೆಲ್ಲುವ ಅಭ್ಯರ್ಥಿ ಎನಿಸಿಕೊಂಡಿದ್ದರೆ, ಕಳೆದ ಬಾರಿ 30 ಸಾವಿರ ಅಂತರದಲ್ಲಿ ಗೆದ್ದಿದ್ದ ಈಶ್ವರಪ್ಪನ ಸ್ಥಾನ ಮೂರನೆಯದೋ ನಾಲ್ಕನೆಯದೋ ಎಂಬುದು ಮೇ 8ರಂದೇ ಬಗೆಹರಿಯಬೇಕಿರುವ ಪ್ರಶ್ನೆ.

ಶಿಕಾರಿಪುರ : ಯಡ್ಡಿ ಏದುಸಿರು

ರಾಜ್ಯ ರಾಜಕೀಯದಲ್ಲಿ ಅನುಕಂಪದ ಅಲೆಯನ್ನು ಮತ್ತೊಮ್ಮೆ ಎಬ್ಬಿಸಲು ವಿಫಲ ಪ್ರಯತ್ನ ನಡೆಸಿರುವ ಯಡಿಯೂರಪ್ಪನ ಪರಿಸ್ಥಿತಿ ಕಂಡು ಈಗ ಅಯ್ಯೋಪಾಪ ಎನ್ನುವಂತಾಗಿದೆ. ಕಳೆದ ಬಾರಿ ನೂರಕ್ಕೂ ಹೆಚ್ಚಿನ ಎಂಎಲ್‌ಎಗಳ ಗೆಲುವಿಗೆ ಪ್ರತ್ಯಕ್ಷ/ಪರೋಕ್ಷ ಕಾರಣರಾಗಿದ್ದ ಯಡ್ಡಿ ಈ ಬಾರಿ ತನ್ನದೇ ಕೆಜೆಪಿಯಿಂದ ಕೇವಲ ಹತ್ತು ಜನರನ್ನಾದರೂ ಗೆಲ್ಲಿಸಿಕೊಳ್ಳಲಾಗದ ದುಸ್ಥಿತಿಗೆ ತಲುಪಿದ್ದಾರೆ. ಅದು ಹಾಗಿರಲಿ; ತನ್ನ ಸ್ವಕ್ಷೇತ್ರ ಶಿಕಾರಿಪುರದಲ್ಲೂ ಅವರಿಗೆ ಗೆಲುವು ಸುಲಭದ ತುತ್ತೇನಲ್ಲ.

ಕ್ಷೇತ್ರದಲ್ಲಿ ಪ್ರಾಬಲ್ಯ ಹೊಂದಿರುವ ಸಾದು ಲಿಂಗಾಯತ ಜಾತಿಯ ಶಾಂತವೀರಪ್ಪಗೌಡರು ಯಡ್ಡಿ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದ ದಿನದಿಂದಲೂ ಯಡ್ಡಿಯ ಕಣ್ಣಿಗೆ ನಿದ್ದೆ ಹತ್ತುತ್ತಿಲ್ಲ. ಯಡ್ಡಿ ಗಾಣಿಗ ಲಿಂಗಾಯತನಾಗಿರುವುದರಿಂದ ಸಾದು ಲಿಂಗಾಯತರಿಗೆ ಅಷ್ಟಕ್ಕಷ್ಟೆ. ಶಾಂತವೀರಪ್ಪಗೌಡರನ್ನು ತಪ್ಪಿಸಿ ದುರ್ಬಲ ಅಭ್ಯರ್ಥಿಯನ್ನು ಹಾಕಿಸಿಕೊಳ್ಳುವ ಯಡ್ಡಿ ಪ್ರಯತ್ನ ಫಲ ಕೊಡದೆ, ಪ್ರಬಲ ಪೈಪೋಟಿ ನೀಡಬಲ್ಲ ಅಭ್ಯರ್ಥಿಯೇ ಎದುರಾಗಿ ಯಡ್ಡಿ ಏದುಸಿರು ಬಿಡುವಂತಾಗಿದೆ.

ಮತ್ತೊಂದು ಕಡೆ ಜೆಡಿಎಸ್‌ನಿಂದ ವಿ.ಟಿ.ಬಳಿಗಾರ್ ಎಂಬ ಮಾಜಿ ಕೆ.ಎ.ಎಸ್ ಅಧಿಕಾರಿ ಅಭ್ಯರ್ಥಿಯಾಗಿದ್ದಾರೆ. ಬೇಡ ಸಮುದಾಯಕ್ಕೆ ಸೇರಿದ ಬಳಿಗಾರ್ ಅವರನ್ನು ದೇವೇಗೌಡರು ಮನೆಗೆ ಕರೆಸಿಕೊಂಡು, ಕಿವಿಯಲ್ಲಿ ನಾನಾ ರಾಜಕೀಯ ಮಂತ್ರಗಳನ್ನು ಊದಿದರಂತೆ. ಹೀಗೆ ಹಠಾತ್ ರಾಜಕಾರಣ ದೀಕ್ಷೆ ಪಡೆದ ಈ ಅಧಿಕಾರಿ ತನ್ನ ಹುದ್ದೆಗೆ ರಾಜೀನಾಮೆ ಕೊಟ್ಟು ಕಳೆದ 8 - 10 ತಿಂಗಳುಗಳಿಂದ ಇಡೀ ಕ್ಷೇತ್ರದಾದ್ಯಂತ ಮಿಂಚಿನ ಸಂಚಾರ ನಡೆಸಿ ಈಗಾಗಲೇ ಸಾಕಷ್ಟು ಹಣ ಹರಿಸಿದ್ದಾರೆ. ಪರಿಣಾಮವಾಗಿ ಹಲವು ದಶಕಗಳಿಂದಲೂ ಯಾವುದೇ ಪ್ರಾತಿನಿಧ್ಯವಿಲ್ಲದೆ ಕಡೆಗಣಿಸಲ್ಪಟ್ಟಿರುವ ತಳ ಸಮುದಾಯದ ಮತದಾರರು ಬಳಿಗಾರ್ ಕಡೆಗೆ ವಾಲುತ್ತಿದ್ದಾರೆ.

ಪಾರಂಪರಿಕವಾಗಿ ಕಾಂಗ್ರೆಸ್ ಪಾಲಾಗುತ್ತಿದ್ದ ಮತಗಳು ಈ ಬಾರಿ ಒಡೆಯುವುದರಿಂದ ಬ... ಯಡ್ಯೂರಪ್ಪನಿಗೆ ಇದು ಅನುಕೂಲಕರ ಅಂಶವಾಗಬಹು... ಹೀಗೆ ತ್ರಿಕೋನ ಸ್ಪರ್ಧೆ ಏರ್ಪಟ್ಟದ್ದೂ ಕೂಡ ಸ್ಪರ್ಧೆ... ಯಡ್ಯೂರಪ್ಪ ಮುಂದಿದ್ದಾರೆ ಎಂಬುದರಲ್ಲಿ ಅನುಮಾನ...

ಕಳೆದ ಚುನಾವಣೆಯಲ್ಲಿ ಬಂಗಾರಪ್ಪನ ವಿರುದ್ಧ ಭ... ಅಂತರದಿಂದ ಗೆದ್ದಿದ್ದರಿಂದಾಗಿ ಇನ್ನು ತನಗೆ ಪ್ರತಿಸ್ಪರ್ಧಿ ಇಲ್ಲವೆಂಬಂತೆ ಯಡ್ಯೂರಪ್ಪನ ಪಿತ್ತ ನೆತ್ತಿಗೇರಿಬಿಟ್ಟಿತ್ತು, ... ಈ ಬಾರಿ ಪರಿಸ್ಥಿತಿ ತಿರುವು ಮುರುವಾಗಿದೆ. ಈ... ಯಾವುದೇ ಎಡವಟ್ಟು ಮಾಡಿಕೊಂಡರೂ ... ಮುಗ್ಗರಿಸುವುದು ಗ್ಯಾರಂಟಿ. ಆದ್ದರಿಂದ ಯಡ್ಡಿ ... ಉಳಿಸಿಕೊಳ್ಳಲು ಭಾರೀ ಕಸರತ್ತು ಮಾಡಲೇಬೇಕು. ... ಬಾರಿ ಯಡ್ಡಿ ಗೆದ್ದರೂ ಗೆಲುವಿನ ಅಂತರ ಗಮನಾರ್ಹ... ಕ್ಷೀಣಿಸಿ ಆತನ ಅಹಂಭಾವಕ್ಕೆ ಸರಿಯಾದ ಪೆಟ್ಟು ಬೀ... ಎಂಬುದಂತೂ ಗ್ಯಾರಂಟಿ.

ಭದ್ರಾವತಿ: ಇಬ್ಬರ ಜಗಳ-ಜೆಡಿಎಸ್‌ಗೆ ಲ...

ಶಿವಮೊಗ್ಗ, ಶಿಕಾರಿಪುರಗಳನ್ನು ಬಿಟ್ಟರೆ ಭ... ಸುದ್ದಿಯಲ್ಲಿರುವುದು ಭದ್ರಾವತಿ ಕ್ಷೇತ್ರ. ಕಾಂಗ್ರೆಸ್‌ನ... ಟಿಕೆಟ್ ಹಂಚಿಕೆ ಕಿತ್ತಾಟ ಬಿಸಿಬಿಸಿ ಸುದ್ದಿಯಾ... ಪ್ರಚಾರಗೊಂಡಿದೆ. ಮಾಧ್ಯಮಗಳು ಸಾಮಾನ್ಯ... ಕಡೆಗಣಿಸಿರುವ ಅಂಶವೊಂದು ಭದ್ರಾವತಿಯ... ಅದೇನೆಂದರೆ ಇಲ್ಲಿ ಅನಾದಿಕಾಲದಿಂದಲೂ ವ್ಯ... ವರ್ಚಸ್ಸಿನ ರಾಜಕೀಯದ್ದೇ ಮೇಲುಗೈ. ಕಳೆದ ... ವರ್ಷಗಳ ಕಾಲ ಕಾಂಗ್ರೆಸ್‌ನ ಬಿ.ಕೆ.ಸಂಗಮೇ... ಶಾಸಕರಾಗಿದ್ದಾರೆ. ಅದಕ್ಕೂ ಮುಂಚಿನ ಹತ್ತು ವರ್ಷ... ಕಾಲ ಜೆಡಿಎಸ್‌ನ ಅಪ್ಪಾಜಿ ಗೌಡ ಶಾಸಕನಾಗಿ ... ಸಾಧಿಸಿದ್ದರು. ಆದರೆ ಆತನ ಅವಧಿಯಲ್ಲಿ ಅಪ... ಕೃತ್ಯಗಳು, ರೌಡಿಸಂ ಅತಿಯಾಗಿದ್ದರಿಂದ ಜನ ಬೇ... ಸಂಗಮೇಶ್‌ರನ್ನು ತಂದು ಕೂರಿಸಿದರು. ಇಲ್ಲಿ ಪಕ್ಷ... ವ್ಯಕ್ತಿಗತ ವರ್ಚಸ್ಸೇ ಹೆಚ್ಚಿಗೆ ಕೆಲಸ ಮಾಡಿದೆ.

ಭದ್ರಾವತಿಯ ಜೀವನಾಡಿಯಾಗಿರುವ ಮೈಸೂ... ಪೇಪರ್ ಮಿಲ್‌ಗೆ ಅಧ್ಯಕ್ಷನಾಗಿ ಚೆಡ್ಡಿ ಚತುರ ... ಜ್ಞಾನೇಂದ್ರ ವಕ್ಕರಿಸಿಕೊಂಡು ಆ ಕಾರ್ಖಾನೆಗೆ ಇನ್ನ... ಬೀಗಮುದ್ರೆ ಬೀಳುವ ಸ್ಥಿತಿಯನ್ನು ನಿರ್ಮಿಸಿಬಿಟ್ಟ... ಅಂಥಾ ಸಂದರ್ಭದಲ್ಲಿ ಕಾರ್ಮಿಕರ ಪರವಾಗಿ ನಿ... ಹೋರಾಟದಲ್ಲಿ ತೊಡಗಿದ ಸಂಗಮೇಶ್ ಕಾರ್ಮಿ... ಒಲವನ್ನೂ ಗಳಿಸಿ, ಜನಸಾಮಾನ್ಯರ ಕೈಗೆ ಸುಲಭವಾ... ಸಿಗುವ ಎಂಎಲ್‌ಎ ಎನಿಸಿಕೊಂಡಿದ್ದಾರೆ.

ಜೊತೆಗೆ ತಕ್ಕಮಟ್ಟಿಗೆ ಅಭಿವೃದ್ಧಿ ಕೆಲಸಗಳ... ಮಾಡಿರುವ ಈ ವ್ಯಕ್ತಿಯ ಬಗ್ಗೆ ಕ್ಷೇತ್ರದಲ್ಲಿ ಒಂದ... ಸದಭಿಪ್ರಾಯವಿದೆ. ಅದರ ಜೊತೆಗೆ ರೌಡಿಸಂನಿಂದ ಅ... ಕಾಯ್ದುಕೊಂಡ ಕಾರಣ ಕಳೆದ ಹತ್ತು ವರ್ಷಗಳಲ್ಲಿ ಭದ್ರಾ... ಬಹುತೇಕ ಶಾಂತವಾಗಿದೆ. ಇದೇ ಇಲ್ಲಿನ ಜನರಿಗೆ ಒ... ನೆಮ್ಮದಿಯ ವಿಚಾರ.

ಆದರೆ ಈ ವ್ಯಕ್ತಿ ಕೆಲವೊಂದು ಎಡವಟ್ಟುಗಳ... ಮಾಡಿಕೊಂಡಿದ್ದರು. ಕಾಂಗ್ರೆಸ್‌ನ ಶಾಸಕನಾಗಿದ್ದರೂ ಮೊದಲಿನಿಂದಲೂ ಪಕ್ಷದೊಂದಿಗೆ ಅಂತರವ... ಕಾಯ್ದುಕೊಂಡು ತನ್ನದೇ ಪ್ರತ್ಯೇಕ ಅಸ್ತಿತ್ವವನ್ನು ಸ್ಥಾಪಿಸಿದ್ದ... ಎಲ್ಲಕ್ಕಿಂತ ಗುರುತರ ಪ್ರಮಾದವೇನೆಂದ... ಕಾಂಗ್ರೆಸ್‌ನಲ್ಲಿದ್ದುಕೊಂಡೇ ತನ್ನ ಜಾತಿಬಂಧು ಯಡ್ಡಿ ಪರವಾಗಿ ರಾಜಕೀಯ ಲಾಬಿಗಳನ್ನು ಮಾಡಿದ್ದು ಕಾಂಗ್... ನಾಯಕರ ಕಣ್ಣನ್ನು ಕೆಂಪಾಗಿಸಿತ್ತು.

ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಯ... ಎಲ್ಲಾ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊ... ಭದ್ರಾವತಿಯ ಬಿಜೆಪಿ ಒಡೆದ ಮನೆಯಂತಾಗಿದ್ದರೂ ತಾ... ನಿಲ್ಲಿಸಿದ ಅಭ್ಯರ್ಥಿಗಳು ಗೆದ್ದೇ ಗೆಲ್ಲುತ್ತಾರೆ ಎಂಬ ಅ... ಪ್ರದರ್ಶಿಸಿದ್ದರು. ಪರಿಣಾಮವಾಗಿ ಬಹುತೇಕ ವಾರ್ಡ್‌ಗಳ... ಬಂಡಾಯ ಅಭ್ಯರ್ಥಿಗಳು ಹುಟ್ಟಿಕೊಂಡು ಕಾಂಗ್... ನೆಲಕಚ್ಚಲು ನೇರ ಕಾರಣರಾಗಿದ್ದರು. ಇಲ್ಲಿ ಜೆಡಿಎಸ್ ... ಸ್ಥಾನ ಗಳಿಸಿದ್ದರೆ ಕಾಂಗ್ರೆಸ್ ಗಳಿಸಿದ್ದು ಕೇವಲ ... ಸ್ಥಾನಗಳನ್ನು ಎಂದರೆ ಪರಿಸ್ಥಿತಿ ಯಾರಿಗಾದರೂ ಅರ್ಥ... ಬರುತ್ತದೆ. ಗಳಿಸಿದ್ದ ಮತಗಳ ಶೇಕಡಾವಾರು ಪ್ರಮಾಣದಲ್ಲಿ ಹೆಚ್ಚುಕಡಿಮೆ ಸರಿಸಮನಾಗಿದೆ.

ಈ ಹಿನ್ನೆಲೆಯಲ್ಲಿ ಸಂಗಮೇಶ್‌ಗೆ ಟಿಕೆಟ್ ನಿರಾಕ... ಕಾಂಗ್ರೆಸ್‌ನ ನಾಯಕರು ಒಂದೇ ಏಟಿಗೆ ಎರಡು ಹಕ್ಕಿಗಳ... ಹೊಡೆದುರುಳಿಸಿದ್ದಾರೆ. ತನ್ನ ಎದುರಾಳಿ ಯಡ್ಡಿಯ ... ಕೆಲಸ ಮಾಡಿದ್ದರೆಂಬ ಕಾರಣ ಮಾಡಿ ಸಂಗಮೇಶ್... ಟಿಕೆಟ್ ನಿರಾಕರಿಸಿರುವುದು ಒಂದೆಡೆಯಾದರೆ, ಮತ್ತೊಂದ... ಸಿ.ಎಂ. ಇಬ್ರಾಹಿಂಗೆ ಟಿಕೆಟ್ ನೀಡುವ ಮೂಲಕ ಚಲ್ಲ... ಮುಸ್ಲಿಂ ಮತಗಳು ಜೆಡಿಎಸ್‌ಗೆ ಚದುರಿಹೋಗದ... ತಡೆಯುವುದು ಇದರ ಒಳ ಹುನ್ನಾರವಾಗಿದೆ.

ಹಾಲಿ ಸಂಗಮೇಶ್ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪ... ಸಲ್ಲಿಸಿದ್ದಾರೆ. ಕಳೆದ ಒಂದೆರಡು ದಶಕಗಳಿಂದಲ... ತಮ್ಮೂರಿನಿಂದ ದೂರವೇ ಉಳಿದಿದ್ದ ಇಬ್ರಾಹಿಂ ಸಾಹೇ...

ಈಶ್ವರಪ್ಪನ ಹೆಜ್ಜೆ ಜಾಡು

ಬಳ್ಳಾರಿಯಿಂದ ಕೂಲಿಕಾರ್ಮಿಕರಾಗಿ ವಲಸೆ ಬಂದ ಈಶ್ವರಪ್ಪನ ತಂದೆ ತಾಯಿಗಳು 1950ರ ದಶಕದಿಂದ ಶಿವಮೊಗ್ಗದ ಭೂಪಾಳಂ ಅಡಿಕೆ ಮಂಡಿಯಲ್ಲಿ ದಿನಗೂಲಿಗಳಾಗಿ ಬದುಕು ಸಾಗಿಸುತ್ತಿದ್ದರು. ಆರಂಭಿಕ ದಿನಗಳಲ್ಲಿ ಅಡಿಕೆ ಮಂಡಿ ಕೆಲಸಕ್ಕೆ ಸೇರಿಕೊಂಡಿದ್ದ ಈಶ್ವರಪ್ಪ ನಂತರ ತನ್ನ ಕೆಲವು ಸಹಪಾಠಿಗಳ ಸಂಪರ್ಕದಿಂದ ವಿದ್ಯಾರ್ಥಿ ದೆಸೆಯಲ್ಲಿ ಎಬಿವಿಪಿ ನಾಯಕರಾದರು. ಅದೇ ಹಾದಿಯಲ್ಲಿ ಮುಂದುವರೆದು ಆರೆಸ್ಸೆಸ್‌ನ ಕಟ್ಟಾಳು ಆದರು.

ಶಿವಮೊಗ್ಗದ ಕೋಮು ಗಲಭೆಗಳ ಸರಮಾಲೆಯಲ್ಲೇ ಸಾಗುತ್ತಾ, ಕ್ರಮೇಣ ಮೇಲೇರಿ ಕೊನೆಗೆ ಬಿಜೆಪಿಯ ರಾಜ್ಯಾಧ್ಯಕ್ಷರೂ ಆದರು. ಕೋಮುವಾದ ಎಂಬುದು ಕೇವಲ ಗಲಭೆಗಳಲ್ಲೇ ತಾರ್ಕಿಕ ಅಂತ್ಯ ಕಾಣುವುದಿಲ್ಲವಲ್ಲಾ, ರಾಜಕೀಯ ಲಾಭದ ಲೆಕ್ಕಾಚಾರವೇ ಅದರ ಒಳಹೂರಣ ತಾನೇ? ಹೀಗಾಗಿ ಇತರೆ ಬಿಜೆಪಿ ನಾಯಕರ ಹಾಗೆಯೇ ಈಶ್ವರಪ್ಪನವರಿಗೂ ಲಾಭವಾಯಿತು. ರಾಜ್ಯದ ಮುಖ್ಯಮಂತ್ರಿ ಗಾದಿಗೆ ಕೇವಲ ಒಂದೇ ಮೆಟ್ಟಿಲು ಬಾಕಿ ಉಳಿಸಿ ಅವರು ಉಪಮುಖ್ಯಮಂತ್ರಿ ಹುದ್ದೆಯನ್ನೂ ಹಿಡಿಯುವಲ್ಲಿ ಯಶಸ್ವಿಯಾದರು.

ಸರಿಯಾಗಿ ಇದೇ ಸಂದರ್ಭದಲ್ಲಿ ಕಾಂಗ್ರೆಸ್‌ನ ನಾಯಕರಾಗಿ ವಿಜೃಂಭಿಸುತ್ತಿದ್ದ ಸಿದ್ದರಾಮಯ್ಯನವರ ವಿರುದ್ಧ ಕುರುಬ ಜನಾಂಗದವರನ್ನು ಪೈಪೋಟಿಗೆ ಒಡ್ಡಬೇಕೆಂಬ ಬಿಜೆಪಿಯ ಜಾತಿ ಲೆಕ್ಕಾಚಾರವೂ ಈಶ್ವರಪ್ಪನ ಅಭಿವೃದ್ಧಿಗೆ ಪೂರಕ ವಾತಾವರಣವನ್ನು ನಿರ್ಮಿಸಿತು.

ತತ್ವ ಸಿದ್ಧಾಂತಗಳ ಅನುಕರಣೆಯ ವಿಚಾರದಲ್ಲಿ ಈಶ್ವರಪ್ಪ ಕಟ್ಟರ್ ಪಂಥೀಯ ಎಂಬುದರಲ್ಲಿ ಎರಡು ಮಾತಿಲ್ಲ. ಕೈ ಕಡಿಯಿರಿ! ನಾಲಿಗೆ ಸೀಳಿರಿ!! ತಲೆ ತೆಗಿಯಿರಿ!!! ಎಂಬುದು ಅವರ ಘೋಷ ವಾಕ್ಯಗಳು. ತಾನು ಆರೆಸ್ಸೆಸ್ ಎಂಬ ಸಾಂಸ್ಕೃತಿಕ ಸಂಘಟನೆಯ ಕಾರ್ಯಕರ್ತ ಎಂದು ಹೇಳಿಕೊಳ್ಳುವ ಈಶ್ವರಪ್ಪ ಅಳವಡಿಸಿಕೊಂಡಿರುವ ಸಂಸ್ಕೃತಿಯೇ ಇಂಥಾದ್ದು, ಈ ಎಲ್ಲಾ ರಾಜಕೀಯ-ಧಾರ್ಮಿಕ-ಸಾಂಸ್ಕೃತಿಕ ಆಯಾಮಗಳ ಅಂತಿಮ ಗುರಿಯಾಗಿ ಆರ್ಥಿಕ ಲೆಕ್ಕಾಚಾರ ಇದ್ದೇ ಇದೆ ಅಲ್ಲವೇ? ಈಶ್ವರಪ್ಪನ ಮನೆಯಲ್ಲಿ ದೊರೆತ ನೋಟು ಎಣಿಕೆ ಯಂತ್ರ ಇಂಥಾ ನೀತಿಗೆಟ್ಟ ಆರ್ಥಿಕತೆಗೆ ಸಾಕ್ಷಿಯಾಗಿ ಇತಿಹಾಸದಲ್ಲಿ ದಾಖಲಾಗಿದೆ. ಇನ್ನೂ ವಿಬರವಾದ ಹಾಗು ಹೆಚ್ಚಿನ ವಿವರಗಳು ಶಿವಮೊಗ್ಗದ ಮತದಾರರ ಬಳಿಯಿವೆ. ಅದರ ಫಲಿತಾಂಶ ಮೇ 8ರಂದು ಹೊರ ಬೀಳಲಿದೆ.

ಗಿ ಬಹುತೇಕ ಮುಸ್ಲಿಂ ಮತಗಳು ಹರಿದು ಬರಲಿದೆ. ಅದರ ಜೊತೆಗೆ ಪರಿಕ ದಲಿತ ಮತಗಳೂ ಬೀಳಬಹುದು. ಮತ್ತೊಂದು ಕಡೆ ಜೆಡಿಎಸ್‌ನ ಜೆಗೌಡನ ಪಡೆ ಈಗಾಗಲೇ ಗೆದ್ದೇ ಬಿಟ್ಟಿದ್ದೇವೆ ಎಂಬಂತೆ ಮೀಸೆ ತ್ತಿದ್ದಾರೆಂಬ ಸುದ್ದಿಯೂ ಹರಡಿದೆ.

ಈ ಹಿನ್ನೆಲೆಯಲ್ಲಿ ಸಂಗಮೇಶ್ ಯಡ್ಡಿಯ ಮೊರೆ ಹೋಗಿ ಯತನಾಗಿರುವ ತನ್ನನ್ನು ಬೆಂಬಲಿಸುವಂತೆ ಕೋರಿಕೊಂಡರೆಂದೂ, ಆದರೆ ಅದಕ್ಕೆ ಒಪ್ಪದೆ ಕೆಜೆಪಿ ಅಭ್ಯರ್ಥಿಯಾಗುವಂತೆ ಒತ್ತಾಯಿಸಿದರೆಂದೂ ಮೇಶ್‌ನ ಆಪ್ತವಲಯದಿಂದಲೇ ಸುದ್ದಿ ಹೊರಬಿದ್ದಿದೆ. ಅಂತಿಮವಾಗಿ ನು ಒಳಒಪ್ಪಂದವಾಗಿದೆಯೋ ದೇವರೇ ಬಲ್ಲ, ಅಂತೂ ಕೆಜೆಪಿ ಧಿಕಾರಿಗಳು ಸಂಗಮೇಶ್ ಜೊತೆಗೆ ಕಾಣಿಸಿಕೊಳ್ಳುತ್ತಿದ್ದಾರೆ. ಇದೆಲ್ಲದರ ಗೆ ತಮ್ಮ ಪ್ರಾಬಲ್ಯ ಕುಸಿಯುವುದನ್ನು ಕಂಡು ಲಿಂಗಾಯತ ಜಾತಿಯ ಂಡರು ಸಂಗಮೇಶ್ ಪರ ಕ್ಯಾಂಪೇನ್ ಶುರು ಮಾಡಿಬಿಟ್ಟಿದ್ದಾರೆ.

ಈ ಹಠಾತ್ ಬೆಳವಣಿಗೆಗಳಿಂದಾಗಿ ಗೆಲ್ಲುವ ಅಭ್ಯರ್ಥಿಯೆನಿಸಿಕೊಂಡಿದ್ದ ಮೇಶ್ ನೇಪಥ್ಯಕ್ಕೆ ಸರಿದು ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಸಂಗಮೇಶ್ ಪ್ರೊಲಿಸುವಲ್ಲಿ ಕಾಂಗ್ರೆಸ್ ನಾಯಕರು ಯಶಸ್ವಿಯಾದರೆ ಇಲ್ಲಿ ಇಬ್ರಾಹಿಂ ಬರು ಖಾತೆ ತೆರೆಯುವ ಪ್ರಯತ್ನ ಮಾಡಬಹುದು. ಇಲ್ಲದೇ ಹೋದರೆ ಜಗಳದಲ್ಲಿ ಜೆಡಿಎಸ್‌ಗೆ ಲಾಭವಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಸಾಗರ: ಕಾಂಗ್ರೆಸ್‌ಗೆ ಅನುಕಂಪದ ಅಲೆ

3 ವರ್ಷ ವಯಸ್ಸಿನ ವಯೋವೃದ್ಧ ಕಾಗೋಡು ತಿಮ್ಮಪ್ಪ ಕಳೆದ ಬಾರಿ ಅಲೆಯಲ್ಲಿ ಸೋಲು ಅನುಭವಿಸಿದ್ದರು. ಗೆದ್ದು ಹೋದ ಬೇಳೂರು ಬಾಲಕೃಷ್ಣ ಆಡಿದ ಆಟಗಳನ್ನೆಲ್ಲಾ ಕಂಡು ಕ್ಷೇತ್ರದ ಜನತೆ ರೋಸಿ ಹೋಗಿರುವುದಂತೂ ಸುಳ್ಳಲ್ಲ; ಆತ ಎಲ್ಲಾ ನಿಲ್ದಾಣಗಳನ್ನೂ ಹಾದು ಕೊನೆಗೆ ಪಿ ನಿಲ್ದಾಣದಲ್ಲಿ ನೆಲೆ ಕಂಡುಕೊಂಡಿದ್ದಾನೆ. ಈ ಇಬ್ಬರ ಜೊತೆಗೆ ಮತ್ತೊಬ್ಬ ಖ ಅಭ್ಯರ್ಥಿ ಬ್ರಾಹ್ಮಣ ಜಾತಿಗೆ ಸೇರಿದ ಜಯಂತ್ ಎಂಬುವವರು ಯಿಂದ ಸ್ಪರ್ಧಿಸಿದ್ದಾರೆ. ವೈಯಕ್ತಿಕವಾಗಿ ಉತ್ತಮ ವ್ಯಕ್ತಿಯೆನಿಸಿಕೊಂಡಿದ್ದರೂ ಬೇಕಾದ ಮತಗಳನ್ನು ಗಳಿಸುವಷ್ಟು ಪ್ರಭಾವಿಯಲ್ಲ. ತಕ್ಕಮಟ್ಟಿಗೆ ರು ಪ್ರಭಾವವೂ ಇರುವುದರಿಂದ ಲಿಂಗಾಯತ ಮತಗಳೂ ಬಿದ್ದು ನ ಅಂತರ ಕಡಿಮೆಗೊಳ್ಳಬಹುದಾದರೂ ಗೆಲುವು ಸುಲಭದ ಮಾತಲ್ಲ. ದರ ಜೊತೆಗೆ ಕಾಗೋಡು ತಿಮ್ಮಪ್ಪನವರಿಗೆ ವಯಸ್ಸಾಗಿದ್ದರೂ ಮನೆ ಂಡಿಲ್ಲ, ಮಾಮೂಲಿಯಂತೆ ಚಟುವಟಿಕೆಯಲ್ಲಿದ್ದು ನಾನಾ ಹೋರಾಟಗಳಲ್ಲಿ ಹಿಂಸುತ್ತಲೇ ಬಂದಿದ್ದಾರೆ. ಇದೇ ಇವರ ಕೊನೆಯ ಚುನಾವಣೆ ಎಂಬ ಂಪವೂ ಒಂದು ಮಟ್ಟಿಗೆ ಕೆಲಸ ಮಾಡಬಹುದು. ಅದರ ಜೊತೆಗೆ ರಾದ್ಯಂತ ಕಂಡುಬರುತ್ತಿರುವ ಕಾಂಗ್ರೆಸ್ ಅಲೆ ಕೂಡ ಕೆಲಸ ಮಾಡಲಿದೆ. ಗಿ ಸಾಗರದಿಂದ ತಿಮ್ಮಪ್ಪ ವಿಧಾನಸೌಧಕ್ಕೆ ಬರುವುದು ಬಹುತೇಕ ತವೆಂದೇ ಹೇಳಬಹುದು.

ಉಳಿದ ಕ್ಷೇತ್ರಗಳೆಂದರೆ ಸೊರಬ, ತೀರ್ಥಹಳ್ಳಿ ಮತ್ತು ಶಿವಮೊಗ್ಗ ಂತರ. ಶಿವಮೊಗ್ಗ ಗ್ರಾಮಾಂತರ ಮೀಸಲು ಕ್ಷೇತ್ರವಾಗಿದ್ದು ಕಳೆದ ಬಿಜೆಪಿಯ ಕೆ.ಜಿ. ಕುಮಾರಸ್ವಾಮಿ ಎಂಬುವವರು ಆರಿಸಿಹೋಗಿದ್ದರು. ಲ್ಲಿ ಬಿಜೆಪಿ ಪರವಾಗಿ ಕೈ ಎತ್ತಬೇಕಾದ ಸಂದರ್ಭದಲ್ಲಿ ಕೈ ಎತ್ತಿ ತನ್ನ ಪ್ರದರ್ಶಿಸಿದ್ದನ್ನು ಹೊರತುಪಡಿಸಿದರೆ ಈ ಮನುಷ್ಯ ಶಾಸಕನಾಗಿದ್ದ ದಕ್ಕೆ ಬೇರೆ ಯಾವ ಕುರುಹುಗಳೂ ಕಾಣಸಿಗುವುದಿಲ್ಲ. ಕೇವಲ ಬಿಜೆಪಿ ಂದಷ್ಟೇ ಆರಿಸಿಬಂದಿದ್ದ ಈತ ಮತ್ತೆ ಅದೇ ಬಿಜೆಪಿ ವಿರೋಧಿ ಲ್ಲಿ ಕೊಚ್ಚಿಹೋಗಲಿದ್ದಾರೆ.

ಂಗ್ರೆಸ್‌ನಿಂದ ಮಾಜಿ ಎಂಎಲ್‌ಎ ಕರಿಯಣ್ಣ ಎಂಬುವವರು ಕಣಕ್ಕಿಳಿದಿದ್ದಾರೆ. ಜನಿಕ ಕೆಲಸದಲ್ಲಿ ಕುಮಾರಸ್ವಾಮಿಗೂ ಕರಿಯಣ್ಣನಿಗೂ ಅಂಥಾ ವೇನಿಲ್ಲ. ಆದರೆ ಕಾಂಗ್ರೆಸ್ ಪರ ಅಲೆ ಒಂದಷ್ಟು ಕೆಲಸ ಮಾಡಬಹುದು. ಸಂದರ್ಭದಲ್ಲಿ ಜೆಡಿಎಸ್‌ನಿಂದ ಶಾರದಾ ಪೂರ್‍ಯಾ ನಾಯಕ್ ಎಂಬ ಕಣಕ್ಕಿಳಿದಿದ್ದಾಳೆ. ಲಂಬಾಣಿ ಜನಾಂಗದ ಈಕೆ ಈಗಾಗಲೇ ಜಿಲ್ಲಾ ಯತ್ ಪ್ರತಿನಿಧಿಯಾಗಿ ಚುರುಕಾಗಿ ಕೆಲಸ ಮಾಡಿದ್ದಾರೆ. ಜನರ ಕಷ್ಟಗಳಿಗೆ ವ ಮನೋಭಾವವೂ ಇರುವುದರಿಂದ ಕ್ಷೇತ್ರದಲ್ಲಿ ಈಕೆಯ ಬಗ್ಗೆ ಷ್ಟು ಸದಭಿಪ್ರಾಯ ಮೂಡಿದೆ.

ೀಗಾಗಿ ನೇರ ಹಣಾಹಣಿ ಇರುವುದು ಜೆಡಿಎಸ್ ಮತ್ತು ಕಾಂಗ್ರೆಸ್ ಗೆಲ್ಲುವ ಅಭ್ಯರ್ಥಿಯನ್ನು ಊಹಿಸುವುದು ಸದ್ಯದ ಪರಿಸ್ಥಿತಿಯಲ್ಲಿ ಮಾತು.

ನ್ನು ಸೊರಬದಲ್ಲಿ ಮಾಮೂಲಿಯಂತೆ ಬಂಗಾರಪ್ಪ ಬಿಟ್ಟು ಹೋಗಿರುವ ನನ್ನು ಅಣ್ಣತಮ್ಮಂದಿರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಸ್‌ನಿಂದ ಮಧು ಬಂಗಾರಪ್ಪ ಮತ್ತು ಕಾಂಗ್ರೆಸ್‌ನಿಂದ ಕುಮಾರ್ ಬಂಗಾರಪ್ಪ ಳಿಗಳಾಗಿದ್ದಾರೆ. ಕಳೆದ ಬಾರಿ ಇಂಥದೇ ಸಂದರ್ಭದ ಲಾಭ ಪಡೆದು ಯ ಹಾಲಪ್ಪ ಗೆದ್ದುಬಂದಿದ್ದ. ಈ ಬಾರಿ ಹಾಲಪ್ಪ ಕೆಜೆಪಿ ಅಭ್ಯರ್ಥಿ. ಹಗರಣಗಳು, ಲಂಪಟತನಗಳಿಂದ ಕ್ಷೇತ್ರದ ಜನ ಬೇಸತ್ತಿದ್ದಾರೆಂಬುದೇನೋ ಆದರೆ ಅಣ್ಣತಮ್ಮಂದಿರ ಜಗಳ ಹಾಲಪ್ಪನಿಗೆ ಲಾಭವಾಗಿ ಪರಿಣಮಿಸುವ ಯನ್ನು ತಳ್ಳಿ ಹಾಕುವಂತಿಲ್ಲ.

ಗ ತೀರ್ಥಹಳ್ಳಿಯನ್ನು ಪ್ರತಿನಿಧಿಸುತ್ತಿರುವ ಕಾಂಗ್ರೆಸ್‌ನ ಕಿಮ್ಮನೆ ರತ್ನಾಕರ್ ಸಜ್ಜನ, ಪ್ರಾಮಾಣಿಕ ಎಂದು ಹೆಸರು ಗಳಿಸಿರುವವರು. ಕಿಮ್ಮನೆ ಕೆಜೆಪಿಯಿಂದ ಮಂಜುನಾಥ ಗೌಡ ಎಂಬ ಕ್ಯಾಂಡಿಡೇಟು ಕಣಕ್ಕಿಳಿದಿದ್ದಾರೆ. ರ ಕ್ಷೇತ್ರದಲ್ಲಿ ಒಂದಷ್ಟು ಹೆಸರು ಮಾಡಿರುವ ಮಂಜುನಾಥ್ ಈಗಾಗಲೇ ದ್ಯಂತ ಸಂಚರಿಸಿ ಮತದಾರರನ್ನು ಸೆಳೆಯುವ ನಾನಾ ತಂತ್ರಗಳನ್ನು ದ್ದಾರೆ.

ನ್ನು ಬಿಜೆಪಿಯಿಂದ ಮಾಜಿ ಎಂಎಲ್‌ಎ ಆರಗ ಜ್ಞಾನೇಂದ್ರ ಕೂಡ ಬಲದಲ್ಲಿ ಹಿಂದೆ ಬಿದ್ದಿಲ್ಲ, ತನ್ನದೇ ಆದ ಬೆಂಬಲಿಗರ ಪಡೆಯನ್ನು ರುವ ಆರಗ ಪ್ರಮುಖ ಸ್ಪರ್ಧಿಯಾಗಿಯೇ ಕಣದಲ್ಲಿದ್ದಾನೆ. ತೀರ್ಥಹಳ್ಳಿಯಲ್ಲಿ ಮತದಾರರದೇ ಪ್ರಾಬಲ್ಯ, ಹಾಗಾಗಿ ಈ ಮೂರೂ ಪ್ರಮುಖ ಗಳೂ ಒಕ್ಕಲಿಗ ಜಾತಿಯವರೇ ಆಗಿರುವುದರಿಂದ ಫಲಿತಾಂಶ ಸುಲಭವಾಗಿ ನಿಲುಕುತ್ತಿಲ್ಲ. ಕಾಂಗ್ರೆಸ್ ಅಲೆ ಮತ್ತು ವೈಯಕ್ತಿಕ ವರ್ಚಸ್ಸು ಕಿಮ್ಮನೆ ಅವರ ಬೆಂಬಲಕ್ಕೆ ನಿಲ್ಲಬಹುದು ಎಂದು ಅಂದಾಜಿಸಲಾಗಿದೆ.

ಗೆ ಒಟ್ಟಾರೆ ಜಿಲ್ಲೆಯಲ್ಲಿ ಬಹುತೇಕ ಕಡೆ ಕಾಂಗ್ರೆಸ್ ಗೆಲುವು ಖಚಿತವೆಂದೇ ಹಬಹುದು. ಇನ್ನು ಕೆಜೆಪಿ ಮತ್ತು ಜೆಡಿಎಸ್‌ಗಳು ಒಂದೆರಡು ಕಡೆ ಜಾಗ ಳ್ಳಬಹುದು. ಅದೇ ಸಂದರ್ಭದಲ್ಲಿ ಬಿಜೆಪಿ ಇಡೀ ಜಿಲ್ಲೆಯಿಂದಲೇ ಹೋಗುವ ಪರಿಸ್ಥಿತಿಯನ್ನು ತಂದುಕೊಂಡಿದೆ ಎಂದರೆ ಅದು ಯೋಕ್ತಿಯಾಗಲಾರದು.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಚಾಮರಾಜನಗರ ಜಿಲ್ಲೆ


ಪಕ್ಷಾಂತರಿಗಳು-ಬೇತಾಳಗಳು-ಬಂಡಾಯಗಾರರು

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಗೆ ಸ್ಪರ್ಧಿಸಲು ಏ.17ರ ಅವಧಿ ಮುಕ್ತಾಯಗೊಳ್ಳುತ್ತಿದ್ದಂತೆ ಹಿಂದುಳಿದ ಚಾಮರಾಜನಗರ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 90 ನಾಮಪತ್ರ ಸಲ್ಲಿಕೆಯಾಗಿವೆ. ಇವುಗಳಲ್ಲಿ ಬರೋಬ್ಬರಿ 30 ನಾಮಪತ್ರಗಳು ಸ್ವತಂತ್ರ ಅಭ್ಯರ್ಥಿಗಳದ್ದಾಗಿದ್ದು, ಉಳಿದ 60 ನಾಮಪತ್ರಗಳು ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳ ಅಭ್ಯರ್ಥಿಗಳದ್ದಾಗಿವೆ.

ಜಿಲ್ಲೆಯ ಏಕೈಕ ಮೀಸಲು ವಿಧಾನಸಭಾ ಕ್ಷೇತ್ರವಾದ ಕೊಳ್ಳೇಗಾಲದಲ್ಲಿ ಬಿಎಸ್‌ಪಿ ಪಕ್ಷದ ಅಭ್ಯರ್ಥಿ ಎನ್.ಮಹೇಶ್ ಈ ಬಾರಿ ಗೆಲುವಿಗೆ ರಣತಂತ್ರ ರೂಪಿಸಿದ್ದಾರೆ. ಇವರ ಪ್ರತಿಸ್ಪರ್ಧಿ ಕಾಂಗ್ರೆಸ್ ಅಭ್ಯರ್ಥಿ ಎಸ್.ಜಯಣ್ಣ 'ಮಾಜಿ ಶಾಸಕ' ಎಂಬ ಹಣೆಪಟ್ಟಿಯಿಂದ ಹೊರಬರಲು ಅವಿರತ ಶ್ರಮಿಸುತ್ತಿದ್ದಾರೆ. ಇನ್ನೋರ್ವ ಮಾಜಿ ಶಾಸಕ ಎಸ್.ಬಾಲರಾಜ್ ಜೆಡಿಎಸ್ ಪಕ್ಷ ತೊರೆದು ಈಗ ಯಡಿಯೂರಪ್ಪನ ಕೆಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಅವರಿಗೆ ಎಷ್ಟೊಂದು ಆತ್ಮವಿಶ್ವಾಸವೆಂದರೆ ಚುನಾವಣೆಯಲ್ಲಿ ತಾವೀಗಾಗಲೇ ಗೆದ್ದಾಗಿದೆ ಎಂಬಂತೆ ಬೀಗುತ್ತಿದ್ದಾರೆ.

ಉಳಿದಂತೆ ಜೆಡಿಎಸ್‌ನಿಂದ ಸ್ಪರ್ಧಿಸಿರುವ ಜಿ.ಪಂ. ಉಪಾಧ್ಯಕ್ಷ ಚಾಮರಾಜ್ ಜೆಡಿಎಸ್ ಜಿಲ್ಲಾಧ್ಯಕ್ಷ ಎಂ.ಪಂಚಾಕ್ಷರಿಗೆ ಸಿಗಬೇಕಾಗಿದ್ದ ಟಿಕೆಟ್ ಕಸಿದುಕೊಂಡು ನಾಮಪತ್ರ ಸಲ್ಲಿಸಿದ್ದಾರೆ. ಆದರೆ ಚುನಾವಣೆಯಲ್ಲಿ ಗೆಲ್ಲುವುದು ಟಿಕೆಟ್ ಕಸಿದಷ್ಟು ಸುಲಭವಲ್ಲ ಎಂಬುದು ಅವರಿಗೆ ಸದ್ಯದಲ್ಲೇ ಗೊತ್ತಾಗಲಿದೆ.


ಪರಿಮಳಾ ನಾಗಪ್ಪ



ಮಹೇಶ್



ಮಹದೇವ್ ಪ್ರಸಾದ್

ಇವರೆಲ್ಲರ ನಡುವೆ ಹಾಲಿ ಬಿಜೆಪಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಕೇಸರಿ (ಬಿಜೆಪಿ) ಪಕ್ಷದಿಂದಲೇ ಸ್ಪರ್ಧಿಸಿ ಗೆಲುವಿಗೆ ಹಣದ ಹೊಳೆ ಹರಿಸುತ್ತಿದ್ದಾರೆ. ಇವರಿಗೆ 'ಮಾಜಿ ಶಾಸಕ' ಎಂಬ ಹಣೆಪಟ್ಟಿ ಸಿಗಲಿದೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಕಣದಲ್ಲಿರುವ ಇತರೆ ಅಭ್ಯರ್ಥಿಗಳು ಠೇವಣಿ ಕಳೆದುಕೊಳ್ಳುವುದು ಗ್ಯಾರಂಟಿ.

ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಹಾಲಿ ಕಾಂಗ್ರೆಸ್ ಶಾಸಕ ಆರ್.ನರೇಂದ್ರರಾಜೂಗೌಡ ಸ್ಪರ್ಧಿಸಿದ್ದಾರೆ. ಅವರಿಗೆ ಪೈಪೋಟಿ ನೀಡುತ್ತಿರುವುದು ಅವರದ್ದೇ ಕಾಂಗ್ರೆಸ್ ಪಕ್ಷದ ಸದಸ್ಯ, ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾದ ಒಕ್ಕಲಿಗ ಸಮುದಾಯದ ಡಾ.ಎಸ್.ದತ್ತೇಶ್‌ಕುಮಾರ್ ಕಾಂಗ್ರೆಸ್ ಟಿಕೆಟ್ ವಂಚಿತರಾಗಿದ್ದು ಬಂಡಾಯ ಸಾರಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಅವರು ಕಾಂಗ್ರೆಸ್ ವೋಟ್‌ಗಳನ್ನು ನುಂಗಿಹಾಕಲಿದ್ದಾರೆ.


ಬಾಲರಾಜ್


ನರೇಂದ್ರ


ವಾಟಾಳ್ ನಾಗರಾಜ್

ಪಕ್ಷಾಂತರಿ ಪರಿಮಳಾ ನಾಗಪ್ಪ ಈ ಬಾರಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಇವರ ಬೆನ್ನಹಿಂದೆಯೇ ಬೇತಾಳನಂತೆ ಅವರದೇ ಸ್ವಜಾತಿಯ ಪೊನ್ನಾಚಿ ಮಹದೇವಸ್ವಾಮಿ ಕೆಜೆಪಿ ಅಭ್ಯರ್ಥಿಯಾಗಿದ್ದು ಸಾಕಷ್ಟು ಲಿಂಗಾಯತರ ಮತಗಳನ್ನು ಹಾಗೂ ಜೆಡಿಎಸ್ ವೋಟುಗಳನ್ನು ತಮ್ಮದಾಗಿಸಿಕೊಳ್ಳಲಿದ್ದಾರೆ. ಬಿಎಸ್‌ಪಿ ಪಕ್ಷದಿಂದ ಮಾಜಿ ತಾ.ಪಂ. ಅಧ್ಯಕ್ಷ ಸತ್ತೇಗಾಲದ ಪುಟ್ಟರಾಜು ಸ್ಪರ್ಧಿಸಿದ್ದು ಅವರು ಬಿಎಸ್‌ಪಿ ಪಕ್ಷದ ವೋಟ್‌ಗಳನ್ನು ಪಡೆದುಕೊಳ್ಳಲಿದ್ದಾರೆ. ಇವರೆಲ್ಲರ ಮಧ್ಯೆ ಫ್ಲೆಕ್ಸ್ ಪ್ರಚಾರಪ್ರಿಯ ಕಾಮಗೆರೆಯ ಬಿ.ಕೆ.ಶಿವಕುಮಾರ್ ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ಉಳಿದೆಲ್ಲ ಅಭ್ಯರ್ಥಿಗಳು ಇಲ್ಲಿ ನಗಣ್ಯ.

ಚಾಮರಾಜನಗರ ಕ್ಷೇತ್ರದಲ್ಲಿ ಏಳನೇ ಬಾರಿಗೆ ಕನ್ನಡ ವಾಟಾಳ್ ಪಕ್ಷದ ರಾಜ್ಯಾಧ್ಯಕ್ಷ ವಾಟಾಳ್ ನಾಗರಾಜ್ ಕಣಕ್ಕೆ ಹಾರಿದ್ದಾರೆ. ಅವರೊಂದಿಗೆ ಕಣದಲ್ಲಿರುವವರು ಹಾಲಿ ಕಾಂಗ್ರೆಸ್ ಎಂಎಲ್‌ಎ ಸಿ.ಪುಟ್ಟರಂಗಶೆಟ್ಟಿ, ಕೆಎಂಪಿ ಪಕ್ಷದ ಜಿಲ್ಲಾಧ್ಯಕ್ಷ ಹೋರಾಟಗಾರ ವೀರಭದ್ರಸ್ವಾಮಿ, ಬಿಎಸ್‌ಪಿಯಿಂದ ಆರ್.ಪಿ.ನಂಜುಂಡಸ್ವಾಮಿ, ಕೆಜೆಪಿಯಿಂದ ಮಾಜಿ ಎಂಎಲ್‌ಸಿ ಪ್ರೊ.ಮಲ್ಲಿಕಾರ್ಜುನಪ್ಪ ಜೆಡಿಎಸ್ ಪಕ್ಷದಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಸಣ್ಣಮಾದಶೆಟ್ಟಿ, ಬಿಜೆಪಿಯಿಂದ ಎಸ್.ಸೋಮನಾಯ್ಕ ಇದ್ದಾರೆ. ಇಲ್ಲಿ ನೇರ ಸ್ಪರ್ಧೆ ಇರುವುದು ಮಾಜಿ ಕಳ್ಳ ಮತ್ತು ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಹಾಗೂ ಕೆಜೆಪಿಯ ಪ್ರೊ.ಮಲ್ಲಿಕಾರ್ಜುನಪ್ಪ ನಡುವೆ.

ಜಿಲ್ಲಾ ಕೇಂದ್ರವಾದ ಈ ಕ್ಷೇತ್ರದಲ್ಲಿ ಲಿಂಗಾಯತರ ಮತಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಉಪ್ಪಾರರು ಹಾಗೂ ದಲಿತರ ಮತಗಳು ನಿರ್ಣಾಯಕವಾಗಿವೆ. ಆಗಿಂದಾಗ್ಗೆ ಕ್ಷೇತ್ರಕ್ಕೆ ಭೇಟಿ ನೀಡಿ ಬೆಂಗಳೂರು ಹಾದಿ ತುಳಿಯುವ ವಾಟಾಳ್ ನಾಗರಾಜ್ ಈ ಬಾರಿ ಕಾಯಂ ಆಗಿ ಬೆಂಗಳೂರಿನಲ್ಲಿಯೇ ಉಳಿದುಕೊಳ್ಳಬೇಕಾಗುತ್ತದೆ. ಅಷ್ಟರಮಟ್ಟಿಗೆ ಅವರ ಕಾರ್ಯಕರ್ತರು ಹಾಗೂ ಬೆಂಬಲಿಗರ ಸಂಖ್ಯೆ ಕ್ಷೀಣಿಸಿದೆ. ಆದರೂ ಒಂದು ಕೈ ನೋಡೇಬಿಡೋಣ ಎನ್ನುವ ಪ್ರಯತ್ನ ಅವರದ್ದು.

ಗುಂಡ್ಲುಪೇಟೆ ಕ್ಷೇತ್ರದಿಂದ ಐದನೇ ಬಾರಿಗೆ ಮರು ಆಯ್ಕೆ ಬಯಸಿ ಹಾಲಿ ಶಾಸಕ ಮತ್ತು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಎಸ್.ಮಹದೇವಪ್ರಸಾದ್ ಅರ್ಜಿ ಸಲ್ಲಿಸಿದ್ದಾರೆ. ಅವರಿಗೆ ತೀವ್ರ ಪೈಪೋಟಿ ನೀಡುತ್ತಿರುವವರು ಕೆಜೆಪಿಯ ಅಭ್ಯರ್ಥಿ ನಿರಂಜನ್ ಕುಮಾರ್. ಇವರಿಬ್ಬರೂ ಲಿಂಗಾಯತ ಸಮುದಾಯದವರು.

ಬಿಜೆಪಿಯ ನೂತನ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಜೆಡಿಎಸ್‌ನ ಮುದ್ದುಮಲ್ಲು, ಬಿಎಸ್‌ಪಿಯ ಜಿಲ್ಲಾಧ್ಯಕ್ಷ ಅರಕಲವಾಡಿ ನಾಗೇಂದ್ರ, ಸಮಾಜವಾದಿ ಪಕ್ಷದ ರಾಜ್ಯಾಧ್ಯಕ್ಷ ಜಿ.ಎಂ.ಗಾಡ್ಕರ್ ಅವರುಗಳೂ ನಾಮಪತ್ರ ಸಲ್ಲಿಸಿದ್ದು ಹಾಲಿ ಶಾಸಕರನ್ನು ಈ ಬಾರಿ ಮಣಿಸಬೇಕೆಂಬ ಛಲ ತೊಟ್ಟಿದ್ದಾರೆ. ಲಿಂಗಾಯತರ ವೋಟ್ ಬ್ಯಾಂಕ್ ಹೆಚ್ಚಾಗಿರುವ ಈ ಕ್ಷೇತ್ರದಲ್ಲಿ ಉಪ್ಪಾರ ಹಾಗೂ ದಲಿತ ಮತಗಳು ನಿರ್ಣಾಯಕವಾಗಿವೆ.

● ವರದಿಗಾರ.

ತಣ್ಣಗಾದ ಬೆಂಕಿ, ಪರಾರಿ ಆದ ಸೋಮಣ್ಣ

ಈ ಬಾರಿ ಯಾವುದಾದರೂ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಕಳೆದೈದು ವರ್ಷಗಳಿಂದ ಬೊಬ್ಬೆ ಹಾಕುತ್ತಿದ್ದ ಮಾಜಿ ಸಚಿವ ಮತ್ತು ಜೆಡಿಎಸ್‌ನ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಬೆಂಕಿ ಮಹದೇವು ಅದ್ಯಾಕೋ ತಣ್ಣಗಾಗಿ ಯಾವ ಕ್ಷೇತ್ರದಿಂದಲೂ ಕಣಕ್ಕಿಳಿಯದೆ ಮೂಲೆ ಸೇರಿದ್ದಾರೆ.






ಅಂತೆಯೇ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಮತ್ತು ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ ಸೋಲಿನ ಭೀತಿಯಿಂದಾಗಿ ಚುನಾವಣಾ ಕಣದಿಂದ ದೂರ ಉಳಿದಿದ್ದಾರೆ.

ಇವರೆಲ್ಲರಿಗಿಂತ ಮುಖ್ಯವಾಗಿ ಜಿಲ್ಲೆಯಲ್ಲಿ ಸ್ಪರ್ಧಿಸಲು ಸಜ್ಜುಗೊಳ್ಳುತ್ತಿದ್ದ ಜಿಲ್ಲಾ ಉಸ್ತುವಾರಿ ಹಾಗೂ ವಸತಿ ಸಚಿವ ವಿ.ಸೋಮಣ್ಣ ಹನೂರು ಕ್ಷೇತ್ರವನ್ನು ಮಾತ್ರವಲ್ಲ, ಚಾಮರಾಜನಗರ ಹಾಗು ಗುಂಡ್ಲುಪೇಟೆ ಕ್ಷೇತ್ರಗಳನ್ನೂ ಬಿಟ್ಟು ಬೆಂಗಳೂರು ಸೇರಿಕೊಂಡಿದ್ದಾರೆ. ಅಲ್ಲದೇ, ವಿ.ಸೋಮಣ್ಣನ ಬದಲಿಗೆ ಸ್ಪರ್ಧಿಸುವುದಾಗಿ ಹೇಳಿಕೊಂಡು ಹನೂರು ಕ್ಷೇತ್ರದಲ್ಲಿ ಓಡಾಡುತ್ತಿದ್ದ ಸೋಮಣ್ಣನ ಅಣ್ಣನ ಮಗ ರಾಜೇಂದ್ರನೂ ಯಾರ ಕಣ್ಣಿಗೂ ಕಾಣದಂತೆ ಮಾಯವಾಗಿದ್ದಾರೆ. ಇವರ ಹುಸಿ ಮಾತುಗಳನ್ನು ನಂಬಿ ಅಬ್ಬರಿಸುತ್ತಿದ್ದ ಅವರ ಹಿಂಬಾಲಕರೆಲ್ಲರೂ ಇದೀಗ ಚಿಂತಾಕ್ರಾಂತರಾಗಿದ್ದಾರೆ.

ಧಾರವಾಡ (ಕೇಂದ್ರ): ಶೆಟ್ಟರ್‌ಗೆ ಶೆಟ್ಟರೇ ಮುಳುವು

ಸತತ ನಾಲ್ಕು ಬಾರಿ ಧಾರವಾಡ ಕೇಂದ್ರ ಕ್ಷೇತ್ರದಿಂದ ಶಾಸಕನಾಗಿ ಆಯ್ಕೆಯಾಗಿ ವಿರೋಧ ಪಕ್ಷದ ನಾಯಕ, ಪಕ್ಷಾಧ್ಯಕ್ಷ, ಸ್ಪೀಕರ್, ಮುಖ್ಯಮಂತ್ರಿ ಸ್ಥಾನ ಅಲಂಕರಿಸಿರುವ ಜಗದೀಶ್ ಶೆಟ್ಟರ್‌ರ ಐದನೇ ಎಂಟ್ರಿಯ ಕನಸು ಭಗ್ನವಾಗುವ ಸೂಚನೆಗಳೇ ಕ್ಷೇತ್ರದಲ್ಲಿ ದಟ್ಟವಾಗಿ ಕಾಣುತ್ತಿವೆ. ಈ ಮೊದಲು ಶೆಟ್ಟರ್‌ರ ಗೆಲುವಿಗೆ ವರವಾಗುತ್ತಿದ್ದ ಎಲಿಮೆಂಟುಗಳೆ ಈ ಬಾರಿ ಶಾಪವಾಗುವ ಸಾಧ್ಯತೆಯೇ ಹೆಚ್ಚಾಗಿದೆ. ಅಲ್ಲದೆ ರಾಜಕೀಯವಾಗಿ ಶೆಟ್ಟರ್ ಉನ್ನತ ಸ್ಥಾನಕ್ಕೆ ಏರಿದ್ದರೂ ಅದರಿಂದ ಕ್ಷೇತ್ರಕ್ಕೆ ಇದುವರೆವಿಗೆ ಹೇಳಿಕೊಳ್ಳುವಂತಹ ಲಾಭವೇನೂ ಆಗಿಲ್ಲ, ಆ ಮಟ್ಟಿಗೆ ಶೆಟ್ಟರ್ ಕ್ಷೇತ್ರವನ್ನು ನಿರ್ಲಕ್ಷಿಸುತ್ತಲೇ ಬಂದಿದ್ದಾರೆ. ಮುಖ್ಯಮಂತ್ರಿಯಾದ ಮೇಲೂ ಶೆಟ್ಟರ್ ಕ್ಷೇತ್ರದತ್ತ ವಿಶೇಷ ಆಸಕ್ತಿಯನ್ನೇನು ತೋರಿಸಿಲ್ಲ, ಈ ನಿರ್ಲಕ್ಷ್ಯವೇ ಅವರಿಗೆ ಈಗ ಮುಳುವಾಗಬಹುದು.


ಹಾಗೆ ನೋಡಿದರೆ ಇಲ್ಲಿನ ರೈತರ ಭೂಮಿಯನ್ನು ರಿಯಲ್ ಎಸ್ಟೇಟ್ ದಂಧೆಗೆ ಧಾರೆ ಎರೆಯುವ ಮೂಲಕ ರೈತರು ಜಮೀನು ಮಾರಿಕೊಳ್ಳುವಂತೆ ಮಾಡಿದ್ದೊಂದೇ ಶೆಟ್ಟರ್ ಸಾಧನೆ. ಈ ಕಾರ್ಯಕ್ಕೆ ಸ್ವತಃ ಜಗದೀಶ್ ಶೆಟ್ಟರ್‌ರ ತಮ್ಮ ಪ್ರದೀಪ್ ಶೆಟ್ಟರ್‌ನದೇ ಮುಂದಾಳತ್ವ. ವಿಮಾನ ನಿಲ್ದಾಣ ನಿರ್ಮಾಣಕ್ಕೆಂದು ನೂರಾರು ಎಕರೆ ಜಮೀನು ಕಳೆದುಕೊಂಡ ರೈತರಿಗೆ ಇದುವರೆವಿಗೆ ಪರಿಹಾರ ಲಭಿಸಿಲ್ಲ, ಅದಕ್ಕೆಲ್ಲ ಶೆಟ್ಟರೇ ನೇರ ಹೊಣೆಗಾರರಾಗಿದ್ದಾರೆ. ಈ ಎಲ್ಲಾ ಕಾರಣಗಳು ಜನರ ಮನಸ್ಸಲ್ಲಿ ಶೆಟ್ಟರ್ ಎಡೆಗೆ ಅಸಮಾಧಾನ ಮೂಡುವಂತೆ ಮಾಡಿದ್ದು, ಸಿಎಂ ಸಾಹೇಬರಿಗೆ ಕಳೆದ ನಾಲ್ಕು ಚುನಾವಣೆಗಳಷ್ಟು ಸಲೀಸಾದ ವಾತಾವರಣವಿಲ್ಲ.


ತಬ್ರೇಜ್ ಕಮತಿ

ಹಾಲಿ ಕವರ್ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿಯಾಗಿರುವುದರಿಂದ ರಾಜ್ಯಾದ್ಯಂತ ಪ್ರವಾಸ ಮಾಡುವ ನೆಪದಲ್ಲಿ ಈ ಸಮಯದಲ್ಲೂ ಶೆಟ್ಟರ್ ಕ್ಷೇತ್ರದಲ್ಲಿ ಮುಖ ತೋರಿಸುತ್ತಿಲ್ಲ, ಬದಲಾಗಿ ಅವರ ಹೆಂಡತಿ ಶಿಲ್ಪಾ ಶೆಟ್ಟರ್ 'ನಮ್ಮ ಯಜಮಾನ್ರು ತುಂಬಾ ಬ್ಯುಸಿ, ಅದಕಾ ನಾ ಬಂದೇನ್ರೀ, ಅವರಿಗೆ ಮತ ಹಾಕಿ ಗೆಲ್ಲಿಸ್ರಿ' ಅಂತ ಚುನಾವಣಾ ಪ್ರಚಾರ ಆರಂಭಿಸಿದ್ದಾರೆ. ಮತ್ತೊಂದೆಡೆ ಯಡ್ಡಿ ಏಟಿಗೆ ತತ್ತರಿಸಿ ಹೋಗಿರುವ ಬಿಜೆಪಿಯ ಕನಿಷ್ಠ ಮರ್ಯಾದೆಯನ್ನಾದರು ಉಳಿಸಲು ವಿಪರೀತ ಚಡಪಡಿಸುತ್ತಿರುವ ಶೆಟ್ಟರ್ ಮನೆಗೇ ಫೈಲ್ ತರಿಸಿಕೊಂಡು ಮಧ್ಯರಾತ್ರಿವರೆಗೆ ಸಹಿ ಮಾಡುತ್ತಾ ಕೂತಿರುತ್ತಾರೆ. ಆದರೂ ಕ್ಷೇತ್ರದಲ್ಲಿ ಅವರ ಓಡಾಟವೇ ವಿರಳ. ಶತಾಯಗತಾಯ ಶೆಟ್ಟರ್‌ರನ್ನು ಮಣಿಸಲೇಬೇಕೆಂದು ಸಾಕಷ್ಟು ಶಕ್ತಿಗಳು ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಅವರ ಈ ಲೋಪಗಳೆ ಕಾಲೆಳೆಯಲು ಸಜ್ಜಾಗಿವೆ.

ಅಷ್ಟಕ್ಕೂ ಶೆಟ್ಟರ್‌ರ ಸತತ ನಾಲ್ಕು ಗೆಲುವುಗಳ ಹಿಂದಿನ ರಹಸ್ಯ ತಿಳಿದೇ ಇರುವಂತದ್ದು. ಬೇರೆ ಬೇರೆ ಪಕ್ಷಗಳ ಅಭ್ಯರ್ಥಿಗಳಿಗೆ ಆಮಿಷವೊಡ್ಡಿ ಅವರೊಂದಿಗೆ ಒಳಒಪ್ಪಂದ ಮಾಡಿಕೊಂಡು ಆಯ್ಕೆಯಾಗುತ್ತಾ ಬಂದಿದ್ದರು. ಹೀಗಾಗಿ ಶೆಟ್ಟರ್‌ಗೆ ಇಲ್ಲಿ ಪ್ರಬಲ ಪೈಪೋಟಿಯೇ ಇರುತ್ತಿರಲಿಲ್ಲ, ಆದರೆ ಈ ಸಲ ಶೆಟ್ಟರ್‌ರನ್ನು ಸೋಲಿಸಲೇಬೇಕೆಂದು ಪಣ ತೊಟ್ಟಂತಿರುವ ಇತರ ಪಕ್ಷಗಳೂ ರಣತಂತ್ರ ರೂಪಿಸಿಕೊಂಡು ಸಿದ್ಧವಾಗಿವೆ. ಆದ್ದರಿಂದ ಶೆಟ್ಟರ್ ಪಾಲಿಗೆ ಈ ಬಾರಿ ಒಳ ಒಪ್ಪಂದದ ಮಾರ್ಗ ಕೂಡಾ ಬಂದ್ ಆಗಿದೆ. ಎಲ್ಲಕ್ಕೂ ಮಿಗಿಲಾಗಿ ಯಡ್ಡಿಯ 'ಬಿಜೆಪಿ ಹಿಟ್‌ಲಿಸ್ಟ್'ನಲ್ಲಿ ಜನಗದೀಶ್ ಶೆಟ್ಟರ್‌ರ ಹೆಸರು ಮೊದಲ ಪಂಕ್ತಿಯಲ್ಲೇ ಇರುವುದು ಅವರ ಗೆಲುವನ್ನು ಮತ್ತಷ್ಟೂ ದೂರ ಸರಿಸಿದೆ.

ಶೆಟ್ಟರ್‌ಗೆ ಸೆಡ್ಡು ಹೊಡೆಯಲು ಕಾಂಗ್ರೆಸ್‌ನಲ್ಲಿ ಹಲವಾರು ಹೆಸರುಗಳು ಕೇಳಿಬಂದವಾದರು ಕೊನೆಗೆ ಅಚ್ಚರಿಯ ಬೆಳವಣಿಗೆಯಲ್ಲಿ ಡಾಕ್ಟರ್ ಮಹೇಶ್ ಸಿ.ನಲವಾಡರಿಗೆ ಟಿಕೆಟ್ ಲಭಿಸಿದೆ. ಒಂದು ಹಂತದಲ್ಲಿ ಮಾಜಿ ಮಂತ್ರಿ



ಹಿಂಡಸಗೇರಿ, ರಾಜಶೇಖರ್ ಮೆಣಸಿನಕಾಯಿ, ಸದಾನಂದ ಡಂಗಣನವರ್, ಅಷ್ಟೇ ಏಕೆ ಮಾಜಿ ಪೊಲೀಸ್ ಅಧಿಕಾರಿ ಶಂಕರ್ ಬಿದರಿಯವರ ಹೆಸರೂ ಶೆಟ್ಟರ್ ವಿರುದ್ಧ ಸ್ಪರ್ಧಿಸಲಿರುವ ಕಾಂಗ್ರೆಸ್ ಅಭ್ಯರ್ಥಿ ಎಂದು ಬಿಂಬಿತವಾಗಿತ್ತು, ಆದರೆ ರಾಜಕೀಯ ಮುಖ್ಯವಾಹಿನಿಯಲ್ಲಿ ಅಷ್ಟಾಗಿ ಪರಿಚಿತವಲ್ಲದ ಡಾ.ನಲವಾಡರ ಹೆಸರು ಪ್ರಕಟವಾಗುತ್ತಿದ್ದಂತೆ 'ಒಳಒಪ್ಪಂದ'ದ ಹಳೇ ಚಾಳಿ ಮುಂದುವರೆದಿದೆ ಎಂದೇ ಭಾವಿಸಲಾಗಿತ್ತು, ಆದರೆ ಜಾತಿ ರಾಜಕಾರಣದ ಬೇಸ್ ಮೇಲೆ ಶೆಟ್ಟರ್‌ಗೆ ಏಟು ನೀಡಲು ಲಿಂಗಾಯತರೇ ಆದ ನಲವಾಡರನ್ನು ಆಯ್ಕೆ ಮಾಡಲಾಗಿದೆ. ಹೇಗಿದ್ದರೂ ಲಿಂಗಾಯತರ ಸ್ಟ್ರಾಂಗ್ ನಾಯಕ ಎಂದು ಕರೆದುಕೊಳ್ಳುವ ಯಡ್ಡಿ ಶೆಟ್ಟರ್ ವಿರೋಧಿಯಾಗಿರುವುದರಿಂದ ನಲವಾಡರ ಮೂಲಕ ಆ ಮತಗಳನ್ನು ತನ್ನತ್ತ ಸೆಳೆಯುವುದು ಕಾಂಗ್ರೆಸ್‌ನ ತಂತ್ರಗಾರಿಕೆ.

ಇನ್ನು ಜೆಡಿಎಸ್‌ನಿಂದ ರಿಯಲ್ ಎಸ್ಟೇಟ್ ಕುಳ ತಬ್ರೇಜ್ ತಮಶಿ ಕಣಕ್ಕಿಳಿದಿದ್ದಾರೆ. ರಿಯಲ್ ಎಸ್ಟೇಟ್ ದುಡಿಮೆಯ ದುಡ್ಡನ್ನೆಲ್ಲ ಚುನಾವಣೆಯತ್ತ ತಿರುಗಿಸಿರುವ ತಬ್ರೇಜ್ ಈಗಾಗಲೇ 'ಭರ್ಜರಿ' ಪ್ರಚಾರವನ್ನು ಆರಂಭಿಸಿಯಾಗಿದೆ. ಈತನಿಗೆ ಬಸವರಾಜ್ ಹೊರಟ್ಟಿಯ ಸಾಥ್ ಕೂ... ಲಭಿಸಿದ್ದು ಶೆಟ್ಟರ್‌ಗೆ ಚಳಿ ಬಿಡಿಸಲು ಸಜ್ಜಾಗಿದ್ದಾರೆ. ಶೆ... ಸೋಲಿಗೆ ಸುಪಾರಿ ನೀಡಲು ಯತ್ನಿಸಿದ್ದ ಯಡ್ಡಿ ಕಾಂಗ್... ಟಿಕೆಟ್ ವಂಚಿತ ಪ್ರಫುಲ ಚಂದ್ರ ರಾಯನಗೌಡ್ರಿಗೆ ಗ... ಬೀಸಿ ಕೆಜೆಪಿ ಅಭ್ಯರ್ಥಿಯನ್ನಾಗಿಸಲು ಪ್ಲಾನ್ ರೂಪಿಸಿದ್ದ... ಆದರೆ ಅದು ಫಲಿಸದ ಕಾರಣ ಕೊನೆಗೆ ಶೇಖರ್‌ಗ... ಪಾಟೀಲರು ಕೆಜೆಪಿ ಹುರಿಯಾಳಾಗಿದ್ದಾರೆ.

ಈ ಕ್ಷೇತ್ರದ ಇತಿಹಾಸವನ್ನೊಮ್ಮೆ ಕೆದಕಿ ನೋಡು... ಶೆಟ್ಟರ್ ಸೋಲುವ ಸಂಭವವೇ ಎದ್ದು ಕಾಣುತ್ತದೆ. ಮೊದ... ಧಾರವಾಡ ಗ್ರಾಮೀಣ ಎಂದು ಕರೆಯಲ್ಪಡುತ್ತಿದ್ದ ... ಕ್ಷೇತ್ರ ಕಾಂಗ್ರೆಸ್‌ನ ಭದ್ರ ಕೋಟೆಯಾಗಿತ್ತು, ಆದರೆ 1978... ಜನತಾ ದಳದ ಅಭ್ಯರ್ಥಿಯಾಗಿ ಗೆಲ್ಲುವ ಮೂಲಕ '... ಕತ್ತರಿ ಹಾಕಿದ್ದು ಎಸ್.ಆರ್.ಬೊಮ್ಮಾಯಿ. ಆನಂತರ ಸು... ಮೂರು ಅವಧಿಗೆ ಬೊಮ್ಮಾಯಿಯೇ ಇಲ್ಲಿ ಅಧಿಪತಿಯ... ಮೆರೆದಿದ್ದರು. ಮುಖ್ಯಮಂತ್ರಿ ಹುದ್ದೆಯನ... ದಕ್ಕಿಸಿಕೊಂಡಿದ್ದರು. ಸಿಎಂ ಗಾದಿಯಲ್ಲಿದ್ದಾಗಲೆ 198... ಚುನಾವಣೆಯಲ್ಲಿ ಗೆದ್ದು ನಾಲ್ಕನೇ ಬಾರಿಗೆ ಆಯ್ಕೆಯಾಗು... ಹುಮ್ಮಸ್ಸಿನಲ್ಲಿದ್ದ ಅವರನ್ನು ಇಲ್ಲಿನ ಮತದಾರ... ಸೋಲಿಸಿದ್ದರು. ಅವರ ವಿರುದ್ಧ ಸ್ಪರ್ಧಿಸಿದ್ದ ಕಾಂಗ್ರೆಸ್... ಗೋಪಿನಾಥ ಸಾಂಡ್ರಾ ಗೆದ್ದು ಬಂದಿದ್ದರು. ಹೆಚ್ಚೂ ಕಡಿ... ಈಗಿನ ಚಿತ್ರಣವೂ ಅದೇ ರೀತಿ ಇದೆ. ನಾಲ್ಕು ಬಾ... ಗೆದ್ದಿರುವ ಶೆಟ್ಟರ್ ಕ್ಷೇತ್ರವನ್ನು ಬಿಜೆಪಿಯ ಭದ್ರ ಕೋ... ಯಂತಾ ಗಿಸಿದ್ದಾರೆ. ಅಲ್ಲದೆ ಹಾಲಿ ಮುಖ್ಯಮಂತ್ರಿಯಾಗಿ... ಬಿಜೆಪಿಯ ಭಾವಿ ಸಿಎಂ ಅಭ್ಯರ್ಥಿಯೂ ಆಗಿದ್ದಾರೆ. ಶೆಟ್ಟ... ಎಡೆಗಿನ ಜನರ ಅಸಮಾಧಾನ ಮತಗಳಾಗಿ ಬದಲಾ... ಇತಿಹಾಸ ಮರುಕಳಿಸುವುದರಲ್ಲಿ ಅನುಮಾನವೇ ಇಲ್ಲ...


ಅಂತೂಇಂತೂ ಶೆಟ್ಟರ್ ಅಂಗಡಿಯ ಬಾಗಿಲು ಬಂ... ಮಾಡಲು ಸಾಕಷ್ಟು ಕಸರತ್ತುಗಳು ನಡೆಯುತ್ತಿವೆಯಾದರ... ಈ ಪ್ರಯತ್ನದಲ್ಲಿ ಬೇರೆಯವರಿಗೆ ಗೆಲುವು ಲಭಿಸುವು... ಅಷ್ಟೊಂದು ಸುಲಭವಾಗೇನೂ ಇಲ್ಲ. ಆದರೂ ... ಚುನಾವಣೆಯಲ್ಲಿ ಶೆಟ್ಟರ್ ಮುಖದಲ್ಲಿ ಬೆವ... ಹರಿಯುವುದು ಮಾತ್ರ ಗ್ಯಾರಂಟಿ.


ಧಾರವಾಡ (ಪಶ್ಚಿಮ): ಬೆಲ್ಲದ 'ಮೋರೆ'ಗೆ ಜೆಡಿಎಸ್ ಹೊರೆ, ಕೆಜೆಪಿ ಬರೆ!


ಕಾಂಗ್ರೆಸ್‌ನ ಚಿಲ್ಲರೆ ಟಿಕೆಟ್ ಪೊಲಿಟಿಕ್ಸ್, ಬಿಜೆಪಿ-ಕೆಜೆಪಿಯ ಕಾಲೆಳೆದಾಟಗಳ ನಡುವೆ ಜೆಡಿಎಸ್ ಪಕ್ಷದ ಮುಸ್ಲಿಮ್ ವೋಟ್ ಬ್ಯಾಂಕ್ ತಂತ್ರ ವರ್ಕ್‌ಔಟ್ ಆಗುವ ಸಾಧ್ಯತೆ ಇದೆಯಾದರು ಇಲ್ಲಿ ಯಾವುದೂ ನಿಚ್ಚಳವಾಗಿಲ್ಲ, ಕಾಂಗ್ರೆಸ್‌ನಿಂದ ಎಸ್.ಆರ್.ಮೋರೆ ಸ್ಪರ್ಧಿಸಿದ್ದರೆ, ಬಿಜೆಪಿಯಿಂದ ಹಾಲಿ ಶಾಸಕ ಚಂದ್ರಕಾಂತ್ ಬೆಲ್ಲದ್‌ರ ಮಗ ಅರವಿಂದ್ ಬೆಲ್ಲದ್ ಉಮೇದುವಾರ. ಇನ್ನು ಜೆಡಿಎಸ್‌ನ ಸಾರಥಿಯಾಗಿ ಇಸ್ಮಾಯಿಲ್ ತಮಟಾಗರ ಅದೃಷ್ಟ ಪರೀಕ್ಷೆಗಿಳಿದಿದ್ದರೆ ಕೆಜೆಪಿಯಿಂದ ಮಾಜಿ ಎಂಎಲ್‌ಸಿ, ಯಡ್ಡಿಯ ಪಟ್ಟಾ ಶಿಷ್ಯ ಮೋಹನ ಲಿಂಬಿಕಾಯಿ 'ತೆಂಗಿನಕಾಯಿ' ಒಡೆದಿದ್ದಾರೆ.


ಹಾಲಿ ಬಿಜೆಪಿ ಶಾಸಕ ಚಂದ್ರಕಾಂತ್ ಬೆಲ್ಲದ್ ರಾಜಕೀಯ ನಿವೃತ್ತಿ ಘೋಷಿಸಿ ಅಕ್ಷರ ಕೃಷಿಗೆ ಇಳಿಯುತ್ತೇನೆ ಎಂದಾಗ ಹೊಸ ಮುಖಗಳಿಗೆ ಅವಕಾಶ ಸಿಗಬಹುದೆನ್ನುವ ನಿರೀಕ್ಷೆ ಇತ್ತು. ಆದರೂ ಕಳೆದ ಬಾರಿ ಬೆಲ್ಲದ್‌ರ ಗೆಲುವಿಗೆ ಓಡಾಡಿದ್ದ ಗುರುರಾಜ ಹುಣಸಿಮರದ, ಲಿಂಗರಾಜ ಪಾಟೀಲ್, ದತ್ತಾ ಡೋರ್ಲೆ ಹೀಗೆ ದೊಡ್ಡ ದಂಡೇ ಟಿಕೆಟ್ ನಿರೀಕ್ಷೆಯಲ್ಲಿತ್ತು, ಆದರೆ ಬೆಲ್ಲದ್ ಅಜ್ಜನ ನಿವೃತ್ತಿಯ ಹಿಂದೆ ಫ್ಯಾಮಿಲಿ ಪೊಲಿಟಿಕ್ಸ್‌ನ ಹುನ್ನಾರವಿದ್ದದ್ದು ಕೆಲವೇ ದಿನಗಳಲ್ಲಿ ಬಯಲಾಗಿತ್ತು, ಮಗ ಅರವಿಂದ್ ಬೆಲ್ಲದ್‌ಗೆ ಟಿಕೆಟ್ ಸಿಗದೆ ಹೋದಲ್ಲಿ ಬಿಜೆಪಿಯನ್ನೆ ಬರ್ಬಾದ್ ಮಾಡುವುದಾಗಿ ಬ್ಲ್ಯಾಕ್‌ಮೇಲ್ ಮಾಡಿದ್ದು ವ್ಯರ್ಥವಾಗಲಿಲ್ಲ, ಅಂತೂ ಅರವಿಂದ್ ಬೆಲ್ಲದ್ ಕಮಲದ ಅಭ್ಯರ್ಥಿಯಾಗಿ ಬಿ.ಫಾರಂ ಗಿಟ್ಟಿಸಿಕೊಂಡಾಗಿದೆ. ಯಡ್ಡಿಯ ಕಾರಣಕ್ಕೆ ಇಡೀ ಜಿಲ್ಲೆಯಲ್ಲೆ ಅಸ್ತಿತ್ವಕ್ಕೆ ತಡಕಾಡುತ್ತಿರುವ ಬಿಜೆಪಿ ಹೊಸ ಮುಖಗಳಿಗಿಂತ ಬೆಲ್ಲದ್ ಫ್ಯಾಮಿಲಿ ಲೇಬಲ್‌ನಲ್ಲೇ ಚುನಾವಣೆಗೆ ಸಜ್ಜಾಗಿದೆ.


ಸಹಜವಾಗಿಯೇ ಇದರಿಂದ ಬಿಜೆಪಿ ಟಿಕೆಟ್ ಆಕಾಂಕ್ಷಿಗಳು ಬೆಲ್ಲದ್ ಅಜ್ಜನ ವಿರುದ್ಧ ಮುನಿಸಿಕೊಂಡು ದೂರವಾಗಿದ್ದಾರೆ. ತಾವು ಗೆಲ್ಲದಿದ್ದರೂ ಬಿಜೆಪಿಯನ್ನು ಗೆಲ್ಲಲು ಬಿಡಬಾರದೆನ್ನುವ ಹುನ್ನಾರದಲ್ಲಿದ್ದಾರೆ. ಕೆಜೆಪಿ ಕಾಟದ ನಡುವೆ ಬೆಲ್ಲದ್‌ಗೆ ಎದುರಾಗಿರುವ ಈ ಆಂತರಿಕ ಬಂಡಾಯ ಫಲಿತಾಂಶದ ಮೇಲೆ ಪರಿಣಾಮ ಬೀರುವುದು ಖಚಿತ.


ಚಂದ್ರಕಾಂತ್ ಬೆಲ್ಲದ್


ಅರವಿಂದ್ ಬೆಲ್ಲದ್


ಎಸ್.ಆರ್. ಮೋರೆ


ಇಸ್ಮಾಯಿಲ್


ಮೋಹನ್ ಲಿಂಬಿಕಾಯಿ

ಕಳೆದ ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಜಬ್ಬರ್‌ಖಾನ್ ಹೊನ್ನಳ್ಳಿ ಕೆಜೆಪಿ ಸೇರಿದನಂತರ ತಾನೇ ಕೈ ಅಭ್ಯರ್ಥಿಯೆಂದು ಸುತ್ತಾಡಿದ್ದ ನಾಗರಾಜ್ ಛಬ್ಬಿಗೆ ಬಿ.ಫಾರ್ಮ್ ತಪ್ಪಿಸಿದ ಎಸ್.ಆರ್.ಮೋರೆ ಇಲ್ಲಿನ ಕಾಂಗ್ರೆಸ್ ಅಭ್ಯರ್ಥಿ. ಈ ಟಿಕೆಟ್ ಪೊಲಿಟಿಕ್ಸ್ ಮೋರೆಯ ಮುಖಕ್ಕೆ ಮಸಿ ಬಳಿಯುವುದು ಖಾತ್ರಿಯಾಗಿದೆ. ಟಿಕೆಟ್ ವಂಚಿತ ನಾಗರಾಜ್ ಛಬ್ಬಿಯ ಬಂಡಾಯಕ್ಕೆ ಮೋರೆ ಬೆಲೆ ತೆರಬೇಕಾಗಿ ಬರಬಹುದು. ಅಲ್ಲದೆ ಮುಸ್ಲಿಮರೆ ನಿರ್ಣಾಯಕ ಪಾತ್ರ ವಹಿಸುವ ಈ ಕ್ಷೇತ್ರದಲ್ಲಿ ಮುಸ್ಲಿಮ್ ಅಭ್ಯರ್ಥಿಗೆ ಮಣೆ ಹಾಕದಿರುವ ಕಾಂಗ್ರೆಸ್‌ಗೆ ಆ ಸಮುದಾಯ 'ಕೈ' ಕೊಡುವ ಸಾಧ್ಯತೆ ಇದೆ. ಅಲ್ಲದೆ ಖುದ್ದು ಮೋರೆಯ ಛೇಲಾಗಳಾದ ಸುಭಾಷ ಶಿಂಧೆ, ಸುಭಾಷ ಧ್ಯಾಮಕ್ಕನವರ್, ರಸೂಲ್ ಧಾರವಾಡ ಮೊದಲಾದವರು ಖಬರಸ್ತಾನದ ಜಾಗಕ್ಕೆ ದಲಿತರನ್ನು ನುಗ್ಗಿಸಿ, ಭೂಮಿ ಲಪಟಾಯಿಸುವ ಹುನ್ನಾರ ನಡೆಸಿದ ಘಟನೆಯೂ ಮೋರೆಯ ಕಾಲೆಳೆಯುವ ಸಾಧ್ಯತೆ ಇದೆ.

2008ರ ವಿಧಾನಸಭಾ ಚುನಾವಣೆಯಲ್ಲೂ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದ ಇಸ್ಮಾಯಿಲ್ ತಮಾಟಗಾರ ಈ ಬಾರಿ ತೀಕ್ಷ್ಣ ಪೈಪೋಟಿ ನೀಡುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಏಕೆಂದರೆ ಕಳೆದ ಬಾರಿ ಜಬ್ಬರ್ ಖಾನ್ ಹೊನ್ನಳ್ಳಿ ಸ್ಪರ್ಧಿಸಿದ್ದರಿಂದ ಮುಸ್ಲಿಮ್ ಮತಗಳು ಹಂಚಿಹೋಗಿದ್ದವು. ಆದರೆ ಈ ಸಲ ಕ್ಷೇತ್ರದಲ್ಲಿ ಇಸ್ಮಾಯಿಲ್ ಏಕಮಾತ್ರ ಮುಸ್ಲಿಮ್ ಅಭ್ಯರ್ಥಿ. ಧಾರವಾಡದ ಅಂಜುಮಾನ್ ಸಂಸ್ಥೆಗೆ ನಡೆದ ಚುನಾವಣೆಯಲ್ಲಿ ಗೆಲ್ಲುವ ಮೂಲಕ ತನ್ನ ಹಿಡಿತವನ್ನು ಸಾಬೀತುಮಾಡಿಕೊಂಡಿದ್ದಾರೆ. ಅಲ್ಲದೆ ಬಸವರಾಜ್ ಹೊರಟ್ಟಿಯ ಆಶೀರ್ವಾದವೂ ಇಸ್ಮಾಯಿಲ್‌ಗಿದೆ. ಖಬರ್‌ಸ್ತಾನ್ ಗಲಾಟೆ, ಸೂಪರ್ ಮಾರ್ಕೆಟ್ ವ್ಯಾಪಾರಿಗಳ ಹೋರಾಟದ ಮುಂದಾಳತ್ವ ವಹಿಸಿ ಕಳೆದ ಮೂರು ವರ್ಷಗಳಿಂದ ಕ್ಷೇತ್ರದಲ್ಲಿ ಪರಿಚಿತ ಮುಖವಾಗಿರುವ ಇಸ್ಮಾಯಿಲ್ ಸ್ಪರ್ಧೆ ಚುನಾವಣಾ ಫಲಿತಾಂಶದಲ್ಲಿ ಅನಿರೀಕ್ಷಿತ ತಿರುವು ತಂದರೂ ತರಬಲ್ಲರು.


ಬಂಡಾಯದ ಬಿಸಿ ಕೆಜೆಪಿಯನ್ನೂ ಬಿಟ್ಟಿಲ್ಲ, ಮೊದಲ... ಹುಬ್ಬಳ್ಳಿ ಧಾರವಾಡ ಪಶ್ಚಿಮ ಕ್ಷೇತ್ರ ಟಿಕೆಟ್‌ಗಾಗಿ ರಾಜೇಂ... ಗೋಖಲೆ ಮತ್ತು ಮೋಹನ್ ಲಿಂಬಿಕಾಯಿ ನಡು... ಪ್ಪ ಪೈಪೋಟಿ ಇತ್ತಾದರು, ಯಡ್ಡಿಯ ಕೃಪೆ ತನ್ನ ಪಟ್ಟ... ಶಿಷ್ಯ ಮಾಜಿ ಎಂಎಲ್‌ಸಿ ಮೋಹನ್ ಲಿಂಬಿಕಾಯಿಗ... ಒಲಿದಿದೆ. ತನ್ನ ಅಪರಾ-ತಪರಾಗಳಿಂದ ಜಿಲ್ಲೆಯಲ್ಲಿ ಕೆಜೆಪಿಯ... ಅಸ್ತಿತ್ವವನ್ನೇ ಹಾಳುಮಾಡುತ್ತಿರುವ ಲಿಂಬಿಕಾಯಿ ಅಧಿಕೃ... ಅಭ್ಯರ್ಥಿ ಆದಾಗಿನಿಂದಲೇ ಬಂಡಾಯ ಭುಗಿಲೆದ್ದಿದೆ. ಟಿಕೆಟ್... ಹಂಚಿಕೆಯ ವಿಷಯದಲ್ಲಿ ಈ ಲಿಂಬಿಕಾಯಿ ಅನಗತ್ಯವಾ... ಮೂಗು ತೂರಿಸಿದ್ದರಿಂದ ಧಾರವಾಡ ಜಿಲ್ಲಾ ಕೆಜೆಪಿ ಅಧ್... ಸುನೀಲ್ ಸರೂರ ಈಗಾಗಲೇ ಕೆಜೆಪಿಗೆ ಗುಡ್‌ಬೈ ಹೇ... ಬಿಜೆಪಿ ಸೇರಿಕೊಂಡಾಗಿದೆ.

ಮೋಹನ್ ಲಿಂಬಿಕಾಯಿ, ಅಶೋಕ್ ಕಾಟವೆ ಮುಂತಾದ ಯಡ್ಡಿ ಛೇಲಾಗಳ ಹಾವಳಿಯಿಂದಾಗಿ ಬಿಜೆಪಿಗೆ ಸೆಡ್ಡು ಹೊಡೆಯಬಹುದಾಗಿ... ವಿಷ್ಣು ಪವಾರ್, ಚಂದ್ರಶೇಖರ್ ಗೋಕಾಕ್, ರಮೇಶ್, ಲಕ್ಷ್ಮಣ ಬೀಳಗಿ ಮೊದಲಾದವರೆಲ್ಲ ದೂರ ಸರಿಯುವ ಸೂಚನೆಗಳು ಸ್ಪಷ್ಟವಾಗಿ ಗೋಚರಿಸಿದ್ದು ಬಿಜೆಪಿ ಕಾಲೆಳೆಯುವ ಕೆಜೆಪಿ ಅಜೆಂಡಾವೇ ಫ್ಲಾಪ್ ಶೋ ಆಗುವ ಸಂಭವವಿವೆ.

ಒಟ್ಟಾರೆ ಅತಂತ್ರ ಸ್ಥಿತಿಯಲ್ಲಿರುವ ವಿಜಯಲಕ್ಷ್ಮಿ ಯಾರಿಗೆ ಒಲಿಯುತ್ತಾಳೆನ್ನುವುದು ಅಸ್ಪಷ್ಟವಾಗಿದ್ದರೂ ಆಂತರಿಕ ಬಂಡಾಯಗಳೆ ಫಲಿತಾಂಶ ಬರೆಯುವ ಎಲಿಮೆಂಟುಗಳೆನ್ನುವುದು ಮಾತ್ರ ಸತ್ಯ. ಜೆಡಿಎಸ್ ಹೊರತುಪಡಿಸಿ ಬೇರೆಲ್ಲಾ ಪಕ್ಷಗಳಲ್ಲೂ ಬಂಡಾಯ ಬಿಸಿ ಇದೆ.

● ಹುಬ್ಬಳಿಯಾಂವ

ಮುಳುಗಿ ಹೋದ ಮಧುರ ಧ್ವನಿ



ಮೊನ್ನೆ ನಾಗತಿಹಳ್ಳಿಯ ಸಂಸ್ಕೃತಿ ಹಬ್ಬದಲ್ಲಿ ಗಮಿಸಿ ನಟರಾಜ್ ಹುಲಿಯಾರ್ ಜೊತೆ ಬರುತ್ತಿರ ಕಾದರೆ ನಾನು ಪಿ.ಬಿ. ಶ್ರೀನಿವಾಸ್ ಹಾಡೊಂದನ್ನು ನುಗಿದೆ. ಆಗ ನಟರಾಜ್ "ನೀನು ಪಿ.ಬಿ. ಶ್ರೀನಿವಾಸ್ ಡುಗಳನ್ನಾದರೂ ಅಭ್ಯಾಸ ಮಾಡಬೇಕಾಗಿತ್ತು" ಎಂದು ಳುತ್ತ ನಾವಿಬ್ಬರೂ ಪಿ.ಬಿ.ಶ್ರೀಯವರ ಮಧುರ ದನಿಯ ಗ್ಗೆ ಮಾತನಾಡುತ್ತಿರಬೇಕಾದರೆ ಗೆಳೆಯ ಶ್ರೀನಿವಾಸ್ ಯಪ್ಪನಿಂದ ಫೋನ್ ಬಂತು. ಅದು ಪಿ.ಬಿ.ಶ್ರೀಯವರ ನದ ಸುದ್ದಿಯಾಗಿತ್ತು. ಅದನ್ನು ಕೇಳಿ ನನಗೇನು ಶಾಕ್ ಗಲಿಲ್ಲ. ಏಕೆಂದರೆ ಪಿ.ಬಿ. ಶ್ರೀಯವರ ಅತ್ಯುತ್ತಮ ಡುಗಳ ಸಂಗ್ರಹ ನನ್ನಲ್ಲಿವೆ. ಕೇಳಬೇಕೆನಿಸಿದಾಗಲೆಲ್ಲ ಗೆ ಪ್ರಿಯವಾದ ಹಾಡುಗಳನ್ನು ಕೇಳುತ್ತೇನೆ. ಅವುಗಳಲ್ಲಿ ಗ್ಗೆ, ಮಧ್ಯಾಹ್ನ ಸಂಜೆ ಕೇಳುವಂತಹ ಹಾಡುಗಳೆಲ್ಲಾ ವೆ. "ಇವಳು ಯಾರು ಬಲ್ಲೆಯೇನು?" ಎಂಬ ಸಿಂಹಸ್ವಾಮಿಯವರ ಕವನವನ್ನು, ಕರೀಂಖಾನರ "ಸಾಕಲೆ ಕದ ನೋಟವು ಹರಿಣಿ" ತರಹದ ಹಾಡುಗಳನ್ನು ಜೆ ಇಳಿಹೊತ್ತಿನ ಗೋಧೂಳಿಯಲ್ಲಿ ಕೇಳಿ ಆನಂದಿಸಿದ್ದೇನೆ. ಈಗ ಹಿಂದಿರುಗಿ ನೋಡಿದರೆ ನನ್ನ ಬದುಕಿನೊಟ್ಟಿಗೆ ಬಿ.ಶ್ರೀ ಹಾಡುಗಳು ಬೆರೆತುಹೋಗಿವೆ.

ಪಿ.ಬಿ. ಶ್ರೀಯವರ ಹಾಡನ್ನು ನಾನು ಮೊದಲು ಕೇಳಿದ್ದು ದು ಜಾತ್ರೆಯಲ್ಲಿ. ಒಬ್ಬ ಮನುಷ್ಯನ ಜೀವಿತಾವಧಿಯಲ್ಲಿ ರಡು ಬಾರಿ ಮಾತ್ರ ಸಿಗುವ ಜಾತ್ರೆ ಬೀರೇದೇವರ ತ್ರೆ. ಆ ದೇವಸ್ಥಾನದ ಮುಂಭಾಗದಲ್ಲಿ ಇಡೀ ದಿನ ಕನಕದಾಸ ಚಿತ್ರದ ಹಾಡುಗಳನ್ನು ಹಾಕಿದ್ದರು. ಸಂಜೆಯ



ತ್ತಿಗೆ ಅವು ಬಾಯಿಗೇ ಬಂದವು. ಈಗ ಎಲ್ಲೇ ಹಾಡುಗಳನ್ನು ಕೇಳಿದರೂ ಜಾತ್ರೆಯ ಮಾಯಾಲೋಕ ಮುಂದೆ ಬರುತ್ತದೆ.

ಆಗ ನಮ್ಮದು ರೇಡಿಯೋ ಇಲ್ಲದ ಊರಾದ್ದರಿಂದ ಯಾರಾದರೂ ಹೆಗ್ಗಾಳವಂತರು ಮದುವೆಗೆ ಗ್ರಾಮಾಫೋನ್ ತರಿಸಿದರೆ ಮಾತ್ರ ನಾವು ಹಾಡು ಳುತ್ತಿದ್ದೆವು. ಪಿ.ಬಿ.ಶ್ರೀ ತರಹವೇ ಹಾಡುತ್ತಿದ್ದ ಚಿಕ್ಕಣ್ಣ ಬುವನು ತನ್ನ ಮದುವೆಗೆ ಗ್ರಾಮಾಫೋನ್ ತರಿಸಿದ್ದ. ಕೇಳಿಸಿಕೊಂಡ ಹಾಡು, 'ಅಮರಶಿಲ್ಪಿ ಜಕಣಾಚಾರಿ' ದ "ನಿಲ್ಲು ನೀ ನಿಲ್ಲು ನೀ ನೀಲವೇಣಿ" ಹಾಡು. ಹಾಡಿನಲ್ಲಿ ಪಿ. ಸುಶೀಲರ ಹತ್ತಿರ ಬಂದು ಯವಾಗುವ ಆಲಾಪನೆ ಅದ್ಭುತ.


ನಂತರ ನಾಗತಿಹಳ್ಳಿಯ ಸ್ಕೂಲ್ ಯೂನಿಯನ್ ಡೇಗೆ ದುಹೋಗುತ್ತಿರಬೇಕಾದರೆ "ಬಾ ತಾಯಿ ಭಾರತಿಯೆ ದ ಭಾಗೀರಥಿಯೆ ಹೃದಯ ವೀಣೆಯ ಮೀಟಿ" ಎಂಬ ಡು ನಮ್ಮನ್ನು ಎಷ್ಟು ವಶೀಕರಣ ಮಾಡಿತೆಂದರೆ ನನ್ನ ತೆಯಿದ್ದ ಹುಡುಗರೆಲ್ಲಾ ಒಮ್ಮೆಲ್ಲೆ ನಿಂತು ಗಾಳಿಯಲ್ಲಿ ಬರುತ್ತಿದ್ದ ಹಾಡಿನ ಕಡೆಗೆ ಕಿವಿ ತಿರುಗಿಸಿದ್ದೆವು. "ಕನ್ನಡದ ದೇವಿ ಕಾಪಾಡು ಬಾ ತಾಯಿ" ಹಾಡನ್ನು ಕೇಳಿದ್ದೂ . ಇನ್ನು ಮಿಡ್ಲ್‌ಸ್ಕೂಲಿನಲ್ಲಿದ್ದಾಗ 'ಮಮತೆ' ಚಿತ್ರದ ರೆ ಸಾವಿರಾ ಸೇರಿ ಚಂದಿರಗೆ ಸಾಟಿಯೆ ತಾಯಿ ಎಂಬ ಕೆ" ಹಾಡನ್ನು ತುಂಬಾ ಕೇಳಿದ್ದರಿಂದ ಈ ಹಾಡಿನೊಟ್ಟಿಗೆ ಡ್ಲ್‌ಸ್ಕೂಲಿನ ಜೀವನವೇ ಹಾದುಹೋಗುತ್ತದೆ.

ಕದಬಹಳ್ಳಿಯಲ್ಲಿ ಮಂಡ್ಯ ಜಿಲ್ಲೆಯಲ್ಲೇ ದೊಡ್ಡ ಸಂತೆ ಯುತ್ತಿತ್ತು. ಆ ಸಂತೆ ಜಾಗದಲ್ಲೀಗ ಚತುಷ್ಪಥ ರಸ್ತೆ ದುಹೋಗಿ ಸಂತೆಯ ಇತಿಹಾಸವನ್ನೇ ಗುಡಿಸಿ ಹಾಕಿದೆ.

ಮರುದಿನ ಸಂತೆ ಎಂದರೆ ಹಿಂದಿನ ದಿನವೇ ಮಿಲಿಟ್ರಿ ಹೋಟೆಲುಗಳು ಬಂದು ಸೇರುತ್ತಿದ್ದವು. ಈ ಪೈಕಿ ಹೋಟೆಲಿನ ಕುಬೇರನೊಬ್ಬ ಗ್ರಾಮಾಫೋನ್ ತರಿಸಿ ರೆಕಾರ್ಡ್ ಹಾಕಿದ ಕೂಡಲೇ ನಾನು ಊರನ್ನು ಮರೆತು ಅಲ್ಲೇ ಉಳಿದೆ. 'ನಮ್ಮ ಊರು' ಚಿತ್ರದ "ಹೋಗದಿರೀ ಸೋದರರೆ ಹೋಗದಿರೀ ಬಂಧುಗಳೆ" ಎಂಬ ಹಾಡಲ್ಲದೆ "ಬಿಂಕದ ಸಿಂಗಾರಿ ಮೈ ಡೊಂಕಿನ ವೈಯಾರಿ" ಹಾಡುಗಳನ್ನು ಸಂಜೆಯವರೆಗೂ ಹಾಕಿದರು. ರಾತ್ರಿ ಮಿಲಿಟ್ರಿ ಹೋಟೆಲಿನಲ್ಲಿ ಮಿಕ್ಕ ಸಾರು ಅನ್ನವನ್ನು ನಮಗೆಲ್ಲಾ ಕೊಡುತ್ತಿದ್ದರು. ಈಗಲೂ 'ಬಿಂಕದ ಸಿಂಗಾರಿ' ಹಾಡು ಕೇಳಿದರೆ ಸಾಕು ಆ ಮಿಲಿಟ್ರಿ ಹೋಟೆಲಿನವರು ಕೊಟ್ಟಿದ್ದ ಸಾರಿನ ಗಮಲು ಮೂಗಿಗೆ ರಾಚುತ್ತದೆ.

ಹೈಸ್ಕೂಲಿನ ಮೂರು ವರ್ಷದ ನೆನಪೆಂದರೆ ಅಲ್ಲಿನ ಸಂತೆಯಲ್ಲಿ ಕೇಳಿಸಿಕೊಂಡ "ಹಾಡುತಿರುವ ಹಕ್ಕಿಗಳೆ", "ನೀ ಮುಡಿದಾ ಮಲ್ಲಿಗೆ ಹೂವಿನ ಮಾಲೆ", "ಶೃಂಗಾರ ಶೀಲ ಸಂಗೀತ ಲೋಲ", "ನಗುತ ಹಾಡಲೇ ಅಳುತ ಹಾಡಲೇ" ಎಂಬ ಹಾಡುಗಳನ್ನು ಕೇಳಿದ್ದು. ಸ್ಕೂಲಿಗೆ ಫೀಜು ಕಟ್ಟಲೋಸ್ಕರ ಸಿದ್ದೇಗೌಡನ ಮನೆ ಕಟ್ಟಲು ಇಟ್ಟಿಗೆ ಹೊರಲು ಹೋಗುತ್ತಿದ್ದೆ. ಒಮ್ಮೆ ನನ್ನಂತಹ ಹುಡುಗರೆಲ್ಲಾ ಸೇರಿ "ಹಿರೀಸಾವೆಗೆ 'ಪುನರ್ಜನ್ಮ' ಸಿನಿಮಾ ಬಂದಿದೆಯಂತೆ. ರಾತ್ರಿ ಸೆಕೆಂಡ್ ಶೋ ನೋಡಲು ಹೋಗೋಣ" ಎಂದು ತೀರ್ಮಾನಿಸಿ ಹೊರಟೇಬಿಟ್ಟೆವು. ಆ ಸಿನಿಮಾ ನೋಡಿ ಬರುವಾಗ ನಮ್ಮನ್ನು ಹಿಂಬಾಲಿಸಿದ್ದು ಜಯಂತಿಯ ಸುಂದರ ಮುಖ ಮತ್ತು "ಒಲುಮೆಯ ಹೂವೇ ನೀ ಹೋದೆ ಎಲ್ಲಿಗೇ" ಎಂಬ ಹಾಡು. ಅಂತಹ ಸುಂದರ ಯುವತಿಯನ್ನು ಮಧ್ಯದಲ್ಲೇ ಸಾಯಿಸಿದ್ದರ ಬಗ್ಗೆ ನಮಗೆ ಸಿಟ್ಟು ಬಂದರೂ 'ಒಲುಮೆಯ ಹೂವೆ' ಎಂಬ ವಿರಹ ಗೀತೆಯೇ ಸೃಷ್ಟಿಯಾಗುತ್ತಿರಲಿಲ್ಲ ಅನ್ನಿಸಿತ್ತು.

ಪಿ.ಬಿ.ಶ್ರೀಯವರ ವಿರಹ ತುಂಬಿದ ದುಃಖದ ಹಾಡು ಕೇವಲ ಐದಾರು ಅನ್ನಿಸುತ್ತೆ. 'ದಶಾವತಾರ'ದ "ವೈದೇಹಿ ಏನಾದಳೊ, ಒಲುಮೆಯ ಹೂವೆ," 'ಎರಡು ಕನಸಿನ' "ಬಾಡಿಹೋದ ಬಳ್ಳಿಯಿಂದ" ಎಂಬ ಹಾಡುಗಳು ಇವತ್ತಿಗೂ ನಮ್ಮ ಮನಸ್ಸನ್ನು ಆದ್ರಗೊಳಿಸುತ್ತವೆ. ಆದರಲ್ಲೂ "ಬಾಡಿಹೋದ



ಬಳ್ಳಿಯಿಂದ" ಎಂಬ ಹಾಡು ಭಗ್ನಪ್ರೇಮಿಗಳು ಎಂದೆಂದೂ ಹಾಡಿಕೊಳ್ಳುವ ಹಾಡಾಗಿ ಉಳಿದಿದೆ.

ಪಿಯುಸಿ ಓದಲು ಮೈಸೂರಿಗೆ ಹೋದಾಗ 'ಶ್ರೀಕೃಷ್ಣ ದೇವರಾಯ', 'ಕರುಳಿನ ಕರೆ' ಮತ್ತು 'ಕಸ್ತೂರಿ ನಿವಾಸ'ದ ಹಾಡುಗಳು ಮನಸ್ಸನ್ನು ಮುತ್ತಿದವು. ಆ ವರ್ಷ ಅಣ್ಣನವರ ಕನಿಷ್ಠ ಒಂದು ಡಜನ್ ಚಿತ್ರಗಳು ಬಿಡುಗಡೆಯಾಗಿ ಸಿನಿಮಾ ನೋಡುಗರಿಗೆ ಹಬ್ಬವೋ ಹಬ್ಬ. 'ಭಲೇ ಜೋಡಿ' ಚಿತ್ರದ "ನನ್ನ ಕನಸಿನ ರಾಣಿಯ ನಿಲ್ಲೆ ನಿಲ್ಲೆ" ಎಂದು ಹಾಡು ಮತ್ತು ರಾಜ್‌ಕುಮಾರ್ ಭಾರತಿಯವರ ನಿತಂಭವನ್ನು ಹಿಡಿದೆಳೆದ ದೃಶ್ಯಕ್ಕಾಗಿ ಆ ಸಿನಿಮಾವನ್ನು ಹಲವು ಬಾರಿ ನೋಡಿದ್ದರಿಂದ ಬಾಯಿಪಾಠವಾಗಿತ್ತು. "ರಂಗಿ ನಿನ್ ಮೇಲ್ ನಂಗೆ ಮನಸೈತೆ" ಎಂಬ ಹಾಡು ಇವತ್ತಿಗೂ ಕಚಗುಳಿಯಿಡುವ ಹಾಡಾಗಿ ಉಳಿದಿದೆ.

ಆನಂತರ ಬಂದ 'ಗಂಧದ ಗುಡಿ', 'ಬಂಗಾರದ ಮನುಷ್ಯ', 'ನಾಗರಹಾವು' ಚಿತ್ರದ ಗೀತೆಗಳು ನನ್ನ ನಿರುದ್ಯೋಗದ ಕಾಲದ ಹಾಡುಗಳಾಗಿ, ಕೃಷಿ ಕೂಲಿ ಕೆಲಸ, ಹೋಟೆಲ್ ಕೆಲಸ ಇತ್ಯಾದಿ ಬದುಕಿನ ಬವಣೆಯನ್ನು ಹಗುರವಾಗಿಸಿದವು. ಈ ಕಾರಣಕ್ಕೆ ಇವತ್ತಿಗೂ ಪಿ.ಬಿ.ಶ್ರೀಯವರ ಮಧುರ ದನಿ ನನ್ನ ಮನಸ್ಸಿಗೆ ಮುದ ನೀಡುವ ಸಾಂತ್ವನದ ದನಿಯಾಗಿದೆ.

ಇಂತಹ ಮಹಾಗಾಯಕನೊಟ್ಟಿಗೆ ಒಂದು ದಿನ ಪೂರ್ತಿ ಇರುವ ಅವಕಾಶ ನನಗೊಮ್ಮೆ ಸಿಕ್ಕಿತ್ತು. ಶಿವಮೊಗ್ಗದ ಗೆಳೆಯರೆಲ್ಲ ಅವರನ್ನು ಕರೆದು ಸನ್ಮಾನಿಸಬೇಕೆಂದು ತೀರ್ಮಾನಿಸಿದಾಗ ಅವರ ಒಡನಾಡಿ ಶೇಖರ್ ಅಂಚನ್ ಎಂಬ ಮಿತ್ರ ಅವರನ್ನು ಶಿವಮೊಗ್ಗಗೆ ಕರೆದುಕೊಂಡೇ ಬಂದರು. ಬೆಳಗ್ಗೆ 9 ಗಂಟೆಯಿಂದ ರಾತ್ರಿ ಹನ್ನೊಂದರವರೆಗೆ ನಿರಂತರವಾಗಿ ಮಾತನಾಡಿದ ಪಿ.ಬಿ.ಶ್ರೀ ಹಾಡಿನಷ್ಟೇ ಭಾಷಣದಲ್ಲೂ ಶ್ರೇಷ್ಠ ವಾಗ್ಮಿ ಎನ್ನಿಸಿತು. ಆಗ ಅವರಿಗೆ ನಾನು ಕೇಳಿದ ಪ್ರಶ್ನೆಗಳಲ್ಲಿ ಮೊದಲನೆಯದು ಅಂದರೆ "ರಾಜ್‌ಕುಮಾರ್ ತಮ್ಮ ಪಾತ್ರಕ್ಕೆ ತಾವೇ ಹಾಡಿಕೊಂಡಿದ್ದರಿಂದ ನಿಮಗೆ ಅನ್ಯಾಯವಾಗಲಿಲ್ಲವೆ?" ಎಂದು. ಅದಕ್ಕೆ ಪಿ.ಬಿ.ಶ್ರೀ "ಯಾವ ಅನ್ಯಾಯವೂ ಇಲ್ಲ. ಸ್ವತಃ ರಾಜ್‌ಕುಮಾರ್ ಒಬ್ಬ ಶ್ರೇಷ್ಠ ಗಾಯಕರಾಗಿದ್ದುಕೊಂಡು ನನಗೂ ಅವಕಾಶ ಕೊಟ್ಟಿದ್ದರು" ಎಂದರಲ್ಲದೆ "ಯಾವ ಜನ್ಮದ ಪುಣ್ಯವೋ ಏನೊ, ಎಸ್. ಜಾನಕಿ ಮತ್ತು ಪಿ. ಸುಶೀಲ ಅವರಂತಹ ಶ್ರೇಷ್ಠ ಗಾಯಕಿಯರ ಜೊತೆ ಹಾಡಲು ನನಗೂ ಅವಕಾಶ ಸಿಕ್ಕಿತು" ಎಂದರು. ಈ ಮಾತನ್ನು ನೆನೆಸಿಕೊಂಡಾಗಲೆಲ್ಲಾ ಪಿ.ಬಿ.ಶ್ರೀ ಎಂತಹ ಶ್ರೇಷ್ಠ ವ್ಯಕ್ತಿಯಾಗಿದ್ದರು ಅನ್ನಿಸುತ್ತದೆ. "ನಿಮಗೆ ಶಾಸ್ತ್ರೀಯ ಸಂಗೀತವಾಗಿತ್ತೆ" ಎಂದು ಕೇಳಿದ್ದಾಗ "ಶಾಸ್ತ್ರೀಯ ನಾಸ್ತಿ. ನನ್ನ ತಾಯಿ ದೇವರನಾಮ ಹಾಡುವುದನ್ನು ಕೇಳಿ ನಾನು ಕಲಿತುಕೊಂಡೆ. ನನ್ನ ಗಾಯನ ತಾಯಿಂದ ಬಂದ ಆಸ್ತಿ" ಎಂದಿದ್ದರು.

"ಸಾರ್ ನೀವು ಹೈ ಪಿಚ್‌ಗೆ ಹೋಗಿ ಹಾಡಿರುವ ಹಾಡು ಕಡಿಮೆ. ಆ ಪೈಕಿ ನನ್ನ ಮೆಚ್ಚಿನ ಹಾಡೆಂದರೆ "ಗುಮ್ಮನ ಕರೆಯದಿರೆ" ಹಾಡಲ್ಲಿ "ಮಗನ ಮಾತನ್ನು ಕೇಳುತಾ ಗೋಪಿ" ಅಂತ ಹೋಗಿದ್ದೀರಲ್ಲ ಅದು ನನಗೆ ಬಹಳ ಹಿಡಿಸಿದೆ" ಅಂದೆ. ಪಿ.ಬಿ.ಶ್ರೀ. ಕೂಡಲೇ ತಮ್ಮ ಮಗನನ್ನು ಕರೆದು "ನೋಡು ಇವರು ಎಂತಹ ಹಾಡನ್ನು ಜ್ಞಾಪಿಸುತ್ತ ಇದಾರೆ" ಎಂದು ಅಚ್ಚರಿಪಟ್ಟರು. ಅಲ್ಲದೆ ನನ್ನ ಜಾತಿ ಸೂಚಕ ನಾಮ ತೆಗೆದು ಚಂದ್ರಯ್ಯ ಎಂದು ಕರೆದುಕೊಳ್ಳುವಂತೆ ಹೇಳಿದರು. ವಿಪರ್ಯಾಸವೆಂದರೆ ಪಿ.ಬಿ.ಶ್ರೀ ಹಣೆಯ ಮೇಲೆ ಜಾತಿ ಬರೆದುಕೊಂಡಿದ್ದರು. ಆ ಬಗ್ಗೆ ಕೇಳಿದಾಗ "ಅದು ದೈವಭಕ್ತಿ, ನನ್ನದು ಸಂಗೀತ ಜಾತಿ" ಎಂದಿದ್ದರು. ಅವರನ್ನು ಮಾತನಾಡಿಸಿದ್ದನ್ನೆಲ್ಲಾ ಪತ್ರಿಕೆಗೆ ಬರೆದು ಕಳಿಸಿದ್ದೆ. ಅದನ್ನು ಹೇಳಿದಾಗ ಪತ್ರಿಕೆ ಕಳುಹಿಸಿಕೊಡಲು ಹೇಳಿದ್ದರು. ಪತ್ರಿಕೆ ಜೊತೆಗೆ ಮೆಚ್ಚಿ ಬಂದ ಪತ್ರಗಳನ್ನೂ ಕಳುಹಿಸಿದ್ದೆ. ಹೀಗೆ ಅವರ ನೆನಪಿನಲ್ಲಿ ನಾನು ಉಳಿದ ಕಾರಣಕ್ಕೆ ಈಚೆಗೆ ಗೆಳೆಯ ರೆಹಮತ್ ತರೀಕೆರೆ ಚೆನ್ನೈಗೆ ಹೋಗಿ ಅವರನ್ನು ಭೇಟಿಯಾದಾಗ "ಶಿವಮೊಗ್ಗದಲ್ಲಿ ಚಂದ್ರೇಗೌಡರು ಚೆನ್ನಾಗಿದ್ದಾರ?" ಎಂದು ಕೇಳಿದರಂತೆ. ರೆಹಮತ್ ಆ ಕೂಡಲೇ ಫೋನ್ ಮಾಡಿ ನಾನು ನಿಧಿ ಸಿಕ್ಕಷ್ಟು ಸಂಭ್ರಮಿಸುವಂತೆ ಮಾಡಿದ್ದ.

ಪಿ.ಬಿ.ಶ್ರೀ ದನಿಗೆ ವಯಸ್ಸಾಗುತ್ತಿತ್ತು. ಸೂಕ್ತ ಸಮಯಕ್ಕೆ ಸರಿಯಾಗಿ ರಾಜ್‌ಕುಮಾರ್ ಹಾಡುಗಾರಿಕೆ ಮುಂದುವರಿಸಿದರು. ಆದರೆ ನಮ್ಮ ಭಾಗಕ್ಕೆ ರಾಜ್‌ಗೆ ರಾಜ್ ದನಿ ಸೆಟ್ಟಾಗಲು ಬಹಳ ದಿನ ಹಿಡಿಯಿತು.

ಕನ್ನಡದಲ್ಲಿ ಪಿ.ಬಿ.ಶ್ರೀ ಮತ್ತು ಹಿಂದಿಯಲ್ಲಿ ರಫಿ ಹಾಡನ್ನು ಹಾಡುವುದು ಅಷ್ಟು ಸುಲಭವಲ್ಲ. ಆದರೆ ಕಿಶೋರ್ ಕುಮಾರ್ ಮತ್ತು ಬಾಲಸುಬ್ರಹ್ಮಣ್ಯಂ ಹಾಡುಗಳನ್ನು ಬಹಳಷ್ಟು ಜನ ಹಾಡಬಲ್ಲರು. ಪಿ.ಬಿ.ಶ್ರೀಯವರಲ್ಲಿ ಮಧುರತೆ ಕನ್ನಡಕ್ಕಿಂತಲೂ ತಮಿಳಿನಲ್ಲಿ ಹೆಚ್ಚು ವಿಜೃಂಭಿಸಿದೆ.

ಬರೀ ಹಾಡುಗಾರಿಕೆಗೇ ಮೀಸಲಿರದ ಆ ಜೀವ ಹಲವು ಭಾಷೆಯಲ್ಲಿ ಪಾಂಡಿತ್ಯ ಗಳಿಸಿತ್ತು. ಮನಸ್ಸಿಗೆ ಹೊಳೆದ ಸಾಲುಗಳನ್ನು ದಾಖಲಿಸಿಕೊಳ್ಳಲು ಡಜನ್‌ಗಟ್ಟಲೆ ಪೆನ್ನುಗಳನ್ನು ಜೇಬಿನಲ್ಲಿ ತುಂಬಿಕೊಂಡಿರುತ್ತಿದ್ದರು. ಅಷ್ಟೇ ಅಲ್ಲ; ಬರೆದುದೆಲ್ಲವನ್ನು ಚೀಲಕ್ಕೆ ತುಂಬಿಕೊಂಡು ಎಲ್ಲಿಗೆ ಹೋದರೂ ಜೊತೆಯಲ್ಲೇ ತುಂಬಿಕೊಂಡು ಹೋಗುತ್ತಿದ್ದರು. ನಡೆಯಲು ಕಷ್ಟವಾದರೂ ಆ ಚೀಲಗಳನ್ನು ತಾವೇ ಹಿಡಿದುಕೊಂಡಿರುತ್ತಿದ್ದರು.

ಅವರೊಬ್ಬ ಶ್ರೇಷ್ಠ ಗಾಯಕ. ಅವರ ಕನ್ನಡವೂ ಕೂಡ ಶ್ರೇಷ್ಠವಾದದ್ದು. ಏಕೆಂದರೆ ಅವರು ಕನ್ನಡ ಕಲಿತದ್ದೇ ಕವಿಗಳ ಸಾಲನ್ನು ತಪ್ಪಿಲ್ಲದೆ ಉಚ್ಚರಿಸುವುದರ ಮುಖಾಂತರ ಮತ್ತು ಕವಿಗಳನ್ನು ಅಧ್ಯಯನ ಮಾಡುವುದರ ಮುಖಾಂತರ. ಅವರ ಜೊತೆ ಮಾತನಾಡುತ್ತಿದ್ದರೆ ಕವಿಗಳು, ಚಿತ್ರ ನಿರ್ದೇಶಕರು, ಸಂಗೀತ ನಿರ್ದೇಶಕರ ವಿಷಯ ಬಿಟ್ಟರೆ ಬೇರೆ ಕ್ಷುದ್ರ ಸಂಗತಿಗಳಿಗೆ ಜಾಗವೇ ಇರಲಿಲ್ಲ.


ಅಂತಹ ಒಂದು ದಿನವನ್ನು ಅವರ ಜೊತೆ ಕಳೆದು ರಾತ್ರಿ ರೈಲಿಗೆ ಕೂರಿಸಿ, ಇನ್ನೇನು ಹೊರಡುವಾಗ ತುಂಗಾನದಿ ಮೇಲಿಂದ ಎದ್ದು ಬಂದ ಚಂದ್ರನನ್ನು ತೋರಿಸಿ "ಅಲ್ಲಿ ಪೂರ್ಣ ಚಂದ್ರಮ, ಇಲ್ಲಿ ಕಣ್ಣ ಸಂಗಮ" ಎಂಬ ಹಾಡಿನೊಂದಿಗೆ ಬೀಳ್ಕೊಂಡಿದ್ದರು.

ಹಾಗಾಗಿ ಅವರ ಭೌತಿಕ ಶರೀರವಷ್ಟೆ ಇಹಲೋಕದಿಂದ ಬೀಳ್ಕೊಂಡಿದೆ. ಆದರೆ ಆ ಮಧುರ ಶಾರೀರ ವಿಜ್ಞಾನದ ಆಧುನಿಕ ಆವಿಷ್ಕಾರದಲ್ಲಿ ನಮ್ಮನ್ನ ಆಗಾಗ್ಗೆ ತಣಿಸುತ್ತಲೇ ಇರುತ್ತದೆ.


• ಬಿ.ಚಂದ್ರೇಗೌಡ

ಹೋರಾಟ ಮತ್ತು ಬದುಕು

ಜೀವಿಸುವುದಕ್ಕೆ ನಾಚಿಕೆಪಟ್ಟುಕೊಳ್ಳುವ ಹೋರಾಟಗಾರರನ್ನು ನೀವು ನೋಡಿರಬಹುದು; ಯಾವುದೇ ಹೋರಾಟವಿಲ್ಲದೆ ತಮ್ಮಷ್ಟಕ್ಕೆ ತಾವು ಮುಕುತ್ತ ಇದ್ದು ಬಿಡುವವರನ್ನು ನೋಡಿರಬಹುದು. ಎರಡೂ ಪ್ರತ್ಯೇಕವಾಗಿದ್ದಾಗ ಕೆಟ್ಟ ಸ್ಥಿತಿಗಳು. ಮರಿಗೇ ಆಗುತ್ತಿರುವ ಅನ್ಯಾಯ ನಮ್ಮ ವ್ಯಕ್ತಿತ್ವಕ್ಕೆ ಗುವ ಅನ್ಯಾಯ ಕೂಡ; ಬೇರೆಯವರಿಗೆ ಆಗಿದ್ದು ಮ್ಮನ್ನು ಪರೋಕ್ಷವಾಗಿ ತಾಗುವ ಜೊತೆಗೆ ನಾಳೆ ನಗೂ ಅದೇ ಅನ್ಯಾಯವಾಗುತ್ತದೆ. ಆದ್ದರಿಂದ ತಿಭಟಿಸುವುದು ಅನಿವಾರ್ಯವಾಗುತ್ತದೆ. ತಿಭಟನೆಯ ವಿಚಿತ್ರ ಮಜಾ ಏನೆಂದರೆ ಅದು ಅನೇಕ ಟ್ಟಗಳಲ್ಲಿ, ಅನೇಕ ರೀತಿಗಳಲ್ಲಿ ಇರುತ್ತೆ. ಏಕತಾನದ ದುಕಿನಿಂದ, ಎಲ್ಲವನ್ನೂ ಸ್ವಾಗತಿಸಿ ಸಹಿಸುವುದರಿಂದ ಮ್ಮ ಚೈತನ್ಯಕ್ಕೆ ತುಕ್ಕು ಹಿಡಿಯುತ್ತದೆ. ಪ್ರೇಮ ಯಾಂತ್ರಿಕವಾಗುತ್ತದೆ; ಸ್ನೇಹ ಪ್ರೀತಿಯನ್ನು ದುಕಿಕೊಳ್ಳುತ್ತದೆ; ಸಂಬಂಧಗಳು ಉಸಿರುಕಟ್ಟಿಸುತ್ತವೆ. ಒಬ್ಬ ವ್ಯಕ್ತಿ ಈ ಉಸಿರುಕಟ್ಟಿಸುವ, ತುಕ್ಕು ಹಿಡಿದಿರುವ ಸ್ಥಿತಿಯಿಂದ ಬಿಡುಗಡೆಗಾಗಿ ಹೋರಾಡಬೇಕಾಗುತ್ತದೆ. ಇದು ತೀರಾ ಸರಳವಾಗುವುದು ಪರಕೀಯರ ದಬ್ಬಾಳಿಕೆಯ ವಿರುದ್ಧ ಸ್ವಾತಂತ್ರ್ಯಸಂಗ್ರಾಮದಲ್ಲಿ ತೊಡಗುವುದು; ಮತ್ತು ತೀರಾ ಸೂಕ್ಷ್ಮ ಮಟ್ಟದಲ್ಲಿ ನಮ್ಮನ್ನು ಮುಕ್ತ ಚೈತನ್ಯದಲ್ಲಿ ಇಟ್ಟುಕೊಳ್ಳುವುದು.



ನಾನು ಸಾಹಿತಿಯಾಗಿ ಉಳಿಯಬೇಕಾದರೆ ನಿತ್ಯ ಪ್ರತಿಭಟನೆಯಲ್ಲಿ, ಚಡಪಡಿಕೆಯಲ್ಲಿ ತೊಡಗಿರಬೇಕಾಗುತ್ತದೆ. ಇವತ್ತು ಬರೆದದ್ದು ಇವತ್ತಿಗೆ ಸರಿ; ಅದೇ ರೀತಿಯ ಬರವಣಿಗೆ ಪುನರಾವರ್ತನೆಗೊಳ್ಳದಂತೆ, ಸತ್ತ ಪದಪುಂಜವಾಗದಂತೆ ನೋಡಿಕೊಳ್ಳದಿದ್ದರೆ ನಾನು ಸಾಹಿತಿಯಾಗಿ ಮಾಜಿಯಾಗುತ್ತೇನೆ. ಆದ್ದರಿಂದ ನಮ್ಮ ವಿರುದ್ಧ, ನಮ್ಮ ಶೈಲಿಯ ವಿರುದ್ಧ ನಾನು ಪ್ರತಿಭಟಿಸುವುದು ಬಹುಮುಖ್ಯ. ನಾನು ನಿತ್ಯ ಸ್ನಾನ ಮಾಡಿ ದೇಹವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವಂತೆಯೇ ಮನಸ್ಸನ್ನು ಜೀವಂತವಾಗಿ ಇಟ್ಟುಕೊಳ್ಳಬೇಕು. ಇದು ಅನೇಕರಿಗೆ ಅರ್ಥವಾಗುವುದೇ ಇಲ್ಲ.




ದೇಹವನ್ನು ತೊಳೆದರೆ ಮನಸ್ಸು ನಿರ್ಮಲವಾಗುತ್ತದೆ ಎಂದು ತಿಳಿದಿರುತ್ತಾರೆ. ಇದು ಸುಳ್ಳು. ಮನಸ್ಸು ದೇಹಕ್ಕಿಂತ ಪ್ರಬಲವಾದದ್ದು ಮತ್ತು ಸಂಕೀರ್ಣವಾದದ್ದು. ಇದನ್ನು ಜೀವಂತವಾಗಿಡಲು ಹೊಸ ಅನುಭವ, ಹೊಸ ಅಚ್ಚರಿ, ಹೊಸ ಮುಗ್ಧತೆ, ಹೊಸ ತಿಳಿವಳಿಕೆ ಬೇಕಾಗುತ್ತದೆ. ನನ್ನಲ್ಲಿ ಅನುಭವ ಇದ್ದರೆ ಸಾಲದು; ಅದನ್ನು ಓದುಗರೆದುರು ಮಂಡಿಸಲು ಸರಿಯಾದ ಸೂತ್ರ ಬೇಕು. ಮಾರ್ಕ್ವೆಸ್ ಒಂದು ಕಡೆ ಇದನ್ನೇ ಹೇಳುತ್ತಾನೆ. ಟಾಲ್‌ಸ್ಟಾಯ್‌ನಂಥ ಸಾಹಿತಿಗಳು ಅವರಿಗೆ ಅಷ್ಟು ನೆರವಾಗುವುದಿಲ್ಲ; ವರ್ಜೀನಿಯಾ ವುಲ್ಫ್ ತರಹದವರು ತಮ್ಮ ಪ್ರಜ್ಞಾಪ್ರವಾಹದ ಶೈಲಿಯಿಂದ ಆತನನ್ನು ಮುನ್ನಡೆಸುತ್ತಾರೆ. ಒಂದು ಪತ್ತೇದಾರಿ ಕಾದಂಬರಿಯ ಅಧ್ಯಾಯ ಸಾಹಿತಿಗೆ ನೆರವಾಗಬಹುದು; ಒಂದು ಸಿನಿಮಾದ ಶಾಟ್ ಸ್ಫೂರ್ತಿ ನೀಡಬಹುದು.

ಆದ್ದರಿಂದ ನಾನು ಬಲ್ಲ ಸೋದರ ಸಾಹಿತಿಗಳಿಗೆ ನಾನು ಮೆಚ್ಚಿದ ಪುಸ್ತಕಗಳನ್ನು ಕಳಿಸುತ್ತೇನೆ. ಅವರಲ್ಲಿ ಅನೇಕರಿಗೆ ಓದುವ ರೋಮಾಂಚನವೇ ತಿಳಿದಿರುವುದಿಲ್ಲ. ತಮ್ಮನ್ನು ತಾವು ಜೀವಂತವಾಗಿಟ್ಟುಕೊಳ್ಳುವ ಅಗತ್ಯ ತಿಳಿದಿರುವುದಿಲ್ಲ. ಇದು ನನ್ನಲ್ಲಿ ದಿಗ್ಭ್ರಮೆ ಹುಟ್ಟಿಸುತ್ತದೆ.

• 11 ಮಾರ್ಚ್, 1998

ಕೈಗೆ ಬಾಯ್ಗೆ ಸಿಕ್ಕೋನಲ್ಲವಂತೆ!

ಅಣಕ




• ಎಚ್.ಎಲ್.ಕೇಶವಮೂರ್ತಿ

ಉಳ್ಕೋಕು ಪುಣ್ಯಾವು ಮಾದಿರಬೇಕಂತೆ. ಅದನ್ನೇ ಮಾದಿಲ್ಲ ಮುಂದೇವು. ಅವರ ಸೇವೆ ಮಾದ್ತೀವಿ ಅಂತ ಎಂತೆಂತೋರು ಬತ್ತಾ ಅವ್ರೆ ಏನು ಕತೆ! ದುಡ್ನಸ್ಥರು ಬಂದು 'ಒಂದು ಅವಕಾಸ ಕೊಡ್ರಪ್ಪ ನಿಮ್ ಸೇವೆ ಮಾಡಾಕೆ' ಅಂತ ದುಂಬಾಲು ಬೀಳ್ತಾ ಅವ್ರೆ. ಫಿಲಂಸ್ಟಾರ್ಸ್‌ಗಳು 'ನಾನು ನಿಮ್ ಸೇವೆ ಮಾಡ್ತೀನಿ, ತಾನು ನಿಮ್ ಸೇವೆ ಮಾಡ್ತೀನಿ' ಅಂತೆಲ್ಲ ಮುಗಿಬೀಳ್ತಾ ಅವ್ರೆ. ಆಹಾ ಏನಯ್ಯಾ ಏನಯ್ಯಾ ಇಂತಿಂತೋರೆಲ್ಲ ನಸ್ ಸೇವೆಗೆ ಸೊಂಟಕ್ಕೆ ಟವಲ್ ಸುತ್ಕೊಂಡು ನಿಂತವ್ರಲ್ಲ, ಮಾಡ್ಕೊಂಡೋಗ್ರಪ್ಪ ಅಂತಾವ ತೆಪ್ಗೆ ಬದ್ದಿರಬಾರದಾ. ಹಂಗೆ ಮಾಡದೆ ಮಾತಲ್ಲೇ ಒದ್ದು ಕಳುಸ್ತಾ ಅವ್ರಂತೆ!

ಪಾಪ ನಮ್ ರಕ್ಷಿತಾ ಮೇಡಮ್ಮು, ಅದೇ ಫಿಲಂಸ್ಟಾರು. ಮಾಡಿದ ಪಾಪ ಪರಿಹರಿಸಿಕೊಳ್ಳೋಣ ಅಂತ ಬಂದ್ರೋ, ಪಾಪಾನೆ ಮಾಡದೆ ಇದ್ದರೂ ಅಡ್ವಾನ್ಸ್ ಆಗಿ ಸ್ವರ್ಗದಲ್ಲಿ ಒಂದು ಸೀಟ್ ರಿಸರ್ವ್ ಮಾಡ್ವಾನ ಅಂತ ಬಂದ್ರೊ ತಿಳೀದು. ಅವರು ಚಾಮರಾಜನಗರಕ್ಕೆ 'ನಿಮ್ ಸೇವೆ ಮಾಡ್ತೀನಿ ಕಣ್ರಪಾ' ಅಂತ ಬಂದರೆ 'ಮಾರಾಯಿಗಿತ್ತಿಯಂಗೆ ಬಾರವ್ವ. ಬಂದು ಸೇವೆ ಮಾಡವ್ವ' ಅಂತ ಅನ್ನಬಾರದ ಅಲ್ಲಿಯೋವು. 'ನಾವೂ ಕಂಡಿದೀವಿ ನೀನ್ ಸೇವೆ ಮಾಡೋದ. ನಡ್ ನಡಿಯಮ್ಮ' ಅಂತ ಅಂದರಂತಲ್ಲಾ, ಎಷ್ಟು ನೋವಾಯ್ತೋ ಅವರ ಹೃದಯಕ್ಕೆ. ಮುಖ ಊದಿಸಿಕೊಂಡು ಅಲ್ಲಿಂದ ಕಡೆಯೋ ಹಂಗೆ ಮಾಡವ್ರೆ.

ಇವರ ಕತೆ ಹಿಂಗಾಯ್ತಲ್ಲ, ಇನ್ನು ಅಂಬರೀಸಣ್ಣಾರ ಕತೇನೆ ಇನ್ನೊಂದು ರೀತಿ ಆಗಿ ಕುಂತದೆ. ಅವ್ರು ಮಂಡ್ಯದ ಗಂಡು ಅಲ್ಲವಾ. ಚುನಾವಣೆ ಬತ್ತದೆ ಅಂತ್ಲೇ ಎಪ್ಪತ್ತು ಎಂಭತ್ತು ಲಕ್ಷ ಸುರ್ದು 'ಅಂಬಿ ಕಪ್' ಹೆಸರಿನಲ್ಲಿ ರಾಷ್ಟ್ರಮಟ್ಟದ ಕಬಡ್ಡಿ ಟೂರ್ನಮೆಂಟ್ ಮಾಡ್ಸಿದ್ರು. ಜನರ ಮನಸ್ಸಿನಲ್ಲಿ ನನ್ನೆಸ್ರು ನಾಟೋಗದೆ ಅಂತಲೇ ಹೊಸ ಮದುವೆ ಗಂಡಿನ ತರಾನೆ ಮಂಡ್ಯಕ್ಕೆ ಬಂದ್ರು. ಅಲ್ಲಿ ಏನಾಗಿತ್ತು ಅಂದ್ರೆ ಅಲ್ಲಿನೋರು ಸಂಸದರಾಗಿ ಅವರು ಸೇವೆ ಸವಿ ಉಂಡಿದ್ದೋರು. 'ಎಲೆಕ್ಷನ್ ಮುಗಿದ ಮ್ಯಾಲೆ ಇವ್ನ ಕೈಗೆ ಬಾಯ್ಗೆ ಸಿಗಾಕಿಲ್ಲ' ಅನ್ನೋದು ಮನೆ ಮಾತು ಆಗಿತ್ತು, ಯಾರಾದ್ರೂ ಪರಪಂಚದ ಜ್ಞಾನ ಇದ್ದೋರು ಹಿಂಗಂತಾರಾ. ಅಂಭರೀಸು ಅಂದ್ರೆ ಯಾರು? ಫಿಲಂಸ್ಟಾರು. ಅವರಂತೋರೇನಿದ್ರೂ ಅಮಾಸೆಗೆ, ಹುಣ್ಣಿಮೆಗೆ ಹಂಗೆ ಬಂದು ಹಿಂಗೆ ಹೋಗಬೇಕು. ಆಗಲೇ ಅವರಿಗೊಂದು ಇದು. 'ಅಂಬರೀಸಣ್ಣ ಬಂದ', 'ಅಂಬರೀಸು ಬತ್ತಾನಂತೆ' ಅಂತ ಅವರನ್ನ ನೋಡೋಕೆ ಬೆಲ್ಲಕ್ಕೆ ಇರುವೆ ಮುತ್ತಿಕೊಳ್ತವಲ್ಲ ಹಂಗೆ ಜನ ಮುತ್ತತವೆ. ಅದು ಬಿಟ್ಟು ದಿನಾ ಅವರ ಕೈಗೆ ಬಾಯ್ಗೆ ಸಿಕ್ಕುತ್ತಿದ್ದರೆ 'ಅವನಾ ಅಂಬರೀಸನಾ. ಇಲ್ಲೇ ಸಾಯ್ತಿತ್ತು' ಅಂತ ತಿಕ್ಕೆ ಸೀಟಗತಾವೆ. ಅದಕ್ಕೆ ಅಂತೋರು ಏನಿದ್ರೂ ಸಿನಿಮಾದಲ್ಲಿ ದೇವರು ಬಂದು ಹೋಯ್ತದಲ್ಲ ಹಂಗೆ ಬಂದುಹೋಗ್ತಾರೆ. ಇದ ಅರೀದ ಮುಕ್ಳಗಳು ಕೈಗೆ ಸಿಗಾಕಿಲ್ಲ ಅನ್ನೊ ಕೊಂಕು ನುದೀತಾವೆ. ಚುನಾವಣೆ ಸಮಯ. ಇಂತ ಮಾತ ಕೇಳಿಯೂ ಕೇಳಿದಂಗೆ ಇರುವ ಹಂಗಿಲ್ಲ. ಅಂಬರೀಸಣ್ಣರಾದ ಅಂಬರೀಸಣ್ಣಾರೇ 'ನಾನೆಲ್ಲೂ ಹೋಗೋದಿಲ್ಲ ಕಣ್ರಯ್ಯಾ. ನಿಮ್ ನಡುವೆಯೇ ಇರ್ತೀನಿ' ಅನ್ನಬೇಕಾಯ್ತು. ಆದ್ರೂ ಹಾಳಾದ ಜನ ನಂಬೊಲ್ಲೊ, 'ಈಗೇನೋ ಹಂಗತೀಯೆ. ಆಮೇಲೆ ಹಿಡ್ಕೊ ನಂದ ಅಂತ ಹಾಡ್ತೀಯೆ. ನಿನ್ನ ಎಲ್ಲಿ ಅಂತ ತಡ್ಕೊದಪ್ಪ ಬೆಂಗ್ಳೂರ್ಗೇ ಬರ್ಬೇಕು. ಬಂದ್ರು ಸಿಕ್ತೀಯ ಅನ್ನೊ ಗ್ಯಾರಂಟಿ ಇಲ್ಲ, ಸಿಕ್ಕರೂ ಏಳು ಮಧ್ಯಾನ್ನ ಏಳ್ತೀಯೆ' ಅನ್ನೊ ಗೊಣಗಾಟ ತಪ್ಪಿಲ್ಲ. ಹಿಂಗಿಂಗೆಲ್ಲ ಅಂತಾರಲ್ಲ ಅಂತ ಅಣ್ಣಾರ ಚೇಲಾಗಳನ್ನು ಕೇಳಿದರೆ 'ಸಿನಿಮಾ ಶೂಟಿಂಗ್ ಮುಗ್ಸಿ ಮನೆ ಸೇರೋ ಹೊತ್ಗೇ ಬೆಳಕು ಹರಿದಿರ್ತದೆ. ದೊಣೆ ನಾಯಕರು ಬರ್ತಾರೆ ಅಂತಾವ ನಿದ್ದೆಗೆಟ್ಟು ಕಾಯುತ್ತಾ ಕುಂತಿರೋಕಾಗ್ತದ ಅಂಬರೀಸಣ್ಣ' ಅಂತ ಕೊಸರುತ್ತಾರೆ!



ಮತದಾರನ ಮಾತು ಹಿಂಗಾಯ್ತಲ್ಲ, ಇನ್ನು ಲೀಡ್ರುಗಳು. ಅವರದೇ ಒಂದು ತರ ವರಸೆ. 'ಶ್ರೀರಂಗಪಟ್ಟಣದೋರು ಕೈಕೊಟ್ಟರು ಅಂತ ಮಂಡ್ಯಕ್ಕೆ ಬಂದ. ಅಡಿಗೆ ಮಾಡಿ ಇಟ್ಟವಿ. ಕತ್ತರಿಸೋಕೆ ಇವನು ಬಂದವ್ನೆ' ಅಂತ ಖಿಡ್ಡಕ್ಕೆ ಅಣಿ ಮಾಡ್ತಿದಾರಂತೆ!

ಇದನ್ನೆಲ್ಲ ನೋಡ್ತಾ ಇದ್ರೆ ಅಂಬರೀಸಣ್ಣಾರ ಜಾತಕದಲ್ಲೇ ಏನೋ ಮಿಸ್ಟೀಕು ಇರಬೇಕು ಅನ್ನಿಸುತ್ತೆ. ಆ ಶನಿ ಅನ್ನೋ ಶನಿ ಇರಬಾರದ ಮನೇಲಿ ಝೂಂಡಾ ಊರಿ ಕೊಡಬಾರದ ಕಾಟ ಕೊಡುತ್ತಿರಬೇಕು. ವಿಧಾನಸಭೆಗೆ ನಿಂತರು' ಸೋತರು. ಲೋಕಸಭೆಗೆ ನಿಂತರು. ರಿಸಲ್ಟ್ ಡಿಟೋ. ಯಾಕಿಂಗೆ ಆಗ್ತಾ ಇದೆ ಅಂತ ಮೂಲ ಹುಡುಕಿ ಹೊರಟರೆ ಆ ಶನಿ ರವೀಂದ್ರ ಅನ್ನುವವನ ರೂಪದಲ್ಲಿ ಕಾಡ್ತಿತ್ತು, ಈ ಶನಿಯ ಮೂಲೋತ್ಪಾಟನೆ ಮಾಡಬೇಕೆಂದು ಅಂಬರೀಸಣ್ಣಾರು 'ಇವನು ಪಕ್ಷ ವಿರೋಧಿ ಕೆಲ್ಸ ಮಾಡವ್ನೆ. ಇವನ್ಗೆ ಟಿಕೀಟು ನೀಡಬಾರದು' ಅಂತ ತಾಕೀತು ಮಾಡಿದರು. ಆದರೂ ಶ್ರೀರಂಗಪಟ್ಟಣ ಕ್ಷೇತ್ರದಿಂದ ಸ್ಪರ್ಧಿಸಲು ಅಂಬರೀಸಣ್ಣಾರ ಶನಿಗೇ ಕಾಂಗ್ರೆಸ್ ಹೈಕಮಾಂಡು ಟಿಕೀಟು ನೀಡಿತ್ತು! ಅಂಬರೀಸಣ್ಣಾರ ಗೌರವ ಏನಾಗಬೇಕು?

ವೀರ ಶಪಥ ಮಾಡಿದರು: ಶ್ರೀರಂಗಪಟ್ಟಣ ಕ್ಷೇತ್ರದಿಂದ ರವೀಂದ್ರ ಶ್ರೀಕಂಠಯ್ಯ ಕಾಂಗ್ರೆಸ್ಸಿನಿಂದ ಸ್ಪರ್ಧಿಸಿದರೆ ನಾನು ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ!

ಮಣಿಯಿತು ಕಾಂಗ್ರೆಸು. ಶತ್ರುಗಳ ಸಂಖ್ಯೆ ಏರಿತು. ಖಾತರಿ ಆಯಿತು ಕಾಂಗ್ರೆಸ್ ಸೋಲು!

ಅಜಿತ್ ಪವಾರ್‌ರ ಮೂತ್ರ ಪರಿಹಾರ

ಮಾತಿಗೆ ಹೇಳ್ತೀನಿ. ಕನ್ನಂಬಾಡಿ ಕಟ್ಟೆ ಬರಿದಾಗಿದೆ. ನಾಲೆಯಲ್ಲಿ ನೀರು ಹರಿಯುತ್ತಿಲ್ಲ, ಬೆಳೆದು ನಿಂತ ಪೈರು ಒಣಗುತ್ತಿದೆ. ರೈತನ ಒಡಲಿಗೆ ಬೆಂಕಿ ಬದ್ದಿದೆ. ನೀರು ಬಿಡಲು ಆಗ್ರಹಿಸಿ ರೈತರು ಉಪವಾಸ ಸತ್ಯಾಗ್ರಹ ಹೂಡುತ್ತಾರೆ.

ಏನು ಮಾಡಬೇಕು ನೀರಾವರಿ ಮಂತ್ರಿ?

ರೈತರಿಗೆ ಸಮಸ್ಯೆಯ ಅರಿವು ಮಾಡಿಕೊಡಬೇಕು.

'ನೀರು ಬೇಕೇ ಬೇಕು' ಎಂದು ಹಟ ಹಿಡಿದರೆ?

ಮಂತ್ರಿಯ ಸಿಟ್ಟು ನೆತ್ತಿಗೇರಬಹುದು. ಆಡಬಾರದ ಮಾತು ಆಡಬಹುದು. ಬರಬಾರದ ಮಾತು ಬಾಯಿಂದ ಬರಲೂಬಹುದು.

ಇಂತಹುದ್ದೇ ಪ್ರಸಂಗ ಮಹಾರಾಷ್ಟ್ರದಲ್ಲಿ ನಡೆದಿದೆ. ಅದೇ ನೀರಿಲ್ಲದ ಅಣೆಕಟ್ಟು. ಒಣಗಿದ ನಾಲೆ. ಸುಟ್ಟು ಕರಕಲಾಗುತ್ತಿರುವ ಬೆಳೆ.

ಶೋಲಾಪುರದ ಒಬ್ಬ ರೈತನ ಬೆಳೆಯೂ ಹೀಗೆ ಇತ್ತು, ಮುಂಬಯಿಗೆ ಹೋದ. ಉಪವಾಸ ಕುಂತ. 'ನಾಲೆಯಲ್ಲಿ ನೀರು ಹರಿಸಿ' ಅವನ ಬೇಡಿಕೆ.

ಎಲ್ಲಾ ಸರ್ಕಾರಗಳೂ ರೈತಪರ ಸರ್ಕಾರಗಳೇ ಅಲ್ಲವಾ. ಅಲ್ಲಿನ ಸರ್ಕಾರವೂ ಅದಕ್ಕೆ ಅಪವಾದ ಆಗಿರಲಿಲ್ಲ, ಉಪ ಮುಖ್ಯಮಂತ್ರಿ ಅಜಿತ್ ಪವಾರ್‌ಗೆ ರೈತರ ನೋವು ಖಾಸಿ ಮಾಡಿತಂತೆ. ಒಂದು ಭಾಷಣದಲ್ಲಿ ಇದನ್ನೆಲ್ಲ ತ್ಕೋಡಿಕೊಂಡ್ರಂತೆ. 'ನೀರಿಲ್ಲ ಅಂತ ರೈತ ಉಪವಾಸ ಕುಂತವ್ನೆ. ಉಜನಿ ಜಲಾಶಯದಿಂದ ನೀರು ಬಿಡಿ ಅಂತಿದಾನೆ. ನೀರಿದ್ರೆ ಅಲ್ವಾ ಬಿಡೋದು. ಇಲ್ಲದ ನೀರು ಬಿಡಿ ಅಂದ್ರೆ ಎಲ್ಲಿಂದ ಬಿಡೋದು? ಉಚ್ಚೆ ಹುಯ್ದು ಡ್ಯಾಮ್ ತುಂಬಿಸಬೇಕು ಅಷ್ಟೇಯ. ಕುಡಿಯೋಕೆ ನೀರೇ ಇಲ್ಲದಾಗ ಅದೂ ಸರಿಯಾಗಿ ಬರಲ್ಲ' ಅಂದ್ರಂತೆ. ಸಭಿಕರು ಪವಾರ್‌ರ 'ಉಚ್ಚೆ ಪರಿಹಾರ'ದಿಂದ ಚಪ್ಪಾಳೆ ಹೊಡೆಯುತ್ತಾ ಬಿದ್ದು ಬಿದ್ದು ನಗಾಡಿದರಂತೆ. ಉಪ ಮುಖ್ಯಮಂತ್ರಿಗಳೂ ತಮ್ಮ ಅದ್ಭುತ ಭಾಷಣದ ಪರಿಣಾಮದಿಂದ ಆನಂದೋತ್ಸಾಹದಿಂದ ತೇಲಾಡಿರಬಹುದು.

ಆದರೆ ಈ ಸಂತೋಷ ಅಲ್ಪಾಯುಸ್ಸಿನದಾಗಿತ್ತು. ಅಂತಹ ಗೌರವ ಸ್ಥಾನದಲ್ಲಿದ್ದುಕೊಂಡು ಇಂತಹ ಮಾತನ್ನೇ ಆಡುವುದು? ಉಪ ಮುಖ್ಯಮಂತ್ರಿ ಸ್ಥಾನದ ಗೌರವವನ್ನೇ ಹಾಳು ಮಾಡಿದ್ದೀರಿ ಅಂತ ವಿರೋಧ ಪಕ್ಷಗಳು ಎಗರಾಡಿದವಂತೆ. ರಾಜೀನಾಮೆ ನೀಡಿ ಅಂತಾನೂ ಒತ್ತಾಯಿಸಿದವಂತೆ. ಸರ್ಕಾರ ಯಥಾಪ್ರಕಾರ 'ಅವರು ಹೇಳಿರುವುದರಲ್ಲಿ ಯಾವುದೇ ತಪ್ಪು ಇಲ್ಲ. ಇರೋ ವಿಷಯವನ್ನೇ ಹೇಳಿದ್ದಾರೆ' ಅಂತ ತಿಪ್ಪೆ ಸಾರಿಸಿತಂತೆ. ಈ ಕ್ಷಾಮ ಅನ್ನೋದು ಪ್ರಕೃತಿ ಮಾಡಿದ್ದಲ್ಲ. ರಾಜಕಾರಣಿಗಳ ಸೃಷ್ಟಿ ಇದು. ಶರದ್ ಪವಾರ್ ಹಾಲಿನ ಡೈರಿಗೆ ಕೊಡ... ನೀರಿದೆ. ಆದ್ರೆ ರೈತರಿಗೆ ಕೊಡಲು ಇಲ್ಲ ಅಂದರೆ ಏ... ಅರ್ಥ. ಇದು ಅನ್ಯಾಯ ಎಂದೆಲ್ಲ ಮಾಧ್ಯಮಗಳು ಎಗ... ಬಿದ್ದಾಗ ಸರ್ಕಾರ 'ನಿಮಗೆ ಅನ್ಯಾಯ ಅನ್ನಿಸಿದರೆ ಕೋರ್ಟ್... ಹೋಗಿ' ಅಂತಂತೆ.

ಇದೂ ನ್ಯಾಯವಾದ ಮಾತೇ ಅಲ್ಲವಾ. ಆದ... ಏನಾಗಿತ್ತು ಅಂದರೆ ಇಂತಹ ಪರಿಸ್ಥಿತಿಯಲ್ಲೇ ಯಾರೋ... ಕೋರ್ಟ್‌ಗೆ ಹೋಗಿದ್ದಾರಂತೆ. ರೈತರ ಕಷ್ಟ ಎಲ್ಲಾನ... ವಿವರಿಸಿದರಂತೆ. ಕೋರ್ಟು ನೋಡಬೇಕಾದ್ದನ್ನೆಲ್ಲ ನೋಡ್ತು... ಕೇಳಬೇಕಾದ್ನೆಲ್ಲ ಕೇಳ್ತಂತೆ. ಕೊನೆಗೆ 'ನೀವೇಳೋದ... ನ್ಯಾಯವೇಯ. ಆದ್ರೆ ನಮ್ಮ ಕೈ ಕಟ್ಟಹಾಕಿದೆ' ಅಂತ... 'ಅದೇನ್ ಮಹಾಸ್ವಾಮಿ ಯಾವುದು ನಿಮ್ಮ ಕೈಕ... ಹಾಕಿರೋದು' ಅಂತ ಕೇಳಿದ್ದಕ್ಕೆ 'ನೀರನ್ನು ಆದ್ಯತೆ... ಮೇಲೆ ಹಂಚಬೇಕು. ಕೇಂದ್ರ ಸರ್ಕಾರ ಇದರ ಪಟ್ಟೀ... ಮಾಡಿದೆ. ಕುಡಿಯುವ ನೀರಿಗೆ ಮೊದಲ ಆದ್ಯತೆ. ವ್ಯವಸಾ... ಎರಡನೆಯದ್ದು' ಮೂರನೇದು ಕೈಗಾರಿಕೆ ಹಿಂಗೆ' ಎಂ... ಇನ್ನೂ ಮುಂದುವರೆಸುತ್ತಿತ್ತಂತೆ. ಅಷ್ಟರಲ್ಲಿ 'ಅದ... ಮಹಾಸ್ವಾಮಿ ನಾವು ಹೇಳ್ತಾ ಇರೋದು ಮೊದಲ... ವ್ಯವಸಾಯಕ್ಕೆ ನೀಡಿ ನಂತರ ಕೈಗಾರಿಕೆಗಳಿಗೆ ನೀಡಿ... ಅಂತಾವ' ಎಂದರಂತೆ.

'ಏಳು ತಿಂಗಳಿಗೆ ಹುಟ್ಟಿದೋರಂಗೆ ಆತುರಪಡಬೇ... ಕಣ್ರಿ. ಪೂರ್ತಿ ಕೇಳಿಸ್ಕಳಿ. ಮಹಾರಾಷ್ಟ್ರ ಸರ್ಕಾರ ಏ... ಮಾಡಿದೆ. ಕೈಗಾರಿಕೆಗಳಿಗೆ ವ್ಯವಸಾಯಕ್ಕಿಂತ ಮೇಲ... ಆದ್ಯತೆಯನ್ನು ನೀಡಿ ನೀತಿ ರೂಪಿಸಿದೆ. ಹಿಂಗಾ... ಕೈಗಾರಿಕೆಗಳಿಗಿಂತ ಮೊದಲು ವ್ಯವಸಾಯಕ್ಕೆ ನೀರು ಕೊ... ಎಂದು ಸರ್ಕಾರಕ್ಕೆ ಹೇಳುವುದು ಸಾಧ್ಯವಿಲ್ಲ' ಅಂತಂತ...

ಇದಕ್ಕೆ ಸರ್ಕಾರ ಹೇಳಿದ್ದು: ಅನ್ಯಾಯ ಅನ್ನಿಸಿದ... ಕೋರ್ಟ್‌ಗೆ ಹೋಗಿ!

ಅಜಿತ್ ಪವಾರ್ ತಾನು ಹೇಳಿದ್ದು ತಪ್ಪು ಅಂ... ಕ್ಷಮೆ ಕೋರಿದ್ದಾರೆ. ಟೀಕೆ ನಿಂತಿಲ್ಲ. 'ಆತ್ಮಶುದ್ಧಿ'ಗಾ... ಉಪವಾಸ ಕುಂತಿದ್ದರು.

ನನ್ನದೊಂದು ಸಲಹೆ. 'ಆತ್ಮಶುದ್ಧಿ' ಮಾಡಿಕೊಳ್ಳ... ಬೇಕು ಎಂದಿದ್ದರೆ ಹೀಗೆ ಮಾಡಲಿ. ನೀರು ಹಂಚ... ಆದ್ಯತೆ ಬದಲಾಯಿಸಲಿ. ವ್ಯವಸಾಯ ಕೈಗಾರಿಕೆಗಳಿಗಿಂತಲ... ಮೊದಲು ಬರಲಿ.


ಆಗಬಹುದಾ ಪವಾರರೆ?

ಕೂಡದು, ಕೂಡದು!

ವ್ಯವಸಾಯಿಗಳಿಗೆ ಕಷ್ಟ ಅಭ್ಯಾಸ ಆಗಿದ... ಕಾರ್ಪೊರೇಟ್‌ಗಳು ನಲುಗಬಾರದು!

'ಮುಳ್ಳಿನ ಮೇಲಿನ ಚಿಂದಿಬಟ್ಟೆಯಾಗಿರುವ ಡೆಮಾಕ್ರಸಿ'

ಪಾರ್ವತೀಶ ಅವರು 10 ಏಪ್ರಿಲ್ 2013ರ ಸಂಚಿಕೆಯಲ್ಲಿ 'ಮುಳ್ಳಿನ ಮೇಲಿನ ಚಿಂದಿಬಟ್ಟೆಯಾಗಿರುವ ಡೆಮಾಕ್ರಸಿ' ಲೇಖನದಲ್ಲಿ ವಾಸ್ತವ ಚಿತ್ರಣವನ್ನು ನೀಡಿದ್ದಾರೆ. ಚುನಾವಣೆಯ ಅಖಾಡಕ್ಕೆ ಇಳಿಯಲು ಹೊರಟವರಲ್ಲಿ ಶೇ.98 ರಷ್ಟು ಜನರ ಉದ್ದೇಶವೇ ಹಣ ಮಾಡುವುದು ಮತ್ತು ಈಗಾಗಲೇ ಮಾಡಿರುವ ಹಣವನ್ನು ರಕ್ಷಣೆ ಮಾಡಿಕೊಳ್ಳುವುದು ಎಂಬುದು ಬಹುತೇಕ ಜನರಿಗೂ ಗೊತ್ತಾಗಿದೆ.



ನಜೀರ್ ಸಾಬ್, ಎಂ.ಪಿ. ಪ್ರಕಾಶ್, ವೈಜನಾಥ ಪಾಟೀಲ್ ಮುಂತಾದವರನ್ನು ಅನುಕರಿಸುವ ಯುವ ರಾಜಕಾರಣಿಗಳು ಇಂದು ಬೆರಳೆಣಿಕೆಯಷ್ಟೂ ಇಲ್ಲ.

ಇದೆಲ್ಲ ನಿಜ. ಆದರೆ ಬಹುದೊಡ್ಡ ಪ್ರಶ್ನೆಯೊಂದನ್ನು ಪಾರ್ವತೀಶ ಅವರು ಕೈಬಿಟ್ಟಿದ್ದಾರೆ. ಅದೆಂದರೆ, ಈಗೇನು ಮಾಡುವುದು? ಲೇಖಕರೂ ಸೇರಿದಂತೆ ಇನ್ನೂ ತತ್ವ, ಪ್ರಾಮಾಣಿಕತೆ, ಸಜ್ಜನಿಕೆ, ಸರಳತೆ, ಜನಪರ ನಿಲುವಿಗೆ ಬದ್ಧತೆ ಇತ್ಯಾದಿ ಇರುವವರು ಏನು ಮಾಡಬೇಕು?


ಮುಳ್ಳಿನ ಮೇಲಿನ ಚಿಂದಿಬಟ್ಟೆಯಾಗಿರುವ ಡೆಮಾಕ್ರಸಿಯನ್ನು ಬಿಸಾಕಿ ಬಿಡಬೇಕೆ? ಅಥವಾ ಅದರ ಬದಲು ಇನ್ನೊಂದು ಬರುವವರೆಗೆ ಈಗಾಗಲೇ ಚಿಂದಿಬಟ್ಟೆಯಾಗಿರುವ ಡೆಮಾಕ್ರಸಿ ಮತ್ತೆ ಮುಳ್ಳಿನ ಮೇಲೆ ಬೀಳದಂತಾಗ ಬೇಕೆಂದರೆ ಏನಾದರೂ ಮಾಡುವ ಅವಶ್ಯಕತೆ ಇದೆಯೆ?


ಈ ವ್ಯವಸ್ಥೆಯಲ್ಲಿರುವ ಹುಳುಕನ್ನು ಲೇಖಕರು ಚೆನ್ನಾಗಿ ಎತ್ತಿ ತೋರಿಸಿದ್ದಾರೆ. ಅವರು ಹೇಳಿರುವುದರಲ್ಲಿ ಯಾವುದೂ ಅತಿಶಯೋಕ್ತಿ ಇಲ್ಲ. ಮುಂದೇನು ಮಾಡುವುದು ಎಂಬ ಬಗ್ಗೆ ಅವರು ತಮ್ಮ ಮುಂದಿನ ಅಂಕಣದಲ್ಲಾದರೂ ದಾರಿ ತೋರಿದರೆ ಎಲ್ಲರೂ ಜೊತೆಗೂಡಬಹುದು.

- ಶಿವರಾಜ್ ಬೆಟ್ಟಕೆರೆ, ಬೆಂಗಳೂರು

ಭಟ್ಟರ ಸಿಡಿಗೆ ಪೇಜಾವರ ಎಡಿಟಿಂಗ್

18 ಎಂಬ ಸಂಖ್ಯೆ ಕೆಲವೊಮ್ಮೆ 81 ಎಂದೂ ಕೂಡ ಕಾಣಿಸಿಕೊಳ್ಳುವುದುಂಟು. ಹದಿನೆಂಟರ ಹರೆಯದವರನ್ನು ಸೆಳೆಯ ಬೇಕಿದ್ದ ನೀಲಿ ಸೀಡಿ ಯೊಂದು 81 ರ ಪೇಜಾವರ ರನ್ನ ಸೆಳೆದದ್ದು ಇತ್ತೀಚೆಗೆ ಕುತೂಹಲಕ್ಕೆ ಕಾರಣವಾಗಿದೆ.





ಬಹುಶಃ ವಿಶ್ವದ ಏಕೈಕ ಹಿಂದೂ ರಾಷ್ಟ್ರ ನೇಪಾಳದ ಹುಡುಗಿಯೊಂದಿಗೆ (ಕೆಲವರು ಹೇಳುವಂತೆ) ಇದ್ದದ್ದು ನಮ್ಮ ರಘುವಶನಲ್ಲದಿದ್ದರೆ ಆತ ಯಾವನೋ ಮುಸಲ್ಮಾನ ಇಲ್ಲವೇ ಕಿರಿಸ್ತಾನ ಇದ್ದಿರಬಹುದೇ? ಅಥವಾ ಮಂಗೋಲಿಯನ್ ಮುಖಚರ್ಯೆಯ ಆಕೆ ನಾಗಾಲ್ಯಾಂಡ್, ಅಸ್ಸಾಮ್ ಕಡೆಯ ಕಿರಿಸ್ತಾನರ ಪೈಕಿ ಇದ್ದಿರಬಹುದೇ? ಯಾಕೆಂದರೆ ಆ ದುರುಳೆ ನಮ್ಮ ಭಟ್ಟನ ಪವಿತ್ರವಾದ ಯಜ್ಞೋಪವೀತ (ಜನಿವಾರ)ವನ್ನೇ ಹರಿದು ಬಿಸಾಕಿ ಬ್ರಾಹ್ಮಣತ್ವದ ದ್ಯೋತಕವನ್ನೇ ಕೀಳಾಗಿ ಕಂಡು ಅವಮಾನಿಸಿ ದ್ದಳಲ್ಲ. ಶಾಂತಂ... ಪಾಪಂ.... ಭಟ್ಟರಿಗೆ ಜುಟ್ಟು ಇದ್ದಿದ್ರೆ ಏನು ಅನಾಹುತವಾಗುತಿತ್ತೋ? ಜುಟ್ಟನ್ನೇ ಕತ್ತರಿಸುತ್ತಿದ್ದಳಪ್ಪ. ನಮ್ಮ 'ಜುಟ್ ಲೆಸ್' ಭಟ್ಟರು ಸದ್ಯಕ್ಕೆ ಬಚಾವ್ ಆಪ್ಪ.

ನಮ್ಮ ವಾಜಪೇಯಿಯವರು ಪ್ರಾಮಾಣಿಕವಾಗಿ ನಾನು ಅವಿವಾಹಿತನೇ ಹೊರತು ಬ್ರಹ್ಮಚಾರಿ ಅಲ್ಲಪ್ಪ ಎಂದಿದ್ದರು. ಅಂದಹಾಗೆ ವಿಶ್ವವಿಖ್ಯಾತ ಕಾಮಸೂತ್ರ ಬರೆದ ವಾತ್ಸಾಯನ ಕೂಡ ಅವಿವಾಹಿತನೇ ಅಂತಲ್ಲಪ್ಪ, ಹಾಗಂತ ಸ್ವಜಾತಿಯ ಅಪ್ಪನೊಬ್ಬನ ನೀಲಿ ಸೀಡಿ ವಿಶ್ಲೇಷಿಸಿದ ಮಾತ್ರಕ್ಕೆ ಅವಿವಾಹಿತ ಸ್ವಾಮೀಜಿಗಳ ಬಗ್ಗೆ ಹಾಗೆಲ್ಲ ತಪ್ಪು ಕಲ್ಪಿಸಿಕೊಳ್ಳಬಾರದು. ಬ್ರಹ್ಮಚಾರಿಗಳ ಕಥೆ ಹೀಗಾದರೆ ಹೆಂಡತಿಯನ್ನು ತೌರಿಗೆ ಅಥವಾ 'ಪರಲೋಕ'ಕ್ಕೆ ಕಳುಹಿಸಿದವರ ವಿರಹವೇದನೆ ಯಾವ ವಾತ್ಸಾಯನನ ಸೂತ್ರಗಳಿಗೂ ನಿಲುಕದಂತದ್ದು. ಅಂತವರು 2ನೇ ಹೆಂಡತಿಯಂತಹ ಬೋರಿಂಗ್ ಮನೆ ಊಟಕ್ಕೆ ಪುನಃ ಮೊರೆ ಹೋಗೋ ಬದಲು ವೆರೈಟಿಗಳ ಆಯ್ಕೆಯಿರುವ ಹೊರಗಿನ ಬಫೆ ಊಟವನ್ನೆ ನೆಚ್ಚುವುದು ಒಳಿತಲ್ಲವೆ? ಇದರಲ್ಲಿ ಅಪರಾಧವಾದರೂ ಏನಿದೆ? ಮನು "ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ" ಎಂದಿದ್ದಾನೆಯೇ ಹೊರತು ಪುರುಷರಿಗೆ ಶಾಸ್ತ್ರದಲ್ಲಿ ವಿಶೇಷ ರಿಯಾಯಿತಿ ಉಂಟು ಮಾರಾಯ್ರೆ.

- ಶಶಿ ಪುತ್ತೂರು, ದಕ



ಚಂಪಾಗೆ ಕೆಲವು ಪ್ರಶ್ನೆಗಳು

ಚಂಪಾ (ಚಂದ್ರಶೇಖರ್ ಪಾಟೀಲ್) ಎಂದರೆ ಸಾ... ಕನ್ನಡ ಸಾಹಿತ್ಯ ಲೋಕದಲ್ಲಿ ಒಂದು ತರಹದ ರೋಮಾಂಚ... ಮೂಡುತ್ತದೆ. ಯಾಕೆಂದರೆ ಪಿ.ಲಂಕೇಶರ ನಂತ... ರಾಜಕೀಯವನ್ನು ಬಹಳ ತೀಕ್ಷ್ಣವಾಗಿ ಟೀಕಿಸುತ್ತಿದ್ದ ವ... ಚಂಪಾ. 1978ರ ತುರ್ತು ಪರಿಸ್ಥಿತಿಯಲ್ಲಿ ರಾಜಕೀಯವ... ತಮ್ಮ ನಾಟಕಗಳ ಮೂಲಕ ಟೀಕಿಸಿದ ವ್ಯಕ್ತಿ ಅವರ... ಎಲ್ಲ ರಾಜಕೀಯ ಪಕ್ಷಗಳ ಭ್ರಷ್ಟಾಚಾರವನ್ನು ಟೀಕಿಸುತ... ಕನ್ನಡ ಪರ, ಕರ್ನಾಟಕದ ಸಮಸ್ಯೆಗಳ ಪರ ಹೋರಾ...


ತಾರೆಯರು ಆಟಕ್ಕುಂಟು, ಲೆಕ್ಕಕ್ಕಿಲ್ಲ!


ಕರ್ನಾಟಕ ರಾಜ್ಯದ ರಾಜಕೀಯದಲ್ಲಿ ಈಗ ...ನಿಮಾದವರದ್ದೇ ದೊಡ್ಡ ರಾದ್ಧಾಂತವಾಗಿದೆ. ಇತ್ತ ರೆಬೆಲ್ ...ಸ್ಟಾರ್ ಅಂಬರೀಷ್ ಕಾಂಗ್ರೆಸ್ ಹೈಕಮಾಂಡ್ ವಿರುದ್ಧವೇ ...ರೆಬೆಲ್' ಆಗಿದ್ದರೆ ಅತ್ತ ಶ್ರೀರಾಮುಲುರ ಬಿಎಸ್‌ಆರ್ ...ಪಕ್ಷದಲ್ಲಿ ಉಪಾಧ್ಯಕ್ಷೆ ಮತ್ತು ಮಹಿಳಾ ವಿಭಾಗದ ...ಅಧ್ಯಕ್ಷೆಯಾಗಿದ್ದ ರಕ್ಷಿತಾ ಪ್ರೇಮ್‌ಗೆ ಚಾಮರಾಜನಗರದಿಂದ ...ಸ್ಪರ್ಧಿಸಲು ಟಿಕೆಟ್ ಸಿಕ್ಕಿದ್ದರೂ ಕೊನೆ ಕ್ಷಣದಲ್ಲಿ ಆ ಪಕ್ಷಕ್ಕೇ ...ರಾಜೀನಾಮೆ ನೀಡಿ ಸುಂಟರಗಾಳಿ ಎಬ್ಬಿಸಿದ್ದಾರೆ.











ತಮಾಷೆಯೆಂದರೆ ರಾಜ್ಯದಲ್ಲಿ ಅಧಿಕಾರ ...ಡೆಯಬೇಕೆಂದು ಬಯಸಿರುವ ಈ ನಟ ...ತಮ್ಮ ವರ್ತನೆ ಬಗ್ಗೆ ನೀಡುತ್ತಿರುವ ...ಕಾರಣಗಳು ಬಾಲಿಶವಾಗಿವೆ. ಅಂಬರೀಷ್ ...ನೀಡಿರುವ ಕಾರ್ಣವನ್ನೇ ನೋಡಿ: "ಶ್ರೀರಂಗಪಟ್ಟಣ ಅಸೆಂಬ್ಲಿ ಕ್ಷೇತ್ರದಲ್ಲಿ ಯಾವುದೇ ಕಾರಣಕ್ಕೂ ರವೀಂದ್ರ ಶ್ರೀಕಂಠಯ್ಯ ...ಅವರಿಗೆ ಟಿಕೆಟ್ ನೀಡಬಾರದು" ಎಂಬುದು ...ಅವರ ಕಂಡೀಷನ್ ಆಗಿತ್ತು, ಅದಕ್ಕೆ ಕಾರಣ ...ಹಿಂದಿನ ಬಾರಿ ತಾವು ಶ್ರೀರಂಗಪಟ್ಟಣದಿಂದ ...ಚುನಾವಣೆಗೆ ಸ್ಪರ್ಧಿಸಿದಾಗ ಇದೇ ರವೀಂದ್ರ ...ತಮ್ಮ ವಿರುದ್ಧ ಕೆಲಸ ಮಾಡಿದ್ದರೂ ತಾವು ...ಸೋತಿದ್ದೆವು ಎಂಬುದು.

ಸಾಧಾರಣವಾಗಿ ಟಿಕೆಟ್ ಸಿಗದಿದ್ದವರು ...ಆ ಪಕ್ಷಕ್ಕೆ ರಾಜೀನಾಮೆ ಕೊಡುತ್ತಾರೆ. ಆದರೆ ...ಯಾರೂ ಮತ್ತೊಂದು ಕ್ಷೇತ್ರದಲ್ಲಿ ತಮಗೆ ...ಆಗದವರಿಗೆ ಟಿಕೆಟ್ ಕೊಡಕೂಡದೆಂದು ...ಕಂಡೀಷನ್ ಹಾಕುವುದಿಲ್ಲ, ಅದನ್ನು ಅಂಬಿ ...ಮಾಡಿದ್ದಾರೆ ಮಾತ್ರವಲ್ಲ ಅದರಲ್ಲಿ ಸಫಲರೂ ...ಆಗಿದ್ದಾರೆ.

ವಾಸ್ತವವಾಗಿ ಮಂಡ್ಯದಲ್ಲಿ ಅಂಬರೀಷ್ ...ಗೆಲ್ಲುವುದು ಸುಲಭದ ಮಾತಾಗಿಲ್ಲ. ಈ ಹಿಂದೆ ...ರಾಮನಗರ ಮತ್ತು ಶ್ರೀರಂಗಪಟ್ಟಣದಿಂದ ...ಅಸೆಂಬ್ಲಿ ಚುನಾವಣೆಗೆ ಅಂಬಿ ಸ್ಪರ್ಧಿಸಿ ...ಸೋತಿದ್ದರು. ಈ ಬಾರಿಯೂ ಅಸೆಂಬ್ಲಿ ...ಚುನಾವಣೆಯಲ್ಲಿ ಸೋತರೆ ಅಂಬರೀಷ್ ...ವಿಧಾನಸೌಧದ ಮೆಟ್ಟಿಲೇರುವ ಕನಸು ...ಕನಸಾಗದೇ ಉಳಿಯುವ ಸಾಧ್ಯತೆಯಿದೆ. ...ಜೊತೆಗೆ ಮಂಡ್ಯದಲ್ಲಿ ವಿಧಾನಸಭೆಗೆ ಸ್ಪರ್ಧಿಸಿ ...ಮೂರು ಬಾರಿ ಸೋಲು ಕಂಡ 'ಹ್ಯಾಟ್ರಿಕ್ ...ಹೀರೋ' ಎಂಬ ಕುಖ್ಯಾತಿಯೂ ಅವರ ...ಮೇಲಾಗುತ್ತದೆ. ಈಗಾಗಲೇ ಅಂಬರೀಷ್‌ಗೆ ...ಟಿಕೆಟ್ ಕೊಟ್ಟಿರುವುದನ್ನು ಸ್ಥಳೀಯ ನಾಯಕರು ...ವಿರೋಧಿಸಿರುವುದರಿಂದ ಅಂಬಿಯನ್ನು ...ಸೋಲಿನ ಭಯ ಕಾಡುತ್ತಿದೆ ಎಂದು ಹಲವರು ...ತರ್ಕಿಸುತ್ತಿದ್ದಾರೆ.

ಒಂದಂತೂ ನಿಜ. ಇಂಡಿಯಾದ ರಾಜಕೀಯವೇ ಬೇರೆ, ಮಂಡ್ಯ ರಾಜಕೀಯನೇ ಬೇರೆ ಎಂಬ ಮಾತು ಮತ್ತೊಮ್ಮೆ ನಿಜವಾಗಿದೆ.

ಇನ್ನು ಸುಂಟರಗಾಳಿ ಖ್ಯಾತಿಯ ರಕ್ಷಿತಾ ಪ್ರೇಮ್ ರಾಜಕೀಯಕ್ಕೆ ಈಗಷ್ಟೇ ಕಾಲಿಟ್ಟಿರುವ ಕೂಸು. ಆದರೂ ಶ್ರೀರಾಮುಲು ಅವರ ಪಕ್ಷದಲ್ಲಿ ಆಕೆಗೆ ಮೊನ್ನೆಮೊನ್ನೆ ತನಕ ಭಾರೀ ಗೌರವ ಮತ್ತು ಮರ್ಯಾದೆ ಇತ್ತು. ಆದರೆ ಯಾವಾಗ ಯಡಿಯೂರಪ್ಪನವರ ಪಕ್ಷದಿಂದ ಮದನ್ ಪಟೇಲ್ ಮತ್ತು ಪೂಜಾ ಗಾಂಧಿ ಬಂದರೋ ಆಗ ಕಿರಿಕ್ ಆರಂಭವಾಯಿತು. ರಕ್ಷಿತಾರ ಸಾರ್ವಭೌಮತೆ ಮತ್ತು ಜನಪ್ರಿಯತೆಗೆ ಪಕ್ಷದೊಳಗೆ ಕುತ್ತು ಬಂತು. 'ಬಿಗ್ ಬಾಸ್' ಖ್ಯಾತಿಯ ನರ್ಸ್ ಜಯಲಕ್ಷ್ಮಿ ಕೂಡಾ ಬಿಎಸ್‌ಆರ್‌ಗೆ ಸೇರ್ಪಡೆಯಾದ ನಂತರ ರಕ್ಷಿತಾಗೆ ಪಕ್ಷದಲ್ಲಿ ಉಸಿರು ಕಟ್ಟುವಂತಾಯಿತು.

ಇದೆಲ್ಲದರ ಜೊತೆಜೊತೆಗೆ ರಕ್ಷಿತಾ ಕೇಳಿದ್ದ ಅಸೆಂಬ್ಲಿ ಕ್ಷೇತ್ರದಲ್ಲಿ ಟಿಕೆಟ್ ಸಿಗದಿದ್ದದು ಕೂಡಾ ಬೇಸರ ಉಂಟುಮಾಡಿತ್ತು, ಶ್ರೀರಾಮುಲು ಅವರ ಪ್ರಭಾವ ಇರುವ ಬಳ್ಳಾರಿ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಆಕೆ ಟಿಕೆಟನ್ನು ಕೇಳಿದ್ದರು. ಅಂತಹ ಪ್ರದೇಶದಲ್ಲಿ ಟಿಕೆಟ್ ಸಿಕ್ಕಿದ್ದಲ್ಲಿ, ಹಿಂದುಳಿದ ವರ್ಗಗಳ ಮತ್ತು ಲಿಂಗಾಯತರ ಮತಗಳನ್ನು ಪಡೆದು ಗೆಲ್ಲಬಹುದು ಎಂಬುದು ಆಕೆಯ ಲೆಕ್ಕಾಚಾರವಾಗಿತ್ತು. ಆದರೆ ಆಕೆಗೆ ಚಾಮರಾಜ ನಗರದ ಟಿಕೆಟ್ ನೀಡಿದ ಶ್ರೀರಾಮುಲು ಮೊನ್ನೆಮೊನ್ನೆ ಕೆಜೆಪಿಯಿಂದ ಬಂದ ಪೂಜಾ ಗಾಂಧಿಗೆ ರಾಯಚೂರಿನಿಂದ ಸ್ಪರ್ಧಿಸಲು ಅನುವು ಮಾಡಿಕೊಟ್ಟದ್ದು ರಕ್ಷಿತಾಳ ಸಿಟ್ಟು ನೆತ್ತಿಗೇರುವಂತೆ ಮಾಡಿತು.

ಚಾಮರಾಜನಗರದಲ್ಲಿ ತಾನು ಕಡಿಮೆ ಮತ ಪಡೆದು, ರಾಯಚೂರಿನಲ್ಲಿ ಪೂಜಾ ಗಾಂಧಿ ಹೆಚ್ಚು ಮತಗಳನ್ನು ಪಡೆದರೆ, ಖಂಡಿತವಾಗಿಯೂ ನಾಳೆ ತನ್ನ ರಾಜಕೀಯ ಜೀವನಕ್ಕೆ ಮುಳುವಾಗಬಹುದು ಎಂಬ ಭಯವೂ ರಕ್ಷಿತಾಳನ್ನು ಕಾಡಿತು. ಈ ಎಲ್ಲಾ ಕಾರಣಗಳಿಗೆ ಆಕೆ ಬಿಎಸ್‌ಆರ್ ಪಕ್ಷಕ್ಕೆ ಗುಡ್‌ಬೈ ಹೇಳಿ ಹೊರಬಿದ್ದಿದ್ದಾರೆ.


ಈಗ ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಪಕ್ಷವನ್ನು ಸೇರಿರುವ ರಕ್ಷಿತಾ ತನ್ನ ರಾಜಕೀಯ ಜೀವನದ ಎರಡನೆಯ ಅಧ್ಯಾಯವನ್ನು ಆರಂಭಿಸಿದ್ದಾರೆ. ರಕ್ಷಿತಾಳ ಪತಿ ನಿರ್ದೇಶಕ ಪ್ರೇಮ್ ಆರಂಭದ ದಿನಗಳಿಂದಲೂ ಕುಮಾರಣ್ಣನ ಜೊತೆಗೆ ನಿಕಟವಾದ ಸಂಬಂಧವನ್ನು ಹೊಂದಿರುವವರು. ಹಾಗೆ ನೋಡಲು ಹೋದರೆ ಪ್ರೇಮ್‌ನನ್ನು ರಾಜಕೀಯಕ್ಕೆ ಎಳೆದು ತರಬೇಕೆಂದು ಯಡಿಯೂರಪ್ಪ, ಆರ್.ಅಶೋಕ್ ಮತ್ತು ಕುಮಾರಣ್ಣ ಅನೇಕ ಬಾರಿ ಪ್ರಯತ್ನಿಸಿದ್ದರು. ಈಗ ಆ ಒಂದು ಕಾಂಟಾಕ್ಟ್‌ನ ಫಲವಾಗಿ ರಕ್ಷಿತಾಗೆ ಜೆಡಿಎಸ್‌ನಲ್ಲಿ ಆಶ್ರಯ ಸಿಕ್ಕಿದೆ. ರಕ್ಷಿತಾಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಲು ಬಿಜೆಪಿ ಪಕ್ಷದವರೂ ಎಲ್ಲಿಲ್ಲದ ಪ್ರಯತ್ನವನ್ನು ಮಾಡಿದ್ದರು ಎಂಬುದು ಕೂಡ ನಿಜ.

ಕುಮಾರಣ್ಣನ ಪಕ್ಷದಲ್ಲಿ ಈಗಾಗಲೇ ಮತ್ತೊಬ್ಬ ನಟಿ ರಾಧಿಕಾ ಕುಮಾರಸ್ವಾಮಿ ಪರೋಕ್ಷವಾಗಿ ಅತ್ಯುನ್ನತ ಸ್ಥಾನದಲ್ಲಿದ್ದಾರೆ. ರಾಧಿಕಾ ಮತ್ತು ರಕ್ಷಿತಾ ಸಿನಿಮಾ ರಂಗದಲ್ಲಿ ನಾಯಕಿಯರಾಗಿದ್ದ ಸಂದರ್ಭದಲ್ಲಿ ಅವರಿಬ್ಬರ ನಡುವಿನ ಸಂಬಂಧ ಅಷ್ಟಕ್ಕಷ್ಟೇ ಇತ್ತು, ಇಲ್ಲಿ ರಾಜಕೀಯದಲ್ಲಿ ಮುಂದೆ ಏನಾಗುತ್ತದೋ? ಎಂಬುದನ್ನು ನೋಡಬೇಕಾಗಿದೆ.

ಈ ಬಾರಿಯ ಚುನಾವಣೆಯಲ್ಲಿ ಚಿತ್ರರಂಗದ ಒಂದಿಬ್ಬರು ಮಾತ್ರ ವಿಧಾನ ಸಭೆ ಮೆಟ್ಟಿಲನ್ನು ಏರುವ ಸಾಧ್ಯತೆ ಕಾಣಿಸುತ್ತಿದೆ. ಅವರಲ್ಲಿ ಒಬ್ಬರು ತೇರದಾಳ ಕ್ಷೇತ್ರದಿಂದ ಕಾಂಗ್ರೆಸ್ ಪರವಾಗಿ ಸ್ಪರ್ಧಿಸಿರುವ ಉಮಾಶ್ರೀ ಮತ್ತು ಹಿರೇಕೇರೂರು ಕ್ಷೇತ್ರದಿಂದ ಸ್ಪರ್ಧಿಸಿರುವ ಬಿ.ಸಿ. ಪಾಟೀಲ್. ಇವರಿಬ್ಬರಿಗೆ ಸದ್ಯದ ಪರಿಸ್ಥಿತಿಯಲ್ಲಿ ಯಾವುದೇ ತೊಂದರೆ ಕಾಣಿಸುತ್ತಿಲ್ಲ, ಉಳಿದ ಸಿನಿಮಾ ತಾರೆಯರು ಈ ರಾಜಕೀಯ ಚದುರಂಗದಾಟದಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿದ್ದಾರೆ.

'ಸಂಗೊಳ್ಳಿರಾಯಣ್ಣ' ಪ್ರಭಾವ ಬೀರುತ್ತಾ?

ಚಾಲೆಂಜಿಂಗ್ ಸ್ಟಾರ್ ದರ್ಶನ್ ನಟಿಸಿರುವ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಚಿತ್ರ ಈಗ ರಾಜಕೀಯ ರಂಗದಲ್ಲೂ ಬಿರುಗಾಳಿಯಲ್ಲಿ ಸಿಲುಕಿದೆ. ಈ ಚಿತ್ರವನ್ನು ಆನಂದ್ ಅಪ್ಪುಗೋಳ್ ಸುಮಾರು 30 ಕೋಟಿ ರೂಪಾಯಿಗಳನ್ನು ನೀರಿನಂತೆ ಸುರಿದು ನಿರ್ಮಿಸಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. "ಹೀಗೆ ಹಣವನ್ನು ಖರ್ಚು ಮಾಡಲು ನನಗೆ ಸಂಗೊಳ್ಳಿ ರಾಯಣ್ಣನೇ ಸ್ಫೂರ್ತಿ" ಎಂದು ಅಪ್ಪುಗೋಳ್ ಹೇಳಿ ರಾಯಣ್ಣನ ಬಗೆಗಿರುವ ತಮ್ಮ ಅಭಿಮಾನವನ್ನು ಪ್ರದರ್ಶಿಸಿದ್ದರು.



ಆದರೆ ಈಗ ಅಪ್ಪುಗೋಳ್ ಅವರಿಗೆ ನಿಜವಾಗಿಯೂ ರಾಯಣ್ಣನ ಬಗ್ಗೆ ಅಭಿಮಾನವೋ ಅಥವಾ ರಾಯಣ್ಣನ ಚಿತ್ರವನ್ನು ತಮ್ಮ ರಾಜಕೀಯ ಉದ್ದೇಶಕ್ಕಾಗಿ ನಿರ್ಮಿಸಿದರೋ ಎಂಬ ಚರ್ಚೆ ಆರಂಭವಾಗಿದೆ.

ಇದಕ್ಕೆ ಕಾರಣ ಕಿತ್ತೂರು ಕ್ಷೇತ್ರದಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಅಪ್ಪುಗೋಳ್ ಭಾರೀ ಪ್ರಯತ್ನವನ್ನು ಮಾಡಿದ್ದು, ಆ ನಿಟ್ಟಿನಲ್ಲಿ ಅವರು ಕಾಂಗ್ರೆ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಎರಡುಮೂರು ಬಾರಿ ಭೇಟಿ ಕೂಡ ಆಗಿದ್ದರು. ಸಿದ್ದರಾಮಯ್ಯ ಕೂಡ ತನ್ನ ಸ್ವಜಾತಿ ಕುರುಬ ಸಮುದಾಯದವರಾದ್ದರಿಂದ ಅವರು ತಮಗೆ ಕಾಂಗ್ರೆಸ್ ಟಿಕೆಟ್ ಕೊಡಿಸುತ್ತಾರೆಂಬ ನಿರೀಕ್ಷೆ ಅಪ್ಪುಗೋಳ್ ಅವರದ್ದಾಗಿತ್ತು, ಅಷ್ಟೇ ಅಲ್ಲ, ಕೋಡಿಮಠದ ಸ್ವಾಮೀಜಿ ಮುಖಾಂತರ ಕೂಡ ಕಿತ್ತೂರಿನಿಂದ ಕಾಂಗ್ರೆ ಟಿಕೆಟ್ ಪಡೆಯಲು ಅಪ್ಪುಗೋಳ್ ಪ್ರಯತ್ನ ನಡೆಸಿದ್ದರು ಎಂಬ ಸುದ್ದಿಯೂ ಕೇಳಿಬಂದಿತ್ತು.

ಮೂರು ವಾರಗಳ ಹಿಂದೆ ರಾಷ್ಟ್ರಪ್ರಶಸ್ತಿ ಆಯ್ಕೆ ಸಮಿತಿ ದೆಹಲಿಯಲ್ಲಿ ಸಭೆ ನಡೆಸುತ್ತಿದ್ದಾಗ ಅಪ್ಪುಗೋಳ್ ದೆಹಲಿಯಲ್ಲಿ ಮೊಕ್ಕಾಂ ಹೂಡಿದ್ದರು. ಒಂದು ಕಡೆ ತನ್ನ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಗಿಟ್ಟಿಸಿಕೊಳ್ಳಲು ಲಾಬಿ ಮತ್ತೊಂದು ಕಡೆ ಕಿತ್ತೂರು ಅಸೆಂಬ್ಲಿ ಕ್ಷೇತ್ರ ಟಿಕೆಟ್‌ಗಾಗಿ ಕಾಂಗ್ರೆಸ್ ನಾಯಕರ ಮುಂದೆ ಲಾಬಿ ಅಪ್ಪುಗೋಳ್ ನಡೆಸುತ್ತಿದ್ದರು.

ಅವರ ಸಿನಿಮಾಗೆ ರಾಷ್ಟ್ರ ಪ್ರಶಸ್ತಿ ಸಿಗಲಿಲ್ಲ, ಹಾಗೆಯೇ ಕಾಂಗ್ರೆಸ್ ಕೂಡ ಅವರಿಗೆ ಟಿಕೆಟ್ ನೀಡಲಿಲ್ಲ, ಅಷ್ಟೇ ಅಲ್ಲ, ಅಪ್ಪುಗೋಳ್ ಅವರ ಅರ್ಜಿಯನ್ನು ತಿರಸ್ಕರಿಸಿದ ಕಾಂಗ್ರೆಸ್ ಹೈಕಮಾಂಡ್ ಅವರ ಎದುರಾಳಿಯಾದ ಮಾಜಿ ಸಚಿವ ಇನಾಂದಾರ್ ಅವರಿಗೆ ಟಿಕೆಟ್‌ನ್ನು ನೀಡಿದೆ. ಇಷ್ಟೇ ಆದಲ್ಲಿ 'ಸಂಗೊಳ್ಳಿ ರಾಯಣ್ಣ' ಚಿತ್ರಕ್ಕೂ ಅಪ್ಪುಗೋಳ್ ಅವರ ರಾಜಕೀಯ ಆಶೆಗೂ ಸಂಬಂಧವೇ ಇರುತ್ತಿರಲಿಲ್ಲ.


ಆದರೆ ಅಸಲಿ ವಿಷಯ ಏನೆಂದರೆ 'ಸಂಗೊಳ್ಳಿ ರಾಯಣ್ಣ' ಚಿತ್ರದಲ್ಲಿ ರಾಯಣ್ಣನನ್ನು ಬ್ರಿಟಿಷರಿಗೆ ಹಿಡಿದುಕೊಟ್ಟದ್ದು ಇದೇ ಇನಾಂದಾರ್ ಕುಟುಂಬದ ಹಿರಿಯರು ಎಂದು ತೋರಿಸಲಾಗಿದೆ. ಅದು ಐತಿಹಾಸಿಕ ಸತ್ಯ ಕೂಡ. ಆ ಕಾಲದಲ್ಲಿ ಬ್ರಿಟಿಷರಿಗೆ ನೆರವಾಗುವ ಮುಲಕ ಇವರ ಕುಟುಂಬ ದೇಶದ್ರೋಹಿ ಕೆಲಸವನ್ನು ಮಾಡಿತ್ತು ಮತ್ತು ಆ ಕಾರಣಕ್ಕಾಗಿಯೇ ಈ ಕುಟುಂಬದವರಿಗೆ ಸಾವಿರಾರು ಎಕರೆ ಭೂಮಿಯನ್ನು ಬ್ರಿಟಿಷರು 'ಇನಾಂ' ನೀಡಿದ್ದರಿಂದ ಅವರಿಗೆ, ಆ ಕುಟುಂಬಕ್ಕೆ 'ಇನಾಂದಾರ್' ಎಂಬ ಹೆಸರು ಬಂದಿತ್ತು.

ಇದರಲ್ಲಿ ಇನ್ನೂ ಹೆಚ್ಚಿನ ಜಾತಿವಾಸನೆ ಕಂಡುಬರುತ್ತಿದೆ. ಅಪ್ಪುಗೋಳ್ ಅವರು ಸಂಗೊಳ್ಳಿ ರಾಯಣ್ಣನ ಕುರುಬ ಸಮುದಾಯದವರು. ಅಷ್ಟೇ ಅಲ್ಲ, ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಇನಾಂದಾರ್ ಲಿಂಗಾಯತ ಸಮುದಾಯದವರು. ಕಿತ್ತೂರು ಮತಕ್ಷೇತ್ರದಲ್ಲಿ ಈ ಎರಡೂ ಸಮುದಾಯಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಕಾಂಗ್ರೆಸ್ ಟಿಕೆಟ್ ಪಡೆದಿರುವ ಇನಾಂದಾರ್‌ರವರನ್ನು ಆ ಕ್ಷೇತ್ರದ ಜನತೆ ಮತ್ತೊಮ್ಮೆ ಆಯ್ಕೆ ಮಾಡುತ್ತಾರೋ ಅಥವಾ 'ಸಂಗೊಳ್ಳಿ ರಾಯಣ್ಣ' ಚಿತ್ರದ ಪ್ರಭಾವದಿಂದ ಸೋಲಿಸುತ್ತಾರೋ? ಅಷ್ಟೇ ಅಲ್ಲ, 'ಸಂಗೊಳ್ಳಿ ರಾಯಣ್ಣ' ಚಿತ್ರವನ್ನು ನಿರ್ಮಿಸುವ ಮೂಲಕ ಕುರುಬರ ಹೊಸ ಸ್ಟಾರ್ ಆಗಿ ಉದಯಿಸಿರುವ ಮತ್ತು ಈಗ ಕಿತ್ತೂರಿನಿಂದ ಸ್ಪರ್ಧಿಸಲು ಜೆಡಿಎಸ್ ಟಿಕೆಟ್ ಪಡೆದಿರುವ ಅಪ್ಪುಗೋಳ್ ಜಯಭೇರಿ ಬಾರಿಸುತ್ತಾರೋ ನೋಡಬೇಕು.

● ಶೆಣೈ

...ಮಾಡಿದವರು ಅವರು. ಇಂತಹ ವ್ಯಕ್ತಿ ...ಕೆಲವು ದಿನಗಳ ಹಿಂದೆ ಯಡಿಯೂರಪ್ಪನ ...ಕೆಜೆಪಿ ಸೇರಿದ್ದು ಅಚ್ಚರಿ ಮೂಡಿಸಿದೆ.

ಯಾವ ಚಂಪಾ ಭ್ರಷ್ಟಾಚಾರದ ...ವಿರುದ್ಧ ಪ್ರತಿಭಟಿಸು ತ್ತಿದ್ದರೋ ಅಂತಹ ...ಚಂಪಾ ಇವತ್ತು ಹಲವಾರು ಭ್ರಷ್ಟಾ...ಚಾರದ ಆರೋಪಗಳನ್ನು ಹೊತ್ತಿರುವ ...ಯಡಿಯೂರಪ್ಪನ ಜೊತೆ ಕೈಜೋಡಿಸಿರು...ವುದು ಅವಕಾಶವಾದಿತನವಲ್ಲವೇ?



ಪ್ರಾದೇಶಿಕ ಪಕ್ಷವನ್ನು ಸೇರುವ ...ಮೂಲಕ ತಾನು ಕನ್ನಡ ಭಾಷೆ ಮತ್ತು ಕನ್ನಡನಾಡನ್ನು ...ಉಳಿಸುವ ಪ್ರಯತ್ನ ಮಾಡುತ್ತೇನೆ ಎಂದು ಚಂಪಾ ...ಹೇಳಿರುವುದು ಹಾಸ್ಯಾಸ್ಪದವಾಗಿದೆ. ಯಾಕೆಂದರೆ ...ಕೆಜೆಪಿಯಲ್ಲಿರುವ ಹೆಚ್ಚಿನ ರಾಜಕಾರಣಿಗಳು ...ಅಧಿಕಾರದಲ್ಲಿದ್ದಾಗ ಕನ್ನಡಕ್ಕಾಗಲಿ, ಕನ್ನಡನಾಡಿಗಾಗಲಿ ಕಡಿದು ...ಗುಡ್ಡೆಹಾಕಿದ್ದು ಅಷ್ಟರಲ್ಲೇ ಇದೆ.

- ಪ್ರದೀಪ್ ಎಸ್.ಡಿ. ತೀರ್ಥಹಳ್ಳಿ

ಗೌರಿ ಜ್ಯೋತಿಷಿಯೇ?

ಗೌರಿ ಲಂಕೇಶರು ತಮ್ಮ ಅಂಕಣದಲ್ಲಿ 'ಅಂತೂ ತೊಲಗಲಿದೆ ಬಿಜೆಪಿ ಸರ್ಕಾರ' (ಏಪ್ರಿಲ್ 24, 2013 ಸಂಚಿಕೆ) ಎಂದು ಬರೆದದ್ದು ಎಷ್ಟು ಸರಿ? ಚುನಾವಣೆ ನಡೆಯುವ ಮುನ್ನವೇ ಹಾಗೆ ಹೇಳಲು ಅವರೇನು ಜ್ಯೋತಿಷಿಯೇ?



ಬಿಜೆಪಿ ಒಂದು ಫ್ಯಾಸಿಸ್ಟ್ ಪಕ್ಷ ಎಂದಿದ್ದಾರೆ. ಹಾಗಾದರೆ ಅವರ ದೃಷ್ಟಿಯಲ್ಲಿ ಯಾವ ರಾಜಕೀಯ ಪಕ್ಷ ಸರಿಯಾಗಿದೆ? ನಾನು ಬಿಜೆಪಿ, ಯುಪಿಎ ಅಥವಾ ಎನ್‌ಡಿಎ ಬೆಂಬಲಿಗನಲ್ಲ, ಆದರೂ ಹೀಗೆ ಭವಿಷ್ಯ ನುಡಿಯುವುದು ಸರಿಯಲ್ಲ.

ಇಂತಹ ಲೇಖನಗಳ ಬದಲಾಗಿ ಆಮ್ ಆದ್ಮಿ ಪಕ್ಷ, ಲೋಕ ಸತ್ತಾ ಪಕ್ಷಗಳ ಬಗ್ಗೆ ಬರೆದರೆ ಜನರಿಗೆ ಉಪಯೋಗವಾದೀತು.

- ಲೋಕೇಶ್, ಬೆಂಗಳೂರು

'ದೇಶಭಕ್ತನ ಕ್ರಿಕೆಟ್ ಪ್ರೇಮ

ಫಣಿರಾಜ್ ಅವರ 'ಬೌಂಡರಿಯ ಆಚೆ' (ಏಪ್ರಿಲ್ 24, 2013 ಸಂಚಿಕೆ) ಲೇಖನ ತುಂಬಾ ಚೆನ್ನಾಗಿತ್ತು. ನಾನು ಸಹ ಮಿಯಂದಾದ್ ಅವರ ಅಭಿಮಾನಿ. ಹಾಗೆಯೇ ನನ್ನ ಅಚ್ಚುಮೆಚ್ಚಿನ ಕ್ರಿಕೆಟಿಗ ವಾಸಿಮ್ ಅಕ್ರಮ್, ಅಕ್ರಮ್‌ಗೆ ವಿಕೆಟ್ ಸಿಕ್ಕಾಗೆಲ್ಲ ನಾನು ಕುಣಿದಾಡುತ್ತಿದ್ದೆ, ಆದರೆ ಪಾಕಿಸ್ತಾನ ಗೆದ್ದಾಗ ನಾನು ಪಟಾಕಿ ಸಿಡಿಸುತ್ತಿರಲಿಲ್ಲ, ಯಾಕೆಂದರೆ ನಾನು ದೇಶಪ್ರೇಮಿ. ಹಾಗೆಯೇ 'ದೇಶಭಕ್ತ ಸೂಳೆಮಗನ ಗದ್ಗೀತೆ' ಎಂಬ ಕವನ ಬರೆದ ಪಿ.ಲಂಕೇಶರ ಭಕ್ತ!


ಅದೇ ಸಂಚಿಕೆಯಲ್ಲಿ ನಮ್ಮ ದಿಲ್ಸನ್ ಕಟೀಲ್ ಬರೆದ "ಕಿಲಗೋ' ಕತೆಗಳು' ತುಂಬಾ ಮಜಾ ಕೊಟ್ಟವು.

- ಇಸ್ಮತ್ ಫಜೀರ್, ಮಂಗಳೂರು

ಬಿಜೆಪಿಯ 'ಸ್ವಚ್ಛ, ಭಿನ್ನ, ಆಡಳಿತ'ದ ಪ್ರಚಾರ ಶೈಲಿ:
- ಸೆರೆಮನೆ ಸೇರಲು ಅಂಜದೆ ರಾಜ್ಯವನ್ನು ಗುಡಿಸಿದ್ದೇವೆ.
-ಮತ್ತೊಮ್ಮೆ ಅವಕಾಶ ಸಿಕ್ಕರೆ ಸಗಣಿ ಸಾರಿಸಿ ಸೆರೆಮನೆಯಲ್ಲೇ 'ಸಾಹಸ ಸಭೆ' ನಡೆಸುತ್ತೇವೆ.

- ತಲೆಹರಟೆ, ಎಸ್‌ಎಂಎಸ್ ಮೂಲಕ

ಮೋದಿಯ ಭ್ರಷ್ಟಾಚಾರ



ಭ್ರಷ್ಟಾಚಾರಕ್ಕೆ ನರೇಂದ್ರ ಮೋದಿಯ ಉತ್ತೇಜನ ಕುರಿತು ಗೌರಿ ಲಂಕೇಶ್ ಬರೆದ ಅಂಕಣ ತುಂಬಾ ಸಕಾಲಿಕವಾಗಿತ್ತು, ಈಗ ಮತ್ತೆ ಸಿಎಜಿ ಮೋದಿ ಬೊಕ್ಕಸಕ್ಕೆ ಮಾಡಿದ ನಷ್ಟದ ಬಗ್ಗೆ ನೀಡಿರುವ ಮಾಹಿತಿಗಳು ಬೆಚ್ಚಿ ಬೀಳಿಸುವಂತಿವೆ. ಈ ಕಾರಣಕ್ಕೇ ಅಲ್ಲವೇ ಅಮೆರಿಕದ ನಿಯೋಗ ಮೋದಿ ಯೊಂದಿಗೆ ಕೂಡಿಕೆ ಮಾಡಿಕೊಳ್ಳಲು ಅವನಿಗೆ ಅಮೆರಿಕಕ್ಕೆ ಆಹ್ವಾನ ನೀಡಿರುವುದು. 'ಮೋದಿಯ ಮೋದಿ' ಎಂದು ಬರೆಯುವ ಪ್ರತಾಪ ಸಿಮ್ಹ ಈಗ ಏನು ಬರೆಯುತ್ತಾನೆ?

- ರವಿಕುಮಾರ್, ಹಾಸನ

ಹೆಬನೇರಿಯಾ ಹಳೆಯ ದಿನಗಳನ್ನು ನೆನಪಿಸಿತು

'ಲಂಕೇಶ್' ವಾರ ಪತ್ರಿಕೆಯಲ್ಲಿ ಆಗಾಗ ಬರುತ್ತಿರುವ ಪದ್ಮಾ ಶ್ರೀರಾಮ್ ಅವರ ಲೇಖನಗಳನ್ನು ಓದಿದ್ದೇನೆ. ಅದೇ ರೀತಿ ಇತ್ತೀಚಿನ ಒಂದು ಸಂಚಿಕೆಯಲ್ಲಿ ಬಂದಂತಹ ಅವರ ಹೆಬನೇರಿಯ ಆರ್ಕಿಡ್ ಕುರಿತ ಲೇಖನ ನನ್ನ ಹಳೆಯ ದಿನಗಳನ್ನು ನೆನಪಿಸಿತು. ಮೂಲತಃ ಸಸ್ಯ ಹಾಗು ಕಾಡುಮೇಡು ಸುತ್ತುವುದೇ ನನ್ನ ಮೊದಲ ಆಸಕ್ತಿ. ಉಜಿರೆಯಲ್ಲಿದ್ದಾಗ 20ಕ್ಕೂ ಹೆಚ್ಚು ಬಗೆಯ ಆರ್ಕಿಡ್‌ಗಳನ್ನು ಸಂಗ್ರಹಿಸಿ ಬೆಳೆಸಿದ್ದೆ, ಪಶ್ಚಿಮ ಘಟ್ಟದ ತಪ್ಪಲಿನಲ್ಲಿ 3-4 ಬಗೆಯ ಹೆಬನೇರಿಯಾದಂತಹ ಬೇರೆ ಗ್ರೌಂಡ್ ಆರ್ಕಿಡ್‌ಗಳನ್ನೂ ಕೂಡ ಗಮನಿಸಿದ್ದೆ, ಅಂದಹಾಗೆ ಆರ್ಕಿಡ್‌ಗೆ ಸಂಬಂಧಿಸಿದ ಪದ್ಮಾ ಶ್ರೀರಾಮರ ಲೇಖನದಲ್ಲಿನ ತಪ್ಪೊಂದರ ಬಗ್ಗೆ 20 ವರ್ಷದ ಹಿಂದೆಯೇ ಪ್ರತಿಕ್ರಿಯಿಸಿ (ಕಸ್ತೂರಿ. ಜ- 1992) ಉತ್ತರವನ್ನೂ ಪಡೆದಿದ್ದೆ.

ಹಿಂದೆ ಲಂಕೇಶ್ ಪತ್ರಿಕೆಯಲ್ಲಿ ತೇಜಸ್ವಿಯವರ ಪರಿಸರ ಸಂಬಂಧಿ ಲೇಖನಗಳು ಬರುತ್ತಿದ್ದಂತೆ ಪದ್ಮಾ ಶ್ರೀರಾಮರ ಲೇಖನಗಳು ಗೌರಿ ಲಂಕೇಶ್‌ನಲ್ಲಿ ಆಗಾಗ ಕಾಣುವಂತಾಗಲಿ.

- ರವಿ ಪುತ್ತೂರು, ದಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ ಕಳುಹಿಸಬಹುದು.

ನಾ ಮೇಲಾ, ನೀ ಮೇಲಾ




ಪುನೀತ್ ರಾಜ್‌ಕುಮಾರ್ ನಡೆಸಿಕೊಡುತ್ತಿರುವ 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮ ಮತ್ತು ಸುದೀಪ್ ನಡೆಸಿಕೊಡುತ್ತಿರುವ 'ಬಿಗ್ ಬಾಸ್' ಕಾರ್ಯಕ್ರಮಗಳ ನಡುವಿನ ಪೈಪೋಟಿ ಜನರಲ್ಲಿ ಕುತೂಹಲವನ್ನು ಮೂಡಿಸಿದೆ.

ಇದೀಗ 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮದಲ್ಲಿ ಹುಸೇನ್ ಪಾಷಾ ಎಂಬ ಹುಡುಗ ಒಂದು ಕೋಟಿ ರೂಪಾಯಿಗಳನ್ನು ಗೆದ್ದು ಹೊಸ ದಾಖಲೆಯನ್ನು ಬರೆದಿದ್ದಾನೆ. ಈ ಮುಸ್ಲಿಂ ಹುಡುಗ ಅತ್ಯಂತ ಬಡಕುಟುಂಬದವನಾಗಿದ್ದು, ಇನ್ನೂ ಮೊದಲ ವರ್ಷ ಡಿಗ್ರಿ ಓದುತ್ತಿದ್ದಾನೆ. ಅಪ್ಪ ಅಮ್ಮನಿಗೆ ಹೊರೆಯಾಗಬಾರದೆಂಬ ಕಾರಣದಿಂದ ಬೆಂಗಳೂರಿಗೆ ಬಂದು ಲಾರಿ ಕ್ಲೀನ್ ಮಾಡುವ ಕೆಲಸವನ್ನೂ ಮಾಡುತ್ತಿದ್ದಾನೆ. ಇಂತಹ ಹುಡುಗ ಪುನೀತ್ ರಾಜ್‌ಕುಮಾರ್ ಕೇಳಿದ ಎಲ್ಲ 15 ಪ್ರಶ್ನೆಗಳಿಗೂ ಸರಿಯಾದ ಉತ್ತರಗಳನ್ನು ನೀಡಿ ಒಂದು ಕೋಟಿ ರೂ. ಬಹುಮಾನವನ್ನು ಗೆಲ್ಲುವ ಮೂಲಕ ಈ ಕಾರ್ಯಕ್ರಮದ ಬಗ್ಗೆ ಪ್ರೇಕ್ಷಕರಲ್ಲಿ ಮತ್ತೊಮ್ಮೆ ಆಸಕ್ತಿಯನ್ನು ಹುಟ್ಟುಹಾಕಿದ್ದಾನೆ.

ಪತ್ರಿಕಾಗೋಷ್ಠಿಯಲ್ಲಿ ಆ ಹುಡುಗ ಪಟಪಟನೆ ಹರಳು ಹುರಿದಂತೆ ಪತ್ರಕರ್ತರ ಪ್ರಶ್ನೆಗಳಿಗೆ ನಿರ್ಭಯವಾಗಿ ಉತ್ತರಿಸಿದ. ಜೊತೆಗೆ ಭಗವದ್ಗೀತೆಯ ಶ್ಲೋಕಗಳನ್ನು ಹೇಳುತ್ತ ಎಲ್ಲರಲ್ಲೂ ಅಚ್ಚರಿ ಮೂಡಿಸಿದ. ಆತ ಹೇಳಿದ ಒಂದು ಮಾತು ನಿಜಕ್ಕೂ ಮನಸ್ಸಿಗೆ ತಾಕುವಂತಿತ್ತು, "'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮದಲ್ಲಿ ಕೋಟಿ ಗೆಲ್ಲುವುದು ನನ್ನ ಜೀವನದ ಗುರಿಯಾಗಿರಲಿಲ್ಲ, ಅಪ್ಪ-ಅಮ್ಮನ ಒಂದಿಷ್ಟು ಸಾಲವನ್ನು ತೀರಿಸಿ ಐಎಎಸ್ ಮಾಡಲು ನನಗೆ ಹಣ ಬೇಕಿತ್ತು, ಆದಕ್ಕಾಗಿ ನಾನು 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮಕ್ಕೆ ಬಂದೆ. ಈಗ ಕೋಟ್ಯಾಧಿಪತಿಯಾಗಿರಬಹುದು. ಆದರೆ ನನ್ನ ಉದ್ದೇಶ ಐಎಎಸ್ ಅಧಿಕಾರಿಯಾಗುವುದು. ಅದೇ ನನ್ನ ಕನಸು, ಅದೇ ನನ್ನ ಗುರಿ" ಎಂದು ಹೇಳಿದಾಗ ಪುನೀತ್ ಸಮೇತ ಪತ್ರಕರ್ತರೆಲ್ಲರೂ ಚಪ್ಪಾಳೆ ತಟ್ಟಿ ಆತನನ್ನು ಅಭಿನಂದಿಸಿದರು.

ಸುದೀಪ್ ನಿರೂಪಣೆಯ 'ಬಿಗ್ ಬಾಸ್' ಕಾರ್ಯಕ್ರಮ ಬಂದನಂತರ ಪುನೀತ್ ನಿರೂಪಣೆಯ 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮದ ಟಿ.ಆರ್.ಪಿ ರೇಟ್ ಸ್ವಲ್ಪ ಕಡಿಮೆಯಾಗಿತ್ತು, ಆದರೆ ಎರಡನೇ ವಾರಕ್ಕೆ ಮತ್ತೆ ಈಗ 'ಕೋಟ್ಯಾಧಿಪತಿ' ಕಾರ್ಯಕ್ರಮ 'ಬಿಗ್‌ಬಾಸ್' ನ್ನು ಓವರ್‌ಟೇಕ್ ಮಾಡಿ ಮೊದಲ ಸ್ಥಾನವನ್ನು ತಲುಪಿದೆ. ಮುಂದಿನ ವಾರ ಹುಸೇನ್ ಪಾಷಾ ಒಂದು ಕೋಟಿ ಪಡೆದ ಎಪಿಸೋಡ್ ಪ್ರಸಾರವಾದ ನಂತರ 'ಕನ್ನಡದ ಕೋಟ್ಯಾಧಿಪತಿ' ಟಿ.ಆರ್.ಪಿ ಯಲ್ಲಿ ಇನ್ನಷ್ಟು ಮುನ್ನುಗ್ಗುವ ಸಾಧ್ಯತೆಯಿದೆ. ಅಂತೂಇಂತೂ ಸಿನಿಮಾದಲ್ಲೂ, ಕಿರುತೆರೆಯಲ್ಲೂ ಈ ಇಬ್ಬರು ನಟರ ನಡುವಿನ ನಾ ಮೇಲಾ, ನೀ ಮೇಲಾ ಎಂಬ ಸ್ಪರ್ಧೆ ಮುಂದುವರೆಯುತ್ತಿದೆ.

ಇತ್ತ 'ಕನ್ನಡದ ಕೋಟ್ಯಾಧಿಪತಿ' ಸಾಮಾನ್ಯ ಜನರಲ್ಲಿ ಜ್ಞಾನದ ಹಸಿವನ್ನು ಬಿತ್ತುತ್ತಿದ್ದರೆ ಅತ್ತ 'ಬಿಗ್ ಬಾಸ್' ಕಾರ್ಯಕ್ರಮ ಮನರಂಜನೆಯ ಹೆಸರಿನಲ್ಲಿ ಕೀಳು ಅಭಿರುಚಿಯನ್ನು ಪ್ರದರ್ಶಿಸುತ್ತಿದೆ ಎಂದರೆ ತಪ್ಪಾಗಲಾರದು.



ಈ ವಾರ ಪ್ರೇಕ್ಷಕನಿಗೆ ಹೊರೆ

ಕನ್ನಡ ಚಿತ್ರರಂಗದಲ್ಲಿ ಈ ವಾರ ಒಂದು 'ವಿಶ್ವದಾಖಲೆ' ನಡೆಯಲಿದೆ.

ಅದೇನೆಂದರೆ ಇದೇ ಮೊಟ್ಟಮೊದಲ ಬಾರಿಗೆ ಬರುವ ಶುಕ್ರವಾರದಂದು ಬರೋಬ್ಬರಿ ಏಳು ಕನ್ನಡ ಚಿತ್ರಗಳು ಏಕಕಾಲದಲ್ಲಿ ಬಿಡುಗಡೆಯಾಗಲಿವೆ. ಎರಡು ಮೂರು ಚಿತ್ರಗಳು ಒಮ್ಮೆಲೆ ಬಿಡುಗಡೆಯಾದರೆ ನಿರ್ಮಾಪಕರಿಗೆ ನಷ್ಟ ಕಟ್ಟಿಟ್ಟ ಬುತ್ತಿ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಇಂತಹ ಸನ್ನಿವೇಶದಲ್ಲಿ - ಅದೂ ಐಪಿಎಲ್ ಕ್ರಿಕೆಟ್ ಟೂರ್ನಮೆಂಟ್ ಮತ್ತು ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ - ಈ ಸಿನಿಮಾಗಳ ನಿರ್ಮಾಪಕರೆಲ್ಲ ಧೈರ್ಯ ಮಾಡಿ ತಮ್ಮ ತಮ್ಮ ಚಿತ್ರಗಳನ್ನು ಬಿಡುಗಡೆ ಮಾಡುತ್ತಿರುವುದು ಗಾಂಧಿನಗರದಲ್ಲಿ ಅಚ್ಚರಿ ಮೂಡಿಸಿದೆ.

ವಿಶೇಷವೆಂದರೆ ಈ ಏಳು ಚಿತ್ರಗಳಲ್ಲಿ ಭಾರಿ ನಿರೀಕ್ಷೆ ಮೂಡಿಸಿದ ಚಿತ್ರಗಳು ಯಾವುದೂ ಇಲ್ಲ ಅಥವಾ ಭಾರಿ ಬಂಡವಾಳ ಹೂಡಿದ ಅದ್ದೂರಿ ಚಿತ್ರವೂ ಇಲ್ಲ, ಇದ್ದಿದ್ದರಲ್ಲಿ ಎಸ್.ನಾರಾಯಣ್, ರಮೇಶ್ ಅರವಿಂದ್ ಮತ್ತು



ಮೋಹನ್ ಎಂಬ ತ್ರಿಮೂರ್ತಿಗಳು ನಟಿಸಿರುವ 'ಚತ್ರಿಗಳು ಸಾರ್ ಚತ್ರಿಗಳು' ಸ್ವಲ್ಪಮಟ್ಟಿಗೆ ಬಹುತಾರಾಗಣದ ಚಿತ್ರ ಎಂದು ಹೇಳಬಹುದು.

ಈ ಚಿತ್ರ ಒಂದು ರೀತಿಯಲ್ಲಿ ನಿರ್ಮಾಪಕ ಕಂ ನಿರ್ದೇಶಕ ಎಸ್.ನಾರಾಯಣ್ ಅವರ ಪಾಲಿಗೆ ಅಳಿವು-ಉಳಿವಿನ ಚಿತ್ರವಾಗಲಿದೆ. ಈಗಾಗಲೇ ಮೂರ್‍ನಾಲ್ಕು ಚಿತ್ರಗಳಿಂದ ಕೋಟ್ಯಾಂತರ ರೂ. ನಷ್ಟವನ್ನು ಅನುಭವಿಸಿರುವ ನಾರಾಯಣ್ ಈ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಗೆದ್ದರೆ ಮತ್ತೆ ಹಲ್ಲು ತೋರಿಸುತ್ತ ಕಿಲಕಿಲನೆ ನಗುತ್ತ ಗಾಂಧಿನಗರದಲ್ಲಿ ಓಡಾಡಬಹುದು.

ಈ ಚಿತ್ರಕ್ಕೆ ಪೈಪೋಟಿ ನೀಡುತ್ತಿರುವುದು ಚೈತನ್ಯ ನಿರ್ದೇಶಿಸಿರುವ 'ಪರಾರಿ' ಚಿತ್ರ. ಈ ಚಿತ್ರ ಕೂಡ ಹಾಸ್ಯಭರಿತ ಚಿತ್ರವಾಗಿದ್ದು ಒಂದು ಹೊಸ ನಿರೀಕ್ಷೆಯನ್ನು ಹುಟ್ಟುಹಾಕಿದೆ.

ಮರಿ ಟೈಗರ್ ವಿನೋದ್ ಪ್ರಭಾಕರ್ ನಟಿಸಿರುವ 'ಗಜೇಂದ್ರ', 'ಶ್ರೀ ಅಮರೇಶ್ವರ ಮಹಾತ್ಮೆ' ಮತ್ತು 'ಬೆಳಕಿನೆಡೆಗೆ' ಎಂಬ ಮೂರು ಚಿತ್ರಗಳು ಕೂಡ ಈ ವಾರವೇ ಬೆಳಕು ಕಾಣುತ್ತಿವೆ. ಈ ಕಮರ್ಷಿಯಲ್ ಸಿನಿಮಾಗಳ ಆರ್ಭಟದ ನಡುವೆ ಗಿರೀಶ್ ಕಾಸರವಳ್ಳಿ ನಿರ್ದೇಶನದ 'ಕೂರ್ಮಾವತಾರ' ಮತ್ತು ಖ್ಯಾತ ಛಾಯಾಗ್ರಾಹಕ ದಿವಂಗತ ರಾಮಚಂದ್ರ ಐತಾಳರ ಸಂಬಂಧಿ ಸುದರ್ಶನ್ ನಿರ್ದೇಶಿರುವ 'ತಲ್ಲಣ' ಚಿತ್ರಗಳೂ ಬಿಡುಗಡೆಯಾಗುತ್ತಿವೆ.

ಕನ್ನಡ ಚಿತ್ರರಂಗದಂತಹ ಪುಟ್ಟ ಉದ್ಯಮದಲ್ಲಿ ವಾರವೊಂದಕ್ಕೆ ಏಳೇಳು ಚಿತ್ರಗಳು ಬಿಡುಗಡೆಯಾಗುವುದು ಖಂಡಿತವಾಗಿಯೂ ಉದ್ಯಮದ ಅಭಿವೃದ್ಧಿಯ ದೃಷ್ಟಿಯಿಂದ ಒಳ್ಳೆಯದಲ್ಲ, ಪ್ರೇಕ್ಷಕರು ಹೀಗೆ ಒಮ್ಮೆಲೆ ಆರೇಳು ಚಿತ್ರಗಳು ಬಿಡುಗಡೆಯಾದರೆ ಯಾವ ಚಿತ್ರವೆಂದು ವೀಕ್ಷಿಸಿಯಾರು? ಸಾಧಾರಣವಾಗಿ ವಾರಕ್ಕೊಂದು ಸಿನಿಮಾವನ್ನು ನೋಡುವ ಹವ್ಯಾಸವನ್ನು ಇಟ್ಟುಕೊಂಡಿರುವ ಪ್ರೇಕ್ಷಕರು ಒಂದು ಸಿನಿಮಾ ನೋಡಿ ಉಳಿದ ಸಿನಿಮಾಕ್ಕೆ ಗುಡ್‌ಬೈ ಹೇಳುವುದು ಶತಸಿದ್ಧ.

• ಶೆಣೈ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com